START

START

START

MICROFILMED
BY
KARNATAKA STATE
ARCHIVES
BANGALORE
CAMP: DHARWAD.
1991

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ

ಸಂಸ್ಥೆಯವರ ಐತಿಹಾಸಿಕ

ದಾಖಲೆಗಳು ಮತ್ತು ಪತ್ರಿಕೆಗಳು

FILE NO: ARS 27 APP 89.

ಸಿರಿಗನ್ನಡಂ ಗೆಲ

ವೀರಶೈವ ಚಂದ್ರಿಕೆ.

ಬಯಲುಮೂರ್ತಿಯಾಗಿನಿಂದನೊಬ್ಬ ಶರಣ. ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ. ಆತನ ಶಾಂತಿಸ್ಥೈರಣೆಯಿಂದ ಹುಟ್ಟಿದಾತ ವಿಷ್ಣು. ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರ. ಈ ಮೂರು ಸೀಶವಂತಿರಲಿ. ಆ ಶರಣನನರಿಮ ಶರಣೆನುತಿರ್ದೆನು ಕೂಡಲ ಸಂಗಮದೇವಾ. —ಶ್ರೀ ಬಸವೇಶ್ವರ.

ಸಂಪುಟ ೧	ಶ್ರೀಮನ್ನೃಪಶಾಲಿವಾಹನ ಶಕೆ ೧೮೫೬ ಹೊಸ್ತಲ ಹುಣ್ಣಿವೆ.	ಸಂಚಿಕೆ ೮

ಕನ್ನಡ ನಾಡಿನ ರಾಷ್ಟ್ರಗೀತೆ.

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ||
ಬದುಕು ಬಲುಹಿನ ನಿಧಿಯು || ಸದಭಿಮಾನದ ಗೂಡು ||ಪಲ್ಲ||

ರಾಜನ್ಯರಿಪುಪರಶು | ಧರನ ಜನನಿಯ ನಾಡು |
ಆ ಜಲಧಿಯನು ಜಿಗಿದ | ಹನುಮನುದಿಸಿದ ನಾಡು ||
ಓಜೆಯಿಂ ಮೆರೆದರಸು | ಗಳ ಸಾಹಸದ ಸೂಡು |
ತೇಜವನು ನಮಗೀವ | ವೀರವೃಂದದ ಬೀಡು |೧||

ಲೆಕ್ಕಿಗಮಿತಾಕ್ಷರರು ಜೀದು ಮೆರೆದಿಹ ನಾಡು |
ಜಕ್ಕಣನ ಶಿಲ್ಪಕಲೆ | ಯಚ್ಚರಿಯ ಕರುನಾಡು |
ಜೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು |
ಚೊಕ್ಕಸದ ಕಣಜಜಯು | ಸಿರಿಯು ನಲಿಯುವ ನಾಡು ||೨||

ಪಾವನೆಯರಾ ಕೃಷ್ಣೆ | ಭೀಮೆಯರ ತಾಯ್ನಾಡು |
ಕಾವೇರಿ ಗೋದೆಯರು | ಮೈದೊಳೆದ ನಲುನಾಡು ||
ಅನಗಂ ಒಗೆಯ ನಗಿಸುವ ಕಬ್ಬಿಗರ ಹಾಡು |
ಕಾಪಗಮುಗಿನ ವೀರನಾರಾಯಣನ ಬೀಡು ||೩||

ಸಿರಿಗನ್ನಡಂ ಗೆಲ್ಗೆ

ವೀರಶೈವ ಚಂದ್ರಿಕೆ.

ಬಯಲುಮೂರ್ತಿಯಾಗಿನಿಂದನೊಬ್ಬ ಶರಣ. ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ. ಆತನ ಶಾಂತಿಸ್ವೈರಣೆಯಿಂದ ಹುಟ್ಟಿದಾತ ವಿಷ್ಣು. ಆತನ ಕೋಪ ಕ್ರೋಧದಿಂದ ಹುಟ್ಟಿದಾತ ರುದ್ರ. ಈ ಮೂರು ಸೀಶವಂತಿರಲಿ. ಆ ಶರಣನನರಿದು ಶರಣೆನುತಿರ್ದೆನು ಕೂಡಲ ಸಂಗಮದೇವಾ. —ಶ್ರೀ ಬಸವೇಶ್ವರ.

ಸಂಪುಟ ೧	ಶ್ರೀಮನ್ನೃಪಶಾಲಿವಾಹನ ಶಕೆ ೧೮೫೩ ಹೊಸ್ತಿಲ ಹುಣ್ಣಿವೆ.	ಸಂಚಿಕೆ ೮

ಕನ್ನಡ ನಾಡಿನ ರಾಷ್ಟ್ರಗೀತೆ.

ಉದಯವಾಗಲಿ ನಮ್ಮ | ಚಲುವ ಕನ್ನಡ ನಾಡು ||
ಬದುಕು-ಬಲು ಹಿನಸ್ಥಿತಿಯು || ಸದಭಿಮಾನದ ಗೂಡು ||ಪ||

ರಾಜನ್ಯರಿಪುಪರಶು | ಭುಜನ ಜನನಿಯ ನಾಡು
ಆ ಜಲಧಿಯನು ಜಿಗಿದ | ಹನುಮನುದಿಸಿದ ನಾಡು ||
ಓಜೆಯಿಂ ಮೆರೆದಿರುವ | ಗಳ ಸಾಹಸದ ಬೀಡು
ತೇಜವನು ನಮಗೀವ | ವೀರವೃಂದದ ಬೀಡು ||೧||

ಲೆಕ್ಕಿಗ ಮಿತಾಕ್ಷರರು ಬೆಳೆದು ಮೆರೆದಿಹ ನಾಡು |
ಜಕ್ಕಣನ ಶಿಲ್ಪಕಲೆ | ಯಚ್ಚರಿಯ ತರುನಾಡು '
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು .
ಬೊಕ್ಕಸದ ಕಣಜವು | ಸಿರಿಯು ನಲಿಯುವ ನಾಡು ||೨||

ಪಾವನೆಯರಾ ಕೃಷ್ಣೆ | ಭೀಮೆಯರ ತಾಯ್ನಾಡು |
ಕಾವೇರಿ ಗೋದೆಯರು | ಮೈದೊಳೆದ ನಲುನಾಡು ||
ಆವಗಂ ಒಗಯು ನಗಿಸುವ | ಕಬ್ಬಿಗರ ನಾಡು |
ಕಾವಗದುಗಿನ ವೀರನಾರಾಯಣನ ಬೀಡು ||೩||

ರಾಷ್ಟ್ರಗೀತೆಯ ನೋಟೇಶನ್

ರಾಗ— ತಿಲಕಕಾಮೋದ ತಾಳ ಝಂಪೆ ಮಾತ್ರಾ ೧೦

ಆರೋಹ
ಅವರೋಹ } ಸಾ ರಿ ಗ ಸಾ ರಿ ಮ ಪ ನಿ ನಾ ನಿ ಧ ಪ ಮ ಗ ರಿ ಗ ನಾ
೨ ನಿಷಾದಗಳು

ಧಿನ್ನಾಧೀಧಿನ್ನಾತೀನ್ನಾತೀತಿನ್ನಾ | ಧೀನ್ನಾಧೀಧಿನ್ನಾತೀನ್ನಾತೀತಿನ್ನಾ |
ಉ ದ ಯ ವಾ ಗ ಲಿ ನ ಮ್ಮ | ಚ ಲು ವ ಕ ನ್ನ ಡ ನಾ ಡು |

ಪ ಸಾ ನಿ ಸಾ ನಿ ಧ ಮ ಗ ಸಾ | ರಿ ಪ ಮ ಗ ಸಾ ರಿ ಮ ಗ ಸಾ |
ಬದುಕು ಬಲುಹಿನ ನಿಧಿಯು | ಸದಭಿಮಾನದಗೂಡು

ರಿ ರಿ ಮ ಪ ನಿ ಸಾ ನಿ ಸಾ ಸಾ | ಪ ನಿ ಸಾ ರಿ ಸಾ ರಿ ಮ ಗ ಸಾ ||ಪಲ್ಲ|
ರಾ ಜ ನ್ಯ ರಿ ಪು ಪ ರ ಶು | ಧ ರ ನ ಜ ನ ನಿ ಯು ನಾ ಡು |

ರಿ ಮ ಪ ನಿ ನಿ ಪ ನಿ ಸಾ ಸಾ | ಪ ನಿ ಸಾ ರಿ ಸಾ ರಿ ಮ ಗ ಸಾ |
ಆ ಜ ಲ ಧಿ ಯ ನು ಜಿ ಗಿ ವ | ಹ ನು ಮ ನು ದಿ ಸಿ ದ ನಾ ಡು ||

ಪ ನಿ ಸಾ ಸಾ ನಿ ಸಾ ನಿ ಸಾ ಸಾ | ಪ ನಿ ಧ ಮ ಗ ರ ಮ ಗ ಸಾ |
ಓ ಜೆ ಯಿಂ ಮೆ ರೆ ದ ರ ಸು | ಗ ಳ ಸಾ ಹ ಸ ದ ಸೂ ಡು |

ರಿ ಮ ಮ ಪ ಪ ಮ ಪ ರಿ ಮ ಮ | ರಿ ಮ ಪ ನಿ ನಿ ಸಾ ನಿ ನಾ ಸಾ |
ತ ಜ ವ ನು ನ ನು ಗಿ ವ | ವಿ ರ ವೃಂ ದ ದ ಬೀ ಡು ||

ಪ ನಿ ಸಾ ರಿ ಸಾ ರ ಮ ಗ ಸಾ | ನಿ ಧ ಮ ಗ ಸಾ ರಿ ಮ ಗ ಸಾ ||೧||

ಕಾಂಬೋಜಿ

ಸಾ ರಿ ಗ ಮ ಪ ಧ ಸಾ | ಸಾ ನಿ ಧ ಪ ಮ ಗರಿ ಸಾ ನಿ ಪ ದ ಸಾ (೨ನಿಷಾಧ
ಲೆ ಕ್ಕಿ ಗ ಮಿ ತಾ ಕ್ಷ ರ ರು | ಬೆ ಳೆ ದು ಮೆ ರ ದಿ ಹ ನಾ ಡು |

ಪ ಧ ಸಾ ಸಾ ಸಾ ಸಾ ಸಾ ನಿ ನಿ ಧ | ಮ ಪ ಧ ಧ ಧ ಧ ಸಾ ನಿ ಧ ಪ |
ಜ ಕ್ಕ ಣ್ಣ ನ ಶಿ ಲ್ಪ ಕ ಲೆ | ಯ ಚ್ಚ ರಿ ಯ ಕ ರು ನಾ ಡು |

ಗ ಪ ಪ ಪ ಪ ಧ ಪ ಮ ಗ | ಗ ಗ ಪ ಪ ಧ ಪ ಧ ನಾ ನಾ ||
ಚೊ ಕ್ಕ ಮ ತ ಗ ಳ ನಾ ರಿ | ದ ವ ರಿ ಗಿ ದು ನೆ ಲೆ ವೀ ಡು |

ಧ ಸಾ ರಿ ಗ ನಾ ರಿ ಗ ಗ | ಸಾ ರಿ ಗ ಮ ಗ ರಿ ಸಾ ನಿ ಧ ಪ |
ಬೊ ಕ್ಕ ಸ ದ ಕ ಣ ಜ ಯ | ಶಿ ರಿ ಯು ನ ಲಿ ಯು ವ ನಾ ಡು |

ಪ ನಿ ಸಾ ರಿ ನಾ ರಿ ಮ ಗ ನಾ | ನಿ ಧ ಮ ಗ ಸಾ ರಿ ಮ ಗ ಸಾ ||೨||

ಜೂಪ.

ಸಾ ರಿ ಗ ಪ ಧ ಸಾ । ಸಾ ಧ ಪ ಗ ರಿ ಸಾ
ಪಾ ವ ನೆ ಯ ರಾ ಕೃ ಷ್ಣೆ | ಭೀ ಷ್ಮ ಯ ರ ತ್ತಾ ಯ್ ನಾ ಡು |
ಪ ಧ ಸಾ ಸಾ ಸಾ ಸಾ ಧ ಪ ಧ ಧ | ಗ ಪ ಧ ಪ ಧ ಪ ಗ ರಿ ಸಾ |
ಕಾ ವೇ ರಿ ಗೋ ದೆ ಯ ರು | ವ್ಯಾ ದೊ ಳಿ ದ ನ ಲು ನಾ ಡು |
ಸಾ ರಿ ಗ ಪ ಪ ಗ ಗ ರಿ ಗ - | ಗ ಪ ಧ ಪ ಧ ಪ ದ ಸಾ ಸಾ |
ಆ ವ ಗಂ ಬ ಗೆ ಯ ನ ಗಿ | ಸು ವ ಕ ಬ್ಬಿ ಗ ರ ಹಾ ಡು |
ಪ ಧ ಸಾ ರಿ ಗ ಸಾ ರಿ ಗ ಗ | ಸಾ ರಿ ಗ ಗ ರಿ ಗ ರಿ ಸಾ ಸಾ |
ಕಾ ವ ಗ ದು ಗಿ ನ ವೀ ರ | ನಾ ರ ಯ ಣ ನ ಬೀ ಡು |
ಪ ನಿ ಸಾ ರಿ ಸಾ ರಿ ಮ ಗ ಸಾ | ನಿ ಧ ಮ ಗ ಸಾ ರಿ ಮ ಗ ಸಾ ||೩||

ಟೀಪು— ಪ್ರತಿಯೊಂದು ನುಡಿಯ ಕೊನೆಯ ಚರಣವನ್ನು ತಿಲಕಕಾಮೋದ ರಾಗದಿಂದ ಮುಗಿಸಲಾಗಿದೆ.

ಬಿಜಾಪೂರ ನಾರಾಯಣರಾಯರು, ಶಿರಹಟ್ಟಿ.

ಭಿಕ್ಷೆ.

ನವಲಗುಂದ ಕೈಬರಹದ ವಿದ್ಯಾರಣ್ಯ ಮಾಸಿಕದೊಳಗಿನ "ಚಾತಕವಿಲಾಪ"

ವ್ಯಾ ಷ.

ಮನವೆಂಬ ತಿರುಕನೇ ವಿವಿಧ ವಿಷಯಗಳೆಂಬ |
ಮನೆಗಳಂ ತಿರುತಿರುಗಿ ಕಡೆಗೆ ಬಳಲುವದೇಕೆ |
ದನುಜಾರಿಯೆಂಬ ಸಿರಿವಂತನರಮನೆಯಬಳಿಸಾರದೇಂ ಮೂರ್ಲಿಪ್ತ |
ಸನ್ನಿಹದೊಳು ಹೃದಯಾಬ್ಜದಲ್ಲಿ ಹೊಳಿಹೊಳೆಯುತಿಹ |
ಚಿನ್ಮಯಾತ್ಮಕನ ಚರಣಂಗಳಂ ನೆನೆನೆನೆದು |
ಘನತರ ವಿರಾಗದಿಂ ಮೋಕ್ಷ ಭಿಕ್ಷೆಯ ಬೇಡಿ ಪೂರ್ಣಸುಖಿಯಾಗು
ಸತತ ॥

ಜಾನಪದ ಸಾಹಿತ್ಯ

ಹಳ್ಳಿಯ ಹಾಡುಗಳು.

ಸಂಗ್ರಾಹಕರು :— "ತಿಮ್ಮಣ್ಣ"

ಕಳಕಪ್ಪನ ಗುಡ್ಡದಾಗ ಗುರುಗುಡುದೇನಪ್ಪ | ರುದ್ರಪಾದವ ಕಸಿಹಲಗಿ |
ರುದ್ರಪಾದವ ಕಸಿಹಲಗಿ ಬಡವರ | ಕಬ್ಬಕ್ಕಿ ಹಿಂಡು ಕೆದಲೀತೋ ||೧||
ಕೆಂಧೂಳ ಕೆರಿಯ್ಯಾಗ ನೆಂದ್ಯಾಕ ನೆರದೈತೊ | ನಂದಿಕೋಲಾಟ ನವಿಲಾಟ |
ನಂದಿಕೋಲಾಟ ನವಿಲಾಟ ನಮ್ಮ ಬಸವ | ಹೇವ ಒಗದಲ್ಲಿ ಚಲ್ಲಾಟ ||೨||
ತೆಗ್ಗಿಲ್ಲ ತೆವರಿಲ್ಲ ಮುಗ್ಗ್ಯಾವೋ ಎರಡಾನಿ | ತೆಗ್ಗ ನಾಗ್ಯೈತೊ ಯಮನೂರು |
ತೆಗ್ಗ ನಾಗ್ಯೈತೊ ಯಮನೂರ ಒಡೆಯಗ | ದೊರಿಯಿದ್ದು ಕೈಮುಗಿದಾನೋ ||೩||
ಹಾಸಬಂಡಿಯ ಮ್ಯಾಲ ಹಾದುಹೋದವರ್ಯಾರೊ | ಪಾದ ಮುಡ್ಯಾವೋ ಪರಿ ಪರಿ |
ಪಾದ ಮುಡ್ಯಾವೋ ಪರಿ ಪರಿಯ ಪಾಂಡವರು | ಹಾದು ಹೋಗ್ಯಾರೊ ಜಳಕಕ್ಕ ||೪||
ಬೇಡಿದ ಹರಕೆ ಮಾಡದ ಇದ್ದರ ಕಾಡತಾನಲ್ಲ ಪರಿ ಪರಿ
ಕಾಡತಾನಲ್ಲ ಪರಿ ಪರಿ ಯಮನೂರೊಡೆಯ | ಬೇಡತಾನಲ್ಲ ಕುದರಿಯ ||೫||
ಕರಿದು ಕಮಲಪ್ಯಾಟಿ ಬಿಳಿದು ಬಂಕಾಪೂರ | ಶರಗು ಕೇಳಿದರ ಶ್ಯಾಪುರವ |
ಶರಗು ಕೇಳಿದರ ಶ್ಯಾಪೂರವ ಬಲುಮಂದಿ ಕೇಳ್ಯಾರ | ದೊರಿ ನನ್ನ ಅಣ್ಣ ಉಡಸ್ಯಾನ ||೬||
ಕಾಶಿಗೆ ಹೋಗುವನ್ನು ಏಸೊಂದು ದಿನ ಬೇಕ | ತಾಸೊತ್ತಿನ ದಾರಿ ಯಮನೂರ |
ತಾಸೊತ್ತಿನ ದಾರಿ ಯಮನೂರೊಡೆಯಗ | ಕೂಸೆತ್ತಿ ಕೈಯ ಮುಗದೇನ ||೭||
ಅಪ್ಪ ಯಮನೂರೊಡೆಯ ತೆಪ್ಪು ದೊಡ್ಡದ್ಹ್ವಾಡ | ಟೊಪ್ಪಿಗಿ ಮಗನ ದೈಮಾಡ |
ಟೊಪ್ಪಿಗಿ ಮಗನ ದೈಮಾಡ ದರ್ಗಕ | ತಪ್ಪ್ಯದವಾರ ಬರತೇನಿ ||೮||
ನಿನ್ನ ನಾನೋಡಾಕ ಹೊನ್ನಿಲ್ಲ ಚಿನ್ನಿಲ್ಲ | ಬಿಂದುಲಿಗುಂಡಿನ ಮಗಮುಂದ |
ಬಿಂದುಲಿಗುಂಡಿನ ಮುಂದ ಆವನೋಡಿ | ಕಂದನ ನೋಡಿ ಮರತೇನ ||೯||
ಪಡಗರದ ತ್ಯಾನಿಗಿ ಬಡಿವಾರದ ಪುಡಿಚೆಲ್ಲ | ಗದುಗಿನ ವೀರಣ್ಣಾಗ ಎಡಿ ಮಾಡಿ |
ಗದುಗಿನ ವೀರಣ್ಣಾಗ ಎಡಿಮಾಡಿ ಬೇಡಿಕೊಂಡೆ | ಪಡಗರದ ಹಕ್ಕವರ ನಸಗಿರಬಿ ||೧೦||
ಹಾವ ಹಾವಂದರ ಹರನಲ್ಲಿ ನಡಿಗ್ಯಾವ | ಹಾವಲ್ಲವೇಳ ಹಂಪಿ ವಿರೂಪಾಕ್ಷ |
ಹಾವಲ್ಲವೇಳ ಹಂಪಿ ವಿರುಪಾಕ್ಷನ ಗುಡಿಯಿಂದ ಹಾವಾಗಿ ಗಂಗಿ ಹರದಾಳ ||೧೧||

ಹದಿನಾರುಸೋಮವಾರಗಳ ಪದ್ಯಕಥೆ.

...ಟಕ ವಿದ್ಯಾವರ್ಧಕ ಸಂಘ ... ಧಾರವಾಡ.

ಶ್ರೀ ಶಿವವ್ರತ.

(ಶಿವಾನಂದ ದೀಕ್ಷಿತವಾಜಪೇಯುವಿರಚಿತಂ)

(ಮುಂದೆ ಸಾಗಿದ್ದು.)

ಭಾ॥ ಷಟ್ಪದಿ.

(ಸಾಧುವು ರಾಣಿಯನ್ನು ಮನೆಗ ಕರಕೊಂಡು ಬಂದದ್ದು)

೪೦ ಅವಳಕಂಡಾ ಮೂರ್ಛೆಗುಪಶಮ |
ನವನುರೆಯೆಸಗಿಯಾಕೆಯಿಂದೆ |
ಲ್ಲವಿವರಂಗಳ ತಿಳಿದು ಮಗಳೇ! ಅಂಜಬೇಡಿನ್ನು ||
ಭವನಕೈತಂದಿಪ್ಪ ಮನೆಗೆಲ |
ಸವನೆಸಗಿನೀಂ ಸುಖಮಿರೆನ್ನಯ |
ಕುವರಿಯೆಂದಾಗವಳ ತಾಂ ಕರೆತಂದನಾಗೃಹಕೆ ||

(ಅಡಿಗೆಯಲ್ಲಿಯೂ ಹುಳಗಳು ಬಿದ್ದದ್ದು-ಸಾಧುವು ಶ್ರೀ ಶಿವನನ್ನು ಧ್ಯಾನಿಸಿದ್ದು)

೪೧ ಇತ್ತವಳು ಮನೆಗೆಲಸವಂ ಮಾ |
ಡುತ್ತಿರಲು ಪಾಕದಲಿ ಹುಳಗಳು |
ಮುತ್ತಿಬಿದ್ದು ವಿಳಾಸಿಸುತ್ತಿರೆ ಸಾಧುವಿದಕಂಡು ||
ಪುತ್ರಿಯೊತೆರದೆಳಲನಿಹಿತಿಗೆ
ಚಿತ್ತದಲಿ ಸಂಸ್ಮರಿಸಿ ಶಿವನನು |
ಕೃತ್ತಿವಾಸನು ನಲಿದು ಮನದಿರಪೇನೊ! ಸಾಧು! ಎನೆ |

(ಶ್ರೀ ಶಿವನಿಗೆ ಸಾಧುವಿನ ಪ್ರಾರ್ಥನೆ)

೪೨ ಶಿವನೆ! ಎನ್ನಯ ಕುವರಿಯೆನ್ನಿಸು |
ವಿವಳ ದುರ್ದಶೆಯುಳಲುಗಳ ಮೂ |
ಲವೆನಿಸುವುದೇನದಕೆಸಪುದೇನಿವನು ಪೇಳ್ಪಿನ್ನ ||

ನೆ ತಣಿಸಿ ಬಡಮಗಳನುದ್ಧರಿ |
ವ ಮಹೇಶನು ನೀನೆ! ನಿನ್ನಂ |
ನಿಸಿಹೆನು ಮನದಾಸೆಪೂರ್ತಿಗೊಳಿಪುದೆನಲು ಭವನಾಗ ||

(ಶ್ರೀ ಶಿವನು ಸಾಧುಗೆ ಹೇಳಿದ್ದು- ರಾಜನು ರಾಣಿಯನ್ನು ಹುಡುಕಿ ತರಲಿಕ್ಕೆ ದೂತರನ್ನು ಕಳಿಸಿದ್ದು)

೪೩ ಸಾಧುಸೆಲೊ! ಮದ್ವ್ರತಕೆ ಸತಿಯುವ |
ಂದರವ ಮಾಡಪಕೆ ವಿವಿಧ ವಿ |
ಪಾದವಾಂತಿಹಳದನೆಮನ್ನಿಸಿ ಮಾಡಿ ಸುಖಿಸುವಳ
ಆದಪುದಭೀಷ್ಟವೆನಲವಳಿಂ |
ಸಾಧು ವಿಧಿಯಿಂ ವ್ರತವ ಮಾಡಿಸ |
ಭೂಧವನರಸಿಯರಸಿಯಂತರೆ ಚರರನಟ್ಟಿದನು ||

(ಚರರು (ದೂತರು) ರಾಣಿಯನ್ನು ಗೊತ್ತು ಹಚ್ಚಿ ಬಂದು ರಾಜನಿಗೆ ತಿಳಿಸಿದು

೪೪ ಚರರರಸಿ ಪಲನಾಡುಗಳನಂ |
ಚರಿಸಿಯುವಳಿಹ ಪುರಕೆ ಬಂದಾ |
ಪರಮಸಾಧುಗೆ ನತಿಸಿ ರಾಣಿಯ ಕಳುಹಮಾಳ್ಪುದಕೆ ||
ಸರೆ ವಿನಯದಿಂ ಬೇಡಿಕೊಳಲು |
ತ್ವರವನಾ ಸಾಧುವೆದಕುಸಿರದಿ |
ಲರಬವಗು ಬಂದರುಪಕೊಂಡರು ದೂರಗದಲವನು ||

(ಅರಸನು ಅಮಾತ್ಯನೊಡನೆ ಸಾಧುವನ್ನು ಕಂಡುಕೊಂಡದ್ದು- ಸಾಧುವಂದದ್ದು)

೪೫ ಇತ್ತದನು ಕೇಳ್ದೊಡನೆಯರಸನ |
ಮಾತ್ಯನಿಂ ಬಂದಾಪುರಕೆ ಸಯ್ಯ |
ವೆತ್ತು ಸಾಧುಗೆ ನತಿಸಿ ನುಡಿದರಲೆಲ್ಲ ಸಂಗತಿಯ ||
ಉತ್ತಮಾಲಿಂಗನವ ನಲಿವಿಂ |
ವಿತ್ತು ದೊರೆಗಾಸಾಧು ತಾಕ್ಕಾ
ಪತ್ತಿಗೇಸೀಕುವರಿ ಪಾತ್ರಳೆ! ವ್ರತವಾಟವಿದು ||

ಈಗಿನ ಕಾಲದಲ್ಲಿ ಹೊಸಮಾದರಿಯ ಕವನಗಳೆಂದು ಹಲವರು ಬರೆಯುತ್ತಲಿದ್ದಾರೆ. ನಿಜವಾಗಿಯೂ ಅವುಗಳಲ್ಲಿ ಹೊಳೆಯುರುವದು ಬಹುಸ್ವಲ್ಪ ಜನರ ಕವಿತೆಗಳಲ್ಲಿ, ಈಗಿನ ಕವಿತೆಗಳಲ್ಲಿ ಅಂಥ ಸ್ಫೂರ್ತಿಯ ಪ್ರೇರಣೆಯೂ ಲಕ್ಷಣವೂ ಛಂದೋಬಂಧವೂ ಇರುವದಿಲ್ಲ. ಆದ್ದರಿಂದ ಇವು ಸ್ಫುಟವಾದ ಆನಂದವನ್ನು ಕೊಡುವದಕ್ಕೆ ಅಸಮರ್ಥವಾಗಿವೆಂದೆನ್ನಬಹುದಾಗಿದೆ.

ಕಾವ್ಯ ಕುಂಜ.

ಪ್ರಾಚೀನ ವಾಙ್ಮಯವು ಹುಳಗಳ ದವಡೆಯಿಂದ ಉಳಿದು ಬಾಳಿ ಇಂದಿನ ಜೀವಿಗಳಿಗೆ ಉಪಕಾರಿಯಾದಂತೆ, ಇಂದಿನ ಕವನಗಳು ಮುಂದಿನವರ ಜೀವನಕ್ಕೆ ಮಾರ್ಗದರ್ಶಿಗಳಾಗಿ ಬಾಳಬಹುದೇ ? ಎಂಬುದರ ಶಂಕೆಗೆ ಇವು ಆಸ್ಪದಗಳಾಗಿವೆ.

ರಾವಸಾ|| ಪಿ. ಜಿ. ಹಳಕಟ್ಟಿ,

ಸಾಹಿತ್ಯ ಪರಿಷತ್ತಿನ ಸ್ವಾಗತಾಧ್ಯಕ್ಷರು. ವಿಜಾಪುರ

ನಾವಿಕ.

(ಲಲಿತ ರಗಳೆಯಲ್ಲಿ)

ಕವಿ :— ಶ್ರೀ. ಶಂಕರಭಟ್ಟರು ಅಗ್ನಿಹೋತ್ರಿ ನವಲಗುಂದ

ಬಾರೊ ಬಾ ನಾವಿಕನೆ ವಾರಿನಿಧಿ ವಾಹಕನೆ
ಗಹನವಾಗಿಹ ನೀರು ಬಹಳ ದೂರದ ಊರು
ಆ ಯೆಂದು ಮೊಸಳೆಗಳು ಬಾಯ್ದೆರೆದು ಬರುತಿಹವು
ತಿಮಿಗಣೆಯ ಮಡುಗಳವು ಇರುತಿಹವು ಭೀಕರವು
ಬಿರುಗಾಳಿ ಬೀಸುತಿದೆ ಶರಧಿ ತಾನುಕ್ಕುತಿದೆ
ಹೇಗೆ ದಾಟುವದಯ್ಯ ಸಾಗುವದು ಹೇಗಯ್ಯ
ಅದು ನೋಡು ದೂರದಲಿಹುದುಬಂಡೆ ನೀರಿನಲಿ
ಅದಕೆ ಬಡಿದರೆ ನೌಕೆಯುದು ಒಡೆಯುವದು ಜೋಕೆ
ಸುತ್ತು ಮುತ್ತಲು ನೋಡು ಕತ್ತಲೆಯು ನೆಲೆಸಿಹುದು
ದಿಕ್ಕು ತಪ್ಪಿತಯ್ಯ ಪುಕ್ಕ ನಾನಾದೆನಯ್ಯ
ಎಚ್ಚರದಿ ನಡೆಸುವದು ಅಚ್ಚರಿಯು ಪಡಿಸುವದು
ಬೇಡುವೆಯಾ ನೀನೇನು ನೀಡುವೆನು ನಾನದನು

....

ಅಹಹ ನೋಡೀಕಡೆಗೆ ಬಹಳ ಜನರಿಹ ಜತೆಗೆ
ಕೆಲರೀಸಗಾಯಿಗಳ ರಬ್ಬರಿನ ಚೀಲಗಳ
ಬೆಂಡುಗಳ ಪೆಂಡಿಗಳ ಕಲ್ಹಾರ ಗಣಗಳ
ಬೆನ್ನಲ್ಲಿ ಕಟ್ಟಿಹರು ಮುನ್ನೋಡಿ ಬರುತಿಹರು
ಕೆಲರು ತೋಳ್ಕಸುವಿಂದ ಹಲರು ಕಾಲ್ಕಸುವಿಂದ
ಈಸುತ್ತ ಬರುತಿಹರು ತ್ರಾಸವನು ಪಡುತಿಹರು
ಬಳಗುಂದಿಹರು ಕೆಲರು ಮುಳುಗುತ್ತಲಿರುತಿಹರು
ಬಡರು ತಾವ್ ಕೆಲರು ಸಡಕೆ ಕಲ್ಕಟ್ಟಿಹರು
ಕ್ರತುಗಳೆನ್ನುತ ಕೆಲರು ವ್ರತಗಳೆನ್ನುತ ಪಲರು
ಯೋಗವೆನ್ನುತ ಕೆಲರು ಯಾಗವೆನ್ನುತ ಕೆಲರು
ಹಿಡಿದಿಹರು ಮೂಗನ್ನು ನುಡಿಯುವರು ಮಂತ್ರವನು

ಪುಸ್ತಕದೊಳಿಟ್ಟಿಹರು ಪುಸ್ತಕಗಳನು ಕೆಲರು
ನೀರ ಗುಟುಕರಿಸುತ್ತ ಹಾರವನ ಗೆಯ್ಯುತ್ತ
ಮುಳುಗುತ್ತ ತೇಲುತ್ತ ಸುಳಿಯಲ್ಲಿ ಸಿಲುಕುತ್ತ
ಅಲ್ಲಿಯೇ ತಿರುಗುವರು ನಿಲ್ಲದಲೆ ಕೆಲ ಜನರು
ನಿನ್ನಕಡೆಗೀಕ್ಷಿಸದೆ ಬನ್ನ ಬಡುವರು ಬರಿದೆ
ಕೆಲವರೀ ನೌಕೆಯನು ಸುಲಭದಿಂದೇರಿಹರು
ಆನಂದದಿಂದಿಹರು ಗಾನ ಮಾಡುತಲಿಹರು.
ಆನಂದದಶ್ರುಗಳು ಕಣ್ಣಿನಿಂದುದುರುವವು
ರೋಮಾಂಚವೆದ್ದಿಹವು ಮೈಮೇಲೆ ತೋರುವವು
ಶರಧಿಯಲಿ ಬಿದ್ದಂಥ ನರರನ್ನು ನೋಡುತ್ತ
ಕೈಮಾಡಿ ಕರೆಯುತ್ತ ಮೈಮುಟ್ಟಿ ಎತ್ತುತ್ತ
ನೌಕೆಯಲಿ ಹತ್ತಿಸುವರಾ ಕೆಲರು ಸಜ್ಜನರು
ಕೆಲರು ಭಯವಿಲ್ಲದಲೆ ಜಲದಲ್ಲಿ ಹಾರುತಲಿ
ಮುಳುಗುತಿಹ ಮನುಜರನು ಎಳೆದು ತರುತಿಹರಿನ್ನು

....

ಇರಲಿರಲಿದೊಸಿಲ್ಲವರುಹುವೆನು ಕೇಳ್ ಸೊಲ್ಲ
ನಿನ್ನ ಬಿಟ್ಟರೆ ನೌಕೆ ಛಿನ್ನವಾಗಿಹ ಜೋಕೆ
ನಾವಿಕನೆ ನಿನ್ನನ್ನು ಸೇವಿಸುವೆನೈ ನಾನು
ಒಮ್ಮೆ ನೀ ನಿಟ್ಟಿಸೈ ನಮ್ಮಾರ್ಗ ಮುಟ್ಟಿಸೈ
ಗುರು ರೂಪ ನಾವಿಕನೆ ವರಮೋಕ್ಷದಾಯಕನೆ
ಭವ ವಾರಿ ನಿಧಿಯಿಂದೆ ಜವದಿ ಮುಟ್ಟಿಸೊ ತಂದೆ.

"ಕನ್ನಡ ಕವಿತೆ."

ಕಳೆದಳಿದ ಸಸಿಯಂತೆ ಮನದ |
ನ್ನೆವಿಲಾಸದ ಸುಖದೊಲಲಿ ಮಂ |
ಡೆಳದವನಿಯಂತರಳ ಮಲ್ಲಿಗೆಯಂತೆ ಕೋಗಿಲೆಯ ||
ಸ್ವರವದೊತಿಳ ಗಾಳಿಯಂದದಿ |
ವಿಳಸಿತಾಮ್ರದ ಫಲದರುಚಿಯಂ |
ತೆಳಿಯುವದು ಜನಮನವ "ಕನ್ನಡ ಕವಿತೆ" ಕೇಳ್ಗೆಳೆಯಾ ||

—ನವಲಗುಂದದ "ವಿದ್ಯಾರಣ್ಯ" (ಕೈಬರಹದ) ಮಾಸಪತ್ರಿಕೆಯಿಂದ

ಬಡತನದ ಬಾಳು!

ಲೇಖಕರು- Master Mahishi (Student Honnawar High-School)

ಬಡತನದ ಬಾಳಿನಲಿ | ಕಡುತರದ ಗೋಳಿನಲಿ |
ಬಿಡುತಿರುವ ಬವಣೆಯನು ತಾಳಲಾರೆ | ಬಿಡುಗಡೆಯ ದಾರಿಯನು ಕಾಣಲಾರೆ ||೧||

ಬಾಳಿನಲಿ ಬೇಕಿಲ್ಲ ಕೂಳಿನಲಿ ರುಚಿಯಿಲ್ಲ
ಕೀಳು ಕೀಳಾಗಿ ಹೋಗಿಹುದು ಬಾಳು | ವೇಳೆವೇಳೆಗೆ ಸಿಗದಿಹುದು ಕೂಳು ||೨||

ಗೋಳ ಕೇಳುವರಿಲ್ಲ | ಕೇಳಿ ಮರುಗುವರಿಲ್ಲ
ತಾಳಲಾರೆನು ಬಡತನದ ಬೇಗೆ ಹೇಳು ದಾರಿಯಾವುದು? ಇದನು ನೀಗೆ ||೩||

ಸಂಸಾರದೊಡಲಿಂದ | ಸಂಕಟದ ಮಡಲಿಂದ |
ಕಡೆಹಾಯಿಸಲು ಬೇಕು ಎಂದು ಎನ್ನ | ಅಡಿಯಪಿಡಿದು ಬೇಡಿಕೊಂಬೆನು ನಿನ್ನ ||೪||

ಧರೆಯಲ್ಲಿ ನರಜನ್ಮ | ಬರುವದೆ ಬೇಕು ಪುಣ್ಯ |
ಆದರೀ ಬಡತನದಿ ಹುಟ್ಟಿ ಬಂದು | ವೇದನೆಯ ತಾಳಲಾರೆನಾ ಇಂದು ||೫||

ಮಡದಿ-ಮಕ್ಕಳ ಕಾಟ ನಡೆದಿಹುದು ವಿಧಿಯಾಟ !
ಬಿಡದೆನಗೆ ವಿಧಿಯು ಬಿಡುಗಡೆಯ ಹೊರತು ! | ಬಿಡಿಸುವವರುಂಟೆ ನಿನ್ನ ಹೊರತು ? ||೬||

ಕನ್ನಡ ಜಾಣ್ನುಡಿ.

ಕವನಗಾರರು:- ಹ. ರಾ. ಕಾಲಿನಾಡ ಹೆ. ಮಾಸ್ತರ ತಿಲಾರ್‌ಪೂರ

|| ಕಂದ ||

ಇರಲಿಕ್ಕೆ ಬೇಕೆನುವುದೇಂ ? |
ತರುಣರ ಕಣ್ಮುಂದೆ ಜಾರಿಯಿಸಗುವದೇಂ, ಮೇಣಾ
ಅರಸನೊಲಿಯುಳೇನಹನು ? ಮನೆ |
ಮುರಕಂ, ಬಲುಧನಿಕನಪ್ಪನೆಂಬುದುಕ್ತ್ರಮುವೆ ||೧||

ಸಂಸಾರದ ನವಿಲು.

ಲೇಖಕರು :— ಶ್ರೀ ಜಿ. ಶ್ರೀ. ಕುಲಕರ್ಣಿ, ಇಂಟರ ಆರ್ಟ್ಸ ವಿಲಿಂಗ್ಡನ್
ಕಾಲೇಜ ಸಾಂಗಲಿ.

(ನದಿಯ ತೀರಕ್ಕೆ ತಿರುಗುವದಕ್ಕೆಂದು ಹೋದಾಗ ಉದ್ಭವಿಸಿದ ವಿಚಾರಗಳು)

ನವಿಲೇ! ನಿನ್ನ ನಯವಾದ ನರ್ತನ ನಿಲಿಸಬೇಡ! ನನ್ನನ್ನು ನೋಡಿ ನದಿಯೆಡೆಗೆ ನಡೆಯಬೇಡ! ನಿಲ್ಲು. ನಿಲ್ಲು; ಎಲೈ ನೀಲಕಂಠವೇ ನಿಲ್ಲು! ನಿನ್ನ ನಲುಮೆಯ ನರ್ತನದ ನಯವನ್ನಾದರೂ ನನಗೆ ನೀಡು!

+ + + + +

ಮಯೂರವಾದರೂ ಎಷ್ಟು ಮನೋಹರ! ಎಷ್ಟು ಮಾಟ! ಎಷ್ಟು ಮುದ್ದು! ಮುದ್ದನ್ನಮೊಗದಲ್ಲಿ ನಕ್ಷತ್ರ ನಡುಗಿಸುವ ನಯನಗಳು! ಸಂಪಿಗೆಯ ಗೊನೆಯಂತೆ ಇರುವ ಚೂಪಾದ ಚುಂಚು! ಎಲೈ ಶಿಖಿಯೇ! ಈ ನಿನ್ನ ಮೋಹಿಸುವ ಮೈಬಣ್ಣವನ್ನು ಇಂದ್ರನಿಂದ ಕದ್ದಿರುವಿಯೋ? ಅಥವಾ ರವಿಯು ನಿನ್ನ ನಯನ ಮನೋಹರವಾದ ನೃತ್ಯಕ್ಕೆ ಮನಸೋತು ನುಣುಪಾದ ಈ ಬಣ್ಣವನ್ನಿತ್ತಿರುವನೋ? ನಾನರಿಯೆ! ಸರ್ವಾಂಗ ಸುಂದರವಾದ ಈ ನಿನ್ನ ಸ್ವರೂಪಕ್ಕೆ ತಲೆಯ ತುರಾಯಿಯೊಂದು ಸುವರ್ಣಕ್ಕೆ ಕುಂದಣಹಾಕಿದಂತೆ!

+ + + + +

ಎಲೈ ಕೇಕಿಯೇ ನಿನ್ನ ಆಲಯವಾದರೂ ಎಷ್ಟು ಆನಂದ ಬೀರುವಂತಹದು. ಶಾಂತಿ-ಸುಖಗಳ ತವರುಮನೆಯೇ! ಗಾಂಭೀರ್ಯದ ನೆಲೆಗೊಂಡಿದೆ. ನಿಸರ್ಗವು ನಿನ್ನ ನರ್ತನದಿಂದ ಮೋಹಪರವಶವಾಗಿ ನಗುವಂತೆ ಭಾಸವಾಗುವದು. ಪ್ರೇಮವೆಂಬ ಗಾಳಿಯು ಎಲ್ಲೆಡೆಯಲ್ಲಿ ಸುಳಿಯುತ್ತಿರುವದು. ಎಷ್ಟೆಂದು ವರ್ಣಿಸಲಿ ಆ ನಿನ್ನ ನಿಲಯದ ಮಹಿಮೆಯನು.

+ + + + +

ಎಲೈ ದೇವಿಯ ವಾಹನವೇ! ಪೂರ್ವಕಾಲದಲ್ಲಿ ನೀನು ಸರಸ್ವತಿಯ ವಾಹನನಾಗಿ [illegible] ಕೇಳಿದೆ ಆದಾವ ಕಾರಣದಿಂದ ಅವಳು ನಿನ್ನನ್ನು ತನ್ನ

ವಾಹಕವನ್ನಾಗಿ ಮಾಡಿಕೊಂಡಿರಬಹುದು. ನಿನ್ನ ರೂಪಕ್ಕೆ ಮರುಳಾಗಿ ತನ್ನ ಸಾರಥಿಯನ್ನಾಗಿ ಮಾಡಿಕೊಂಡಳೋ? ಲೋಹಚುಂಬಕವು ಲೋಹವನ್ನಾಕರ್ಷಿಸುವಂತೆ ನಿನ್ನ ನರ್ತನವು ಅವಳ ಮನಸ್ಸೆಳೆದೊಯ್ಯಿತೋ? ಅಥವಾ ಆ ನಿನ್ನ ಆಲಯದ ಸ್ವರ್ಗೀಯ ಸೌಖ್ಯವನ್ನು ಸೇವಿಸುವದಕೋ ನಾನರಿಯೆ! ಪ್ರತಿನಿತ್ಯವೂ ಆ ಪರಮ ಪವಿತ್ರೆಯಾದ ದೇವಿಯ ಪಾದಾಂಘ್ರಿ ಕಮಲಗಳ ಸೇವೆಗೈದು ಪರಮ ಶಾಶ್ವತವಾದ ಸುಖಪೊಂದುವ ಮಯೂರವೇ ನೀನೇ ಧನ್ಯ!

\+ + + + +

ಎಲಾ ಇದೇನು! ಕಣ್ಣಲ್ಲಿ ಕಂಬನಿ! ಕೇಕಿಯೇ ಅದೇಕೆ ಅಳುವದು? ಕುಣಿದು ಕುಣಿದು ದಣಿದಿರುವಿಯೋ? ಅಥವಾ ನಿನ್ನ ಆ ಅಳುವಿನಿಂದ ಹೊರಸೂಸುವದು ಆನಂದಾಶ್ರುಗಳ ಪ್ರವಾಹವೋ? ಗಗನವನ್ನು ಛೇದಿಸುವ ಆಕ್ರೋಶಕ್ಕೆ ಅದಾವ ಕಾರಣ! ಮಿಗೆ ಸರಸ್ವತಿಯ ಆಸರವು ತಪ್ಪಿತೋ! ನರ್ತನವ ನಿಲಿಸಲು ಆರೂ ಬಾರದಕೋ? ಸಗ್ಗದಿಂ ಭೂಮಿಗಿಳಿದುದಕೆ ಆವ ಸುಖವ ಕಾಣದಕೊ? ಹೇಳು; ಭಯಪಡದೆ ಹೇಳು! ಸಾವಧಾನದಿ ಹೇಳು! ಎಲೈ ಭುಜಂಗ ಭುಕವೇ! ನೋಡಿನು ನಿನ್ನೀ ದುಸ್ಥಿತಿಯನ್ನು! ನನಗಾದರೂ ಕರುಳು ಕತ್ತರಿಸಿದಷ್ಟು ವೇದನೆ ಯಾಗುತ್ತಿದೆ. ಅಂ ಇದೇನು ಅಳುವು ಹೆಚ್ಚಿತು. ನಯನಮನೋಹರ ನವಿಲೇ ನಿಲ್ಲಿಸು. ಆ ನಿನ್ನ ರೋದನವ. ಲಾಲಿಸು ಎನ್ನ ಈ ವಚನವ.

\+ + + +

ಜಗದಲಿ ಮಾನವನ ಗತಿಯಾದರೂ ನಿನ್ನದೇ! ಜನುಮವೆತ್ತಿದಾರಭ್ಯ ಎಡೆಬಿಡದೆ ಕುಣಿವ, ಅಶ್ರುಗಳ ಸುರಿಸುವ, ಕುಣಿಕುಣಿದು ದಣಿವ, ನೀಗುಂದುರಿಯಂತೊಪ್ಪ, ಸಂಸಾರ ಸುಖವ ಬಯಸುವ, ನೀರ್ಗುಳ್ಳೆಯೆಂಬ ಹಡಗವನೇರಿ ದಾಂಟಲಿಚ್ಛಿಸುವ, ಅಪಾರವಾದ ಸಂಸಾರಸಾಗರದ ಮಧ್ಯದೊಳ್ ದುಃಖರೂಪ ಅದ್ಭುತ ಮೊಸಳೆಗಳ ತುತ್ತಿಗೀಡಾಗುವ, ಸಹಾಯ ಯಾಚನೆಗೆ ಆಕ್ರೋಶಿಸುವ ಎಲೈ ಶಿಖಿಯೇ ನಿನ್ನ ಗತಿಯೂ ಹೀಗೆಯೇ! ಒಂದಿಲ್ಲೊಂದುದಿನ ನಿಶ್ಚಯ. ಅದುಕಾರಣವೇ ಮಯೂರವೇ, ನಿನ್ನ ವಶಕ್ಕಿದ್ದ ದಿನಗಳನ್ನು ಆನಂದದಿಂದ ಕಳೆ. ಈ ಸ್ಥಳ ಬಿಡುವದರೊಳಗೆ ಎಲೈ ಮೇಘನಾದ ಪ್ರಿಯನೇ! ನಿನ್ನ ನರ್ತನ ಕೌಶಲ್ಯವನ್ನು ನನಗೆತೋರಿ ಮಹಾನಂದವ ನೀಡು! ನಿನಗೆ ಮೇಘನಾದದಲ್ಲಿ ಹೇಗೆ ಆನಂದವಪ್ಪೋ? ಹಾಗೆಯೇ ನನಗಾದರೂ ನಿನ್ನ ನರ್ತನದಲ್ಲಿಯೇ ವಿಶ್ವ ಆನಂದ! ಅದುಕಾರಣ ಕುಣಿ ಹೂಂ ಆರಂಭಿಸು!

ನಾನಾಡಿದ ಮಾತುಗಳಾಲಿಸಿಯೋ? ಅಥವಾ ನನ್ನ ವಿನತಿಯ ಮಾನ್ಯಮಾಡುವದಕ್ಕೋ? ನಾ ತಿಳಿಯೆ. ಮಯೂರವು ಮಾತ್ರ ಕೆಲನಿಮಿಷ ವಿಚಾರದಲ್ಲಿ ಮುಳುಗಿದಂತೆ ನಟಿಸಿ ಮತ್ತೆ ಅತಿಮನೋಹರವಾಗಿ ಕುಣಿದೊಮ್ಮೆ ಮಾಯವಾಯಿತು. ನಾನೆಷ್ಟೋ ಬಾರಿ ಅದೇ ಸ್ಥಳಕ್ಕೆ ತಿರುಗಾಡುವದಕ್ಕೆ ಹೋದೆ ಆದರೆ ಆ ಪಕ್ಷಿಯು ಮಾತ್ರ ದೃಷ್ಟಿಗೆ ಬಿದ್ದಿಲ್ಲ. ನನ್ನ ವಚನಗಳಿಗೇನೋ ನಾಚಿಕೊಂಡಿತೋ? ಏನೋ?

ಕರ್ನಾಟಕದ ಶಿಲ್ಪ ಕಲೆಯ ಮೇಲ್ಮೆ

ರಾಮಚಂದ್ರಾಪುರ ಸಂಸ್ಥಾನಕ್ಕೋಸ್ಕರ ತಯಾರಾದ "ಹಸ್ತಿದಂತ ಸಿಂಹಾಸನ"

(ಸೊರಬದ ಮೈಸೂರ ಪ್ರಾಂತದಲ್ಲಿ)

ಈ ಹಸ್ತಿದಂತ ಸಿಂಹಾಸನವನ್ನು ಶ್ರೀ. ಎಚ್. ಪುಟ್ಟಪ್ಪಾ ಮತ್ತು ಸಿದ್ದಣ್ಣಪ್ಪಾ ಗುಡಿಗಾರ, ಮೊದಲಾದ ಹದಿನೆಂಟು ಜನರು ಕೂಡಿ ೧೯೧೫ ರಿಂದ ೧೯೨೯ ರ ವರೆಗೆ, ಅಂದರೆ ಸರಾಸರಿ ಹದಿನಾಲ್ಕು ವರುಷಗಳ ವರೆಗೆ ಏಕೋಪ್ರಕಾರವಾಗಿ ಕೆಲಸಮಾಡಿ ತಯಾರಿಸಿದ್ದಾರೆ. ಸಿಂಹಾಸನದ ಅಜಮಾಸು ಬೆಲೆಗೂ ಎರಡೂವರೆ ಲಕ್ಷ ರೂಪಾಯಿಗಳಿಗೆ ಮಿಕ್ಕಿದೆ.

ಸಿಂಹಾಸನದ ವರ್ಣನೆ:— ಸಿಂಹಾಸನವು ಸುಮಾರು ೭—೮ ಫೂಟು ಎತ್ತರವಿದೆ. ಹಸ್ತಿದಂತದಲ್ಲಿ ನಾನಾ ಪ್ರಕಾರದ ಚಿತ್ರಗಳಿಂದ ಕೊರೆದಿದ್ದಾಗಿದೆ. ಹಿಂದಿನ ಭಾಗಕ್ಕೆ ಸುವರ್ಣದ ತಗಡು ಕೂಡ್ರಿಸಲ್ಪಟ್ಟಿದೆ.

ಮೇಲಿನ ಚಿತ್ರಗಳಲ್ಲಿ ಭಾರತ, ಭಾಗವತ, ರಾಮಾಯಣ, ದಶಾವತಾರಗಳ ಮುಖ್ಯವಾದ ಚಿತ್ರಗಳು ಕೊರೆಯಲಾಗಿದ್ದು ಮೇಲ್ಭಾಗದಲ್ಲಿ ರೇಶಿಮೆಯ ಛತ್ರವಿದೆ. ಛತ್ರವು ಸುತ್ತಲೂ ಮುತ್ತುಗಳಿಂದ ಶೃಂಗರಿಸಲ್ಪಟ್ಟಿರುವದರಿಂದ ಬಹು ಶೋಭಾಯಮಾನವಾಗಿದೆ. ಛತ್ರದ ಮೇಲ್ಭಾಗದಲ್ಲಿ ಸುವರ್ಣದ ಕಲಶ ಶೋಭಿಸುತ್ತದೆ.

ಜೈನ ಸಾಹಿತ್ಯದಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಸಂಪತ್ತು ಮುಕ್ತಿ ಈ ವಿಷಯಗಳು ಬರುವುದೇ ಹೆಚ್ಚು. ಪ್ರಾಚೀನ ಕವಿಪುಂಗವರು ನಿಸ್ಸಾರವಾದದ್ದು, ಕ್ಷಣಿಕ ವಾದದ್ದು. ಮುಕ್ತಿ ಸಾಮ್ರಾಜ್ಯವನ್ನು ಪಡೆಯಬೇಕೆಂದು ಕವಿಗಳು ಸಾರುತ್ತಿರುವರು. ವೈರಾಗ್ಯ ಮಾರ್ಗ ಮೋಕ್ಷ ಇವುಗಳು ಜೈನಕವಿಗಳ ಜಪಮಂತ್ರ. ಅನೇಕ ಕಾವ್ಯಗಳಲ್ಲಿ ರುದ್ರಭಾವನೆಯು ವ್ಯಕ್ತವಾಗುತ್ತಿದೆ. ಬಡರ ಸ್ಥಿತಿಯನ್ನು ನಡತೆ ಉತ್ತಮ ಜೀವನದಲ್ಲಿ ಸ್ವಾತಂತ್ರ್ಯವಿರುವುದು, ಮೋಕ್ಷವಿರುವುದು.

ವಿವಿಧ ಸಾಹಿತ್ಯ

ಆದಿಕವಿ ಪಂಪನು ಬರೆದದ್ದು ಮತಗ್ರಂಥವಾದರೂ ಸುಲಭ ಶೈಲಿಯಲ್ಲಿ ಬರೆದು ಜೈನಸಂಬಂಧವಾದ ವಿಷಯಗಳನ್ನು ಒಂದು ವಿಚಿತ್ರವಾದ ಸುಂದರರೀತಿಯಿಂದ ಬರೆದಿರುವನು, ಇದು ಅವನ ಪ್ರತಿಭೆಯ ಫಲ. ಕವಿಯು ಜೈನನೆಂದು ಉಪೇಕ್ಷೆ ಮಾಡಲಾಗದು. ಜೈನ, ವೀರಶೈವ, ಬ್ರಾಹ್ಮಣ ಕವಿಗಳಾದರೇನು ? ಅವರೆಲ್ಲರೂ ನಮ್ಮವರೇ ! ನಮ್ಮ ಸಂಕುಚಿತ ಮನಸ್ಸನ್ನು ವಿಕಸಿತಗೊಳಿಸಿ ವಿಶಾಲದೃಷ್ಟಿಯಿಂದ ಪ್ರಪಂಚವನ್ನು ನೋಡಲು ನಮ್ಮ ಕಣ್ಣುಗಳನ್ನು ಅವರು ತೆರೆಯುವರು.

ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಬೆಂಗಳೂರು

ಗೆಲುವಿನ ಬೆಲೆ.

ಲೇಖಕರು — ಶ್ರೀ. ಬಾಲೇಹೊಸೂರ ರಾಮರಾಯರು ಶಿರಹಟ್ಟಿ.

ದೃಶ್ಯ— ಒಂದು ನಗರದಲ್ಲಿರುವ ಮನೆಯ ಮುಂಭಾಗದಲ್ಲಿ ವೃದ್ಧನಾದ ಮುದುಕನೊಬ್ಬನು ತನ್ನ ಮೊಮ್ಮಗನ ಸಂಗಡ ಮಾತಾಡುತ್ತ ಕುಳಿತಿರುವನು.

ಬಾಲಕ— ಆನಂದದಾಯಕವಾದ ಸಂಗತಿ! ಅಮೌಲ್ಯವಾದ ಸಂಗತಿ! ಘನವಾದ ಸಂಗತಿ! ತಾತಯ್ಯಾ ನೀವಿನ್ನೂ ಕೇಳಿರಲಿಲ್ಲವೇ? ನಮ್ಮ ರಾಜರಿಗಿಂದು ಸಂಪೂರ್ಣವಾದ ಗೆಲುವು ದೊರೆತಿದೆ. ಯುದ್ಧರಂಗದಲ್ಲಿ ವಿಜಯವನ್ನು ಸಂಪಾದಿಸುವಾಗ್ಗೆ ನಮ್ಮ ಜನಕ್ಕೆಷ್ಟು ಶ್ರಮವಾಗಿರಬಹುದು. ಅಂತಹ ಭಯಂಕರವಾದ ಸಾಹಸವನ್ನೂ ಶೌರ್ಯವನ್ನೂ ತೋರಿದ್ದರಿಂದಲ್ಲವೇ ನಮ್ಮ ಜನಕ್ಕೆ ಅಪೂರ್ವವಾದ ವಿಜಯವು ದೊರೆತಿದುದು. ಅದುಕಾರಣವೇ ಈ ದಿನ ನಗರದಲ್ಲೆಲ್ಲ ದೀಪೋತ್ಸವವು ನಡೆಯತಕ್ಕದ್ದಿರುವದು.

ತಾತ— ಅನೇಕ ಮಾನವಪ್ರಾಣಿಗಳ ಭಯಂಕರವಾದ ಕೊಲೆಯಿಂದ ಕೂಡಿದ ಈ ಸಂಗತಿಯು ಮಗೂ! ನಿನಗೊಳ್ಳೇ ಆನಂದದಾಯಕವಾಗಿ ತೋರುವದಲ್ಲವೇ?

ಬಾಲಕ— ಹಾಗೇನೂ ಇಲ್ಲ! ಆದರೂ ನಮ್ಮ ರಾಷ್ಟ್ರಕ್ಕೆ ವಿಜಯವು ಹೀಗೆ ಆನಂದಪಡಿಸಲು ನಮಗೊಂದು ತರದ ಅಭಿಮಾನವೆನಿಸುವದು ಸಹಜ!

ತಾತ— ನಿಜಾ! ರಾಷ್ಟ್ರದ ಹೆಚ್ಚಳವನ್ನು ಬಯಸುವದು ನಮ್ಮಗಳ ಕರ್ತವ್ಯವೇ ಸರಿ. ಆದರೆ ಅದರಿಂದ ನಮ್ಮನ್ನುಳಿದು ಬೇರೆಯವರಿಗೆ ಕೇಡಾಗಿರಬಾರದು. ಯಾವದೊಂದು ರಾಷ್ಟ್ರದಲ್ಲಿ ಕೇವಲ ಪ್ರಜಾಜನಗಳ ಹಿತಕ್ಕಾಗಿ ಯುದ್ಧಗಳು ಸಂಭವಿಸುವದು ಅತಿ ವಿರಳ. ಅಂತಹ ಅವಶ್ಯಕತೆಯು ಪ್ರಸ್ತುತ

ದಾಗ ಎಷ್ಟೋ ಭೀಕರವಾದ ಚಿತ್ರಗಳು ನಮ್ಮ ಕಣ್ಣೆದುರಿನಲ್ಲಿ ಬಂದು ನಿಲ್ಲುವವು. ಮತ್ತೂ ಆ ವಿಷಯವಾಗಿ ವಿಚಾರಮಾಡಿದರೆ ಯಾವ ಮನುಷ್ಯನೂ ಹೀಗೆ ನಮ್ಮಂತೆ ಆನಂದಪಡಲು ಸಾಧ್ಯವಿಲ್ಲ.

ಬಾಲಕ— ನಮ್ಮ ವೈರಿಗಳು ನಮ್ಮನ್ನು ಅನೇಕ ವಿಧವಾಗಿ ಪೀಡಿಸಿದಾಗ ನಾವವರನ್ನು ಹೊಡೆದಟ್ಟುವೆವು. ಆಗ್ಗೆ ನಮಗಾದ ಆನಂದವನ್ನು ವ್ಯಕ್ತಪಡಿಸುವದು ಸರಿಯಾಗಲಿಕ್ಕಿಲ್ಲವೆಂದು ನಿಮ್ಮ ಅಂಬೋಣವೋ ಹೇಗೆ

ತಾತ— ಅಯ್ಯೋ ಪಾಪವೇ! ಮಗೂ ಕೇಳು ಹಾಗಾದರೆ! ಬಾಹ್ಯರೀತಿಯಿಂದ ನೋಡುವ ನಮ್ಮಗಳಿಗೆ ಆವ ಪಂಗಡದವರ ಉದ್ದೇಶಗಳು ಘಾತುಕವಾದುವೆಂಬದನ್ನು ನಿರ್ಣಯಿಸಲು ಸಾಧ್ಯವಿಲ್ಲ. ಸಾಧಾರಣವಾಗಿ ಎರಡೂ ಪಂಗಡದವರಲ್ಲಿಯೂ ದೋಷಗಳು ಇದ್ದೇ ಇರುತ್ತವೆ. ವಿಜಯಶ್ರೀಯು ಇವರೀರ್ವರನ್ನೂ ದುರ್ಮಾರ್ಗದಲ್ಲಿ ಪ್ರವೃತ್ತರನ್ನಾಗಿ ಮಾಡುತ್ತಾಳೆ. ಇವೆಲ್ಲ ವಿಷಯಗಳನ್ನು ಬದಿಗಿಟ್ಟು, ಕೇವಲ ಯುದ್ಧದಲ್ಲಿ ದೊರೆತ ಗೆಲುವಿಗಾಗಿ ಆವನೊಬ್ಬನು ಆನಂದಪಡುವದಾದರೆ, ಅವನು ಆನಂದಪಡುವದು ತನ್ನನ್ನುಳಿದು ಬೇರೆ ತನ್ನ ಬಾಂಧವರ ದುಃಖಕ್ಕಾಗಿಯೇ ಸರಿ! ಮತ್ತೂ ಈ ವಿಷಯಗಳ ಕಲ್ಪನೆಯು ನಿಜವಾಗಿ ಅವನಲ್ಲೊಂದುವೇಳೆ ಜನಿಸಿದ್ದೇಯಾದರೆ ಅವನು ತನ್ನ ಆನಂದಕ್ಕಾಗಿ ಸ್ವಲ್ಪ ಮಟ್ಟಿಗೆ ತಡೆಹಾಕಬಹುದು. ಇದೋ ಕೇಳು ಓರ್ವ ಡಾಕ್ಟರನು ಬಂದು ನಮ್ಮೆದುರಿನಲ್ಲಿ ತಾನು ಈ ದಿನ ನಾಲ್ಕಾರು ಜನಗಳ ಕಾಲುಗಳನ್ನು ಕಡೆದೊಗೆದೆನೆಂದು ಹೇಳಿದಲ್ಲಿ ನೀನವನ ಆ ಕೃತಿಯಬಗ್ಗೆ ಏನೆಂದು ಅಭಿಪ್ರಾಯಪಡುವಿ. ಎಲ್ಲಿ ಹೇಳು ನೋಡುವಾ?

ಬಾಲಕ— ನಿಶ್ಚಯಾ! ನಾನವನನ್ನು ಅತಿ ಕಠಿಣ ಹೃದಯಿಯೆಂತಲೇ ಭಾವಿಸುವೆನು.

ತಾತ — ಅದೇಕೆ? ಶಸ್ತ್ರಕ್ರಿಯೆ ಮಾಡಿದವನು (ತಾನು) ಹೇಳಿದ ಜನರು ತಮ್ಮ ಇಚ್ಛೆಯಿಂದಲೇ ಅವನಕಡೆಯಿಂದ ಕಾಲು ಕಡಿಯಿಸಿಕೊಂಡಿರುವರು. ಅವರಿಗದರಿಂದ ಹಿತವು ಕೂಡಾ ಆಗಿದೆ. ಆದರೆ ಯುದ್ಧದಲ್ಲಿ ಎರಡೂ ಪಂಗಡದ ದಂಡಾಳುಗಳ ಹಿತವೆಷ್ಟುಮಾತ್ರವೂ ಇರುವದಿಲ್ಲ. ಅಲ್ಲದೆ ಅನೇಕ ಜನಗಳಿಗೆ ಉಪಾಯವಿಲ್ಲದಲೆ ರಣಾಂಗಣದಲ್ಲಿ ದುಮುಕುವ ಪ್ರಸಂಗವು ಒದಗುತ್ತದೆ. ಮಗೂ, ಸ್ವಲ್ಪ ಲಕ್ಷವಿಟ್ಟು ಕೇಳು. ನೀನಿಂದು ಸಂತೋಷಪಡುತ್ತಿರುವ ಯುದ್ಧದಲ್ಲಿ ಹತ್ತುಸಾವಿರ ಜನರು ಮಡಿದಿರುವರು. ಇವರನ್ನುಳಿದು ಮತ್ತೆ ಅಷ್ಟು ಜನರು ಗಾಯಹೊಂದಿದ್ದಾರೆ.

ಬಾಲಕ— ಎರಡೂ ಪಂಗಡದವರಲ್ಲಿ ಕೂಡಿಯೋ ಅಥವಾ!

ತಾತ— ಛೀ! ಎರಡೂ ಪಂಗಡದವರಲ್ಲಿ ಕೂಡಿಯೇ ಮತ್ತೆ! ಅದಿರಲಿ ಸ್ವಲ್ಪ ವಿಚಾರಮಾಡಿ ನೋಡು! ಇಂದು ಮುಂಜಾವಿನಲ್ಲಿ ಹತ್ತು ಸಾವಿರ ಜನರು

ಯುದ್ಧಭೂಮಿಗೆ ಕಳುಹಿಸಲ್ಪಟ್ಟರು. ಅವರಲ್ಲಿ ಯುದ್ಧಭೂಮಿಯಮೇಲೆ ತಮ ಗಾದ ದುಃಖವನ್ನು ಅನುಭವಿಸುವದಕ್ಕೀಗ ಜೀವಿಸದಿದ್ದರೂ ತಮಗಾಗಿ ದುಃಖಿಸ ಡುವದಕ್ಕೆ ಮಾತ್ರ ತನ್ನ ತಂದೆ, ತಾಯಿ, ಹೆಂಡರು, ಮಕ್ಕಳನ್ನು ಹಿಂದುಳಿಸಿಯೇ ಇದ್ದಾರೆ. ಈ ಅಸಂಖ್ಯಜನರ ದುಃಖಕ್ಕೆ ಕಾರಣವು ಇಂದಿನ ಯುದ್ಧದ ಹೊಡ ತವೇ-ಅಲ್ಲದೆ ಮತ್ತೇನು ? ಗಾಯಹೊಂದಿದವರ ಸ್ಥಿತಿಗಿಂತ, ಪ್ರಾಣವನ್ನು ತೊ- ರೆದ ಈ ಜನಗಳ ಸ್ಥಿತಿಯು ಎಷ್ಟೋ ಪಾಲಿಗೆ ಬೇಕು. ನಾವು ಮಾತಾಡುತ್ತಿಗುವ ಇಷ್ಟು ಸ್ವಲ್ಪ ಸಮಯದಲ್ಲಿಯೇ ಮತ್ತೆ ಎಂಟು ಸಾವಿರ ಜನಗಳು ಗಾಯಹೊಂದಿ ದರು. ಅವರಲ್ಲಿ ಕೆಲವರು ಮರಣೋನ್ಮುಖರು, ಮತ್ತೆ ಕೆಲವರು ಇನ್ನೊಂದು ಕ್ಷಣಕ್ಕೆ ಸಾಯುವವರು. ಮತ್ತೆ ಕೆಲವರು ಅನೇಕವಿಧ ನೋವಿನಿಂದ ತೊಳಲುತ್ತ ಅತಿ ದುಃಖದಿಂದ ಜೀವಿಸುವರು.

ಬಾಲಕ— ತಾತಾ ! ಈ ಸಂಗತಿಯು ಮಾತ್ರ ಕೇಳಲು ಭೀಕರವಾದು ದೇನೋ ನಿಜಾ ! ಇದೋ ಭೀತಿಯಿಂದ ನನ್ನ ಮೈಗೆ ಮುಳ್ಳು ಬರುತ್ತಲಿವೆ. ಅಯ್ಯೋ ! ನನ್ನನ್ನು ಸ್ವಲ್ಪ ಬಿಗಿಯಾಗಿ ಹಿಡಿದುಕೊಳ್ಳಿರಿ.

ತಾತ— ಆದರೆ, ಅದೋ ನೋಡು ಮಗೂ ! ಪ್ರತಿಯೊಬ್ಬನು ಈ ವಿಷ ಯಗಳನ್ನು ಗಮನಿಸದೆ ಹೇಗೆ ಆನಂದಪಡುತ್ತಲಿರುವನು.

ಬಾಲಕ— ನಿಜ ನಿಜಾ ! ಅವರಲ್ಲಿ ಯಾರೂ ಈ ವಿಷಯವನ್ನು ಗಮನಿ ಸಿದಂತೆ ಕಾಣುವದಿಲ್ಲ. ತಮ್ಮ ಬಾಂಧವರನೇಕರು ದುಃಖದಿಂದ ಬಳಲುತ್ತಿರಲು, ತಾವು ಹೀಗೆ ಹರುಷಪಡುವದು ಉಚಿತವಲ್ಲ. ಎಂಬೀ ಸಂಗತಿಯು ಅವರ ಲಕ್ಷಕ್ಕೆ ಬಾರದೇ ಇರದು. ಮಾತ್ರ ಅವರು ಈ ಬಗ್ಗೆ ಸ್ವಲ್ಪ ವಿಚಾರಮಾಡಬೇಕಾಗುವದು.

ತಾತ— ಮಗೂ ! ಹಿಂದೊಮ್ಮೆ ಬಡಪ್ರಾಣಿಯಾದ ಅಜಿತಕುಮಾರನು ತುಂಬಿದ ಬಂಡಿಯ ಮೇಲಿಂದ ಬಿದ್ದು ಕಾಲು ಮುರಿದುಕೊಳ್ಳಲು, ನಗರದಲ್ಲಿನ ಯಾವತ್ತೂ ಜನರು ಅವನಿಗಾಗಿ ಮರುಗಿದ ಸಂಗತಿಯನ್ನು ನೀನು ಇಷ್ಟರಲ್ಲಿಯೇ ಮರೆತು ಬಿಟ್ಟೆಯಾ ?

ಬಾಲಕ— ಇಲ್ಲ. ಅದುಹೇಗೆ ಮರೆಯಲಿ ! ತಾತಾ, ಆದಿನ ನನಗೆ ಇಡೀ ರಾತ್ರಿ ನಿದ್ರೆ ಬರಲಿಲ್ಲ.

ತಾತ— ಆದರೆ ನೋಡಿದಿಯಾ ! ಪ್ರತಿಯೊಬ್ಬನು ಈ ವಿಷಯಗಳನ್ನೇ ಗಮನಿಸದೆ ಹೇಗೆ ಆನಂದಪಡುತ್ತಿರುವನು.

ಬಾಲಕ— ನಿಜಾ ! ಅವರೆಲ್ಲರೂ ಈ ವಿಷಯವನ್ನು ಗಮನಿಸಿದಂತೆ ಕಾಣುವದಿಲ್ಲ. ತಮ್ಮ ಬಾಂಧವರನೇಕರು, ದುಃಖದಿಂದ ಬಳಲುತ್ತಿರಲು, ತಾವು ಹೀಗೆ ಹರುಷಗೊಳ್ಳುವದು ಉಚಿತವಲ್ಲ. ಈ ಸಂಗತಿಯು ಅವರ ಲಕ್ಷಕ್ಕೆ ಬಾರದೇ ಇರದು ಮಾತ್ರ ಅವರು ಈ ಬಗ್ಗೆ ಸ್ವಲ್ಪ ವಿಚಾರಮಾಡಬೇಕಾಗುವದು.

ತಾತ— ಇದೋ ಇಲ್ಲಿ ನೋಡು. ಸಹಸ್ರಾವಧಿ ಜನರು ಮಡಿದು

ಬಾಲಕ— ಯುದ್ಧಭೂಮಿಯಲ್ಲಿ ಸೋಮನಾಥನು ಎಂತಹ ವಿಪತ್ತಿಗೀಡಾದನೋ ಏನೋ ?

ತಾತ— ಆಯಿತು ! ಸೋಮನಾಥನು ತನ್ನ ಊರಿನಿಂದ ಹೋಗಿ ಎಷ್ಟೋ ವರುಷಗಳು ಗತಿಸಿದವು. ಒಂದು ಬೇಸಿಗೆ ಕಾಲದಲ್ಲಿ ಪ್ರಖರವಾದ ಸೂರ್ಯನ ತಾಪದಿಂದ ಬಳಲಿದ ಜನಗಳು ಸಂಧ್ಯಾಕಾಲದಲ್ಲಿ ತಮ್ಮ ಗುಡಿಸಲುಗಳಮುಂದೆ ಆಗಲೇ ಬೀಸುವ ತಂಗಾಳಿಗೆ ಮೈಯೊಡ್ಡಿ ಕುಳಿತಿದ್ದರು. ಅಷ್ಟರಲ್ಲಿ ಕಂಕುಳಲ್ಲಿ ಕೋಲುಗಳನ್ನಿಟ್ಟುಕೊಂಡು ಎಡವುತ್ತ ಮುಗ್ಗುತ್ತ ಸೈನಿಕರಂತೆ ಉಡುಪುಧರಿಸಿದ ಪುರುಷನೊಬ್ಬನು ಅದೇ ಹಳ್ಳಿಗೆ (ಸೋಮನಾಥನ ಊರು) ಪ್ರಾಪ್ತನಾದನು. ಅವನ ಮುಖವು ನಿಸ್ತೇಜವಾಗಿತ್ತು. ಗಲ್ಲಗಳು ಕಂದಿದ್ದವು. ಕಣ್ಣುಗಳು ಒಳನಟ್ಟಿದ್ದವು. ನೋಡುವವರಿಗೆ ಅವನು ಅತಿಶಯ ದುಃಖಕ್ಕೆ ಈಡಾಗಿರಬೇಕೆಂಬಂತೆ ಕಂಡುಬರುತ್ತಿತ್ತು. ಕೂಡಲೇ ಹಳ್ಳಿಯ ಜನಗಳೆಲ್ಲ ಅವನ ಸುತ್ತಲು ನೆರೆದರು. ಆಗ್ಗೆ ಓರ್ವ ತರುಣಿಯು ಒಮ್ಮಿಂದೊಮ್ಮೆ "ಆಯ್ಯೋ ! ತಾರುಣ್ಯದೆಶೆಯಲ್ಲಿ ಪ್ರೇಮಪಾಶದಿಂದ ನನ್ನ ಮನವನ್ನು ಸೆಳೆದ ಸೋಮನಾಥನೆ !" ಎಂದು ಸುರಿ ಮೂರ್ಛೆ ಹೋದಳು. ಈ ಶಬ್ದಗಳನ್ನು ಕೇಳಿದ ಸೋಮನಾಥನಾದರೂ ಕೂಡಲೇ ದೇಹಭಾನವನ್ನು ಕಳೆದುಕೊಂಡವನಾಗಿ ನೆಲಕ್ಕುರುಳಿದನು. ನೆರೆದವರೆಲ್ಲರೂ ಬಹಳವಾಗಿ ಸೋಜಿಗಗೊಂಡರು. ಅವರಲ್ಲಿನ ಕೆಲವರು ಸೋಮನಾಥನ ತಂದೆ-ತಾಯಿಗಳನ್ನಲ್ಲಿಗೆ ಕರೆದುತಂದರು. ಆಗವರಿಗಾದ ದುಃಖವನ್ನು ಹೇಳಲು ಸಾಧ್ಯವಿಲ್ಲ. ಆದರೂ ಕೂಡಿದ ಜನರು ಸೋಮನಾಥನಿಗೂ ತರುಣಿಗೂ ತಲೆಗೆ ತಣ್ಣೀರು ತಟ್ಟಿ ಅವರನ್ನೆಚ್ಚರಗೊಳಿಸಿ ಹಾಗೂ ಹೀಗೂ ಮಾಡಿ ವೃದ್ಧರಾದ ತಂದೆ-ತಾಯಿಗಳನ್ನು ಸಮಾಧಾನಪಡಿಸಿದರು. ಇಂತಹ ಹೃದಯದ್ರಾವಕವಾದ ದೃಶ್ಯವನ್ನು ಕಣ್ಣಾರೆ ನೋಡುವದಕ್ಕೆ ನಾನು ಅಂದು ಅದೇ ಸ್ಥಳದಲ್ಲಿ ಇದ್ದೆನು. ಕೊನೆಗೊಮ್ಮೆ ಎಲ್ಲರೂ ಕೂಡಿ ಸೋಮನಾಥನನ್ನು ಅವನ ಮನೆಗೊಯ್ದು ಮುಟ್ಟಿಸಿದರು. ಅಂದು ರಾತ್ರಿ ಊಟವಾದಬಳಿಕ ಹಳ್ಳಿಗರೆಲ್ಲರೂ ಸೋಮನಾಥನ ಸಮಾಚಾರವನ್ನು ಕೇಳುವದಕ್ಕಾಗಿ ಕೂಡಿದರು. ಆಗ್ಗೆ ಸೋಮನಾಥನು ತಾನೇ ಸ್ವತಃ ಹೇಳಿದುದೇ ಈ ಕಥಾನಕವು.

ಬಾಲಕ— ಎಂತಹ ಭಯಂಕರವಾದ ಕಥಾನಕವಿದು ! ಏನು ಸೋಮನಾಥನ ಈ ಗತಿ ! ಎಷ್ಟು ದುಃಖವಿದು ಸೋಮನಾಥನ ಮಾತಾ-ಪಿತೃಗಳಿಗೆ. ಇದೆಲ್ಲವನ್ನೂ ಕೇಳುತ್ತಲೆ ಮೈಮೇಲೆ ರೋಮಾಂಚನೆಗಳು ಬರುತ್ತವೆ.

ತಾತ— ಕೇಳು ಮಗೂ ! ನೀನೇ ನೋಡು-ಹ್ಯಾಗಿದೆ ಈ ಸಮಾಚಾರ !

ಬಾಲಕ— ಅಯ್ಯೋ ಅದೆಂತಹ ಅನಾಹುತ ! ಒಂದು ಜೀವನಕ್ಕಾಗಿ ಮತ್ತೊಂದು ಜೀವನದ ಹತಿ ! ಎಷ್ಟು ದಿವ್ಯವಾದ-ಪವಿತ್ರವಾದ ಪ್ರೇಮವದು ಆ

ತರುಣಿಯುದು ಸೋಮನಾಥನಲ್ಲಿ! ಅದುಕಾರಣವೇ ಸೋಮನಾಥನ ಬರುವಿಗಾಗಿ ಕಾದಿ, ಕೊನೆಗೊಮ್ಮೆ ಅವನ ದರುಶನವಾಗುತ್ತಲೆ, ಅವನಿಗುಂಟಾದ ದುಃಖದ ಸ್ಥಿತಿಯನ್ನು ಸಹಿಸಲಾರದೆ, ಅಸು ತೊರದಳಲ್ಲವೇ ? ಆ ತರುಣಿಯು ಅಹಹಾ! ಇದ್ದರೆ ಇರಬೇಕು ಇಂತಹ ಅಚಲವಾದ ಪ್ರೇಮ ! ಇರಲಿ ತಾತಾ, ಆಮುಂದೇ ನಾಯಿತು. ತಾತಾ ಸೋಮನಾಥನದು !

ತಾತ— ಆಮೇಲೆ ಆಗುವದೇನು ? ಅದೇ ದಿನ ರಾತ್ರಿ ಬೆಳಗಿನ ಜಾವದಲ್ಲಿ ಯುದ್ಧಭೂಮಿಯಲ್ಲುಂಟಾದ ಅನೇಕ ಘಾಯಗಳಿಂದ ತೊಳಲಿ ಬಾಧೆಗೊಂಡ ದೇಹವನ್ನೊಮ್ಮೆ ಸೋಮನಾಥನು ತೊಲಗಿಬಿಟ್ಟನು. ಇಹಲೋಕದ ಯಾತ್ರೆಯನ್ನೇ ಮುಗಿಸಿದನು. ಇಂತು ಪುತ್ರಶೋಕವ್ಯಥೆಯನ್ನು ತಡೆಯಲು ಸಾಮರ್ಥ್ಯವಿಲ್ಲದವರಾದ ಅವನ ವೃದ್ಧ ಮಾತಾಪಿತೃಗಳೂ ಅದೇ ದಿನ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿದರು.

ಬಾಲಕ— ಸಾಕು ಮಾಡು ತಾತಯ್ಯಾ. ನಾನಿನ್ನು ಕೇಳಲಾರೆ. ಈ ಕರುಣಾಸ್ಪದವಾದ ಸೋಮನಾಥನ ಈ ಕರ್ಮಕಥೆಯನ್ನು !

ತಾತ— ಅದೇಕೆ ಮಗೂ! ಇಂತಹ ಅನೇಕ ಹಾಗೂ ಇದಕ್ಕೂ ಹೆಚ್ಚಾಗಿ ಶೋಚನೀಯವಾದ ಸ್ಥಿತಿಗೊಳಗಾದ ಸಾವಿರಾರು ಸೈನಿಕರೆಷ್ಟೋ ಜನಗಳು ಅಂದಿನ ಯುದ್ಧಭೂಮಿಯಲ್ಲಿ ಆಹುತಿಯಾಗಿರುವರು. ಅವರುಗಳ ದುದೆ-ಶೆಗಾಗಿ ನೀನಿಂದು ಆನಂದಪಡುತ್ತಿರುವಿಯಲ್ಲವೇ ? ಮಗೂ ! ಈಗಲಾದರೂ ತಿಳಿಯಿತೋ ನಿನಗೆ ಇಂದು ಮೂಢಜನಗಳು ಆನಂದಪಡುತ್ತಲಿರುವ " ಗೆಲುವಿನ ಬೆಲೆ ! "

" ನೋಬೆಲ್ಲ " ಪಾರಿತೋಷಕವೂ ಅದರ ಇತಿಹಾಸವೂ

ಲೇಖಕರು:- ಶ್ರೀ. ಬಾಲೇಹೊಸೂರ ರಾಮರಾಯರು, ಶಿರಹಟ್ಟಿ.

ನೋಬೆಲ್ಲ ಆಲ್‌ಫ್ರೇಡ ಬರ್ನಹಾರ್ಡ ಅವರ ಚರಿತ್ರೆ—

ನೋಬೆಲ್ಲನು ಯುರೋಪದೊಳಗಿನ (ಸ್ವೀಡನ್‌ದ ರಾಜಧಾನಿ) ಸ್ಟಾಕ್‌ಹೋಮನಗರದಲ್ಲಿ ಜನ್ಮ ತಾಳಿದನು (೧೮೩೩). ಮೊದಲಿನಿಂದ ಇವನ ಒಲವು ಯಂತ್ರಶಾಸ್ತ್ರದಕಡೆಗೆ ಇದ್ದುದರಿಂದ ವ್ಯವಹಾರಕ್ಕೆ ತಕ್ಕಮಟ್ಟಿಗೆ ಶಿಕ್ಷಣ ಹೊಂದಿದಕೂಡಲೇ ಪೇಟ್ರೋಗ್ರೇಡ (ರಸಿಯಾದ ರಾಜಧಾನಿ) ದಲ್ಲಿದ್ದ ತನ್ನ ತಂದೆಯವರ " ಟಾರ್ಪೆಡೋ " (ಜಲಯುದ್ಧದಲ್ಲಿ ಹಡಗಗಳನ್ನು ಒಡೆಯಲು ಉಪಯೋಗಿಸುವ ಸ್ಫೋಟಕ ದ್ರವ್ಯದಿಂದ ಕೂಡಿದ ಯಂತ್ರ) ಗಳನ್ನು ತಯಾರಿಸುವ ಕಾರಖಾನೆಯಲ್ಲಿ ಕೆಲಸಕ್ಕೆ ಸೇರಿದನು. ಮುಂದೆ ಕೆಲದಿನಗಳಮೇಲೆ ಮರಳಿ ಸ್ಟಾಕಹೋಮಕ್ಕೆ ಬಂದನು. ಕೂಡಲೇ ಸ್ಫೋಟಕ ದ್ರವ್ಯಗಳನ್ನು ತಯಾರಿಸುವ ರಸಾಯನ ಶಾಸ್ತ್ರದ ಅಭ್ಯಾಸ ನಡೆಯಿಸಿದನು. ಅದರಲ್ಲಿ ಅವನಿಗೊಳ್ಳೇ ಯಶದೊರೆ

ದಲ್ಲೋ, ಅಥವಾ ನಮ್ಮ ರಾಷ್ಟ್ರದೊರೆಗಳಿಂದಲೋ ? ತಿಳಿಯದಾಯಿತು." ಎಂದ
ಏನೇನೋ ವಟಗುಟ್ಟುತ್ತ ವೃತಸಾಯರಾದವರಂತೆ ಸಿಕ್ಕಸ್ಟೇ ನೆರಳಿನಲ್ಲಿ ಕಾಲ
ಚಾಚಿ ಬೀಳತೊಡಗಿದ್ದಾರೆ. ನಾಗರಿಕರೆಲ್ಲರೂ ಬಿಸಿಲಿನ ತಾಪವನ್ನು ತಾಳಲಾರ
ಮೈಮೇಲಿನ ಅರಿವೆಗಳನ್ನೆಲ್ಲ ಬಿಸುಟ ಉಸ್ಸೆಂದು ನೆರಳನ್ನು ಆಶ್ರಯಿಸಹತ್ತಿದ್ದಾರ
ಹಾಗು ಕಾಡಿನಲ್ಲಿ ಮೇಯುವದಕ್ಕೆಂದು ಹೋದ ದನಗಳು ಎಲ್ಲಿಯಾದರೂ ಸ್ವಲ್ಪ
ನೆರಳಿದ್ದ ಸ್ಥಳವನ್ನು ಆಶ್ರಯಿಸಿ, ಬಾಯಾರಿ ಬಳಲುತ್ತಿರುವ ತಮ್ಮ ಕರುಗಳ
ತಮಗೆ ಬೇಕಾದಷ್ಟು ತ್ರಾಸವಾಗಿದ್ದರೂ ತಮ್ಮ ಒಣ ಮೊಲೆಗಳನ್ನು ಉಣಿಸು
ತ್ತಲಿವೆ.

ಈ ಪ್ರಕಾರವಾಗಿ ಎಲ್ಲ ಕಡೆಯಲ್ಲಿಯೂ ನಿಃಶಬ್ದವಾದ ಅರಣ್ಯದಲ್ಲಿ ಹುಳಹ
ಪ್ಪಡಿಗಳ 'ಡಿವ್' ಎಂಬ ಸಪ್ಪಳದ ವಿನಃ ಪಕ್ಷಿಗಳ ಕಿಲಿಕಿಲಾಟ, ಮನುಷ್ಯ, ಪ್ರಾ
ಮುಂತಾದ ಯಾವ ತರದ ಸಪ್ಪಳವೂ ಇಲ್ಲದಂತಾಗಿದೆ. ಇಂತಹ ಪ್ರಖರವಾ
ಬಿಸಿಲಿನಲ್ಲಿ ಹದಿನೇಳು ಹದಿನೆಂಟು ವರ್ಷದ ಓರ್ವ ತರುಣಿಯು ತಲೆಯಮೇ
ಲೊಂದು ಮಣ್ಣಿನ ಕೊಡವನ್ನು ಹೊತ್ತುಕೊಂಡು ಜಲಶೋಧಾರ್ಥವಾಗಿ ಅತ್ತಿತ್ತ
ಸಂಚರಿಸಿ ಬೇಸತ್ತು ಒಂದು ವೃಕ್ಷದ ಆಶ್ರಯಕ್ಕೆ ಕುಳಿತು, ಅವಳು ತನ್ನಲ್ಲಿ ತಾನೆ
"ಜಗಜ್ಜನನಿ, ಮುಂಜಾವಿನಿಂದಲೂ ಪ್ರಯತ್ನಿಸುತ್ತಿರುವ ನನಗೆ ಒಂದು ಮುಕ
ನೀರು ಕೂಡಾ ಸಿಗಬಾರದೇ ? ಇಂದಿನವರೆಗೆ ನಾನು ನಮ್ಮ ಬಿಡಾರದಿಂ
ಒಂದು ಮೈಲು, ಎರಡು ಮೈಲು ಅಥವಾ ಮೂರು ಮೈಲುಗಳನ್ನು ತಿರುಗಿ ಎಲ್ಲಿ
ಯಾದರೂ ನೀರಿನ ಶೋಧವನ್ನರಿತು ತೆಗೆದುಕೊಂಡು ಒಂದು ಪ್ರಹರದೊಳಗ
ಗಿಯೇ ನನ್ನ ಸ್ಥಳವನ್ನು ಕಾಣುತ್ತಲಿದ್ದೆನು. ಆದರೆ ಇಂದು ಮಾತ್ರ ಎಲ್ಲೆಲ್ಲಿಯು
ನೀರಿನ ಅಂಶವು ಕೂಡ ನನಗೆ ಹತ್ತಲೊಲ್ಲದಲ್ಲ ! ಮಧ್ಯಾಹ್ನ ಸಮಯವಾಗುತ್ತ
ಬಂತು. ಇನ್ನೂ ನೀರು ಹುಡುಕಿಕೊಂಡು ನಾನು ನನ್ನ ಸ್ಥಳವನ್ನು ನೋಡಲೆಂದು
ನನ್ನ ಬಂಧುವು ಇಷ್ಟರಲ್ಲಿಯೇ ಕಂದಮೂಲಾದಿಗಳೊಡನೆ ಗುಡಿಸಲಿಗೆ ಬಂದ
ಒಡನೆಯೇ 'ಭಗಿನಿ ಎಲ್ಲಿ?' ಎಂದು ಅತ್ತಿಗೆಯನ್ನು ಕೇಳುತ್ತಿರಬಹುದಲ್ಲವೇ
ಅವರಲ್ಲಿ ನಮ್ಮ ತಂದೆಯವರು ಕಾಲವಾದಂದಿನಿಂದ ನನಗಾಗಿ ಆ ನನ್ನ ಬಂಧು
ದಿನಕ್ಕೆ ಒಂದೆರಡುಸಾರೆಯಾದರೂ ಕಣ್ಣೀರು ಹಾಕುತ್ತ, ನಾನು ಸ್ವಲ್ಪ ಕಣ್ಣಿದು
ಗಿಲ್ಲವಾದರೆ ಆತನು ಬಾಯಲ್ಲಿ ನೀರು ಸಹ ಹಾಕದೆ, 'ಭಗಿನೀ, ನಾನೇನೂ ಆಶಿಸ
ಲಿಲ್ಲ. ದುರ್ದೈವದಿಂದ ನನಗೊದಗಿದ ಸಂಕಟಕ್ಕಾಗಿ ನಾನು ಕಾಳ್ದಿಗೆದಿಲ್ಲ. ಆದ
ತಾತನು ಮರಣಕಾಲಕ್ಕೆ ನಿನಗಾಗಿ ದುಃಖಪಡುತ್ತ ನಿನ್ನ ಲಗ್ನವೊಂದನ್ನು ಮಾ
ಸಮಾನಸ್ಕಂಧರಲ್ಲಿ ಮಾಡೆಂದು ನನ್ನಿಂದ ವಚನ ತಕ್ಕೊಂಡು ಪ್ರಾಣಬಿಟ್ಟನು. ತ
ನುಸಾರ ಮಾಡಬೇಕೆನ್ನುವಷ್ಟರಲ್ಲಿ ದುರ್ವಿಧಿಯು ನನ್ನನ್ನು ಕಾಡಿಗಟ್ಟಿತು. ಈಪ್ರ
ಕಾರ ಕರ್ತವ್ಯಮೂಢನಾದ ನಾನು ನೀಚನು, ಪಾಪಿಯು, ದುರಾತ್ಮನು," ಮುಂ

ತಾದ ಬೀಭತ್ಸ ಸುದ್ದಿಗಳನ್ನಾಡುತ್ತಿರುವಲ್ಲಿ, ಅಲ್ಲಿಯೇ ಎಲ್ಲಿಯಾದರೂ ಮರೆಯಲ್ಲಿ ಕೆಲಸದಲ್ಲಿದ್ದ ನಾನು ಓಡುತ್ತ ಹೋಗಿ ಅವನಿಗೆ ಸಮಾಧಾನ ಹೇಳುತ್ತ ಬಂದಿರುವೆನು. ಇಂತಹ ನನ್ನ ಪ್ರಿಯ ಬಂಧುವು ನನ್ನ ಮಾರ್ಗಪ್ರತೀಕ್ಷಣೆಮಾಡಿ ಗುಡಿಸಲಲ್ಲಿ ನಿಲ್ಲುವದಾಗದೆ ಅವನಾದರೂ ನನ್ನನ್ನು ಹುಡುಕುತ್ತ ಹೊರಟಿರಬಹುದು. ಅತ್ತ ಇದೆಲ್ಲ ಸಮಾಚಾರವನ್ನು ನೋಡುತ್ತಿದ್ದ ನನ್ನ ಅತ್ತಿಗೆಯ ಚಿತ್ತವೂ ಭ್ರಾಂತವಾಗಿರಬಹುದು. ಹಾಗೂ ನನ್ನ ಚಿಕ್ಕ ಪ್ರದಸ್ಯುವೂ " ಅತ್ಯಾ ಅತ್ಯಾ " ಎನ್ನುತ್ತ, " ಅವ್ವಾ ಅತ್ತೆಯಲ್ಲಿ ಹೋಗಿರುವಳು ? ಈಗ ತಾತನು ಎಲ್ಲಿ ಹೋದನು ? " ಎಂದು ಹಂಬಲಿಸುತ್ತಿರಬಹುದಲ್ಲವೇ ? ತಾಯಿ, ಭವಾನಿ ; ಎಂದು ಸ್ವಲ್ಪ ಸುಮ್ಮನೆ ಕುಳಿತು ಚಕಿತಳಾಗಿ , " ಆಂ ! ಇದೇನು ? ನಾನು ಹೀಗೆಯೇ ಯೋಚಿಸುತ್ತ ಕುಳಿತರೆ ಮುಂದಿನ ಗತಿಯೇನು ? ಎಲ್ಲಿಯಾದರೂ ಜಲವನ್ನು ಶೋಧಿಸಿಕೊಂಡು ಶೀಘ್ರವಾಗಿ ಗುಡಿಸಲಿಗೆ ಹೋಗಲೇಬೇಕು. " ಎಂದು ಚಟ್ಟನೆ ಎದ್ದು, " ಇವೆರಡೂ ದಿಕ್ಕುಗಳಂತೂ ಮುಗಿದಂತಾದವು. ಇನ್ನು ಪೂರ್ವದಿಕ್ಕನ್ನಷ್ಟು ನೋಡೋಣವೆಂದು ಮೈಲರ್ಧಮೈಲು ಮಾರ್ಗ ಕ್ರಮಿಸುತ್ತಿರುವಷ್ಟರಲ್ಲಿ ಅದೇ ಬಡದಾಡಿ ಹೋದ ಆನೆಯ ಹೆಜ್ಜೆಗಳೂ, ಕಾಡಾಕಳುಗಳ ಹೆಜ್ಜೆಗಳೂ ದಾರಿಗುಂಟ ಬಿದ್ದಿರುವದನ್ನು ನೋಡಿ ಆವಳು ಮನದಲ್ಲಿ ಹಿರಿ ಹಿರಿ ಹಿಗ್ಗಿ, " ಆಯಿತು. ನನ್ನ ಕೆಲಸವಾಯಿತು. ಇಲ್ಲಿಂದ ಸಮೀಪದಲ್ಲಿಯೇ ಒಂದಾನೊಂದು ಸರೋವರವಿರಬಹುದು. ಅಂತೇ ಈ ತೊಯ್ದ ಹೆಜ್ಜೆಗಳು ಇಲ್ಲಿ ಮೂಡಿರುವವಲ್ಲವೆ ? " ಎಂದು ತನಗಾದ ಸಂತೋಷದಲ್ಲಿ ಮಾರ್ಗಾಯಾಸದ ಪರಿವೆಯಿಲ್ಲದೆ ಆ ಹೆಜ್ಜೆಗಳೊಂದಿಗೆ ಧಾವಿಸುತ್ತ ಬರುತ್ತಿರುವಷ್ಟರಲ್ಲಿ ಸ್ಫಟಿಕದೋಪಾದಿಯಲ್ಲಿ ಮಿಣುಕು ಹೊಡೆಯುತ್ತಿರುವ ನೀರಿನದೊಂದು ಕೊಳವು ಅವಳ ಕಣ್ಣಿಗೆ ಬಿತ್ತು. ಅದನ್ನು ಕಂಡಕೂಡಲೇ ನಮ್ಮ ತರುಣಿಯು ಬೆರಗಾಗಿ " ಅಹಹ, ದೇವಾ ! ಇದೆಂತಹ ಜಲಾಶಯವು ! ಇಂತಹ ಸರಸಿಯು ನಗರಸಮೀಪವಾಗಿದ್ದರೆ ವಿಧಾತನಿರ್ಮಿತವಾದ ನರರಂತಹ ಪ್ರಾಣಿಗಳು ಕಲಕು ಮಾಡಿ ಇದರ ವೈಭವವನ್ನು ಕಡಿಮೆಮಾಡುವರೆಂದೇ ಇದನ್ನು ಇಂಥ ಕಾಂತಾರಣ್ಯದಲ್ಲಿ ಮಾಡಿಟ್ಟಿರುವಿಯೋ ಅಥವಾ ಭೂಮಾತೆಯು ತನ್ನ ಸೌಂದರ್ಯವನ್ನು ನೋಡಿಕೊಳ್ಳುವ ಕೈಗನ್ನಡಿಯಂತಿದ್ದ ಈ ಸರೋವರವನ್ನು ಬೇಕಾಗಿಯೇ ಇಂತಹ ನಿರ್ಮಾನುಷವಾದ ಅರಣ್ಯದಲ್ಲಿ ಬಚ್ಚಿಟ್ಟಿರುವಳೋ ? ತಿಳಿಯದಾಯಿತು. ನಾನಂತೂ ತಂಗೊಳವನ್ನು ನೋಡಿ ಧನ್ಯಳಾದೆನು. ನನ್ನ ಹಸಿವೆನೀರಡಿಕೆಗಳು ಹರಿದು ಹೋದವು ತಿಂಗಳಿನಿಂದಲೂ ಸ್ನಾನವಿಲ್ಲದ ನಾನು ಈ ಹೊತ್ತು ಧಾರಾಳವಾದ ನೀರಿನಿಂದ ಮೈತೊಳೆದುಕೊಂಡು ಜಲತುಂಬಿದ ಕೊಡದೊಂದಿಗೆ ಒಂದೇ ಪ್ರಹರದಲ್ಲಿ ಕುಟೀರವನ್ನು ಕಾಣುವೆನು. " ಎಂದು ಸುತ್ತುಮುತ್ತು ಯಾರೂ ಇಲ್ಲದ್ದನ್ನು ಕಂಡು ನಮ್ಮಾತರುಣಿಯು ಮೈಮೇಲಿನ ವಸ್ತ್ರಗಳನ್ನು ತೆಗೆದಿಟ್ಟು ಸ್ವಚ್ಛದಿಂದ ಮೆರೆಯುತ್ತಿರುವ ಆ ಸರೋವರದಲ್ಲಿ ಸ್ನಾನಕ್ಕಾಗಿ ಇಳಿದಳು.

ನವಾಯಿತು. ಒಳ್ಳೆಯದು ಸುಂದರಿ, ನೀನು ಯಾರು ? ನಿನ್ನ ನಾಮಾಕ್ಷರಗಳಾವು? ನಿನ್ನ ದೇಶವಾವದು ? ನಿನ್ನ ಲಗ್ನವಾಗಿರುವದೇ ಹೇಗೆ ? ಹಾಗು ಈ ತರದ ನಿನ್ನ ದುರ್ದೆಶೆಗೆ ಕಾರಣವೇನು ? ನೀನಂತೂ ರಾಜಕುಲೋತ್ಪನ್ನಳಿರುವೆಯೆಂದು ನನ್ನ ಊಹೆಯು. ನಿದು ನಿಜವೇ ? " ಎಂದು ಆಶಾಮುದ್ರೆಯಿಂದ ಕೇಳಿದನು.

ತಾರಾಮತಿ— (' ನಿನ್ನ ಲಗ್ನವಾಗಿದೆಯೋ ? ' ಎಂಬ ಅಕ್ಷರಗಳು ಕಿವಿಗೆ ಬಿದ್ದಾಕ್ಷಣವೆ ಉಸ್ಸೆಂದು ಮೇಲೆ ಹೊತ್ತಿದ್ದ ಕೊಡವನ್ನು ಕೆಳಗಿಳಿಸುತ್ತ) "(ಸ್ವ) ದುರ್ದೈವವೇ, ಆದಾವ ವಿಷಯಕ್ಕಾಗಿ ನಾನು ಹಗಲಿರುಳು ಕುದಿಯುತ್ತಿರುವೆನೋ ಆದೇ ವಿಷಯದ ಪ್ರಸ್ತಾಪವಾಗಿ ನನ್ನ ಮಾನಖಂಡನವನ್ನು ನಡಿಸಿರುವೆಯಲ್ಲವೇ?" ಎಂದೆನ್ನುತ್ತ ಕಣ್ಣಲ್ಲಿ ನೀರು ತುಂಬಿದವಳಾಗಿ ಅವಳು ಅಳಲಾರಂಭಿಸಿದಳು.

ರಾಜಪುತ್ರ-- (ಅವಳ ದುಃಖವನ್ನುನೋಡಿ ಕನಿಕರದಿಂದ) " ಕೋಮಲೆ ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನೀಯದೆ ನಿನ್ನಲ್ಲಿ ನೀನೇ ಏನೋ ಅಂದು ಕೊಂಡು ಅಳುವದಕ್ಕೆ ಪ್ರಾರಂಭಿಸಿದೆಯಲ್ಲ! ನನ್ನ ಪ್ರಶ್ನೆಗಳಿಂದ ನಿನಗೆ ಇಷ್ಟೊಂದು ದುಃಖವಾಗಿದ್ದರೆ ನನ್ನ ಪ್ರಶ್ನಾವಲಿಯನ್ನೀ ಸಾಕುಮಾಡುವೆನು. " ಎಂದು ಸುಮ್ಮನಾದನು.

ತಾರಾಮತಿ— (ರಾಜಪುತ್ರನು ಖಿನ್ನನಾದದನ್ನು ನೋಡಿ) " ಮಹಾರಾಜ ಹಾಗಲ್ಲ. ನಾನು ನನ್ನ ದುಷ್ಟದೈವವನ್ನು ನೆನಿಸಿ ದುಃಖಬಡುತ್ತಿರುವೆನು. ಅಗ್ರಾಹ್ಯವಸ್ತುವಿನಲ್ಲಿ ನನ್ನ ಮನೋಜಯಕೆಯನ್ನು ಪ್ರಕಟಿಸಿದಲ್ಲಿ ನನಗಾಗತಕ್ಕ ಲಾಭವೇನು ? ತಾವಂದಂತೆ ನಿಜವಾಗಿಯೂ ನಾನು ರಾಜಕುಲೋತ್ಪನ್ನಳಿದ್ದು ನನ್ನ ಪುರಾಕೃತ ಪಾಪದ ಫಲವನ್ನು ಈ ಜನ್ಮದಲ್ಲಿ ಭೋಗಿಸುತ್ತಿರುವೆನು. ಇದಕ್ಕಿಂತಲೂ ಹೆಚ್ಚಿಗೆ ವಿದಿತಪಡಿಸಲು ಸದ್ಯಕ್ಕೆ ನನಗೆ ಅಶಕ್ಯವಾಗಿರುವದು. ನನ್ನ ಹೆಸರು ತಾರಾಮತಿಯು. " ಹೀಗೆಂದು ಮುಂದೆ ಮಾತಾಡುವದಾಗದೆ, ಹಾಗೇ ಕಣ್ಣಿನಲ್ಲಿ ನೀರು ಸುರಿಸುತ್ತ ನೆಲವನ್ನು ನೋಡಹತ್ತಿದಳು.

ರಾಜಪುತ್ರ— (ಅವಳ ದೀನಮುದ್ರೆಯನ್ನು ನೋಡಿ) " ನವಮೋಹನಾಂಗಿಯೇ, ನನಗೆ ಬೇರೆ ಆದಾವ ವಿಷಯವೂ ಬೇಕಿಲ್ಲ. ನಿನ್ನ ಲಗ್ನವಾಗಿರುವದೋ ಇಲ್ಲವೋ ? ಇದೊಂದೇ ಪ್ರಶ್ನಕ್ಕೆ ಉತ್ತರವನ್ನಿತ್ತು ನನ್ನ ಮನವನ್ನು ಶಾಂತಗೊಳಿಸು. " ಎಂದು ಕೇಳುತ್ತಿರುವಲ್ಲಿ ತರುಣಿಗೆ ಮತ್ತಿಷ್ಟು ದುಃಖವು ಒತ್ತಿಬಂದು ಬಿಕ್ಕಿ ಬಿಕ್ಕಿ ಅಳುತ್ತ, " ದುರ್ಭಾಗ್ಯಳೆಂದು ಮೊದಲೇ ಹೇಳುತ್ತಿದ್ದ ನನಗೆಲ್ಲಿಯ ಲಗ್ನವು ? " ಎಂದಳು. ರಾಜಪುತ್ರನು ಅನಿವಾರವಾದ ಅವಳ ದುಃಖವನ್ನು ನೋಡಿ ಸಹಿಸಲಾರದೆ " ಸುಂದರೀ, ಸಾಕು. ನನಗೆ ಮತ್ತೇನೂ ಬೇಡ. ನಾನು ಈ ಮಗಧ ರಾಷ್ಟ್ರಕ್ಕೆ ಒಡೆಯನೆಂಬದನ್ನು ಈ ಮೊದಲೇ ನಿನಗೆ ವಿದಿಸಿದ್ದು ನನ್ನ ಲಗ್ನವನ್ನಾದರೂ ಇಂದಿನ ವರೆಗೆ ನಾನು ಮಾಡಿಕೊಂಡಿರುವದಿಲ್ಲ. ಜಗನ್ಮೋಹಂ

ತಿರುವ ನಿನ್ನ ಸಮಾಗಮ ಸುಖವೇ ನನಗೆ ಲಭಿಸಲೆಂದು ವಿಧಾತನು ನನ್ನ ಹಣೆಯಲ್ಲಿ ಲಿಖಿಸಿದ್ದನ್ನು ಕಂಡು ಈಗ ನನಗಾದ ಆನಂದಕ್ಕೆ ಪಾರವಿಲ್ಲದಾಗಿದೆ. ನನ್ನೀ ಮನೋರಥವನ್ನು ಪೂರ್ಣಮಾಡುವದು ನಿನ್ನ ಮನದಲ್ಲಿ ಉದ್ಭವಿಸಿದರೆ, ಹೀಗೆಯೇ ನನ್ನೊಡನೆ ನಡೆ. ವಿಧಿಪೂರ್ವಕವಾಗಿ ನಿನ್ನ ಕೈಹಿಡಿದು ನಿನ್ನನ್ನು ನನ್ನ ಪಟ್ಟಮಹಿಷಿಯಾಗಿ ಮಾಡುವೆನು." ಹೀಗೆಂದು ಆಶಾಪೂರಿತ ಮುದ್ರೆಯಿಂದ ಅವಳ ಕಡೆಗೆ ನೋಡುತ್ತ ನಿಂತುಕೊಂಡನು.

ತಾರಾಮತಿ— (ಈ ಭಾಷಣವನ್ನು ಕೇಳಿ ಮನದಲ್ಲಿ ಆನಂದ ಭರಿತಳಾಗಿದ್ದರೂ ತೋರ್ಪಡಿಸದೆ ಸ್ವಲ್ಪ ವಿಚಾರಗ್ರಸ್ತಳಂತೆ ನಿಂತು ನಸುನಗುತ್ತ) "ಮಹಾರಾಜ ತಾವನ್ನುವದೆಲ್ಲವೂ ನನಗೆ ಶ್ರುತವು. ಆದರೆ ಪ್ರಾಯದ ಮಬ್ಬಿನಲ್ಲಿ ಏನೇನೋ ಹುಚ್ಚರಂತೆ ನಟಿಸಿ ಮುಂದಿನ ಯಾವ ವಿಚಾರವನ್ನೂ ಮಾಡದಲೇ ನನ್ನಂಥ ಅನಾಥ ಅಬಲೆಯರನ್ನು 'ನಿನಗೆ ಹಾಗೆಮಾಡುವೆನು. ಹೀಗೆಮಾಡುವೆನು.' ಎಂದು ಬೇಕಾದಷ್ಟು ವರಪ್ರದಾನಮಾಡಿ ಕರೆದೊಯ್ದು ಮುಂದೆ ನಮ್ಮನ್ನು ಅದಾವಗತಿಗೆ ಒಯ್ಯುವಿರೆಂಬದನ್ನು ಹೇಳಲಾಗುವದಿಲ್ಲ. ಯಾಕಂದರೆ ಪ್ರಾಯದ ಮದದಲ್ಲಿ ಹೊರಟ ಭಾಷಣವು ನೀರಿನಮೇಲಿನ ಗುಳ್ಳೆಯಂತೆ ಕ್ಷಣಿಕವಾದದ್ದೆಂದು ಹೇಳುವರು." ಹೀಗೆಂದು ಇನ್ನೂ ಏನೇನೋ ಅನ್ನಬೇಕೆನ್ನುವಷ್ಟರಲ್ಲಿ—

ರಾಜಪುತ್ರ— (ನಡುವೆ ಬಾಯಿಹಾಕಿ) "ಸುಂದರಿ ಏನಿದು ? ಸಾಮಾನ್ಯಮನುಷ್ಯರಲ್ಲಿಯೇ ನನ್ನನ್ನೂ ಗಣಿಸಿದೆಯೊ ? ಕುರುಕುಲಶ್ರೇಷ್ಠನಾದ ಶಂತನುಪುತ್ರಭೀಷ್ಮನ ಪ್ರತಿಜ್ಞೆಯನ್ನು ನೀನು ಕೇಳಬಲ್ಲಿಯಷ್ಟೆ ? ಅದೇ ವಂಶಕ್ಕೆ ಅಲ್ಪಸ್ವಲ್ಪ ಹತ್ತಿದ ನಾನು ಕೊಟ್ಟ ಭಾಷೆಗೆ ಎಂದಾದರೂ ತಪ್ಪುವೆನೋ ಹೇಗೆ? ವಿಚಾರಶೂನ್ಯಳಂತೆ ಹೀಗೆಮಾಡಬೇಡ." ಎಂದು ಧೈರ್ಯದಿಂದ ಅವಳ ಸಮೀಪಕ್ಕೆ ಹೋದನು.

ತಾರಾಮತಿ— (ನಿಂತಲ್ಲಿಯೇ ಸ್ವಲ್ಪ ಸಾವರಿಸಿಕೊಂಡು) "ಮಹಾರಾಜ ಅಹುದು. ಅದೆಲ್ಲವೂ ನಿಜವು. ಸಿಟ್ಟಿಗಬೇಡಿರಿ. ತಮ್ಮಂತಹ ಅನೇಕ ರಾಜರು ನನ್ನಂಥ ಅನಾಥರಾದ ಎಷ್ಟೋ ಜನ ಅಬಲೆಯರನ್ನು ಬೇಕು ಬೇಕಾದಂತೆ ಭಾಷೆ ಕೊಟ್ಟು ಕರೆದೊಯ್ದು ತಮ್ಮ ಪಟ್ಟಮಹಿಷಿಯನ್ನೇ ಮಾಡಿಟ್ಟು, [illegible] ಎಷ್ಟು ಜನ ಹೆಂಡಿರನ್ನು ಮಾಡಿಕೊಂಡಿರುವದಿಲ್ಲ? ನಂತರ ಅಂತಹ ಸವತಿಮಾತ್ಸರ್ಯದಿಂದ 'ನನ್ನ ಮನೋಹರನು ನನ್ನೆಡೆಗೆ ಎಂದು ಬರುವನು? ಬರುವನೋ ಇಲ್ಲವೋ ?' ಎಂದು ಕಷ್ಟಬಡುತ್ತ ಬಳಲುವದಕ್ಕಿಂತ ಪ್ರಸ್ತುತಕ್ಕೆ ನನಗಿದ್ದ ಈ ಅರಣ್ಯವಾಸವೂ ಹಾಗೂ ಅನಾಥ ಸ್ಥಿತಿಯೂ ಪರಮಸುಖಕರವಲ್ಲವೇ? " ಎಂದಳು.

ರಾಜಪುತ್ರ— (ಸುಂದರಿಯ ವಾಕ್ಚಾತುರ್ಯಕ್ಕೆ ಮೆಚ್ಚಿ ಆವೇಶದಿಂದ) "ಮನೋಹರೆ, ಇದೇ ನಿನ್ನ ಚಿಂತೆಯಲ್ಲವೆ? ಹಾಗಾದರೆ ಸ್ವಲ್ಪ ತಡೆ " ಎಂದು

ಸನಾಯಿತು. ಒಳ್ಳೆಂದು ಸುಂದರಿ, ನೀನು ಯಾರು ? ನಿನ್ನ ನಾಮಾಕ್ಷರಗಳಾವು? ನಿನ್ನ ದೇಶವಾವದು ? ನಿನ್ನ ಲಗ್ನವಾಗಿರುವದೇ ಹೇಗೆ ? ಹಾಗೂ ಈ ತರದ ನಿನ್ನ ದುರ್ದೆಶೆಗೆ ಕಾರಣವೇನು ? ನೀನಂತೂ ರಾಜಕುಲೋತ್ಪನ್ನಳಿರುವೆಯೆಂದು ನನ್ನ ಊಹೆಯು. ನಿದು ನಿಜವೇ ? " ಎಂದು ಆಶಾಮುದ್ರೆಯಿಂದ ಕೇಳಿದನು.

ತಾರಾಮತಿ— (' ನಿನ್ನ ಲಗ್ನವಾಗಿದೆಯೋ ? ' ಎಂಬ ಅಕ್ಷರಗಳು ಕಿವಿಗೆ ಬಿದ್ದಾಕ್ಷಣವೇ ಉಸ್ಸೆಂದು ಮೇಲೆ ಹೊತ್ತಿದ್ದ ಕೊಡವನ್ನು ಕೆಳಗಿಳಿಸುತ್ತ) "(ಸ್ವ) ದುರ್ದೈವವೇ, ಅದಾವ ವಿಷಯಕ್ಕಾಗಿ ನಾನು ಹಗಲಿರುಳು ಕುದಿಯುತ್ತಿರುವೆನೋ ಅದೇ ವಿಷಯದ ಪ್ರಸ್ತಾಪವಾಗಿ ನನ್ನ ಮಾನಖಂಡನವನ್ನು ನಡಿಸಿರುವೆಯಲ್ಲವೇ?" ಎಂದೆನ್ನುತ್ತ ಕಣ್ಣಲ್ಲಿ ನೀರು ತುಂಬಿದವಳಾಗಿ ಅವಳು ಅಳಲಾರಂಭಿಸಿದಳು.

ರಾಜಪುತ್ರ— (ಅವಳ ದುಃಖವನ್ನು ನೋಡಿ ಕನಿಕರದಿಂದ) " ಕೋಮಲೆ ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನೀಯದೆ ನಿನ್ನಲ್ಲಿ ನೀನೇ ಏನೋ ಅಂದು ಕೊಂಡು ಅಳುವದಕ್ಕೆ ಪ್ರಾರಂಭಿಸಿದೆಯಲ್ಲ! ನನ್ನ ಪ್ರಶ್ನೆಗಳಿಂದ ನಿನಗೆ ಇಷ್ಟೊಂದು ದುಃಖವಾಗಿದ್ದರೆ ನನ್ನ ಪ್ರಶ್ನಾವಲಿಯನ್ನೇ ಸಾಕುಮಾಡುವೆನು." ಎಂದು ಸುಮ್ಮನಾದನು.

ತಾರಾಮತಿ— (ರಾಜಪುತ್ರನು ಖಿನ್ನನಾದದ್ದನ್ನು ನೋಡಿ) " ಮಹಾರಾಜ ಹಾಗಲ್ಲ. ನಾನು ನನ್ನ ದುಷ್ಟದೈವವನ್ನು ನೆನಿಸಿ ದುಃಖಬಡುತ್ತಿರುವೆನು. ಅಗ್ರಾಹ್ಯವಸ್ತುವಿನಲ್ಲಿ ನನ್ನ ಮನೋಬಯಕೆಯನ್ನು ಪ್ರಕಟಿಸಿದಲ್ಲಿ ನನಗಾಗತಕ್ಕ ಲಾಭವೇನು ? ತಾವಂದಂತೆ ನಿಜವಾಗಿಯೂ ನಾನು ರಾಜಕುಲೋತ್ಪನ್ನಳಿದ್ದು ನನ್ನ ಪುರಾಕೃತ ಪಾಪದ ಫಲವನ್ನು ಈ ಜನ್ಮದಲ್ಲಿ ಭೋಗಿಸುತ್ತಿರುವೆನು. ಇದಕ್ಕಿಂತಲೂ ಹೆಚ್ಚಿಗೆ ವಿದಿತಪಡಿಸಲು ಸದ್ಯಕ್ಕೆ ನನಗೆ ಅಶಕ್ಯವಾಗಿರುವದು. ನನ್ನ ಹೆಸರು ತಾರಾಮತಿಯು." ಹೀಗೆಂದು ಮುಂದೆ ಮಾತಾಡುವದಾಗದೆ, ಹಾಗೇ ಕಣ್ಣಿನಲ್ಲಿ ನೀರು ಸುರಿಸುತ್ತ ನೆಲವನ್ನು ನೋಡಹತ್ತಿದಳು.

ರಾಜಪುತ್ರ— (ಅವಳ ದೀನಮುದ್ರೆಯನ್ನು ನೋಡಿ) " ನವಮೋಹನಾಂಗಿಯೇ, ನನಗೆ ಬೇರೆ ಆದಾವ ವಿಷಯವೂ ಬೇಕಿಲ್ಲ. ನಿನ್ನ ಲಗ್ನವಾಗಿರುವದೋ ಇಲ್ಲವೋ ? ಇದೊಂದೇ ಪ್ರಶ್ನೆಕ್ಕೆ ಉತ್ತರವನ್ನಿತ್ತು ನನ್ನ ಮನವನ್ನು ಶಾಂತಗೊಳಿಸು." ಎಂದು ಕೇಳುತ್ತಿರುವಲ್ಲಿ ತರುಣಿಗೆ ಮತ್ತಿಷ್ಟು ದುಃಖವು ಒತ್ತಿಬಂದು ಬಿಕ್ಕಿ ಬಿಕ್ಕಿ ಅಳುತ್ತ, " ದುರ್ಭಾಗ್ಯಳೆಂದು ಮೊದಲೇ ಹೇಳುತ್ತಿದ್ದ ನನಗೆಲ್ಲಿಯ ಲಗ್ನವು ?" ಎಂದಳು. ರಾಜಪುತ್ರನು ಅನಿವಾರವಾದ ಅವಳ ದುಃಖವನ್ನು ನೋಡಿ ಸಹಿಸಲಾರದೆ " ಸುಂದರಿ, ಸಾಕು. ನನಗೆ ಮತ್ತೇನೂ ಬೇಡ. ನಾನು ಈ ಮಗಧ ರಾಷ್ಟ್ರಕ್ಕೆ ಒಡೆಯನೆಂಬವನ್ನು ಈ ಮೊದಲೇ ನಿನಗೆ ವಿದಿಸಿದ್ದು ನನ್ನ ಲಗ್ನವನ್ನಾವರೂ ಇಂದಿನ ವರೆಗೆ ನಾನು ಮಾಡಿಕೊಂಡಿರುವದಿಲ್ಲ. ಜಗತ್ತಿನವಂ

ತಿರುವ ನಿನ್ನ ಸಮಾಗಮ ಸುಖವೇ ನನಗೆ ಲಭಿಸಲೆಂದು ವಿಧಾತನು ನನ್ನ ಫಣಯಲ್ಲಿ ಲಿಖಿಸಿದ್ದನ್ನು ಕಂಡು ಈಗ ನನಗಾದ ಆನಂದಕ್ಕೆ ಪಾರವಿಲ್ಲದಾಗಿದೆ. ನನ್ನೀ ಮನೋರಥವನ್ನು ಪೂರ್ಣಮಾಡುವದು ನಿನ್ನ ಮನದಲ್ಲಿ ಉದ್ಭವಿಸಿದರೆ, ಹೀಗೆಯೇ ನನ್ನೊಡನೆ ನಡೆ. ವಿಧಿಪೂರ್ವಕವಾಗಿ ನಿನ್ನ ಕೈಹಿಡಿದು ನಿನ್ನನ್ನು ನನ್ನ ಪಟ್ಟಮಹಿಷಿಯಾಗಿ ಮಾಡುವೆನು." ಹೀಗೆಂದು ಆಶಾಪೂರಿತ ಮುದ್ರೆಯಿಂದ ಅವಳ ಕಡೆಗೆ ನೋಡುತ್ತ ನಿಂತುಕೊಂಡನು.

ತಾರಾಮತಿ— (ಈ ಭಾಷಣವನ್ನು ಕೇಳಿ ಮನದಲ್ಲಿ ಆನಂದ ಭರಿತಳಾಗಿದ್ದರೂ ತೋರ್ಪಡಿಸದೆ ಸ್ವಲ್ಪ ವಿಚಾರಗ್ರಸ್ತಳಂತೆ ನಿಂತು ನಸುನಗುತ್ತ) " ಮಹಾರಾಜ ತಾವನ್ನುವದೆಲ್ಲವೂ ನನಗೆ ಶ್ರುತವು. ಆದರೆ ಪ್ರಾಯದ ಮಬ್ಬಿನಲ್ಲಿ ಏನೇನೋ ಹುಚ್ಚರಂತೆ ನಟಿಸಿ ಮುಂದಿನ ಯಾವ ವಿಚಾರವನ್ನೂ ಮಾಡದಲೇ ನನ್ನಂಥ ಅನಾಥ ಅಬಲೆಯರನ್ನು ' ನಿನಗೆ ಹಾಗೆಮಾಡುವೆನು. ಹೀಗೆಮಾಡುವೆನು. ' ಎಂದು ಬೇಕಾದಷ್ಟು ವರಪ್ರದಾನಮಾಡಿ ಕರೆದೊಯ್ದು ಮುಂದೆ ನಮ್ಮನ್ನು ಅದಾವಗತಿಗೆ ವೈಯುವಿರೆಂಬದನ್ನು ಹೇಳಲಾಗುವದಿಲ್ಲ. ಯಾಕಂದರೆ ಪ್ರಾಯದ ಮದದಲ್ಲಿ ಹೊರಟ ಭಾಷಣವು ನೀರಿನಮೇಲಿನ ಗುಳ್ಳಿಯಂತೆ ಕ್ಷಣಿಕವಾದದ್ದೆಂದು ಹೇಳುವದು." ಹೀಗೆಂದು ಇನ್ನೂ ಏನೇನೋ ಅನ್ನಬೇಕೆನ್ನುವಷ್ಟರಲ್ಲಿ—

ರಾಜಪುತ್ರ— (ನಡುವೇ ಬಾಯಿಹಾಕಿ) " ಸುಂದರಿ ಏನಿದು ? ಸಾಮಾನ್ಯಮನುಷ್ಯರಲ್ಲಿಯೇ ನನ್ನನ್ನೂ ಗಣಿಸಿದೆಯೊ ? ಕುರುಕುಲಶ್ರೇಷ್ಠನಾದ ಶಂತನುಪುತ್ರಭೀಷ್ಮನ ಪ್ರತಿಜ್ಞೆಯನ್ನು ನೀನುಕೇಳಬಲ್ಲಿಯಷ್ಟೆ ? ಅದೇ ವಂಶಕ್ಕೆ ಅಲ್ಪಸ್ವಲ್ಪ ಹತ್ತಿದ ನಾನು ಕೊಟ್ಟ ಭಾಷೆಗೆ ಎಂದಾದರೂ ತಪ್ಪುವೆನೋ ಹೇಗೆ ? ವಿಚಾರಶೂನ್ಯಳಂತೆ ಹೀಗೆಮಾಡಬೇಡ." ಎಂದು ದೈನ್ಯದಿಂದ ಅವಳ ಸಮೀಪಕ್ಕೆ ಹೋದನು.

ತಾರಾಮತಿ— (ನಿಂತಲ್ಲಿಯೇ ಸ್ವಲ್ಪ ಸಾವರಿಸಿಕೊಂಡು) " ಮಹಾರಾಜ ಅಹುದು. ಅದೆಲ್ಲವೂ ನಿಜವು. ಸಿಟ್ಟಿಗೆಬೇಡಿರಿ. ತಮ್ಮಂತಹ ಅನೇಕ ರಾಜರು ನನ್ನಂಥ ಅನಾಥರಾದ ಎಷ್ಟೋ ಜನ ಅಬಲೆಯರನ್ನು ಬೇಕು ಬೇಕಾದಂತೆ ಭಾಷೆ ಕೊಟ್ಟು ಕರೆದೊಯ್ದು ತಮ್ಮ ಪಟ್ಟಮಹಿಷಿಯನ್ನೇ ಮಾಡಿಟ್ಟು, ಅವಳಮೇಲೆ ಎಷ್ಟು ಜನ ಹೆಂಡಿರನ್ನು ಮಾಡಿಕೊಂಡಿರುವದಿಲ್ಲ ? ನಂತರ ಅಂತಹ ಸವತಿಮಾತ್ಸರ್ಯದಿಂದ ' ನನ್ನ ಮನೋಹರನು ನನ್ನೆಡೆಗೆ ಎಂದು ಬರುವನು ? ಬರುವನೋ ಇಲ್ಲವೋ ? ' ಎಂದು ಕಷ್ಟಬಡುತ್ತ ಬಳಲುವದಕ್ಕಿಂತ ಪ್ರಸ್ತುತಕ್ಕೆ ನನಗಿಪ್ಪ ಈ ಅರಣ್ಯವಾಸವೂ ಹಾಗೂ ಅನಾಥ ಸ್ಥಿತಿಯೂ ಪರಮಸುಖಕರವಲ್ಲವೇ? "ಎಂದಳು.

ರಾಜಪುತ್ರ— (ಸುಂದರಿಯ ವಾಕ್ಚಾತುರ್ಯಕ್ಕೆ ಮೆಚ್ಚಿ ಆವೇಶದಿಂದ) " ಮನೋಹರಿ, ಇದೇ ನಿನ್ನ ಚಿಂತೆಯಲ್ಲವೆ ? ಹಾಗಾದರೆ ಸ್ವಲ್ಪ ತಡೆ. " ಎಂದು

ಚಟ್ಟನೆ ಎದ್ದು ಸರೋವರದಲ್ಲಿಹೋಗಿ ತನ್ನ ಎರಡೂ ಕೈಗಳಿಂದಲೂ ಬೊಗಸೆಯಲ್ಲಿ ನೀರುತುಂಬಿ ತಂದು, " ಸುಂದರಿ, ಇದು ನೋಡು ಸ್ವರ್ಗಲೋಕವಾಸಿಯಾದ ಬ್ರಹ್ಮಾದಿ ದೇವತೆಗಳ ಸಮಕ್ಷಮ ನಾನು ಕೈಕೊಳ್ಳುವ ಘೋರ ಪ್ರತಿಜ್ಞೆಯನ್ನು ಕೇಳು." ಎಂದು ನೆಲದಮೇಲೆ ನೀರುಬಿಡುತ್ತ "ನಾನು ಸಂಪೂರ್ಣ ಮನಸ್ಸಿನಿಂದ ಕೈಹಿಡಿಯಲಿಚ್ಛಿಸುವ ನಿನ್ನ ಹೊರ್ತು ಜಗತ್ತಿನಲ್ಲಿಯ ಯಾವತ್ತೂ ಸ್ತ್ರೀ ರತ್ನಗಳು ನನ್ನ ಮಾತಾಭಗಿನಿಯರು." ಎಂದವನೇ ಅಂಜಲಿಯಲ್ಲಿದ್ದ ಉದಕವನ್ನು ಭೂಮಿಯಮೇಲೆ ಬಿಟ್ಟು ಆವೇಶದ ಭರದಲ್ಲಿ ಏನೂ ತೋಚದಂತಾಗಿ ಪ್ರತ್ಯಕ್ಷ ಶಿಲಾಮೂರ್ತಿಯಂತೆ ನಿಂತುಕೊಂಡನು.

ಆಹಹ! ವಿಪ್ರಾವಸು ಧನ್ಯನು! ನೀನೇ ಧನ್ಯನು!! ನಿನ್ನಂಥ ಅನೇಕ ನರರತ್ನಗಳಿಗೆ ಜನ್ಮಕೊಟ್ಟ ಈ ನಮ್ಮ ಭರತಮಾತೆಯೇ ಧನ್ಯಳು!!! ರಾಜನಂದನನ ಈ ಭೀಷ್ಮ ಪ್ರತಿಜ್ಞೆಯನ್ನು ಕೇಳಿ ಆಕಾಶದಲ್ಲಿ ದುಂದುಭಿಗಳಾದವು. ದೇವತೆಗಳು ಆತನಮೇಲೆ ಪೂಮಳೆಗರೆದರು. ಹಾಗೂ ಈ ಘೋರಪ್ರತಿಜ್ಞೆಯು ತಾರಾಮತಿಯ ಕಿವಿಗೆ ಬಿದ್ದಾಕ್ಷಣವೇ ಅವಳಿಗೆ ಹರ್ಷವಾಯುವಾದಂತಾಗಿ, ಅವಳು ಆನಂದದ ಭರದಲ್ಲಿ "ದೇವರೇ, ಅಂತೂ ನನ್ನ ದುರ್ದೈವವು ಚಲಿಸಿ ಸುದೈವವಾಗಿ ನನ್ನ ಮನೋಬಯಕೆಯು ಕೊನೆಗಾಣಿತೆ?" ಎಂದೆನ್ನುತ್ತ ಸ್ಮೃತಿದಪ್ಪಿದವಳಂತೆ ಒಮ್ಮೆಲೇ ಭೂಮಿಗೊರಗಿದಳು. ಇದನ್ನು ನೋಡುತ್ತಿದ್ದ ವಿಪ್ರಾವಸುವು ಬೆಚ್ಚಿಬಿದ್ದು ಆಶ್ಚರ್ಯದಿಂದ "ಆಂ! ಇದೇನು? ನನ್ನ ಪ್ರತಿಜ್ಞೆಯನ್ನು ಕೇಳಿ ಇವಳೇಕೆ ಹೀಗೆ ಸ್ಮೃತಿದಪ್ಪಿ ಬೀಳಬೇಕು." ಎಂದು ಕೂಡಲೇ ತಾನೂ ನೆಲಕ್ಕೆ ಕುಳಿತು ಅವಳನ್ನು ತನ್ನ ತೊಡೆಯಮೇಲೆ ತಕ್ಕೊಂಡು ಪರೀಕ್ಷಿಸಿ "ಅಹ! ಇದು ಮೂರ್ಛೆಯು ಅಯ್ಯೋ! ಬುಭುಕ್ಷಿತ ಪ್ರಾಣಿಯ ಮುಂದೆ ಸುಗ್ರಾಸಭೋಜನವನ್ನಿಟ್ಟಹಾಗಾಗಿ, ಮೊದಲೇ ಅರಣ್ಯತ್ರಾಸದಿಂದ ಕಂಗೆಟ್ಟ ಇವಳು, ಮುಂದಾಗತಕ್ಕ ಸುಖೋಪಭೋಗವನ್ನು ಪ್ರತ್ಯಕ್ಷ ಅನುಭವಿಸಿದಂತಾಗಿ ಇದೀಗ ನಿಶ್ಚೇಷ್ಟಿತಳಾಗಿರುವಳಲ್ಲವೇ? (ಅತ್ತಿತ್ತ ನೋಡಿ) ಚಿಂತೆ ಇಲ್ಲ." ಎಂದು ಅಲ್ಲಿಯೇ ಕೊಡದಲ್ಲಿದ್ದ ನೀರಿನಿಂದ ಅವಳ ನೆತ್ತಿಯನ್ನು ಒಡಿದು, ಕೈಕಾಲು ತಿಕ್ಕಿ ತನ್ನ ಟೊಂಕಕ್ಕೆ ಸುತ್ತಿದ್ದ ಶಲ್ಲೆಯೊಂದನ್ನು ಹಾಸಿ ಸ್ವಲ್ಪ ಹೊತ್ತಿನವರೆಗೆ ಅವಳನ್ನು ವೃಕ್ಷದ ನೆರಳಿನಲ್ಲಿ ಮಲಗಿಸಿದನು. ಹಾಗು ತಾನು ಮನದಲ್ಲಿಯೇ, 'ಮನಸಾಚಿಂತಿತಂಕಾರ್ಯಂ ದೈವಂ ಅನ್ಯತ್ರಚಿಂಯೇತ್' ಎಂದು ವ್ಯಾಕುಲನಾಗಿ ತನ್ನ ಕುದುರೆಯಿದ್ದೆಡೆಗೆ ಧಾವಿಸಿ ಬಂದು, ಅದನ್ನು ಮುಂದಿನ ಪ್ರಯಾಣಕ್ಕಾಗಿ ಸಿದ್ಧಗೊಳಿಸಿ ಕಡಿವಾಣವನ್ನು ಕೈಯಲ್ಲಿ ಹಿಡಿದುಕೊಂಡು ತಿರುಗಿ ಬರುವಷ್ಟರಲ್ಲಿ ತಾರಾಮತಿಯು ಮೈಮೇಲೆ ಅಲ್ಪ ಸ್ವಲ್ಪ ಎಚ್ಚರವು ಬರಲಾರಂಭಿಸಿತ್ತು. ಅದನ್ನುಕಂಡು ರಾಜೋತ್ತಮನು ಆನಂದಭರಿತನಾಗಿ ಅವಳನ್ನು ಸಾವಕಾಶವಾಗಿ ಕುದುರೆಯಮೇಲೆ ಹಾಕಿಕೊಂಡು ಅವಳೊಂದಿಗೆತಾನೂ ಅಶ್ವವನ್ನು ಓಡಿಸುತ್ತ ತನ್ನ ನಗರಾಭಿಮುಖವಾಗಿ ನಡೆದನು.[ಮುಂದೆಸಾಗುವದು]

"[illegible]

[illegible]

ನನ್ನ ಮಾತು.

[illegible]

[illegible]

ಸಂಪಾದಕರ ಸವಿನುಡಿ.

ಚಂದ್ರಿಕೆಯ ೩ನೇ ಸಂಚಿಕೆಯಲ್ಲಿ ಪ್ರಕಟವಾದ ಸಿದ್ಧರಾಮನ ಚರಿತ್ರೆಯಲ್ಲಿ ಅಡಕವಾದ "ಶ್ರೀ ರೇವಣಸಿದ್ಧರು (ಪಂಚಾಚಾರ್ಯರಲ್ಲಿ ಒಬ್ಬರು) ಶ್ರೀ ಬಸವೇಶ್ವರರ ಸಮಕಾಲೀನರೋ ಅಥವಾ ಅವರಿಗಿಂತ ಪೂರ್ವದವರೋ ಎಂಬ ಸಂಗತಿಯನ್ನು ದೃಢಪಡಿಸುವದು ಅತಿ ದುಸ್ತರವಾಗಿದೆ." ಎಂಬದೊಂದೇ ಒಂದು ವಿಧಾನವು ಕೆಲಜನರಿಗೆ ವಾದಕ್ಕೆ ಕಾರಣವಾಗಿ ಪರಿಣಮಿಸಿದೆ. ವಾದಕ್ಕೆ ಮೊದಲುಮಾಡಿದವರು ಹಮ್ಮಿಗೆಯ ಗುರುಭಕ್ತ ಕೇಸರಿಗಳು. ವಾಸ್ತವವಾಗಿ ವಿಚಾರಮಾಡಿನೋಡಿದರೆ, ಚಂದ್ರಿಕೆಯಲ್ಲಿನ ಆ ಲೇಖಕ್ಕೆ ತಕ್ಕೊಂಡ ಆಧಾರಗಳನ್ನು ಲೇಖಕರು ಅದೇ ಲೇಖನದ ಕೊನೆಯ ಭಾಗದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ನಿಖಿಲ ಕರ್ನಾಟಕದ ಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ಆರ್. ನರಸಿಂಹಾಚಾರ್ಯರಿಂದ ರಚಿತವಾದ ಕವಿಚರಿತೆ ತೆಗೆದು ನೋಡಿದ್ದರೆ ತೀರಿಯೇ ಹೋಗಿತ್ತು. ಹಾಗೆ ಮಾಡದೆ ವಿಧಾನವು ಶ್ರೀ. ರಾಮರಾಯರ ಸ್ವಕಪೋಲಕಲ್ಪಿತವಾದುದೆಂಬ ಕೇಸರಿಗಳ ತಪ್ಪು ಗ್ರಹಿಕೆಯೇ ವಾದಕ್ಕೆ ಕಾರಣವಾಗಿದೆ ಎಂಬುದು ಸೂರ್ಯಪ್ರಕಾಶದಷ್ಟು ಸತ್ಯವಾಗಿದೆ. ಈ ಮಾತನ್ನು ಬದಿಗಿಟ್ಟರೂ 'ಅತಿ ದುಸ್ತರವಾಗಿದೆ' ಎಂದು ಹೇಳುವದರಿಂದ ಯಾವದೊಂದು ಸಂಗತಿಯನ್ನು ಅಲ್ಲಗಳೆದಂತೆ ಆಗುವದೇ ಹೇಗೆ? ಉತ್ತರವು ಇಲ್ಲವೆಂತಲೇ ದೊರೆಯುವದು. ಈ ವಿಚಾರವು ಕೇಸರಿಗಳಿಗೇಕೆ ತತ್ಕ್ಷಣವೇ ಹೊಳೆಯಲಿಲ್ಲವೋ ನಮಗೆ ತಿಳಿಯದಾಗಿದೆ. ಇರಲಿ. ವಾದವನ್ನು ಹೂಡಿದರೂ ತಮ್ಮ ಲೇಖನದಲ್ಲಿ ಶಂಕರಾಚಾರ್ಯರ ಕಾಲನಿರ್ಣಯದ ವಿಷಯಕ್ಕೆ ಹೆಚ್ಚಾಗಿ ಆಧಾರಗಳನ್ನು ಕೊಡದೆ, ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವನ್ನೇ ಹೆಚ್ಚಾಗಿ ಚರ್ಚಿಸಿರುವರು. ಇಷ್ಟಿನಮೇಲೆ ಅವರೊಳ್ಳೆ ಧರ್ಮಾಭಿಮಾನಿಗಳಾಗಿದ್ದು ಪುರಾಣಪುತ್ರರಾದಿಗಳಾಗಿರುವರೆಂದು ಹೇಳಲು ಅಡ್ಡಿಯಿಲ್ಲ.

ಇನ್ನು ಶ್ರೀ. ರಾಮರಾಯರ ವಿಷಯಕ್ಕೊಂದೆರಡು ಮಾತು. ಗುರುಭಕ್ತ ಕೇಸರಿಗಳು ತಮ್ಮ ಲೇಖನದಲ್ಲಿ ಆದ್ಯ ಶಂಕರಾಚಾರ್ಯರು ೨೦೦೦ ವರುಷಗಳ ಪೂರ್ವದವರು. ಎಂಬದಾಗಿ ತೀರ್ಮಾನಿಸಿರುವರು. ಅದು ಕಾರಣವೇ ಕೇಸರಿಯವರ ನಿರ್ಣಯವು ಐತಿಹಾಸಿಕ ದೃಷ್ಟಿಯಿಂದ ತಪ್ಪಾದುದೆಂಬ ವಿಷಯದ ವಿವೇಚನೆಯನ್ನೇ ಲೇಖಕರು ಕೈಕೊಂಡಿರುವರು. ಈ ಮೊದಲು ಭಾರತದ ಇತಿಹಾಸ

ಸಂಶೋಧಕರು ಮಾಡಿದ ಕಾರ್ಯವನ್ನು ಹೇಳಿ, ಇಂದು ಶಂಕರಾಚಾರ್ಯರ ಕಾಲದ ಬಗ್ಗೆ ಪ್ರಸ್ಥಾಪಿತವಾಗಿರುವ ಪ್ರೋ. ಪಾಠಕರವರ ಮತವನ್ನೇ ಮಂಡಿಸಿ ಕೊನೆಗೆ ಆದ್ಯ ಶಂಕರಾಚಾರ್ಯರ ಕಾಲವು ಕ್ರಿಸ್ತ ಶಕದಂತೆ ೮ನೇ ಶತಮಾನವೆಂಬ ಸಂಗತಿಯನ್ನು ಸಿದ್ಧಮಾಡಿರುವರು. ಮತ್ತು ಅವರ (ಶಂಕರಾಚಾರ್ಯರ) ಕಾಲವು ೮ನೇ ಶತಮಾನವೆಂದು ನಿರ್ಣೀತವಾದಲ್ಲಿ ಶ್ರೀ ರೇವಣಸಿದ್ಧರಿಂದ ಚಂದ್ರ ಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ್ದು. ಆದ್ಯ ಶಂಕರಾಚಾರ್ಯರಿಗಿರದೆ ಬೇರೊಬ್ಬ ಶಂಕರಾಚಾರ್ಯರಿಗೆ ಅನುಗ್ರಹಿಸಿರಬೇಕೆಂಬ ಈ ಮೊದಲು ಇತಿಹಾಸ ಸಂಶೋಧಕರು ಹೇಳಿದ ಮಾತನ್ನೇ ಮತ್ತೆ ಹೇಳಿರುವರು. ಚಂದ್ರಮೌಳೀಶ್ವರ ಲಿಂಗದ ವಿಷಯದಬಗ್ಗೆ ಜಯಕರ್ನಾಟಕ ಸಂಪುಟ ೧೨, ಸಂಚಿಕೆ ೧೦, ಪುಟ ೫೪ ನೋಡಿರಿ. ಶ್ರೀ. ರಾಮರಾಯರು ಕೇವಲ ಸತ್ಯಾನ್ವೇಷಣೆಯ ಬುದ್ಧಿಯಿಂದಲೂ ಸಾಹಿತಿಗಳ ಸಮದೃಷ್ಟಿಯಿಂದಲೂ ಇಂದಿನ ಲೋಕಜನವು ಒಪ್ಪುವಂತಹ ಸಮಂಜಸವಾದ ರೀತಿಯಿಂದಲೂ ಮಾಡಿದ ವಿಷಯ ವಿವೇಚನೆಯಿಂದ ಶ್ರೀ. ಗುರುಭಕ್ತ ಕೇಸರಿಗಳಿಗೆ ಸಮಾಧಾನವೆನಿಸಿರಲಿಕ್ಕೆ ಸಾಕು ಎಂಬುದೇ ನಮ್ಮ ಊಹೆ. ಇದೀಗ ಈ ಸಂಗತಿಯಿಂದ ಗುರುಭಕ್ತ ಕೇಸರಿಗಳ ಸಹಿಷ್ಣುತಾಭಾವವೂ, ಸೌಜನ್ಯವೂ ಚನ್ನಾಗಿ ವ್ಯಕ್ತವಾಗುತ್ತವೆ. ವಸ್ತುಸ್ಥಿತಿಯು ಹೀಗಿರಲು ಕೂಡ ಉಪ್ಪಿನಬೆಟಗೇರಿಯ ಶ್ರೀಮಾನ್ ಸಾಲೀಮಠರವರು ಮತ್ತೆ ಅದೇ ವಿಷಯವನ್ನು ಎತ್ತಿ ಗುರುಭಕ್ತ ಕೇಸರಿಗಳು ಬರೆದುದನ್ನು ಸತ್ಯಮಾಡಿ ತೋರಿಸಲು ಹೆಣಗಿದ್ದಾರೆ. ತಮ್ಮ ಲೇಖನಕ್ಕೆ "ಶಂಕರಾಚಾರ್ಯರ ಕಾಲ" ಎಂಬ ಬೇರೊಂದು ತಲೆಬರಹ ಮಾತ್ರ ಕೊಟ್ಟಿದ್ದಾರೆ. ತಮ್ಮ ಲೇಖನದ ಸಮರ್ಥನೆಗೆ ಸಮಂಜಸವಾದ, ಸರ್ವಸಮ್ಮತವಾದ ಐತಿಹಾಸಿಕ ಆಧಾರಗಳನ್ನು ಕೊಡದೆ, ಹೆಚ್ಚಾಗಿ ಪೌರಾಣಿಕ ಆಧಾರಗಳನ್ನು ಕೊಟ್ಟಿದ್ದಾರೆ. ನಿಜವಾಗಿ ವಿಚಾರಮಾಡಿ ನೋಡಿದರೆ, ಪಂಡಿತರಿಗೆ ಮಾನ್ಯವಾಗುವಂತಹದೂ, ಐತಿಹಾಸಿಕ ಸತ್ಯಾಂಶಗಳುಳ್ಳದ್ದೂ ಆದ ಶಂಕರಾಚಾರ್ಯರ ಕಾಲ ನಿರ್ಣಯದಬಗ್ಗೆ ಪ್ರೊ. ಪಾಠಕರವರ ಮತವು ಪ್ರಸ್ಥಾಪಿಸಲ್ಪಟ್ಟು ಬಹುದಿನಗಳಾದವು (೧೮೮೨). ಅದೇ ವಿಷಯವು ಇಂದು ಸಾಮಾನ್ಯ ಜನಗಳಿಗೆ ಗೊತ್ತಿರಲಿಕ್ಕಿಲ್ಲೆಂದು ಭಾವಿಸಿಯೋ ಶ್ರೀ. ಬಾಳೇಹೊಸೂರ ರಾಮರಾಯರು ತಾ.೩೦-೧೦-೩೮ನೇ ದಿವಸ ಸಂಚಿಕೆಯಲ್ಲಿ ಲೇಖನಮೂಲಕ ಪ್ರಸಿದ್ಧಪಡಿಸಿರುವರು. ಸಂದರ್ಭವು ಇಂತಿದ್ದರೂ ಶ್ರೀ. ಸಾಲೀಮಠರವರು ತುಂಬಾ ಶ್ರಮವಹಿಸಿ ಕೊಟ್ಟ ಲೇಖನದ ಕಾರಣವು ನಮಗಂತೂ ಇರಲಿ ಅನ್ಯರಿಗಾದರೂ ತಿಳಿಯುವದೋ ಹೇಗೆ ನೋಡಬೇಕಾಗಿದೆ. ಹಾಗೆಯೇ ಸುಮ್ಮಸುಮ್ಮನೆ ತತ್ವದ ಬಡಿದಾಟದಲ್ಲಿ ವೈಯಕ್ತಿಕ ಭಾವನೆಯನ್ನು ತಳೆದು, ಲೇಖಕರನ್ನು ಸಲ್ಲದ ವಚನಗಳಿಂದ ಟೀಕಿಸಿರುವದು ಅವರ ಶೀಲ ಸೌಜನ್ಯಗಳಿಗೆ ಉಚಿತವಾದುದಲ್ಲವೆಂದು ನಾವು ಧಾರಾಳವಾಗಿ ಹೇಳಬಲ್ಲೆವು.

ಇಂದಿನ ಚಿಕಿತ್ಸಕಯುಗದಲ್ಲಿ ಅಂಧಶ್ರದ್ಧೆಗೆ ಅವಕಾಶವಿಲ್ಲವೆಂಬದನ್ನು ಅರಿತಿ ವರಾಗಿದ್ದರೂ ಕೂಡ ಯುಗಮಾನಕ್ಕೆ ಸರಿಯಾಗುವ ವಿಚಾರಗಳನ್ನು ಲೋಕಜನ ಗಳ ಮುಂದಿರಿಸುವದು ಯೋಗ್ಯವಾಗಿದೆ. ಹೀಗಿದ್ದು ಶ್ರೀ ಸಾಲೀಮಠರವರು “ ಲೇಖಕರು (ರಾಮರಾಯರು) ಕೆಲವು ಇತಿಹಾಸಕಾರರು ಬರೆದ ಅಭಿಪ್ರಾಯ ವನ್ನೇ ಸತ್ಯವಾದುದೆಂದು ನಂಬಿ, ‘ಶಂಕರಾಚಾರ್ಯರಕಾಲವು ೮ ನೇ ಶತಮಾನ ವೆಂದು ಪ್ರಸಿದ್ಧಿಸಿರುವರು.” “ ಲೇಖಕರು ಕೇವಲ ಐತಿಹಾಸಿಕ ಗ್ರಂಥಗಳನ್ನು ನಂಬಿದಂತೆ ಕಂಡುಬರುತ್ತದೆ.” ಇದು ಸಮಂಜಸವಾದುದಲ್ಲ. ಎಂಬದಾಗಿ ಸೂಚಿಸಿದ್ದಾರೆ. ಸದ್ಯದ ವಿಚಾರಕ್ರಾಂತಿಯ ಜಗದೊಳಗಿನ ಸಮಾಜಕ್ಕೆ ಅವರ ಈ ಹೇಳಿಕೆಯು ಒಪ್ಪಿತವಾಗಬಹುದೋ ಹೇಗೆ? ಎಂಬದರ ಅರಿವು ಅವರಿಗೆ ಕಾಣುವದಿಲ್ಲ. ತಮ್ಮ ಆವೇಶದಲ್ಲಿ ‘ ವೀರಶೈವ ಮತಾಚಾರ್ಯರ ಕಾಲನಿರ್ಣಯ ’ ಎಂಬಗ್ರಂಥವನ್ನು ಬರೆದ ಶ್ರೀ. ಕಲ್ಲುಮಂಗಲ ಶ್ರೀಕಂಠಯ್ಯನವರನ್ನೂ ಹಳಿದಿದ್ದಾರೆ. ಇತಿಹಾಸ ಸಂಶೋಧಕರೂ, ಸಾಹಿತ್ಯದಲ್ಲಿನ ತಜ್ಞರೂ ಅವರಿಗೆ ಸದ ಭಿಪ್ರಾಯವನ್ನು ಕೊಟ್ಟ ವಿಷಯವು ಇವರ ಕಣ್ಣಿಗೆ ಬಿದ್ದಿರಲಿಕ್ಕಿಲ್ಲವೇ? ಮತವಿಚಾ ರಗಳನ್ನು ಐತಿಹಾಸಿಕ ಸತ್ಯಾಂಶಗಳಿಂದ ಸಮಾಜದ ಮುಂದಿರಿಸಿ, ವೀರಶೈವಮತದ ಕೀರ್ತಿಯ ಹೆಚ್ಚುವಿಕೆಗೆ ಸಾಹಸಮಾಡುವ ಶ್ರೀಕಂಠಯ್ಯನವರಂತಹ ಸಜ್ಜನರನ್ನು ಕಾರಣವಿಲ್ಲದೆ ಹೀಗೆ ಹಳಿಯುವ ಸಾಹಸವನ್ನು ಆರಾದರೂ ಮಾಡುವದುಚಿ ತವೋ?

ನಮ್ಮ ಮತದಿಂದ ಶ್ರೀ ಸಾಲಿಮಠರವರು ಉಳಿದುದೆ-ನೂ ಮಾಡುವದು ಬೇಕಾಗಿದ್ದಿಲ್ಲ. ಶಂಕರಾಚಾರ್ಯರ ಕಾಲದಬಗ್ಗೆ ಬಹುಮಾನ್ಯವಾದ ಪ್ರೋ. ಪಾಠಕ ಅವರ ಮತವನ್ನು ‘ ಇಂತಹರು ಇಂಥಲ್ಲಿ ಖಂಡಿಸಿರುವರು.’ ಎಂಬ ಉಲ್ಲೇಖಿಸಿದ ಆಧಾರಗಳನ್ನು ಕೊಡಬೇಕಾಗಿತ್ತು. ಯಾಕಂದರೆ ವಾದದ ವಿಷಯವೇ ಶಂಕರಾ ಚಾರ್ಯರ ಕಾಲದಬಗ್ಗೆ ಬಹಮಾನ್ಯವಾಗಿ ಒಪ್ಪಿದ ಮತವಾವುದು? ಎಂಬುದು! ಅವರ (ಸಾಲೀಮಠರವರ) ಜ್ಞಾಪಕಕ್ಕೆ ಬಂದಿರಲಿಕ್ಕಿಲ್ಲವೇ? ಅಥವಾ ಹೀಗೆ ಮಾಡಿ ದ್ದರೂ ನಡೆಯುವದಾಗಿತ್ತು, ಶ್ರೀ. ಜೀರಿಗಿ ಬಸಲಿಂಗಪ್ಪನವರು ಬರೆದ “ ವೀರ ಶೈವ ಮತಸ್ಥಾಪಕರು ಯಾರು ” ಎಂಬ ಗ್ರಂಥವನ್ನು ಅವಲೋಕಿಸಬೇಕಾಗಿತ್ತು. ಈಗಲಾದರೂ ನಾವವರಿಗೆ ಆ ಗ್ರಂಥವನ್ನು ಅವಲೋಕಿಸಲು ಆಗ್ರಹಪೂರ್ವಕವಾಗಿ ಹೇಳದೆ ಇರಲಾರೆವು.

ಇನ್ನು ವೀರಶೈವ ಧರ್ಮವನ್ನು ಕುರಿತು ಐತಿಹಾಸಿಕ ದೃಷ್ಟಿಯಿಂದ ಆಲೋ ಚಿಸಬೇಕು ಎಂಬ ವಿಷಯದಲ್ಲಿ ದಾವಣಗೇರಿಯ ಪ್ರೇಮದ ಬಳಿಯ ಒಗದ ವರಾದ ಶ್ರೀ. ಮಲ್ಲಭದ್ರ, ಅವರು ಅಂದಿರುವದನ್ನು ನೋಡಿರಿ (ಪ ಿ ಒಸ ವರಾಜ ತಾ. ೩—೧೨—೩೪)

ನಮ್ಮ ಪವಿತ್ರವಾದ ಧರ್ಮದ ಬೆಳವಣಿಗೆಯನ್ನು, ಧರ್ಮಪ್ರಚಾರವನ್ನು ದೇಶ ಕಾಲ ವರ್ತಮಾನದ ಮರ್ಯಾದೆಗಳಿಗನುಸಾರವಾಗಿ ವಿಜ್ಞಾನದೃಷ್ಟಿಯಿಂದ ತಿಳಿದುಕೊಳ್ಳುವದಕ್ಕೆ 'ಇತಿಹಾಸವು' ಅತ್ಯಾವಶ್ಯಕವಾದ ಅಂಶವಾಗಿರುತ್ತದೆ. "ಇತಿಹಾಸವು ಸತ್ಯಾಂಶವನ್ನು ಬೋಧಿಸುತ್ತದೆ." ಅದುಕಾರಣ ನಮ್ಮ ಧರ್ಮ ತತ್ವಗಳ ಸತ್ಯತೆಯನ್ನು ಸಕ್ರಮವಾಗಿಯೂ ನಿಸ್ಪೃಹತೆಯಿಂದ ತಿಳಿದುಕೊಳ್ಳಬೇಕಾದರೆ, ನಾವು ನಿರ್ದಾಕ್ಷಣ್ಯವಾದ ಐತಿಹಾಸಿಕ ವೀರ ಕವಚಧಾರಿಗಳಾಗಬೇಕು. ವಾಚಕ ಬಂಧುಗಳೇ ನೋಡಿರಿ! ಇಂದಿನ ಜಗವು ಒಪ್ಪುಂತೆ ಅನ್ಯರನ್ನು ದೋಷಿಸದೆ ಸ್ವಾಭಿಮಾನದಿಂದ ಐತಿಹಾಸಿಕ ತಳಹದಿಯ ಮೇಲೆ ನಮ್ಮ ವೀರಶೈವ ಧರ್ಮ ಸಾಮ್ರಾಜ್ಯದ ಕಟ್ಟಡವನ್ನು ನಿಲಿಸಿ ಅದರ ಜ್ಯೋತಿಯನ್ನು ದಶದಿಕ್ಕುಗಳಲ್ಲಿ ಬೆಳಗಿಸಬೇಕೆಂಬ ದಾವಣಗೇರಿಯ ಶ್ರೀಮಾನ್ ಮಲ್ಲಭದ್ರ ಮಹಾಶಯರ ಉದಾತ್ತವಾದ ವಿಚಾರವೆತ್ತ! ಹಾಗೆಯೇ ದ್ವೇಷಾಸೂಯೆಗಳಮೂಲಕ ಅಂಧಶ್ರದ್ಧೆಯಿಂದ ಪ್ರಮಾಣಕ್ಕೆ ಮೀರಿದ ಸ್ವಮತಾಭಿಮಾನ ತಳೆದು, ಇಂದಿನ ಸಮಾಜಕ್ಕೆ ಇಷ್ಟವಾಗಿರುವ ಐತಿಹಾಸಿಕ ಆಧಾರಗಳಿಗೆಡೆಗೊಡದೆ, ಎತ್ತಲಾದರೂ ಪತ್ತಾಯದಿಂದ ತಮ್ಮ ತತ್ವವನ್ನೇ ಲೋಕಕ್ಕೊಡಂಬಡಿಸಬೇಕೆಂಬ ಶ್ರೀ. ಸಾಲೀಮಠರವರ ಸಂಕುಚಿತ ವಿಚಾರವೆತ್ತ! ಇವರೀರ್ವರ ವಿಚಾರಗಳಲ್ಲಿ ಅಜ-ಗಜಗಳ ಅಂತರವಿದೆಯೆಂಬದನ್ನು ವಾಚಕರು ಈ ಮೊದಲೇ ಊಹಿಸಿರಲಿಕ್ಕೆ ಸಾಕು.

ಒಟ್ಟಾರೆ ಈ ವಿಷಯದ ಬಗ್ಗೆ ಶ್ರೀ. ಸಾಲೀಮಠರವರಿಗೆ ನಮ್ಮವರ ಮಾತುಗಳೂ ಸೇರವು. ಅನ್ಯರವಂತೂ ಮೊದಲೇ ಬೇಡ. ಹೀಗಾಗಿ ಅವರ ಸ್ವಭಾವಸ್ಥಿತಿ ಸ್ಪಷ್ಟವೇ ನಮಗೆ ತಿಳಿಯದಾಗಿದೆ! ಇರಲಿ.

ಈಗಲೀಗ ವಿಷಯ ವಿಸ್ತಾರವು ಬಹಳವಾಯಿತು. ನಾವೇನೂ ಇಂತಹ ಕಠಿಣತರವಾದ ಪ್ರಸಂಗದಲ್ಲಿ ತೀರ್ಮಾನುಕೊಡುವಷ್ಟು ತಜ್ಞರಲ್ಲ. ಅದುಕಾರಣವೇ ನಾವು ಭಾರತದ ಸುಪ್ರಸಿದ್ಧ ಹಾಗೂ ಮಾನ್ಯವಾದ ಇತಿಹಾಸ ಸಂಶೋಧಕಸಂಸ್ಥೆಗಳಿಗೆ ಪತ್ರಬರೆದು ಅವರಿಂದ ಈ ವಿಷಯದ (ಆದ್ಯ ಶಂಕರಾಚಾರ್ಯರ ಕಾಲನಿರ್ಣಯ) ಬಗ್ಗೆ ಅಭಿಪ್ರಾಯ ತರಿಸಿಕೊಂಡಿರುವೆವು. ಸೂಜ್ಞರಾದ ನಮ್ಮ ವೀರಶೈವ ಬಂಧುಗಳಿಗೆ ಅವನ್ನವಲೋಕಿಸುವದರಿಂದ ಸಮಾಧಾನವೆನಿಸಿ, ಸಧ್ಯಕ್ಕೆ ಉಂಟಾದ ಕ್ಷುಷ್ಕವಾದ ಗಲಿಬಿಲಿಯ ಸತ್ಯಾಂಶವನ್ನು ನಿಷ್ಕರ್ಷಿಸಿಕೊಳ್ಳುವರಾಗಿ ನಂಬಿದ್ದೇವೆ.

॥ श्री ॥

भारत
इतिहास संशोधक
मंडळ पुणे.
शके १८३२

जा. नं. $\frac{1078}{1856}$ ता. १३—१२—३४,

Bharat Itihasa Samshodhaka Mandal Poona.

313 Sadashiva Peth No. 2

DEAR SIR,

Sorry that I could not reply you, earlier.

The date of Adya-Shankaracharya, as given by late Dr. Pathaka is still unrefuted and held Conclusive.

I do not think that Revanasidha and adya Shankaracharya were Contemporaries.

Consequently there is no possibility of Revanash-idda's ever, bestowing Chandra Moulishwar Ling on adya Shankaracharya.

I shall let you know later, if I come across any striking fact in this Connection.

Yours Faithfully.

(*Sd.*) G. H. Khare.

|| श्री ||

भारत
इतिहास संशोधक
मंडळ, पुणे.
शके १८३२

ಪುಣೆ.

जा. नं. ೧೪೭೮ / ೧೮೫೬

ತಾ. ೧೩-೧೨-೬೪.

ಭಾರತ ಇತಿಹಾಸ ಸಂಶೋಧಕ ಮಂಡಲ,

೩೧೩, ಸದಾಶಿವ ಪೇಠ ಪುಣೆ. (ಇಂಡಿಯಾ)

ಸಭ್ಯರೇ,

ಈ ಮೊದಲಲ್ಲಿಯೇ ತಮಗೆ ಉತ್ತರ ಬರೆಯೋಣವಾಗಲಿಲ್ಲದ್ದಕ್ಕೆ ಕ್ಷಮಿಸಿರಿ.

ವೈ. ವಾ. ಡಾಕ್ಟರ. ಪಾಠಕ ಅವರು ಆದ್ಯ ಶಂಕರಾಚಾರ್ಯರ ಕಾಲನಿರ್ಣಯದ ಬಗ್ಗೆ ಮಂಡಿಸಿದ ಮತವು ಈ ವರೆಗೆ ಆರಿಂದಲೂ ಖಂಡಿಸಲ್ಪಟ್ಟಿಲ್ಲ. ಆದ್ದರಿಂದ ಅದೇ ನಿರ್ಣಾಯಕವೆಂದು ತಿಳಿಯಲ್ಪಡುತ್ತದೆ.

ರೇವಣಸಿದ್ಧರು ಮತ್ತು ಶಂಕರಾಚಾರ್ಯರು ಸಮಕಾಲೀನರೇ ಅಲ್ಲ. ಆದ್ದರಿಂದ ಅವರು (ರೇವಣಸಿದ್ಧರು) ಆದ್ಯ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗ ಅನುಗ್ರಹಿಸಿದುದು ಅಶಕ್ಯವೇ ಸರಿ.

ಈ ಬಗ್ಗೆ ಮಹತ್ವದ ವಿಷಯಗಳೇನಾದರೂ, ಮುಂದೆ ನನ್ನ ಕಣ್ಣಿಗೆ ಬಿದ್ದರೆ ತಿಳುಹಿಸುವೆನು.

ನಿಮ್ಮ ವಿಶ್ವಾಸಕ್ಕೆ ಪಾತ್ರನಾದವ.

(Sd.) **ಜಿ. ಎಚ್. ಖರೆ.**

Rajasevasakta Rao-bahadur,

Dr. S. Krishnaswami Aiyngar M. A. Ph. D.

University Professor, Mysore & Madras. (Rtd)

Hony., Correspondent, Archaeological Survey of India.

Fellow of the Asiatic Society of Bengal.

Editor :— Journal of Indian History

Sripadam
143, Brodies Road,
Mylapore, Madras,
7th Dec. 1934.

DEAR SIR,

With reference to your letter No. 332 dated 3 rd, instant enquiring, if the date of the first Shankaracharya (A. D. 788-820) is the correct date and justifiable, I think that on the basis of the evidence so far available, that seems to be correct. So far as I know, I do not think there is any thing in the way of really good evidence, to enable us to make this give place to a better date This period seems to fit the circumstances of the case well.

Yours Faithfully,

(*Sd.*) **S. Krishnaswami Aiyangar.**

ಶ್ರೀಪಾದಮ್

೧೪೩. ಬ್ರಾಡೀಜ ರೋಡ

ಮೈಲಾಪುರ, ಮದ್ರಾಸ

ತಾ. ೭-೧೨-೩೪.

ರಾಜಸೇವಾಸಕ್ತ ರಾವಬಹಾದ್ದೂರ

ಡಾ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ, M. A. Ph. D.

ಯುನಿವ್ಹರಸಿಟಿ ಪ್ರೋಫೇಸರ, ಮೈಸೂರ ಮತ್ತು ಮದ್ರಾಸ. (ರಿಟಾಯರ್ಡ)

ಆನರರೀ ಕರಸ್ಪಾಂಡಂಟ ಆರ್ಕಿಯಾಲಾಜಿಕಲ್ ಸರ್ವ್ಹೆ ಆಫ ಇಂಡಿಯಾ.

ಫೆಲೋ ಆಫ ದಿ ಏಸಿಯಾಟಿಕ್ ಸೊಸಾಯಟಿ ಆಫ ಬೆಂಗಾಲ.

ಸಂಪಾದಕರು- ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ.

ಸಭ್ಯರೆ,

ತಮ್ಮ ಜಾ. ನಂ ೩೩೨ / ೩-೧೨-೩೪ ನೇ ವಿನಂತಿ ಪತ್ರದಲ್ಲಿ ಆದ್ಯ ಶಂಕರಾಚಾರ್ಯರ ಕಾಲವು (ಕ್ರಿ. ಶ. ೭೮೮—೮೨೦) ಇದು ಸರಿಯಾದುದೂ, ನ್ಯಾಯವಾದುದೂ ಇದೆಯೋ ? ಎಂದು ಕೇಳುವದಾಗಿತ್ತು.

ಇದೂ ವರೆಗೆ ಉಪಲುಬ್ಧವಾಗಿರುವ ಐತಿಹಾಸಿಕ ಆಧಾರಗಳವೋ ಲಿಂದ ಆ ಕಾಲವು (ತಾವು ಬರೆದುದು) ಸರಿಯಾದುದೆಂದು ಹೇಳಲಿಕ್ಕೆ ಪ್ರತ್ಯ ವಾಯವಿಲ್ಲ.

ನನಗೆ ಗೊತ್ತಿದ್ದವುಟ್ಟಿಗೆ ಮೇಲಿನ (ಕಾಲಕ್ಕಿಂತ) ದಕ್ಕಿಂತ ಹೆಚ್ಚು ಪ್ರಾಶಸ್ತ್ಯಯುಳ್ಳ ಬೇರೊಂದು ಕಾಲವನ್ನು ಕೊಡಲು ಯೋಗ್ಯವಾದ ಐತಹಾಸಿಕ ಆಧಾರಗಳು ಸಿಕ್ಕುವದಿಲ್ಲ. ಅಲ್ಲದೆ ಈ ಕಾಲವು ಐತಿಹಾಸಿಕ ಸಂಗತಿಗಳಿಗೆ ಅನು ಗುಣವಾಗಿರುವದೆಂದು ಕಂಡುಬರುವದು.

ತಮ್ಮ ವಿಶ್ವಾಸಕ್ಕೆ ಪಾತ್ರನಾದವ,

(Sd.) ಎಸ್. ಕೃಷ್ಣಸ್ವಾಮಿ ಅಯ್ಯಂಗಾರ

ಸಂದೇಶಗಳು.

ಹಿಂದು ಮುಸಲ್ಮಾನ ಮತಗಳ ಐಕ್ಯತೆಯ ಅಂತರಂಗವನ್ನು ಕಂಡುಕೊಂಡು ತಮ್ಮ ಅತುಲ ಮಹಿಮಾತಿಶಯದಿಂದ ಲೋಕಜನಗಳಿಗೆ ಅದರ ನಿಜತ್ವವನ್ನು ತೋರಿದ ಶ್ರೀ ಫಕೀರೇಶ್ವರ ಸ್ವಾಮಿಗಳ ಕೃಪಾಛತ್ರದಲ್ಲಿ ನಡೆದ ವೀರಶೈವಚಂದ್ರಿಕೆಯನ್ನು ನೋಡಿದೆ. ವಿಷಯಗಳು ಚನ್ನಾಗಿವೆ. ಉತ್ತರೋತ್ತರ ಚಂದ್ರಿಕೆಗೆ ಅಭಿವೃದ್ಧಿಯಾಗಲೆಂದು ಹಾರೈಸುತ್ತೇನೆ

ಬೆಳ್ಳಟ್ಟಿ.
ತಾ. ೩—೧೧—೨೪ } ನಾ|| ರಾ|| ಕೂಬಸಾ|| ಹಮಸಾಗರ,
ಜಿನ್ ಫ್ಯಾಕ್ಟರಿ ಮಾಲಕ.

"ವೀರಶೈವ ಚಂದ್ರಿಕೆ" ಯು ನಮ್ಮ ವೀರಶೈವ ಸಮಾಜಕ್ಕಷ್ಟೇ ಅಲ್ಲ, ಸರ್ವರೂ ಸಂಗ್ರಹಿಸತಕ್ಕ ಮಾಸಪತ್ರಿಕೆಯಾಗಿದೆ. ಇಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯವಿಲ್ಲದಿದ್ದರೂ ಪ್ರಯಾಸದಿಂದ ಯಾವತ್ತೂ ಮತದವರು ಕೂಡಿ ಇಂಥ ಕಾರ್ಯಕ್ಕೆ ಎದೆಗೊಟ್ಟು ನಿಂತದ್ದು ನೋಡಿ ಬಹಳೇ ಆನಂದವಾಯಿತು. ಇಂದು ಚಂದ್ರಿಕೆಯ ಆಫೀಸಿನಲ್ಲಿದ್ದ ಯಾವತ್ತೂ ಪತ್ರಿಕೆಗಳನ್ನೂ ಲೇಖಗಳನ್ನೂ ನೋಡಿ ತುಂಬಾ ಸಂತೋಷವೆನಿಸಿತು. ಸುವ್ಯವಸ್ಥೆಯ ಬಗ್ಗೆ ಸಂಪಾದಕ ಮಹಾಶಯರನ್ನು ಎಷ್ಟು ವರ್ಣಿಸಿದರೂ ತೀರದು. ಉತ್ತರೋತ್ತರ ಚಂದ್ರಿಕೆಯು ಅಭಿವೃದ್ಧಿಯಾಗಲೆಂದು ಕೋರುತ್ತೇನೆ.

ಬಿದರಹಳ್ಳಿ.
ತಾ. ೨೭—೧೧—೨೪ } ಗುರುಬಸಪ್ಪ ಫಕ್ಕೀರಪ್ಪ ಯಾಳಿಮಠ

ಹಿರಿಯರೇ ಒಬ್ಬ ತಿಂಗಳ (ಚಂದ್ರ) ನ ಚಂದ್ರಿಕೆ (ಕದಿರು) ಯಿಂದ ನೆಲವೂ ಬಾನೂ ನಲಿವಿನಿಂದ ತುಂಬಿ ತುಳುಕಾಡುತ್ತಿರಲು ಆ ತಿಂಗಳ ಚಂದ್ರಿಕೆಗಳಿಂದ ಕನ್ನಡಿಗರ ನಲುವು ಉಕ್ಕೇರಿತೆಂದು ಬೇರೆ ಹೇಳಬೇಕಾಗಿಲ್ಲ. ಕನ್ನಡ ನುಡಿಯಲ್ಲಿ ತುಂಬಾ ಅಕ್ಕರೆಯುಳ್ಳವರಿಂದ ಆರಿಸಿದ ಬರಹಗಳುಳ್ಳ ಚಂದ್ರಿಕೆಯು ತನ್ನ ಕನ್ನಡ ಕದಿರು (ತಂಗದಿರು ಇಂಗದಿರು) ಗಳಿಗೆ ಒಪ್ಪುವಂತೆ ಓದುಗರಲ್ಲ ಬಾಳಿಕೆಯ ಬೇಸರದಿಂದ ಉಂಟಾದ ಒಡಲುರಿಗೆ ತಂಪನ್ನಿತ್ತು ಕನ್ನಡದ ಇಂಪನ್ನು ತೋರಿಸದೆ ಬಿಡದೆಂದು ನಂಬುತ್ತೇನೆ. ಮತ್ತು ನಾನು ಹೊತ್ತು ದೊರೆತಂತೆ ನನ್ನ ಬರಹಗಳನ್ನು ಕಳಿಸುವೆನು.

ಶಿಬಾರಗಟ್ಟಿ,
ತಾ. ೧೩—೧೧—೨೪ } ತಮ್ಮ ಕನ್ನಡಿಗರ ಕಯ್ಯಾಳು,
ಬಣಮಂತಪ್ಪ ರಾಮಪ್ಪ ಕಾಂಬಳೆ

ಸಾಮಾನ್ಯವಾಗಿ ಧಾರ್ಮಿಕ, ಐತಿಹಾಸಿಕ, ಸಾಮಾಜಿಕ ವಿಷಯಗಳನ್ನೊಳಗೊಂಡ ಲೇಖನಗಳನ್ನು ಪ್ರಕಟಿಸುತ್ತ ಹೋಗುವದು ಈ ಪತ್ರಿಕೆಯ ಉದ್ದೇಶವೆಂದು ಸಂಪಾದಕರು ಆತ್ಮನಿವೇದನೆಯಲ್ಲಿ ತಿಳಿಸುತ್ತಾರೆ. ಮೊದಲನೆ ಸಂಪುಟದ ಮೂರು ಸಂಚಿಕೆಗಳಲ್ಲಿ ಶ್ರೀಮಾನ್ ಬಾಲೇಹೊಸೂರ ರಾಮರಾಯರ "ಕನ್ನಡ ಸಾಹಿತ್ಯದಲ್ಲಿ ವೀರಶೈವರ ಮಹತಿ" ಎಂಬ ಲೇಖನವು ಓದತಕ್ಕದ್ದಾಗಿದೆ. ೩ ನೆ ಸಂಚಿಕೆಯಲ್ಲಿ ಶ್ರೀಮಾನ್ ಕುಲಕರ್ಣಿ ತಿಮ್ಮಣ್ಣನವರು ಸಂಗ್ರಹಿಸಿದ ಹಳ್ಳಿಯ ಹಾಡುಗಳು ಇವೆ. ಈ ಹೊಸ ಪತ್ರಿಕೆಗೆ ನಾವು ಸ್ವಾಗತವನ್ನು ಬಯಸುತ್ತೇವೆ.

ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ,
ಬೆಂಗಳೂರು ನಗರ
ಅಕ್ಟೋಬರ ೧೯೩೩.

ಎಂ. ವಿ. ಸೀ.
ವಿಮರ್ಶಕರು.

ವಿದ್ಯಾರಣ್ಯ ಸುವರ್ಣಾಂಕವು.

ನವಲಗುಂದದಲ್ಲಿ ಹೊರಡುವ ಕೈ ಬರಹದ ಮಾಸಪತ್ರಿಕೆ. ಆಕಾರ ¼ ಫು

ಸಂಪಾದಕರು:-- ಶ್ರೀ. ಗ. ಜೋಶಿ.

ಹೊಸ ಬರಹಗಾರರ ಆನಂದ ಪರಿಪೂರ್ಣತೆಯ ತಿಳಿಗನ್ನಡದ ಲೇಖನಗಳ ಸೊಗಸಿನಿಂದ ಶೋಭಿಸುವ ವಿದ್ಯಾರಣ್ಯ ಮಾಸಿಕದ ಸುವರ್ಣಾಂಕವು ತಲುಪಿತು. ಸೂಸುವ ಪರಿಮಳವನ್ನು ಸೆಳೆದೊಯ್ದು ಜನಗಳ ಸೇವೆಗೈವ ಮಂದ ಮಾರುತನು ಸ್ಫುರಿಸಿಕೊಂಡು ಸೌರಭವನ್ನು ಸಂಗೆ ನೀಡುವನೋ ಆದೇ ಸೊಗಸು ಇದರಲ್ಲಿದೆ. ಸೌಷ್ಟವವು ಎಲ್ಲ ಕವಿತೆಗಳಲ್ಲಿ ತುಂಬಿದೆ. ಸಂವಿಧಾನಕಗಳು ಚನ್ನಾಗಿವೆ.

ತಾವು ಗೈಯುವ ಕನ್ನಡ ನಾಡಿನ ಕಾರ್ಯವು ಬಹುಕಾಲ ಬಾಳತಕ್ಕದ್ದು. ಇತ್ತೀಚಿನ ಸಾಹಿತಿಗಳದು ಮಾತ್ರ ಪದ್ಯ ಪತ್ರ. ವಿವಾಂಭ ಸಿರಿ.

ಛಾತ್ರಂಜೀವ
ವಿಮರ್ಶಕಾರರು

ಆನಂದತುಷಾರ.

ಕಾಲವಾಡ ತಾ|| ನವಲಗುಂದ

ಶ್ರೀಮಾನ್ ಕುಲಕರ್ಣಿ ತಿರುಮಲರಾಯರ ಸಂಪಾದಕತ್ವದಲ್ಲಿ ಹೊರಡುವ "ಮನೋರಂಜನ ಗ್ರಂಥಮಾಲೆಯ ಪುಷ್ಪವು"

ಕನ್ನಡ ಸಾಹಿತ್ಯದಬಗ್ಗೆ ಸಂಪಾದಕರ "ಹೃದಯ ಸಂವೇದನೆ" ಯು ಲೋಕದ ಜನಗಳಲ್ಲಿ ಜಾಗೃತಿಗೊಳಿಸುವದಾಗಿದೆ. "ಆನಂದ ತುಷಾರ" ದಂತಹ ವಿನೋದಪರವಾದ ಚಿಕ್ಕ ಹೊತ್ತಿಗೆಗಳನ್ನು ಬರೆದು ತದ್ವಿಷಯಕ್ಕೆ ಕನ್ನಡ ಸಾಹಿತ್ಯದಲ್ಲಿದ್ದ ಕೊರತೆಯನ್ನು ಹಿಂಗಿಸುವದಕ್ಕೆ ಲೇಖಕರು ಹೆಣಗಿದ್ದಾರೆ. ಪಂಡಿತಪಾಮರರಿಗೆಲ್ಲರಿಗೂ ಉಚಿತವಾದ ಸಾಹಿತ್ಯವನ್ನು ಒದಗಿಸಿಕೊಡುವದೇ ಗ್ರಂಥಮಾಲೆಯ ಧ್ಯೇಯವಾಗಿದೆ. ಕನ್ನಡಿಗರೆಲ್ಲಾ ಪ್ರೋತ್ಸಾಹಿಸಬೇಕು.

ಬಾಳೇಹೊಸೂರ ರಾಮರಾಯರು,
ವಿಮರ್ಶಕಾರರು.

ಬ ಸ ವ ರಾ ಜ

ಶ್ರೀ ಬಸವಾದಿ ಪ್ರಮಥರ ತತ್ವವನ್ನು ಮುಂಡಿಸಿ ದೇಶೋದ್ಧಾರ, ಭಾಷಾಭಿವೃದ್ಧಿ, ಸಮಾಜ ಸುಧಾರಣೆಯಾಗಬೇಕೆಂಬುವದೇ ಬಸವರಾಜ ಪತ್ರದ ಗುರಿ. ಪ್ರತಿಸೋಮವಾರ ಹಾವೇರಿಯಲ್ಲಿ ಪ್ರಕಟವಾಗುವದು. ವಾ. ಚ. ೩ ರೂ.

ಮ್ಯಾನೇಜರ— ಬಸವರಾಜ ಹಾವೇರಿ.

ಸಂಪಾದಕರು-ವೀರಶೈವ ಚಂದ್ರಿಕೆ
ವಿಮರ್ಶಕಾರರು.

ಶ್ರೀ ದತ್ತಾತ್ರೇಯ ಗ್ರಂಥಮಾಲಾ.

ಶಿರ್ವ-ಉಡಿಪಿ. ವಾ. ಚ. ೨-೪-೦

ಈ ಮಾಲೆಯು ಪ್ರತಿ ತಿಂಗಳಲ್ಲಿ ಒಂದು ಪುಷ್ಪವನ್ನು ಅರ್ಪಿಸುವದು. ಇದರ ಸತಿ ನೇಹಲಾ, ವೀರಬಾದಳ ಈ ಎರಡೂ ಪುಷ್ಪಗಳು ಕೈಸೇರಿವೆ. ಓದಲು ಹಿಡಿದ ಮೇಲೆ ಬಿಡುವದೇ ಆಗುವದಿಲ್ಲ. ಕನ್ನಡ ಸೇವೆಗೈವ ಈ ಮಹನೀಯರ ಕಾರ್ಯವು ಸ್ತುತ್ಯವಾಗಿದೆ. ಕನ್ನಡಾಭಿಮಾನಿಗಳು ಸರ್ವರೂ ಅಗತ್ಯವಾಗಿ ಸಹಾಯವನ್ನಿತ್ತು ಮುಂದುವರಿಯುವಂತೆ ಮಾಡಬೇಕು. ಸಂಪಾದಕರು-ವೀರಶೈವ ಚಂದ್ರಿಕೆ
ವಿಮರ್ಶಕಾರರು

ವಿಕಟಮಾವ

ವಿಕಟವಿನೋದಿನಿಯರ ಮಾವನು ಹೊಳೆನರಸೀಪುರದಲ್ಲಿ (ಮೈಸೂರು) ಜನ ನೇ ಕಳೆದ ಸಪ್ಟಂಬರ ೧೫ನೇ ತಾರೀಖಿಗೆ ಪ್ರಕಟವಾಗಿರುವನು. ಹಾಸ್ಯರಸಪರಿ ಪ್ಲುತವಾದ ಲೇಖನಪ್ರ ಟಗೊಳಿಸಿ ಜನರ ಮನಸ್ಸನ್ನು ಅಲ್ಹಾದಗೊಳಿಸುವನು. ಅಲ್ಲದೆ ಅನೇಕ ವ್ಯಂಗಚಿತ್ರಗಳನ್ನು ಹಾಕಿ ಅದಕೆ ಮಾವನು ಸರಿಯಾಗಿ ಕತೆ-ಮಾತುಗಳನ್ನು ಜೋಡಿಸುವನು. ಅದ ರಿಂದ ಓದಲು ಹಿಡಿದಮೇಲೆ ಬಿಡದಿರ ವ ಈ ಮಾವನನ್ನು ಸರ್ವರೂ ಒಮ್ಮೆಯಾದರೂ ಕಾಣಬೇಕೆಂದು ನಮ್ಮ ವಿನಂತಿಯು. ಈ ಮಾ ನಿಗೆ ಖರ್ಚು ಸಹ ಹೆಚ್ಚಿಲ್ಲ. ಒಂದೇ ಒಂದು ರೂಪಾಯಿ ಕೊಟ್ಟು ಬಿಟ್ಟರೆ ಸಾಕು, ತಾನಾಗಿ ನಮ್ಮ ಮ ಗೆ ಬರುವನು. ಒಮ್ಮೆ ಕಂಡರೆ ಸಾಕು. ಬಿಡುವದಾಗುವದೇ ಇಲ್ಲ. ಅದ್ದರಿಂದ ಸರ್ವ ಮಹನೀಯರು ಬೇ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಸಂಪಾದಕರು,
ವೀರಶೈವ ಚಂದ್ರಿಕೆ ಶಿರಹಟ್ಟಿ

೨೦ನೇ ಸಾಹಿತ್ಯ ಸಮ್ಮೇಲನ ರಾಯಚೂರ

ಈಸಲದ ಸಾಹಿತ್ಯ ಸಮ್ಮೇಲನವು ರಾಯಚೂರಿನಲ್ಲಿ ನಡೆಯುತ್ತಲಿದೆ. ಹುಬ್ಬಳ್ಳಿಯಿಂದ (ಗದಗ, ಬಳ್ಳಾರಿ, ಗುಂತಕಲ್ಲು ಮಾರ್ಗವಾಗಿ) ರಾಯಚೂರಿಗೆ ರೇಲ್ವೆ ಖರ್ಚು ೪—೧೦—೦ ರೂ. ಅದೆ. ಈ ದರದಮೇಲೆ ರೇಲ್ವೆದವರಿಂದ ಖ್ರಿಸಮಸ್ ರಿಯಾಯಿತಿ ದೊರೆಯುತ್ತದೆಂಬದನ್ನು ಗಮನಿಸಬೇಕು. ಕನ್ನಡಾಭಿಮಾನಿಗಳು ಅವಶ್ಯವಾಗಿ ಈ ಸುಸಂಧಿಯ ಲಾಭ ಪಡೆಯಬೇಕು.

—ಸಂಪಾದಕರು.

ಸದಾನಂದಕ್ಕೆ ಸಹಾಯ ಮಾಡಿರಿ!

ಸದ್ಯ ಸ್ಥಿತಿಯಲ್ಲಿ ಕನ್ನಡ ವಾಙ್ಮಯದ ಅವನತಿಯನ್ನು ಹೋಗಲಾಡಿಸಿ ಕನ್ನಡಿಗರ ಸದಾ ಸೇವೆ ಗೈವ ಆರು ವಿಭಾಗಗಳಿಂದ, ನುರಿತ ಲೇಖಕರಿಂದ ಇದೀಗ ಹೊರಡಲಿಕ್ಕಿರುವ ಸದಾನಂದ ಮಾಸಪತ್ರಿಕೆಯು. ಈ ಪತ್ರಿಕೆಯು ಧಾರವಾಡ ರಾಜಹಂಸ ಕಾರ್ಯಾಲಯದಿಂದ ಜಾನೇವಾರಿಯಲ್ಲಿ ಆನಂದವನ್ನೂ ಉತ್ಸುಕತೆಯನ್ನೂ ಹುಟ್ಟಿಸುವದಕ್ಕೆ ಹೊರಡುವದೆಂಬ ಬಲವಾದ ಊಹೆ. ಆದ್ದರಿಂದ ಆದಕ್ಕೆ ತನು—ಮನ—ಧನದಿಂದ, ಎಲ್ಲರೂ ಕನ್ನಡ ಸಾಹಿತ್ಯದ ಏಳ್ಗೆಯನ್ನೂ ಹುರುಪನ್ನೂ ಉಂಟುಮಾಡುವದಕ್ಕೆ ಸಹಾಯಕರಾಗುವಿರೆಂದು ನಂಬಿದ್ದೇವೆ. ಐಕ್ಯ ಮತದಿಂದ ಕನ್ನಡ ಉದಾರ ಮಹನೀಯರೂ ಲೇಖಕರೂ ಸಹಾಯವನ್ನಿತ್ತಲ್ಲಿ ಒರೆಗಲ್ಲಿಗೆ ಬಂಗಾರವನ್ನರಿದಂತೆ ಕನ್ನಡ ಮಹಾಜನಗಳಾದ ಓದುಗರಿಗೆ ಅತ್ಯಂತ ಸಹಾಯವೂ ಔತ್ಸುಕವವೂ ಉಂಟಾಗುವದರಲ್ಲಿ ಸಂದೇಹವಿಲ್ಲ. ಕತೆ, ಕಾದಂಬರಿ, ನಾಟಕಗಳಲ್ಲದೆ ಕಮನೀಯ ಮಾವಚಿತ್ರಗಳನ್ನೂ ಪ್ರಕಟಿಸುವರು ಅಂದವಾಗುವಂತೆ ಪತ್ರಿಕೆಯ ಬಾಹ್ಯಾಂಗ ಅಂತರಂಗವನ್ನು ಸೊಬಗಿಗಾಗಿ ಮಾಡಿದರೆ ಸರ್ವರೂ ಅಹಾ ಎಂದು ಆಶ್ಚರ್ಯದಿಂದ ನೋಡುವರು. ಅದರಂತೆ ಆಗಬಹುದಾದ ಇದನ್ನು ನೋಡಿ ನಲಿದಾಡಿರಿ. ಅಸ್ತು. ಸರ್ವ ಮಹನೀಯರೂ ಲೇಖಕರೂ ಮನಃಪೂರ್ವಕ ಸದಾನಂದಕ್ಕೆ ಸಹಾಯ ಮಾಡಿರಿ

ಕರ್ನಾಟಕ ವಿದ್ಯಾವರ್ಧಕ ಸಂಘ ... ಧಾರವಾಡ

ವೀರಶೈವ ಚಂದ್ರಿಕಾ ಆಫೀಸ್ ಶಿರಹಟ್ಟಿ

ಚಂದ್ರಿಕೆಯ ಪ್ರಕಟನಾಲಯಕ್ಕೆ ವಿನಿಮಯವಾಗಿ ಬರುವ

ಮಾಸಿಕ ಪತ್ರಿಕೆಗಳು-ವಾರಪತ್ರಗಳು-

೧	ಸದ್ಬೋಧ ಚಂದ್ರಿಕೆ	ಅಗಡಿ-ಆನಂದವನ	೩—೦—೦
೨	ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ	ಹಾರ್ಡಿಂಜರೋಡ ಬೆಂಗಳೂರು	೪—೦—೦
೩	ಬಡವರ ಬಂಧು	ಹಂಪನಕಟ್ಟೆ ಮಂಗಳೂರು	೧—೪—೦
೪	ವಿಶ್ವಭಾರತಿ	ಬೆಂಗಳೂರು ಸಿಟಿ	೩—೮—೦
೫	ಕಥೆಗಾರ	"	೧—೪—೦
೬	ಭಾರತಿ	ಮೂಲ್ಕಿ ದ. ಕ.	೨—೦—೦
೭	ಕಥಾಕುಂಜ	ಮಾರುತಿ ಓಣಿ ಬೆಳಗಾವಿ	೨—೪—೦
೮	ಶಿಕ್ಷಕ ಬಂಧು	ಹುಬ್ಬಳ್ಳಿ	೨—೦—೦
೯	ಕಲಾಚಂದ್ರ	ಕಾರ್ಕಳ ದ. ಕ.	೧—೪—೦
೧೦	ಕರ್ನಾಟಕ ಬಂಧು	ಮುಂಬಯಿ ನಂ. ೪	೧—೮—೦
೧೧	ವಿಕಟವಿನೋದಿನಿ	ಬೆಂಗಳೂರು ಸಿಟಿ	೧—೫—೦
೧೨	ಶ್ರೀ ದತ್ತಾತ್ರಯ ಗ್ರಂಥಮಾಲಾ	ಶಿರ್ವ-ಉಡುಪಿ ದ. ಕ.	೨—೪—೦
೧೩	ಸ್ವದೇಶೀ ಪ್ರಚಾರಕ	ಮಂಗಳೂರು ದ. ಕ.	೧—೪—೦
೧೪	ವಿಕಟಮಾಸ	ಹೊಳೆನರಸೀಪುರ ಹಾಸನಡಿ	೧—೦—೦

ವಾರಪತ್ರಿಕೆಗಳು—

೧	ಅರುಣೋದಯ	ಬೆಳಗಾವಿ	೧—೮—೦
೨	ರಾಜಹಂಸ	ಧಾರವಾಡ	೧—೮—೦
೩	ಬಸವರಾಜ	ಹಾವೇರಿ	೧—೮—೦

॥ ಶ್ರೀ ಕರ್ನಾಟಕೋ ವಿಜಯತೇ ॥

ಕರ್ನಾಟ ಶಿಕ್ಷಕ.

ದ್ವೈಮಾಸಿಕ ಪುಸ್ತಕ, ೨, ೪.

ಬೆಲೆ:- ಆರು ಆಣೆ.

Printed by R. Y. Kerur at his Chandrika
Printing Works Bagalkot, & published by
J. A. Balvantrao, School Master, Bagalkot.

ಧಾರವಾಡ.

ವಾಚಕರಿಗೆ ವಿನಂತಿ.

ಈ ಸಂಯುಕ್ತ ಸಂಚಿಕೆಯಲ್ಲಿ ಪ್ರಾಸ ನಿರ್ಬಂಧವಿಲ್ಲದ "ಪೃಥ್ವೀರಾಜ" ವೆಂಬ ಕಾವ್ಯವು ಪ್ರಸಿದ್ಧವಾಗಿರುವದಷ್ಟೇ? ಪ್ರಾಸ ನಿರ್ಬಂಧತೆಯನ್ನು ತೆಗೆದುಹಾಕಬೇಕೆಂದು ಕೆಲ ಕನ್ನಡ ವಿದ್ವಾಂಸರು ವಾದಿಸುವದು ವಾದಗ್ರಸ್ತ ವಿಷಯವಾಗಿರುವದರಿಂದ, ಕೇವಲ ಅವರ ನಿರ್ಣಯವಾಗಲೆಂದೇ ಈ ಪದ್ಯಗಳನ್ನು ನಾವು ಮುದ್ರಿಸಿದ್ದೇವೆಯೇ ಹೊರತು, ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವದಕ್ಕೆಂದಲ್ಲ- ಭಾಷಾಭಿಮಾನಿಗಳು ಈ ವಿಷಯಕ್ಕೆ ಗಮನ ಕೊಡಬಹುದು.

ಪ್ರಭಾತ.

ಮಾಸಪತ್ರಿಕೆ! **ಧಾರವಾಡ.**

ವಾರ್ಷಿಕ ವರ್ಗಣಿ ಅಂಚೇವೆಚ್ಚಸೇರಿ ರು. ೨.

ಆಧುನಿಕ ಕವಿಗಳಿಗೆ ಕಲ್ಪವೃಕ್ಷ! ಪದ್ಯರಚನಾಸಕ್ತರಿಗೆ ಕಾಮಧೇನು! ಭಾಷಾಭಿಮಾನಿಗಳಿಗೆ ಸ್ವರ್ಗ! ಕೇವಲ ಆಧುನಿಕ ಕವಿತೆಗಳು! ವಿದ್ವಾಂಸರಿಂದ ಬರೆಯಲ್ಪಟ್ಟ ಪದ್ಯ, ಕಾವ್ಯ, ಕೀರ್ತನ, ನಾಟಕಾದಿಗಳಿಗಾಗಿಯೇ ಹೊರಟಿರುವ ಈ ಮಾಸಪತ್ರಿಕೆಯು ಪ್ರತಿಯೊಬ್ಬ ಕರ್ನಾಟಕ ಭಾಷಾಭಿಮಾನಿಯಿಂದಲೂ ಸಂಗ್ರಹಿಸಲು ಅರ್ಹವಾದುದು. ಅಂದವಾದ ಮುದ್ರಣ.

—ಸಂಪಾದಕ, **ಪ್ರಭಾತ,**' ಧಾರವಾಡ.

ಕನ್ನಡಿಗ

(ಉಚ್ಚ ವರ್ಗದ ಮಾಸಿಕವು.)

ಐನ್ನೂರು ಮಂದಿ ವರ್ಗಣೀದಾರರಾದೊಡನೆ ಪ್ರಕಟವಾಗುವದು.

ಕನ್ನಡ ನಾಡಿನಲ್ಲಿ ರಾಷ್ಟ್ರೋನ್ನತಿಗೆ ಸಾಧಕವಾಗುವಂಥ ಸ್ವಾಭಿಮಾನ, ಸ್ವಾವಲಂಬನ ಮೊದಲಾದ ಸದ್ಗುಣಗಳು ಬೆಳೆಯುಂತೆ ಮಾಡುವದೇ ಈ ಹೊಸ ಪತ್ರಿಕೆಯ ಮುಖ್ಯ ಗುರಿಯು. ಇದರೊಳಗೆ ರಾಷ್ಟ್ರೀಯ. ಸಾಮಾಜಿಕ, ಧಾರ್ಮಿಕ. ನೈತಿಕ ಲೇಖನಗಳು ಬರುವವು.

ವಾರ್ಷಿಕ ಚಂದಾ ರು. ೩-೮-೦.

ವ್ಯವಸ್ಥಾಪಕ, ಕನ್ನಡಿಗ ಕಾರ್ಯಾಲಯ'
ಬಾಗಲಕೋಟೆ.

ಪ್ರಕಾಶಕರ

ಎರಡು ಮಾತುಗಳು!

ನಾವು ಎಲ್ಲಕ್ಕೂ ಮೊದಲು ' ಕರ್ನಾಟಕ ಶಿಕ್ಷಕ ' ಅಥವಾ ಸಮ್ಮೇಲನ ಪುಸ್ತಕಮಾಲೆ ' ಎಂಬ ತ್ರೈಮಾಸಿಕವನ್ನು ಹೊರಡಿಸಿದೆವಷ್ಟೆ? ದೇವರ ಅನುಗ್ರಹದಿಂದಲೂ ಗ್ರಾಹಕರ ಆಶ್ರಯದಿಂದಲೂ ಅದನ್ನು ' ಕರ್ನಾಟಕ ಶಿಕ್ಷಕ 'ವೆಂಬ ಹೆಸರಿನಿಂದ ದ್ವೈಮಾಸಿಕ ಪುಸ್ತಕವನ್ನಾಗಿ ಮಾಡಲು ನಮಗೆ ಧೈರ್ಯ ಬಂದಿತು. ಆದರೆ, ಕನ್ನಡ ನಾಡಿನ ಭಾಗ್ಯೋದಯದ ಲಕ್ಷಣವೆಂದೋ ಅಥವಾ ಕನ್ನಡಿಗರ ಆಶ್ರಯವು ನಮಗೆ ಇನ್ನೂ ಚೆನ್ನಾಗಿ ಸಿಗಬಹುದೆಂಬ ನಂಬಿಕೆಯಿಂದಲೋ-ಏನೋ. ಬರುವ ವಿನಾಯಕ ಚತುರ್ಥಿಯ ಸುಮುಹೂರ್ತದ ಮೇಲೆ ಈ ದ್ವೈಮಾಸಿಕವನ್ನು ' ಕರ್ನಾಟಕ ಶಿಕ್ಷಣ ' ವೆಂಬ ಹೆಸರಿನಿಂದ ಮಾಸಪತ್ರಿಕೆಯನ್ನಾಗಿ ಮಾಡಲು ನಾವು ಸಂಕಲ್ಪಿಸಿದ್ದೇವೆ. ಈ ಸಂಯುಕ್ತ ಪುಸ್ತಕದಲ್ಲಿ ಕಾಣುವ ವಿದ್ವಾಂಸರಾದ ಲೇಖಕರಲ್ಲದೆ ಮೈಸೂರು, ಧಾರವಾಡ, ಮಂಗಳೂರುಗಳ ಕಡೆಯ ಕೆಲ ಕನ್ನಡ ವಿದ್ವಾಂಸ ಲೇಖಕರೂ ನಮಗೆ ಸಹಾಯ ಮಾಡುವದಕ್ಕೆ ಒಪ್ಪಿಕೊಂಡಿರುವರು!

ಕರ್ನಾಟಕ ಶಿಕ್ಷಣಕ್ಕೆ ನಾವು ಅನಿವಾರ್ಯ ಪ್ರಸಂಗಕ್ಕಾಗಿ ೩ ರೂ. ವರ್ಗಣಿಯು ನಿಶ್ಚಯಿಸಿದ್ದರೂ, ಕೆಲಗ್ರಾಹಕರ ಇಚ್ಛೆಯ ಮೇರೆಗೆ ಈಗಿನಂತೆಯೇ ೬ ತಿಂಗಳಿಗೊಂದು ರುಪಾಯಿಯಂತೆ ವರುಷದಲ್ಲಿ ಎರಡು ಸಾರೆ ವ್ಹಿ. ಪಿ. ಮಾಡುವ ವ್ಯವಸ್ಥೆಯನ್ನು ಇಡುವೆವು. ಅವಶ್ಯವಿದ್ದವರು ಮೊದಲೇ ತಿಳಿಸಬೇಕಾಗಿ ವಿನಂತಿ. ಶಿಕ್ಷಕರ ಹಾಗು ಭಾಷಾಭಿಮಾನಿಗಳ ಆಶ್ರಯವು ಚೆನ್ನಾಗಿ ದೊರೆತಲ್ಲಿ ಮಾಸಿಕವನ್ನು ಸಚಿತ್ರವಾಗಿಯೂ, ಸರ್ವಾಂಗಮನೋಹರವಾಗಿಯೂ ಮಾಡಿ ಕರ್ನಾಟಕದಲ್ಲಿಯೂ ' ಮಾಸಿಕ ಮನೋರಂಜನ 'ವಿದೆಯೆಂಬುದನ್ನು ಆ ಮಹಾರಾಷ್ಟ್ರೀಯರಿಗೆ ತೋರಿಸಿಕೊಡಬೇಕೆಂದು ನಮ್ಮ ಉತ್ಕಟೇಚ್ಛೆಯುಂಟು. ಇದನ್ನು ಸಫಲಗೊಳಿಸುವದು ಕನ್ನಡಿಗರನ್ನು ಕೂಡಿದೆ. मन एव मनुष्याणां कारणं बन्धमोक्षयोः ಅದ್ದರಿಂದ, ಅಸಾಧ್ಯವಾವುದು?

ಜೇ. ಪಿ. ಬಳವಂತರಾವ್,
ಕನ್ನಡ ಶಾಲಾ ಮಾಸ್ತರ. ಬಾಗಲಕೋಟೆ

ವಿಷಯ ಸೂಚಿ.

೧. ನಮಃ ಶಾಂತಾಯ ತೇಜಸೇ. (ಪದ್ಯ)
೨. ಸತ್ಕೃತಿ (ಪದ್ಯ)
೩. ಶಿಕ್ಷಣ ಸಮ್ಮೇಲನವು.
೪. ಇತಿಹಾಸದ ಮಹತ್ವ.
೫. ಸಭ್ಯಾಚರಣೆ.
೬. ಕ್ರ ಇತಿಹಾಸ ಮಂಡಲ.
೭. ಯಂತ್ರಗಳು
೮. ಗ್ರಾಮ್ಯಜನ ವರ್ಣನೆ. (ಪದ್ಯ)
೯. ಸೃಷ್ಟಿ ಪ್ರೇಮ.
೧೦ ವಾತಾಪಿಪುರದ ಪೂರ್ವೇತಿಹಾಸ.
೧೧. ನಮ್ಮ ಹರಕೆಯು (ಸಂಪಾದಕೀಯ)
೧೨. ಗಣಿತ ಚಮತ್ಕಾರವು.
೧೩. ಬಾಲಕರ ಶುಶ್ರೂಷೆ.
೧೪. ಪದ್ಯಬೋಧ. (ವೇದಾಂತ)
೧೫. ಬ್ರಹ್ಮಚರ್ಯ.
೧೬. ನೆಪೋಲಿಯನ್ ಬೋನಾಪಾರ್ಟ.
೧೭. ಕರ್ಮವೀರ ಗಾಂಧೀ.
೧೮. ಪೃಥ್ವೀರಾಜ (ಪದ್ಯಕಾವ್ಯ)
೧೯. ಸ್ವೀಕಾರ, ಸಮಾಲೋಚನ.
೨೦. ಶಿಕ್ಷಣದ ಮಹತ್ವ

ಕರ್ನಾಟಕ ಶಿಕ್ಷಕ.

ಪುಸ್ತಕ ೩—೪

೧ ‖ ನಮಃ ಶಾಂತಾಯ ತೇಜಸೇ ‖

ಕಾಂತಿಮಯ ಶಾಂತರೂಪನು ಕೊಳಲನೂದುತೆ, ದಿ ।
ಗಂತನನು ನವತೇಜದಿಂ ತುಂಬುತಿಹನೂ ॥ ಪ ॥
ಮಿಗಿಲು ಮಿಗಿಲೆಂದು ಮುಗಿಲುಗಳು ಗಗನಕೆ ನೆಗೆದು ।
ಹಗೆದೋರಿ, ಮತ್ಸರದಿ, ಸಿಡಿದು ಗುಡುಗುಡಿಸುತೇ ॥
ಬಗೆಗೆಟ್ಟು ಸ್ವಾರ್ಥದಿಂ ಹೋರಾಡಿ ಸೋತಫಲ,—
ಜಗಕೆಲ್ಲ ಚೇತನಾಮೃತ ಧಾರೆ ಸುರಿಸುವದೇ ॥ ೧ ॥
ಹೊನ್ನೇನು? ಕುಲವೇನು? ಆಚಾರವೇನು? ಮೈ ।
ಬಣ್ಣವೇನಧಿಕಾರವೇನು? ಬಲವೇನು? ॥
ಮುನ್ನಿಲ್ಲ ತಾರತಮ್ಯಗಳಿಲ್ಲ;—ಧರ್ಮ ಪ್ರ ।
ಸನ್ನತೆಯು ಉನ್ನತಿಗೆ ಆಧಾರವೆನುತೇ ॥ ೨ ॥
'ನನ್ನದಿದು' ತನ್ನದಿದು; ನಾನೊಡೆಯ ನೀನಾಳು; ।
ಎನ್ನುವುದು ಬರಿದೆಲ್ಲ,—ಜಗವೆ ಮನೆತನವೂ ॥
ಅನ್ಯರನು ತನ್ನಂತೆ ಒಂದುಗೂಡಿಸುತೆ, ಮನೆ ।
ಯನ್ನು ವೃಂದಾವನದ ತೆರದಿರಿಸಿರೆನುತೇ ॥ ೩ ॥

M. N. K. (ಕಂಠೀರವ)

೨. ಸತ್ಯತೆ.

ಹಲವುಗುಣಗಳ ಹಂಬಲವ ತೊರೆ । ದೆಲವೊ ಸತ್ಯವನೊಂದೆ ಹಿಡಿಯಲು ।
ನೆಲದೊಳಪ್ಪುದು ಕೀರ್ತಿ ನಿನ್ನಯ ದುರ್ಗುಣವ್ರಾತ ॥
ತೊಲಗಿ ಪೋಪುದು; ಮೋಕ್ಷವದು ಕರ । ತಲದೊಳಿಪ್ಪಾಮಲಕವಪ್ಪುದು ।
ಅಲಸದೀಯುಪದೇಶವನು ಕೈಕೊಳ್ಳು ನೀ ಮನುಜಾ ॥ ೧ ॥

—ಬಂಡೆಪ್ಪನವರ. B. A.

ವಿಜಾಪುರ ಜಿಲ್ಲೆಯ

೧ನೇ ಶಿಕ್ಷಣ ಸಮ್ಮೇಲನವು, ವಿಜಾಪೂರ.

ಈಗ್ಗೆ ಎರಡು ಮೂರು ವರುಷಗಳಿಂದ ತಾಲೂಕಿಗೊಂದರಂತೆ ಶಿಕ್ಷಕ ಸಮ್ಮೇಲನಗಳು ನೆರೆಯುತ್ತಿದ್ದವಷ್ಟೇ? ಅವುಗಳಲ್ಲಿ ನಿಬಂಧವಾಚನ ಹಾಗು ಮಾದರಿಯ ಪಾಠಗಳು ಇವೇ ಮುಖ್ಯ ವಿಷಯಗಳು. ಅದರಂತೆ ವಿಜಾಪುರ ತಾಲೂಕಿನ ೩ನೇ ಸಮ್ಮೇಲನವು ಈ ಸಾರೆ ಮೇ ೨೯, ೩೦, ೩೧ನೇ ದಿವಸಗಳಲ್ಲಿ ವಿಜಾಪುರ ಹೈಸ್ಕೂಲಿನಲ್ಲಿ ಯಶಸ್ವಿಯಾಗಿ ನೆರವೇರಿತೆಂದು ತಿಳಿಸಲಿಕ್ಕೆ ನಮಗೆ ಅತ್ಯಾನಂದವಾಗಿದೆ.

ಈ ಸಮ್ಮೇಲನದ ಕಾರ್ಯಕ್ರಮದ ಬಾಹ್ಯರಚನೆಯು ಲೋಕಲ್‌ಬೋರ್ಡ ಹಾಗು ಮುನಿಸಿಪಾಲಿಟಿಗಳ ವತಿಯಿಂದ ತಯಾರಿಸಲ್ಪಟ್ಟಂತೆ ತೋರಿದರೂ. ಅದರ ಅಂತರ್ವ್ಯವಸ್ಥೆಯಲ್ಲ ಮ|| ನೀಲಕಂಠರಾವ ಗೋಖಲೆ ಬೀ.ಎ. ಡೆ|| ಇನ್ಸ್‌ಪೆಕ್ಟರ, ವಿಜಾಪುರ ಇವರ ನೇತೃತ್ವದ ಕೆಳಗೆ ನಡೆಯಿಸಲ್ಪಟ್ಟಿತು. ಜಿಲ್ಹೆಯೊಳಗಿನ ಕೆಲ ಪ್ರಮುಖ ಶಿಕ್ಷಕರಿಗೆ ಡೆ|| ಎ|| ಇನ್ಸಪೆಕ್ಟರಿಂದ ಆಮಂತ್ರಣಗಳು ಹೋಗಿದ್ದವು. ಈ ಜಿಲ್ಹೆಯೊಳಗಿನ ಯಾವತ್ತು ಮುನಸಿಪಾಲಟಿಗಳೂ ಲೋಕಲ್‌ಬೋರ್ಡುಗಳು ಯಥಾಶಕ್ತಿಯಾಗಿ ಸಮ್ಮೇಲನದ ವೆಚ್ಚದಲ್ಲಿ ಭಾಗಿಗಳಾಗಿದ್ದವೆಂದೂ ತಿಳಿಯಿತು ವಿಜಾಪುರ ಶಹರದೊಳಗಿನ ಸಾವ್ಕಾರರೂ, ವಕೀಲರೂ ಈ ಬಗ್ಗೆ ಒಂದು ನಿಧಿಯನ್ನೇರ್ಪಡಿಸಿ, ಅದರ ಸಹಾಯದಿಂದ ಸಮ್ಮೇಲನಕ್ಕೆ ಬಂದ ಶಿಕ್ಷಕರ ಊಟದ ವೆಚ್ಚವನ್ನು ವಹಿಸಿಕೊಂಡಿದ್ದರು.

ಮೊದಲೇ ಗೊತ್ತಾದ ಮೇರೆಗೆ, ಸಮ್ಮೇಲನದ ಕಾರ್ಯಕ್ರಮವು ತಾ|| ೨೯-೩೦-೩೧ನೇ ದಿವಸ ಪ್ರಾತಃಕಾಲ ೭|| ಗಂಟೆಗೆ ಪ್ರಾರಂಭವಾಯಿತು ಸಭೆಯಲ್ಲಿ ಸುಮಾರು ೧೫೦ ಜನ ಶಿಕ್ಷಕ ಶಿಕ್ಷಕಿಯರು ನೆರೆದಿದ್ದರು. ಕಲೆಕ್ಟರರಾದ ಮ|| ಕಾಬ್ರಾಜೀ ಸಾ||ರವರೂ, ವಿಜಾಪುರದ ಶ್ರೀ. ಕೌಜಲಗಿ, ಅಜರೇಕರ ಮೊದಲಾದ ಪ್ರಸಿದ್ಧ ವಕೀಲರೂ, ಶ್ರೀ. ಶಂಕರೆಪ್ಪ ಘನಸೆಟ್ಟಿ, ಗುಂಡೆಪ್ಪ ಶಾಬಾದಿ ಮೊದಲಾದ ಸಾವ್ಕಾರರೂ, ಹೈಸ್ಕೂಲ ಹೆ|| ಮಾ|| ಮಿ|| ಕಿತ್ತೂರ, ಶ್ರೀ. ಕೃ ರಾಜೀಯ ಹೆ||

ಮಾ। ಮಿ। ಕೊಣ್ಣೂರ ಈ ಮಹನೀಯರೂ, ಟ್ರೇ. ಸ್ಕೂ. ಇನ್ಸಪೆಕ್ಟರರಾದ ಮಿ। ವಕೀಲ ಸಾ॥ರವರೂ, ಹೆಣ್ಣುಶಾಲೆಗಳ ಇನ್ಸಪೆಕ್ಟ್ರೆಸ್ ಮಿಸ್. ಮೆಕಾಫಿಯವ ರೂ, ಈ ಜಿಲ್ಲೆಯ ಎಲ್ಲ ಅಸಿ। ಡೆ। ಎ। ಇನ್ಸಪೆಕ್ಟರರೂ ಸಭೆಗೆ ದಯಮಾಡಿಸಿ ಶೋಭೆಯನ್ನುಂಟುಮಾಡಿದ್ದರು. ಮೊದಲು ಶಾಲಾಬಾಲಕರ ಡ್ರಿಲ್ಲು, ಪ್ರಾರ್ಥನಾ ಪದ್ಯಗಳು ಆದ ಬಳಿಕ ಸಭೆಯ ಕಾರ್ಯದರ್ಶಿಯರಾಗಿದ್ದ ಮಿ। ಘೊಬ್ಬಿ ವಕೀಲ ರು ಸಭೆಯ ಉದ್ದೇಶವನ್ನು ಹೇಳಿ, ಮೆ। ಕಲೆಕ್ಟರ ಸಾ॥ರವರಿಗೆ ಪ್ರಾಸ್ತಾವಿಕ ಭಾ ಷಣವನ್ನು ಮಾಡಲಿಕ್ಕೆ ವಿನಂತಿಯನ್ನು ಮಾಡಿಕೊಂಡರು.

ಅದರಂತೆ ಸಾ॥ಬಹದ್ದೂರರವರು ಅಪ್ಪಣೆ ಕೊಡಿಸಿದ್ದೇನಂದರೆ — " ಈಗಿನ ಶಿಕ್ಷಣ ಪದ್ಧತಿಯ ಬಗ್ಗೆ ಕೆಲವರು ದೋಷಕೊಡುತ್ತಾರೆ; ಅದು ಹೇಗೇ ಇರಲಿ. ಹುಡುಗರು ಸರಿಯಾದ ಮಾರ್ಗದಿಂದ ಬೆಳವಣಿಗೆಯನ್ನು ಹೊಂದಿರುವದಕ್ಕೆ ಶಿ ಕ್ಷಣ ಪದ್ಧತಿಯು ಕಾರಣವಾಗಿರದೆ, ಕಲಿಸತಕ್ಕ ಶಿಕ್ಷಕರೂ ಶಾಲೆಯ ಇಮಾರತಿಗ ಳೂ ಜನರ ಅಜ್ಞಾನವೂ ಕಾರಣಗಳಾಗಿವೆ. ಈ ತರದ ಪರಿಸ್ಥಿತಿಯೂ, ಶಿಕ್ಷಣ ಪ ದ್ಧತಿಯ ನಿಜವಾದ ಜ್ಞಾನವೂ ಮುನಸಿಪಾಲಿಟಿ ಹಾಗು ಲೋಕಲ್‌ಬೋರ್ಡ ಸಂ ಸ್ಥೆಗಳ ಸಭಾಸದರರಿಗಾಗುವದು ಅವಶ್ಯವಿರುವದರಿಂದಲೂ, ಇದರಿಂದ ಅವರು ತಮ್ಮ ಶಾಲೆಗಳಲ್ಲಿ ತಕ್ಕ ಸುಧಾರಣೆಯನ್ನು ಮಾಡಿಕೊಳ್ಳಲಿಕ್ಕೆ ಅನುಕೂಲವಾಗ ಬೇಕೆಂದೂ ಇಂದಿನ ಸಭೆಯನ್ನು ನೆರೆಯಿಸಬೇಕಾಯಿತು. ಅನೇಕ ಶಾಲೆಗಳಲ್ಲಿ ಶಿಕ್ಷಕರು ಸರಿಯಾದ ಕೆಲಸ ಮಾಡದಿರುವದನ್ನೂ, ಪರೀಕ್ಷೆಯ ವೇಳೆಗೆ ಮಾತ್ರ ಬಹಿರಂಗದ ಆಡಂಬರಗಳನ್ನು ಮಾಡಿ ಪರೀಕ್ಷಕರ ಕಣ್ಣೊಳಗೆ ಮಣ್ಣು ಹಾಕುತ್ತಿ ರುವದನ್ನೂ ನಾವು ನೋಡಿರುತ್ತೇವೆ. ಕೆಲಸದ ಮಾನದಿಂದ ಶಿಕ್ಷಕರ ಪಗಾರವು ಕಡಿಮೆಯಾಗಿರುವದಾದರೂ, ಇಂಥ ಸ್ಥಿತಿಯೊಳಗೆ ಅತಿಶಯ ಮಹತ್ವವೂ ಪವಿ ತ್ರವೂ ಆಗಿರುವ ಶಿಕ್ಷಣದ ಕಾರ್ಯವನ್ನು ಎಲ್ಲ ಶಿಕ್ಷಕರು ಕೈಲಾದ ಮಟ್ಟಿಗೆ ಮನಃ ಪೂರ್ವಕವಾಗಿ ಮಾಡತಕ್ಕದ್ದು "

ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಕೆಲಸ ಸಾಗಿಸುವದಕ್ಕಾಗಿ ಸಾ। ರವರು ಮೆ। ನೀಲಕಂಠರಾವ ಗೋಖಲೆಯವರಿಗೆ ವಿನಂತಿಯನ್ನು ಮಾಡಿಕೊಂಡ ರು. ಶ್ರೀ ಶಂಕರೆಪ್ಪ ಧನಸೆಟ್ಟಿ ಇವರು ರಾಯರ ಗುಣಾನುವಾದವನ್ನು ಮಾಡಿ ಮೆ। ಕಲೆಕ್ಟರ ಸಾ॥ ರವರ ಸೂಚನೆಗೆ ಅನುಮೋದನೆಯನ್ನು ಕೊಟ್ಟ ಬಳಿಕ, ರಾ ಯರು ಅಧ್ಯಕ್ಷಸ್ಥಾನಾಪನ್ನರಾಗಿ ತಮಗೆ ಈ ಬಹುಮಾನವನ್ನು ಕೊಟ್ಟು ಗೌರವಿಸಿದ್ದ ಕ್ಕಾಗಿ ಮೆ॥ ಕಲೆಕ್ಟರ ಸಾ॥ರವರ ಹಾಗು ಸಭಿಕರ ಆಭಾರವನ್ನು ಮನ್ನಿಸಿ, ಸಭೆಯ ಕೆಲಸಕ್ಕೆ ಅಪ್ಪಣೆಯನ್ನಿತ್ತರು.

ಕಾರ್ಯಕ್ರಮದಂತೆ, ಪ್ರತಿದಿವಸ ಮುಂಜಾನೆ ನಿಬಂಧ ವಾಚನವೂ, ಮಧ್ಯಾನ್ಹದಲ್ಲಿ ಮಾದರಿಯ ಪಾಠಗಳೂ ನಡೆಯುತ್ತಿದ್ದವು. ಓದಲ್ಪಟ್ಟ ನಿಬಂಧಗಳೆಲ್ಲ ನಮ್ಮ ಕಡೆಗೆ ಪ್ರಸಿದ್ಧಿಗಾಗಿ ಬಂದಿರುವದರಿಂದ ಅವುಗಳ ಸಾರಾಂಶಗಳನ್ನು ಸಾವಕಾಶವಾಗಿ ಪ್ರಕಟಿಸುವೆವು. ನಿಬಂಧಗಳನ್ನು ಕೆಳಗೆ ಬರೆದ ಶಿಕ್ಷಕರು ಓದಿದರೆಂಬದನ್ನು ಮಾತ್ರ ಸದ್ಯಕ್ಕೆ ತಿಳಿಸಿ ಬಿಡುವೆವು. ಹೈಸ್ಕೂಲ ಹೆ। ಮಾ। ಮಿ। ಕಿತ್ತೂರ ಇವರ ನಿಬಂಧವು ಅತ್ಯುತ್ತಮವಾಗಿದ್ದು, ಮನನೀಯವಾಗಿರುವದಾದರೂ, ಬಹಳ ದೊಡ್ಡದಾಗಿರುವದರಿಂದ, ಅದನ್ನು ಮಾತ್ರ ಅವಕಾಶವಿದ್ದಂತೆ ಮುದ್ರಿಸುತ್ತ ಹೋಗಬೇಕೆಂದಿರುವೆವು.

(೧) ಶಿಕ್ಷಕನಲ್ಲಿರತಕ್ಕ ಗುಣಗಳು:— ಶ್ರೀ. ಕಿತ್ತೂರ. ಬೀ. ಏ. ಹೆ ಮಾ। ಹೈಸ್ಕೂಲ ವಿಜಾಪುರ.

(೨) ಬಾಲಕರ ವರ್ಗದ ಶಿಕ್ಷಕನಲ್ಲಿರುವ ಗುಣಗಳು:— ಶ್ರೀ ಸುಬ್ಬಾಜಿ ನರಸಿಂಹ ಪಾಟೀಲ. ಹೆ। ಮಾ। ಕನ್ನಡ ಶಾಲಾ ಬಾಗಲಕೋಟೆ;
(೨) ಶ್ರೀ. ಆದಪ್ಪ ರತ್ನಪ್ಪ ಪಾಟೀಲ ಹೆ। ಮಾ। ಮೋರಟಗಿ.

(೩) ಹುಡುಗರನ್ನು ನೀತಿವಂತರನ್ನಾಗಿ ಮಾಡುವ ಬಗೆ:— ಶ್ರೀ. ಮ. ವೆ. ಕುಲಕರ್ಣಿ (ಯಳವತ್ತಿ) ಹೆ। ಮಾ। ಕ ಶಾ ಬಾಗೇವಾಡಿ.
(೨) ಶ್ರೀ. ಭೀಮಾಜಿ ಗೋಪಾಳ ಕುಲಕರ್ಣಿ, ಹೆ। ಮಾ। ಹಿಪ್ಪರಗಿ.

(೪) ಶಾರೀರಕ ಶಿಕ್ಷಣ ಪದ್ಧತಿ:— ಶ್ರೀ. ವೆಂಕಟೇಶ ನರಸಿಂಹ ತಾಳಿಕೋಟಿ ಅಸಿ। ಮಾ। ಕಲಾದಗಿ.

(೫) ಇತಿಹಾಸ ಕಲಿಸುವ ಉದ್ದೇಶ ಹಾಗು ಪದ್ಧತಿ:— ಶ್ರೀ. ಸ್ವೈ. ವಾ. ಮುರಾಳಿ, ಹೆ। ಮಾ। ಕಟಗೇರಿ.

ಪ್ರತಿದಿವಸ ಮಧ್ಯಾನ್ಹದಲ್ಲಿ ಉತ್ತಮರಾದ ಶಿಕ್ಷಕರು ಮಾದರಿಯ ಪಾಠಗಳನ್ನು ಕಲಿಸಿ ತೋರಿಸಿದರು. ಅವರಲ್ಲಿ ಮಿ। ಮ. ಬ ಕೊರಬು ಅಸಿ। ಮಾ। ಮುದ್ದೇಬಿಹಾಳ ಇವರು ಕಲಿಸಿದ " ಆರ್ಕಿಮಿಡಿಸನ ಸಿದ್ಧಾಂತವು " ಈ ಪಾಠವು ಅತ್ಯುತ್ತಮವಾಗಿಯೂ, ಪರಿಣಾಮಕಾರಿಯಾಗಿಯೂ ಆಯಿತು. ಕಡೆಯ ದಿವಸ ಮಿ। ವೆ. ನ. ತಾಳಿಕೋಟೆ ಇವರು ಅಧ್ಯಕ್ಷರ ಪರವಾನಿಗೆಯಿಂದ ತಮ್ಮ ಪ್ರಿಯಕರ ಪಾಠವಾದ " ಶ್ರೀರಾಮಚಂದ್ರನ ಪಟ್ಟಾಭಿಷೇಕ " ವೆಂಬ ವಾಚನ ಪಾಠವನ್ನು ಕಲಿಸಿತೋರಿಸಿದರು ಹಿಪ್ಪರಗಿ ಶಾಲೆಯ ಹೆ। ಮಾ। ರಾ। ರಾ। ಮಿ। ಭೀ. ಗೋ. ಕುಲಕರ್ಣಿಯವರು " ಮತ್ಸರ, ಲೋಭ ಮೊದಲಾದ ಅರಿಷಡ್ವರ್ಗಗಳ ವಿಷಯ

ವಾದ ಒಂದು ಅತ್ಯುತ್ತಮ ಸಂಭಾಷಣವನ್ನು ತಾವು ಶ್ರಮಪಟ್ಟು ಕಲಿಸಿಕೊಂಡು ಬಂದ ತಮ್ಮ ವಿದ್ಯಾರ್ಥಿಗಳಿಂದ ಅಭಿನಯಿಸಿ ತೋರಿಸಿದರು. ಸಂಗೀತ ಡ್ರಿಲ್ಲು ಕಲಿಸುವ ಪದ್ಧತಿಯೂ ಒಬ್ಬ ಉತ್ಸಾಹಿತರಾದ ಶಿಕ್ಷಕರಿಂದ ತೋರಿಸಲ್ಪಟ್ಟಿತು. ಕನ್ನಡ ಅಕ್ಷರಗಳ ಬಗ್ಗೆ ಶಾಸ್ತ್ರೀಯ ರೀತಿಯಾಗಿ ಇತಿಹಾಸವೂ ಶೋಧವೂ ಹೇಳಲ್ಪಟ್ಟವು. ಹೀಗೆ ಪ್ರತಿದಿವಸ ಮುಂಜಾನೆ ಮಧ್ಯಾಹ್ನಗಳಲ್ಲಿಯೂ ಸಮ್ಮೇಲನದ ಕಾರ್ಯವು ಬಹು ವಿಜೃಂಭಣೆಯಿಂದಲೂ, ಮನೋರಂಜಕವಾಗಿಯೂ ಜರಗುತ್ತಿತ್ತು. ಇದಕ್ಕೆಲ್ಲ ವಿಜಾಪುರದ ತರುಣ ಶಿಕ್ಷಕರೇ ಕಾರಣರೆಂದೂ ತಿಳಿದೆವು.

ಎರಡನೆಯ ದಿವಸ ಮಿ। ಅಜರೇಕರ ವಕೀಲರು, ಈಗಿನ ಶಿಕ್ಷಣಪದ್ಧತಿಯು ಸದೋಷವಾಗಿರುವದೆಂತಲೂ, ಈ ಪದ್ಧತಿಯಿಂದ ಕಲಿತ ಹುಡುಗರು ಹಳೇಪದ್ಧತಿಯಿಂದ ಕಲಿತ ಹುಡುಗರಿಗಿಂತ ಬುದ್ಧಿಯಲ್ಲಿಯೂ ನೀತಿಯಲ್ಲಿಯೂ ಕಡಿಮೆ ಯೋಗ್ಯತೆಯುಳ್ಳವರಾಗುವರೆಂತಲೂ ಪ್ರತಿಪಾದಿಸಿ, ಬೇರೊಂದು ಉತ್ತಮವಾದ ಪದ್ಧತಿಯನ್ನು ಹುಡುಕಿ ತೆಗೆದಾಗಲಿ ಅಥವಾ ಹಳೆ ಪದ್ಧತಿಯನ್ನನುಸರಿಸಿಯಾಗಲಿ ಶಿಕ್ಷಣವನ್ನು ನಡಿಸಬೇಕೆಂದು ಸೂಚಿಸಿದರು. ಕಡೆಯ ದಿವಸ ಮಿ। ವಕೀಲ ಸಾ। ರವರು ಇವರ ಸೂಚನೆಯನ್ನು ವಿರೋಧಿಸಿ ಹೇಳಿದ್ದೇನಂದರೆ— 'ಶಿಕ್ಷಣ ಪದ್ಧತಿಯ ಬಗ್ಗೆ ನಿಜವಾದ ಜ್ಞಾನವಿಲ್ಲದವರು ಅದರ ಗುಣದೋಷಗಳ ಬಗ್ಗೆ ವಿಚಾರಿಸಬಾರದು. ವಕೀಲಿ, ಡಾಕ್ಟರ ಮೊದಲಾದ ಉದ್ಯೋಗಗಳ ಜ್ಞಾನವಿಲ್ಲದವರು ಅದರಲ್ಲಿ ಹೇಗೆ ಕೈ ಹಾಕಲಾರರೋ, ಹಾಗೆ ಪದ್ಧತಿಯ ಜ್ಞಾನವಿಲ್ಲದೆ, ಅದರಬಗ್ಗೆ ಮಾತನಾಡಿದರೆ ಅವರು ಅಪಹಾಸ್ಯಕ್ಕೆ ಗುರಿಯಾಗುವರು. ವಕೀಲ ಡಾಕ್ಟರರ ಉದ್ಯೋಗಗಳು ಅಭ್ಯಾಸವಿಲ್ಲದೆ ಪ್ರತಿಯೊಬ್ಬನಿಗೆ ಹೇಗೆ ದುಸ್ಸಾಧ್ಯವೋ, ಶಿಕ್ಷಣ ಪದ್ಧತಿಯೂ ಹಾಗೆಯೇ ದುಸ್ಸಾಧ್ಯವಾಗಿರುವದು. ಆದ್ದರಿಂದ, ಶಿಕ್ಷಣವೂ ಅನೇಕ ಕಠಿಣ ಶಾಸ್ತ್ರಗಳಲ್ಲಿ ಒಂದಾಗಿರುವದೆಂಬದನ್ನು ಶಿಕ್ಷಕರು ತಮ್ಮ ಆಚರಣೆಯಿಂದ ಜನರಿಗೆ ತೋರಿಸಿಕೊಡಬೇಕು ಅಂದರೆ, ಪದ್ಧತಿಯ ವಿಷಯವಾಗಿರುವ ಈ ಅಜ್ಞಾನವು ಜನರಲ್ಲಿ ಸಹಜವಾಗಿ ಇಲ್ಲದಂತಾಗುವದು.'

ಆಮೇಲೆ, ಮಿ। ಕೌಜಲಿಗಿ ವಕೀಲರು ಅಧ್ಯಕ್ಷರ ಪರವಾನಿಯನ್ನು ತೆಗೆದುಕೊಂಡು ಹೇಳಿದ್ದೇನಂದರೆ— "ಮಿ। ವಕೀಲ ಸಾ॥ ರವರು ಶಿಕ್ಷಕರನ್ನು ವಕೀಲರಿಗೂ, ಡಾಕ್ಟರರಿಗೂ ಹೋಲಿಸಿ ಹೇಳಿದರಷ್ಟೇ! ಆದರೆ, ಈ ಧಂದೆಗಳಿಗಿಂತ ಶಿಕ್ಷಣದ ಹೊರೆಯು ಮೇಲಾದದ್ದಿರುವದು. ಅಂತೇ ಪ್ರಾಚೀನ ಕಾಲದ ಗುರುಗಳಿಗೆ ಅಷ್ಟು ಮಹತ್ವವು ಬಂದಿದ್ದಿತು. ॥ अभ्यासानुसारिणी विद्या बुद्धिः कर्मानुसारिणी ॥ ಎಂಬಂತೆ ಯಾವದೊಂದು ವಿದ್ಯೆಯು ಅಭ್ಯಾಸದಿಂದ ಸಾಧಿಸಬಹುದು. ಆದರೆ ಸತತವಾದ

ಒಳ್ಳೇ ಕರ್ಮಾಚರಣೆಯಿಲ್ಲದಿದ್ದರೆ ಬುದ್ಧಿಯು ಬಾರದು. ಮೇಲ್ತರದ ಶಿಕ್ಷಣವನ್ನು ಹೊಂದಿದವರು ಸಹ ಒಮ್ಮೊಮ್ಮೆ ಕೆಟ್ಟ ಕೆಲಸಗಳಿಗೆ ಪ್ರವೃತ್ತರಾಗಬಹುದು. ಆದ್ದರಿಂದ, ಹುಡುಗರು ಬುದ್ಧಿವಂತ ಮನುಷ್ಯರಾಗುವದು ಬರಿ ಶಿಕ್ಷಕರ ಮೇಲೆಯೇ ಅವಲಂಬಿಸಿರದೆ ಪರಿಸ್ಥಿತಿಯೇ ಅದಕ್ಕೆ ಮುಖ್ಯ ಕಾರಣವಾಗಿರುವದು. ಮುಖ್ಯ ಮಾತೇನೆಂದರೆ ಶಿಕ್ಷಣವನ್ನು ಇಂಥದೇ ಪದ್ಧತಿಯಿಂದ ಕೊಡತಕ್ಕದ್ದು ಎಂದು ಹೇಳುವದಕ್ಕಿಂತ, ವಿದ್ಯಾರ್ಥಿಗಳ ಸಾಮರ್ಥ್ಯವನ್ನೂ, ವಿಷಯಗಳ ಒಲವನ್ನೂ ನೋಡಿಕೊಂಡು ಪರಿಸ್ಥಿತಿಗನುಗುಣವಾದ ಶಿಕ್ಷಣವನ್ನು ಕೊಡಬೇಕೆಂದು ಹೇಳುವದೇ ವಿಹಿತವು. ವಿದ್ಯಾರ್ಥಿಗಳ ನೈತಿಕ ಶಾರೀರಿಕ ಸಾಮರ್ಥ್ಯಗಳನ್ನು ಆದಷ್ಟು ಮಟ್ಟಿಗೆ ಶಿಕ್ಷಕರು ಬಲಿಪಡಿಸತಕ್ಕದ್ದು. ಕ್ರಿಕೆಟ್, ಫುಟ್‌ಬಾಲ ಮೊದಲಾದ ಪರದೇಶಿಯ ಆಟಗಳಿಗೆ ದೊಡ್ಡ ಮೈದಾನವು ಬೇಕಾಗಿರುವದರಿಂದ, ಅಂಥ ಮೈದಾನವಿಲ್ಲದಲ್ಲಿ ಈ ಆಟಗಳನ್ನು ಆಡಿಸಿದರೆ ನಾವು ಅಂಧಾನುಕರಣವನ್ನು ಮಾತ್ರ ಮಾಡಿದಂತಾಗುವದು. ಹೀಗೆ ತಮ್ಮ ಅಂಧಾನುಕರಣವನ್ನು ಮಾಡಬೇಕೆಂದು ಪರದೇಶದವರು ಎಂದೂ ಬಯಸುವದಿಲ್ಲ. ಆದ್ದರಿಂದ ಆಟದ ಸಾಧನಗಳನ್ನು ನೋಡಿಕೊಂಡು ಸಾಧ್ಯವಿದ್ದವುಗಳನ್ನೇ ಆಡಿಸತಕ್ಕದ್ದು. ಮುಖ್ಯವಾಗಿ, ವಿದ್ಯಾರ್ಥಿಗಳು ಭಾವೀರಾಷ್ಟ್ರದ ಉತ್ತಮರಾದ ನಾಗರಿಕರಾಗುವಂತೆ ಅವರಲ್ಲಿ ತಕ್ಕಗುಣಗಳನ್ನುಂಟು ಮಾಡಲಿಕ್ಕೆ ಎಲ್ಲ ಶಿಕ್ಷಕರು ಪ್ರಯತ್ನ ಮಾಡಬೇಕೆಂದು ನನ್ನ ವಿನಂತಿಯದೆ".

ಇಷ್ಟಾದ ಮೇಲೆ ಸಮ್ಮೇಲನದ ಕೆಲಸವು ಮುಗಿದು ಅಧ್ಯಕ್ಷರ ಸಮಾರೋಪದ ಭಾಷಣ ವಾಯಿತು. ಈ ಜಿಲ್ಲೆಯಲ್ಲಿರುವ ಲೋಕಲ್ ಬೋರ್ಡ, ಮುನಸಿಪಾಲಿಗಳ ಗಂಡು ಹೆಣ್ಣು ಶಾಲೆಗಳ ಸಂಖ್ಯೆಯನ್ನು, ಅವುಗಳ ಬೆಳಿಗೆಯ ಕ್ರಮವನ್ನು ಹೇಳಿ ಪ್ರತಿಯೊಂದು ಹಳ್ಳಿಯಲ್ಲಿ ಸಹ ಒಂದೊಂದು ಶಾಲೆಯು ಸ್ಥಾಪಿಸಲ್ಪಡುವದೇ ಸರಕಾರದ ಧೋರಣವಾಗಿರುವದೆಂದು ತಿಳಿಸಿ, ಅಂದದ್ದೇನಂದರೆ— " ಶಿಕ್ಷಕರು ಹಳ್ಳಿಗಳಲ್ಲಿ ಕೆಲಸ ಮಾಡಲಿಕ್ಕೆ ಹಿಂಜರಿಯುತ್ತಾರೆ. ಇದು ಶ್ರೇಯಸ್ಕರವಲ್ಲ. ಹಳ್ಳಿಯ ಶಾಲೆಗಳನ್ನು ಉತ್ತಮರೀತಿಯಿಂದ ನಡೆಯಿಸಿಕೊಂಡು ಹೋಗುವವನೇ ಉತ್ತಮ ಶಿಕ್ಷಕನು. ಹಳ್ಳಿಯಲ್ಲಿ ಕೆಲಸ ಮಾಡುವ ಶಿಕ್ಷಕನು ಅಲ್ಲಿ ಕನಿಷ್ಠ ಪಕ್ಷಕ್ಕೆ ಮೂರು ವರುಷಗಳ ವರೆಗಾದರೂ ಇರಬೇಕು. ಹೀಗೆ ಶಿಕ್ಷಕರು ಸಂತೋಷದಿಂದ ಕೆಲಸ ಮಾಡಿ ನಮಗೆ ಸಹಾಯಕರಾದರೆ, ಈಗಿನ ಸ್ಥಿತಿಗಿಂತ ಉತ್ತಮ ಸ್ಥಿತಿಯು ಬೇಗನೆ ಉಂಟಾಗಬಹುದು. ಈ ಸಮ್ಮೇಲನದಲ್ಲಿ ಓದಿದ ನಿಬಂಧಗಳಲ್ಲಿ ' ಬಾಲಕರ ವರ್ಗವನ್ನು ಕಲಿಸುವ ಶಿಕ್ಷಕನಲ್ಲಿರುವ ಗುಣಗಳು " ಈ ವಿಷಯವು ಅತಿಶಯ ಮಹತ್ವದ್ದಾಗಿದ್ದು, ಎಲ್ಲ ಶಿಕ್ಷಕರು ಚಿಕ್ಕ ಬಾಲಕರ ಶಿಕ್ಷಣದ ಕಡೆಗೆ ಹೆಚ್ಚು ಲಕ್ಷ್ಯಗೊಡಬೇಕು. ಸಣ್ಣ ಮ

ಡುಗರಿಗೆ ಕಲಿಸಬಲ್ಲ ಶಿಕ್ಷಕನು ಉಳಿದೆಲ್ಲ ವರ್ಗಗಳನ್ನು ಸಹಜವಾಗಿ ಕಲಿಸುವನು." ಎಂದು ಮುಂತಾಗಿ ಅಪ್ಪಣೆ ಕೊಡಿಸಿ ಸಮ್ಮೇಲನದ ಕಾರ್ಯವು ಚನ್ನಾಗಿ ಸಾಗಿದ್ದಕ್ಕಾಗಿ ಜಗದೀಶನನ್ನು, ತಮಗೆ ಗೌರವಿಸಿದ್ದಕ್ಕಾಗಿ ಸಭಿಕರನ್ನು ಅಬಿನಂದಿಸಿ ತಮ್ಮ ಭಾಷಣವನ್ನು ಮುಗಿಸಿದರು.

ಪದ್ಧತಿಯ ಪ್ರಕಾರ, ಅಧ್ಯಕ್ಷರಿಗೂ ಸಭಿಕರಿಗೂ ಹಾರ, ತುರಾಯಿ, ಸುಗಂಧ, ತಾಬೂಲಾದಿಗಳಿಂದ ಸತ್ಕಾರವಾಯಿತು. ರಾಷ್ಟ್ರಗೀತವೂ ಬಾಲಕರಿಂದ ಅನ್ನಲ್ಪಟ್ಟಿತು. ಬ್ರಿಟಿಶ್ ಸಾಮ್ರಾಜ್ಯಕ್ಕೆ ಮಹಾಯುದ್ಧದ ವಿಜಯ ಪ್ರಾಪ್ತಿಗಾಗಿ ತ್ರಿವಾರ ಜಯಘೋಷವೂ ನಡೆಯಿತು. ಇವೆಲ್ಲ ಕಾರ್ಯಗಳಲ್ಲಿ ವಿಜಾಪುರದ ತರುಣ ಶಿಕ್ಷಕರು ಸ್ವಯಂ ಸೇವಕರಾಗಿ ಅತ್ಯುಮವಾದ ವ್ಯವಸ್ಥೆಯನ್ನಿಟ್ಟದ್ದರಿಂದ ಸಭಿಕರೆಲ್ಲರೂ ಅವರನ್ನು ಅಭಿನಂದಿಸುವದರಲ್ಲಿ ತೊಡಗಿರಲು ಸಭಾವಿಸರ್ಜನೆಯಾಯಿತು.

ಮುಂದಿನ ವರುಷದ ೨ನೇ ಸಮ್ಮೇಲನವನ್ನು ಬಾಗಲಕೋಟೆಯ ಶಿಕ್ಷಣಾಭಿಮಾನಿಗಳಾದ ಮಹಾಜನರು ನೆರೆಯಿಸಲಿಕ್ಕಿರುವರೆಂದು ವದಂತಿಯುಂಟು. ಶಿಕ್ಷಣ ಸುಧಾರಣೆಯಲ್ಲಿ ಹಿಂದೆ ಬಿದ್ದ ಬಾಗಲಕೋಟೆಗೆ ಈ ತರದ ಚಟುವಟಿಕೆಯಿಂದ ಎಷ್ಟೋ ಸಹಾಯವಾಗಬಹುದಾಗಿದೆ! ಇವಕ್ಕೆ ಜಗದೀಶನ ಪ್ರೇರಣೆಯೇ ಮುಖ್ಯ ಸಾಧನವೆಂಬದನ್ನು ಮಾತ್ರ ಹೇಳಿ ಲೇಖನಿಯನ್ನು ಕೆಳಗಿಡುವೆವು.

—ಕರ್ನಾಟಕ ಶಿಕ್ಷಕ.

ಇತಿಹಾಸದ ಮಹತ್ವ.

(ಕಟಗೇರಿ ಶಾಲೆಯ ಸ್ಕೂ| ಮಾ| ರಾಮ ವಿ| ಪುರಾಣಿಕಯವರು ವಿಜಾಪೂರ ಶಿಕ್ಷಕ ಸಮ್ಮೇಲನದಲ್ಲಿ ಓದಿದ್ದು.)

ಸಾಂಪ್ರತ ಕಾಲದಲ್ಲಿ ಬಹು ಜನರ ಲಕ್ಷ್ಯವು ಭವಿಷ್ಯ ಕಥನದ ಕಡೆಗಿದ್ದು ಭೂತಕಾಲದ ಸಂಗತಿಗಳನ್ನು ತಿಳಿದುಕೊಳ್ಳುವದರ ಕಡೆಗಿರುವದಿಲ್ಲ. ಆದ್ದರಿಂದ, ಒಂದು ಕಾಲದಲ್ಲಿ ವೈಭವಶಿಖರದಲ್ಲಿ ವಿರಾಜಮಾನವಾಗಿ ಶೋಭಿಸುವ ತಮ್ಮ ರಾಷ್ಟ್ರದ ವೈಭವವು ಅವರಿಗೆ ಕಾಣದಂತಾಗುವದು. ಇಂಥವರಿಂದ ಪೂರ್ವಜರಿಗೆ ಕೀರ್ತಿಗೆ ಒಪ್ಪುವಂತಾಕುವ ಕಾರ್ಯವು ಆಗುವದು ಅಸಂಭವವು. ಗತಕಾಲದ ಇತಿಹಾಸವು ಸಾ

ದ್ಯಂತವಾಗಿ ಗೊತ್ತಿದ್ದರೆ ಮಾತ್ರ, ಅವರಲ್ಲಿ ತಮ್ಮ ಪೂರ್ವಜರ ಅಭಿಮಾನವು ಜನಿಸುವದು. ಸ್ವದೇಶಾಭಿಮಾನದ ಜಾಗ್ರತಿಗೆ ಗತವೈಭವದ ಸ್ಮರಣವು ಅವಶ್ಯವಾಗಿದೆ. ಪೌರಾಣಿಕ ಕಥೆಗಳನ್ನು ಹೇಳಿಯಲ್ಲವೇ **ಜೀಜಾಬಾಯಿಯು ಶಿವಾಜಿಯ** ಸ್ವಾಭಿಮಾನವನ್ನು ಜಾಗ್ರತಗೊಳಸಿದ್ದು? ಇತಿಹಾಸ ವಾಚನವು ವಿದ್ಯಾರ್ಥಿಗಳನ್ನು ರಾಷ್ಟ್ರಪುರುಷರನ್ನಾಗಿ ಮಾಡುವ ಮುಖ್ಯ ಸಾಧನವಾಗಿರುವದು. ಇತಿಹಾಸ ವಾಚನವಿಲ್ಲದಿದ್ದರೆ, ದೇಶದಲ್ಲಿ ಅಲ್ಲಲ್ಲಿಗೆ ಕಾಣುವ ಕೋಟೆ ಕೊತ್ತಳಗಳೂ, ಪರ್ವತಶಿಖರಗಳೂ. ದೇವಾಲಯಗಳೂ, ಅರಮನೆಗಳೂ, ಪೂರ್ವಜರ ಶಸ್ತ್ರಾಸ್ತ್ರಗಳೂ ನಿಸ್ಸಾರವಾಗಿ ತೋರುವವು!

ಇತಿಹಾಸ ಪ್ರಸಿದ್ಧವಾದ ಸ್ಥಳಗಳ ನಿರೀಕ್ಷಣದಿಂದ ತರತರದ ಮನೋವಿಕಾರಗಳು ಜಾಗ್ರತವಾಗುವವು. ಚಿತ್ತೂರಿನಿಂದ ಪದ್ಮಿನಿಯ ಜೋಹಾರವು, ಸಿಂಹಗಡದಿಂದ **ತಾನಾಜಿಯ** ಪರಾಕ್ರಮವು, ಪ್ರತಾಪಗಡದಿಂದ **ಅಫಜುಲ್‌ಖಾನನ** ವಧೆಯು, ಪಂಢರಪುರದಿಂದ ಜ್ಞಾನದೇವ ತುಕಾರಾಮಾದಿ ಸಾಧುಗಳು, ಪಾಣಿಪತ್ತದಿಂದ ಮಹಾರಾಷ್ಟ್ರದ ಅಪಜಯವು, ಸಂಗಮನೇರದಿಂದ **ಸಂಭಾಜಿಯ** ವಿಷಯಾಸಕ್ತತೆಯು, ಹಳದೀಘಾಟದಿಂದ ರಜಪೂತರ ತುಮುಲಯುದ್ಧವು, ವಾಟರ್ಲೂದಿಂದ ಮಾರ್ಕ್ವಿಸ್ ವೆಲ್ಲಿಸ್ಲಿಯ ಸಮರಚಾತುರ್ಯವು, ಟ್ರಾಫಲ್ಗಾರದಿಂದ ನೆಲ್‌ಸನ್ನನ ಕರ್ತವ್ಯ ನಿಷ್ಠೆಯು ಇವುಗಳ ನೆನಪಾಗುವವು. ಅದರಂತೆ, ಇತಿಹಾಸ ಪ್ರಸಿದ್ಧರಾದ ಪುರುಷರ ಹೆಸರುಗಳಿಂದ ತರತರದ ವಿಚಾರಗಳು ಮನಸ್ಸಿನಲ್ಲಿ ಬರುವವು. ಪ್ರತಾಪಸಿಂಹನ ಸ್ವಾತಂತ್ರ್ಯ ಪ್ರೀತಿಯೂ, ಭಾಮಾಸಾನ ಸ್ವಾಮಿನಿಷ್ಠೆಯೂ, ಅಕಬರನ ರಾಜಕಾರಣ ಚಾತುರ್ಯವೂ, ಶಂಕರಾಚಾರ್ಯರ ಬುದ್ಧಿಸಾಮರ್ಥ್ಯವೂ, ಮಾಧವರಾಯನ ಮನೋನಿಗ್ರಹವೂ, ಬುದ್ಧನ ವಿಶ್ವವ್ಯಾಪಕ ಪ್ರೇಮವೂ, ನಾನಾ ಫಡನವೀಸನ ಮುತ್ಸದ್ದಿತನವೂ, ಕಾಲಿದಾಸಾದಿ ಕವಿಗಳ ಪಾಂಡಿತ್ಯವೂ ರಜಪೂತ ಸ್ತ್ರೀಯರ ಆತ್ಮಯಜ್ಞವೂ ಯಾರಮನಸ್ಸನ್ನು ಸಂತೋಷಗೊಳಿಸಲಿಕ್ಕಿಲ್ಲ? ವಿಜಯನಗರದ ಹಾಳಾದ ಅವಶೇಷಗಳನ್ನು ನೋಡ ಹೋದ ಪ್ರವಾಸಿಗೆ ಅವು ತಂತಮ್ಮ ಗತ ವೈಭವದ ಸಂಗತಿಗಳನ್ನು ಸಾದ್ಯಂತವಾಗಿ ಹೇಳುವವು. ಆದರೆ, ಪ್ರವಾಸಿಯು ಇತಿಹಾಸ ವಾಚನದಿಂದ ತನ್ನ ಅಂತಃಕರಣದ ಶುದ್ಧತೆಯನ್ನು ಮಾಡಿಕೊಂಡಿರಲಿಕ್ಕೆ ಬೇಕು.

ಇತಿಹಾಸ ವಾಚನದಿಂದಾಗುವ ಬೇರೊಂದು ಲಾಭವೆಂದರೆ— ಜಿಜ್ಞಾಸೆಯ ತೃಪ್ತಿಯು. ನಮಗೆ ಇಂದಿನ ಸ್ಥಿತಿಯು ಪ್ರಾಪ್ತವಾಗಲಿಕ್ಕೆ ಕಾರಣವಾದ ಅನೇಕ ಸಂ

ಗತಿಗಳು ತಿಳಿಯುವದರಿಂದ ಒಂದು ಬಗೆಯ ಆನಂದವಾಗಿ, ಮುಂದಿನ ಧೋರಣ ವನ್ನು ಗೊತ್ತು ಪಡಿಸಲಿಕ್ಕೆ ಬರುವದು. ಯಾವದೊಂದು ಸಂಗತಿಯನ್ನು ತಿಳಿದು ಕೊಳ್ಳಬೇಕೆಂಬ ಜಿಜ್ಞಾಸವು ಮನುಷ್ಯನಲ್ಲಿ ಅಲ್ಪ ಸ್ವಲ್ಪ ಪ್ರಮಾಣದಿಂದ ಇದ್ದೇ ಇ ರುತ್ತದೆ. ಈ ಪ್ರವೃತ್ತಿಗೆ ಚಾಲನೆಯು ದೊರೆಯಬೇಕಾದರೆ ಇತಿಹಾಸವೇ ಮು ಖ್ಯ ಸಾಧನವಾಗಿದೆ. ಇದರಿಂದ, ಪೂರ್ವಜರ ವಾಙ್ಮಯ, ತತ್ವಜ್ಞಾನ, ಧರ್ಮ, ಕಲಾಕೌಶಲ್ಯ, ವ್ಯಾಪಾರ ಮೊದಲಾದ ಅನೇಕ ವಿಷಯಗಳ ಕಡೆಗೆ ಅವರ ಮನ ಸ್ಸಿನ ಒಲವು ಹೋಗಿ, ಅವರ ಮಾನಸಿಕ ಉನ್ನತಿಯಾಗುತ್ತದೆ. ಒಟ್ಟಿಗೆ ಇತಿಹಾ ಸವನ್ನು ಲಕ್ಷಪೂರ್ವಕವಾಗಿ ಓದುವದರಿಂದ, ವಾಚಕರ ಸ್ವಾಭಿಮಾನವು ಜಾಗ್ರೃತ ವಾಗಿ ಅವರ ಲಕ್ಷವು ದೇಶೋನ್ನತಿಯ ಕಡೆಗೆ ಒಲಿಯುವದರಿಂದ ಅವರಿಗೆ ನಿಜ ವಾದ ನಾಗರಿಕತ್ವವು ಪ್ರಾಪ್ತವಾಗುತ್ತದೆ ಇದಕ್ಕಿಂತ ಮಹತ್ವದ ಸಂಗತಿಯು ಯಾವದು?

ನಾಗರಿಕರನ್ನು ತಯಾರಿಸುವದೇ ಇತಿಹಾಸ ಶಿಕ್ಷಣದ ಮುಖ್ಯ ಉದ್ದೇಶ ವಾಗಿರುವದರಿಂದಲೂ, ಈ ಶಿಕ್ಷಣದ ಮೇಲೆಯೇ ವಿದ್ಯಾರ್ಥಿಗಳ ಭಾವೀ ಚಾರಿ ತ್ರ್ಯವು ಬಹಳವಾಗಿ ಅವಲಂಬಿಸಿರುವದರಿಂದಲೂ ಶಿಕ್ಷಕರು ಯೋಗ್ಯವಾದ ಪದ್ಧ ತಿಯಿಂದ ತಮ್ಮ ವಿದ್ಯಾರ್ಥಿಗಳಿಗೆ ಇತಿಹಾಸವನ್ನು ಕಲಿಸತಕ್ಕದ್ದು ಸಾಂಪ್ರತ ಕಾಲಕ್ಕೆ ನಮ್ಮ ರಾಷ್ಟ್ರಕ್ಕೆ ಪ್ರಾಪ್ತವಾದ ಸ್ಥಿತಿಯ ಇತಿಹಾಸ ಅಂದರೆ, ವೇದಕಾಲ ದಿಂದ ಇಂದಿನ ವರೆಗೆ ಸಂಭವಿಸಿದ ಸಂಗತಿಗಳು, ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿ ದು, ಅವರಲ್ಲಿ ನಿಜವಾದ ನಾಗರಿಕತ್ವದ ಉದಯವಾಗಿ, ದೇಶದ ಸಂಬಂಧದಿಂದ ಲೂ ಸಾಮ್ರಾಜ್ಯದ ಸಂಬಂಧದಿಂದಲೂ ಮಾಡತಕ್ಕ ಕರ್ತವ್ಯಗಳ ಸ್ಫೂರ್ತಿಯ ನ್ನುಂಟುಮಾಡಿ, ಅವರನ್ನು ಉತ್ತಮ ನಾಗರಿಕ ಪದಕ್ಕೆ ತಕ್ಕವರನ್ನಾಗಿ ಮಾಡುವ ದೇ ನಮ್ಮ ಶಿಕ್ಷಣದ ಅಂತಿಮಧ್ಯೇಯವಾಗಿರಬೇಕು

ಸಭ್ಯಾಚರಣೆ

(ಲೇಖಕ— ರಾಘವೇಂದ್ರ ಕೃಷ್ಣರಾವ ಕುಲಕರ್ಣಿ)

ಮನುಷ್ಯನು ಸಮಾಜವನ್ನು ಮಾಡಿಕೊಂಡು ವಾಸಿಸುವ ಪ್ರಾಣಿಯು. ಏ ಕಾಂತ ವಾಸವು ಸೇರುವ ಮನುಷ್ಯನನ್ನು ಎಲ್ಲಿಯಾದರೂ ಕ್ವಚಿತ್ತಾಗಿ ಕಾಣಬ ಹುದು. ಆದರೆ ಪ್ರಪಂಚವನ್ನು ಮಾಡಿಕೊಂಡು ಜೀವಿಸುವ ಜನರು, ಲೋಕಸಂ

ಗ್ರವನ್ನು ಮಾಡಲಿಕ್ಕೇ ಬೇಕು. ಪರರ ಸಂಗಡ ನಡೆಯುವ ಪ್ರಸಂಗವು ಒದಗಿದಾಗ, ಮಾತಿನಿಂದಾಗಲಿ, ವರ್ತನದಿಂದಾಗಲಿ ಅವರ ಮನಸ್ಸನ್ನು ನೋಯಿಸಬಾರದು. ಆ ಮನುಷ್ಯನ ಮನಸ್ಸಿನಲ್ಲಿ ಇನ್ನೊಮ್ಮೆ ಸಮಾಗಮವನ್ನು ಹೊಂದಬೇಕೆಂಬ ಅಪೇಕ್ಷೆಯು ದೃಢವಾಗಿ ಉಳಿಯುವಂತೆ, ಅವನ ಕೂಡ ವರ್ತನವನ್ನು ಇಡಲಿಕ್ಕೂ ಮಾತಾಡಲಿಕ್ಕೂ ಕಲಿಯತಕ್ಕದ್ದು. ಒಮ್ಮೆ ನಮ್ಮ ಅಸಭ್ಯಾಚರಣೆಯಿಂದ ನೊಂದುಕೊಂಡ ಮನುಷ್ಯನ ಪ್ರೇಮವಿಶ್ವಾಸಗಳನ್ನು ಪುನಃ ಸಂಪಾದಿಸುವದು ಬಹಳ ಕಷ್ಟವು ಜನರ ಸಂಗಡ ದಾಕ್ಷಿಣ್ಯದಿಂದಲೂ ಮರ್ಯಾದೆಯಿಂದಲೂ ನಡೆಯುವದು ಬಹಳ ಕಠಿಣವಾಗುವದು. ಇದು ಎಲ್ಲರಿಗೂ ಸಾಧಿಸುವದಿಲ್ಲ. ಕೇವಲ ನಮ್ಮ ಮಾತುಗಳಿಂದಲೇ ಜನರ ಮನಸ್ಸಿನಲ್ಲಿ, ನಮ್ಮ ವಿಷಯವಾಗಿ ಪ್ರತಿಕೂಲಗ್ರಹವು ಉತ್ಪನ್ನವಾಗುವದೆಂತಲ್ಲ, ಆದರೆ ಮುದ್ರೆ, ಹಾವಭಾವ, ಮಾತಾಡುವ ಪದ್ಧತಿ, ಉಚ್ಚನೀಚ ಸ್ವರ ಈ ಮೊದಲಾದವುಗಳಿಂದಲೂ ನಮ್ಮ ಮನೋಗತವು ಹೊರಬೀಳುವದು.

ಪ್ರಾಚೀನಕಾಲದಲ್ಲಿ ನಮ್ಮ ದೇಶದ ತರುಣ ವಿದ್ಯಾರ್ಥಿಗಳಿಗೆ ಸಭ್ಯತನದ ಶಿಕ್ಷಣವು ಬಹಳ ಚನ್ನಾಗಿ ದೊರಕುತ್ತಿತ್ತು. ಯಾಕಂದರೆ ಆ ಕಾಲಕ್ಕೆ ತಪಶ್ಚರ್ಯದಿಂದ ತಮ್ಮ ಇಂದ್ರಿಯಗಳನ್ನೂ ಮನಸ್ಸನ್ನೂ ಆಧೀನ ಪಡಿಸಿಕೊಂಡ ಗುರುಗಳ ಮನೆಯಲ್ಲಿಯೇ ವಿದ್ಯಾರ್ಥಿಗಳು ಹನ್ನೆರಡು ವರುಷಗಳ ವರೆಗೆ ಇರಬೇಕಾಗುತ್ತಿತ್ತು. ಅದರಿಂದ ಆ ಗುರುಗಳ ಸಭ್ಯತನದ ಆಚರಣೆಯ ಅವಲೋಕನದ ಲಾಭವು ವಿದ್ಯಾರ್ಥಿಗಳಿಗೆ ಸತತವಾಗಿ ಹನ್ನೆರಡು ವರುಷಗಟ್ಟಲೆ ಸಿಗುತ್ತಿದ್ದದರಿಂದ ಅವರು ಸಹ ತಮ್ಮ ಗುರುಗಳಂತೆಯೇ ಆಗಿ ಹೋಗುತ್ತಿದ್ದರು. ಈ ಬಗ್ಗೆ ಲಾಕ್ ನೆಂಬ ಒಬ್ಬ ಇಂಗ್ಲೀಷ ಗ್ರಂಥಕಾರನು ತನ್ನದೊಂದು ಶಿಕ್ಷಣ ವಿಷಯಕವಾದ ಪುಸ್ತಕದಲ್ಲಿ ಅಂದದ್ದೇನಂದರೆ:—“ ಮಾರ್ಗದರ್ಶಕ ಗುರುವು ಸ್ವತಃ ಅನೇಕ ಒಳ್ಳೇ ಜನರ ಸಮೂಹದಲ್ಲಿ ಬೆಳೆದವನಾಗಿರಬೇಕು.” ಅವನಿಗೆ ನಡಾವಳಿಯ ಎಲ್ಲ ತರದ ಒಳ್ಳೇ ಪದ್ಧತಿಗಳೂ ಸಭ್ಯತನದ ತಾರತಮ್ಯಗಳೂ ಅಂದರೆ ಬೇರೆ ಬೇರೆ ವ್ಯಕ್ತಿಗಳ ಸಂಗಡ ಬೇರೆ ಬೇರೆ ಪ್ರಸಂಗಗಳಲ್ಲಿ ಬೇರೆ ಬೇರೆ ಸ್ಥಳಗಲ್ಲಿ ನಡೆಯುವ ರೀತಿಗಳೆಲ್ಲ ಗೊತ್ತಿರಲಿಕ್ಕೆ ಬೇಕು. ಮತ್ತು ಒಳ್ಳೇ ನಡತೆಯ ಈ ಎಲ್ಲ ಪ್ರಕಾರಗಳು. ಅನೇಕ ಸಾರೆ ವಿದ್ಯಾರ್ಥಿಗಳ ದೃಷ್ಟಿಗೆ ಬೀಳುವಂತೆ ಅವನು ತಕ್ಕ ಯೋಜನೆಗಳನ್ನು ಮಾಡಲಿಕ್ಕೆ ಬೇಕು. ಸಭ್ಯಾಚರಣೆಯು, ಜನರ ಚಿತ್ತಾಕರ್ಷಣ ಮಾಡುವದೊಂದು ಕಲೆಯು. ಈ ಕಲೆಯ ಶಿಕ್ಷಣವನ್ನು ಪುಸ್ತಕಗಳ ಸಹಾಯದಿಂದ ಕೊಡದೆ, ಸತ್ಸಮಾಗಮ, ಅವಲೋಕನ ಈ ಎರಡೂ ಸಾಧನಗಳಿಂದ ಕೊಡತಕ್ಕದ್ದು. ಮುಂಚಿನ ಕಾ

ಲದ ನಮ್ಮ ತಪೋವನದ ವಿದ್ಯಾಲಯಗಳು ಎಷ್ಟು ಉಪಯುಕ್ತವಾದವುಗಳಿದ್ದವು ನೋಡಿರಿ! ಆ ವಿದ್ಯಾಲಯದ ಗುರುಗಳಿಗೆ ಶ್ರೀಮದ್ಭಗವದ್ಗೀತೆಯ ೧೭ನೇ ಅಧ್ಯಾಯದಲ್ಲಿ ಹೇಳಿದ ಪ್ರಕಾರ ಶಾರೀರ, ವಾಙ್ಮಯ, ಮಾನಸ ಈ ಮೂರು ಪ್ರಕಾರದ ತಪಶ್ಚರ್ಯದ ಸತ್ಪ್ರಯೋಗವಾದ ಪಾಠಗಳನ್ನು ಕೊಡಲಿಕ್ಕೆ ಎಷ್ಟೋ ಪ್ರಸಂಗಗಳು ದೊರಕುತ್ತಿದ್ದವು. ಆ ತ್ರಿವಿಧ ತಪಶ್ಚರ್ಯಗಳನ್ನು ವಿವರಿಸುವ ಶ್ಲೋಕಗಳನ್ನು ಆಧುನಿಕ ವಿದ್ಯಾರ್ಥಿಗಳು ಮುಖೋದ್ಗತವಾಗಿ ಕಲಿತು ಅವುಗಳಲ್ಲಿ ಹೇಳಿದಂತೆ ಆಚರಿಸಲಿಕ್ಕೆ ಯಾವಾಗಲೂ ಯತ್ನಮಾಡುತ್ತಿರಬೇಕು. ಆ ಶ್ಲೋಕಗಳು:--

	देवद्विज गुरु प्राज्ञ पूजनं शौचमार्जवं	
	ब्रम्हचर्यमहिंसाच शारीरं तप उच्यते ||१|
	अनुद्वेग करं वाक्यं सत्यंप्रिय हितंचयत्	
	स्वाध्यायाभ्यसनं चैव वाङ्मयं तप उच्यते ||२|
	मनः प्रसादः सौम्यत्वं मौन मात्म विनिग्रहः	
	भाव संशुध्धिरित्येतत् तपो मान समुच्यते ||३|

ಈ ಮೂರು ಶ್ಲೋಕಗಳಲ್ಲಿ ಸಭ್ಯಾಚರಣೆಯ ಎಲ್ಲ ಮೂಲತತ್ವಗಳು ಸಮಾವಿಷ್ಟವಾಗಿರುವವೆಂದು ಹೇಳಬಹುದು.

ಪರರ ಮನಸ್ಸು ನೋಯದಂತೆ ನಡೆಯುವದೂ ಮಾತಾಡುವದೂ ಸಭ್ಯಾಚರಣೆಯೆಂದು ಹಿಂದೆ ಹೇಳಿದ್ದಾಯಿತು. ಅದಕ್ಕೆ ಕೆಲವರು, ಇದು ಪರ್ಯಾಯದಿಂದ ಅನೀತಿಯಾಗುವದಿಲ್ಲವೋ? ಸತ್ಯವಾದದ್ದನ್ನು ಸ್ಪಷ್ಟವಾಗಿ ನುಡಿಯದಿದ್ದರೆ, ಅಪ್ರತ್ಯಕ್ಷ ರೀತಿಯಿಂದ ಅನೀತಿಗೆ ಉತ್ತೇಜನ ಕೊಟ್ಟಂತಾಗುವದಿಲ್ಲವೋ? ಸತ್ಯ, ನಿರ್ದಾಕ್ಷಿಣ್ಯ, ನಿಷ್ಕಪಟಭಾವ ಇವುಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟು, ಮನುಷ್ಯನು ಮೋರೆಯ ಇಚ್ಛೆಗೆ ಮಾತಾಡುವವನೂ, ಡಾಂಭಿಕನೂ ಆದರೆ ಸಭ್ಯಾಚರಣೆಯೋ? ಎಂದು ಪ್ರಶ್ನೆಗಳನ್ನು ಕೇಳಬಹುದು. ಅವರ ಮಾತು ಒಪ್ಪಿಕೊಳ್ಳತಕ್ಕದ್ದೇ ಸರಿ. ಮಂದಿಯ ಮನಸ್ಸನ್ನು ಮೆಚ್ಚಿಸುವದಕ್ಕಾಗಿ ಅಸತ್ಯವನ್ನು ನುಡಿಯುವದು ಸಭ್ಯತನವು ಅಲ್ಲವೇ ಅಲ್ಲ. ಆದರೆ ಸತ್ಯವಾದದ್ದನ್ನು ಹಿತಬುದ್ಧಿಯಿಂದ ಮನಸ್ಸು ನೋಯದಂತೆ ಹೇಳಬೇಕು. ಹಿತಬುದ್ಧಿಯಿಲ್ಲದೆ ಕೇವಲ ಮನಸ್ಸು ನೋಯುವಂತೆ ಸತ್ಯವನ್ನು ನುಡಿಯುವದಕ್ಕಿಂತ ಸುಮ್ಮನಿರುವದು ಇಲ್ಲವೆ "ಲೋಕದೊಳಗವರಪರ ತೆರದಿ ನಡೆವವ ಜಾಣ"ನೆಂಬಂತೆ ಔದಾಸೀನ್ಯದಿಂದ ಅವರವರ ಮಾತಿಗೆ ಸಮ್ಮತಿ ಪಡುವದು ಹಿತಕರವು.

ಸಮಾಜದ ನಿಜವಾದ ಸುಧಾರಣೆಯನ್ನು ಮಾಡಲಿಚ್ಛಿಸುವ ಮನುಷ್ಯನು ತನ್ನ ಖಂಡಿತವಾದ ಅಭಿಪ್ರಾಯಗಳನ್ನು ಹೇಳುವಲ್ಲಿ' ಜನರಮನಸ್ಸು ನೊಂದೀತು ಬೆಂದೀತು ಎಂಬದನ್ನು ಲೆಕ್ಕಿಸುವದಿಲ್ಲ. ಈ ಭೇದಕ ಲಕ್ಷಣದಿಂದಲೇ ಅವನು ನಿಜವಾದ ಸುಧಾರಣೆಯನ್ನು ಅಪೇಕ್ಷಿಸುವ ಕಳಕಳಿಯ ವ್ಯಕ್ತಿಎಂದು ತಿಳಿಯತಕ್ಕದ್ದು. ತನಗೆ ಯಾವಜನರ ಸಮಾಗಮವು ಪ್ರಾಪ್ತವಾಗುವದೋ ಅವರು ತನ್ನ ಮಾತನ್ನು ಸಂಪೂರ್ಣವಾಗಿ ಕೇಳಿಕೊಳ್ಳಬೇಕು. ಈ ಪ್ರಕಾರ ವಿಚಾರಗಳ ವಿನಿಮಯವಾಗಿ ಅದರಿಂದ ಯೋಗ್ಯಸುಧಾರಣೆಯಾಗಬೇಕು ಈ ಸದ್ದೇಶಗಳಿಲ್ಲದ ಮನುಷ್ಯನು, ಸಭ್ಯಾಚಾರಸಂಪನ್ನ ನೆಂದುಹೇಳಲಿಕ್ಕಾಗುವದಿಲ್ಲ. ಹೊತ್ತುಬಂದಂತೆ ಕೊಡೆಹಿಡಿಯುವದು ಅಸಭ್ಯತನವೆಂದು ತಿಳಿಯತಕ್ಕದ್ದು. (ಸಶೇಷ)

ಕರ್ನಾಟಕ ಇತಿಹಾಸ ಮಂಡಲ ಧಾರವಾಡ.

ವೆಂಕಟೇಶ ಭೀಮರಾವ ಆಲೂರ ಇವರ ಕಡೆಯಿಂದ:—

* ನಮಸ್ಕಾರ ವಿ. ವಿ. ತರುವಾಯ,

" ನಿಮ್ಮ ಪತ್ರ ತಲ್ಪಿ ಆನಂದವಾಯಿತು. ಮಂಡಲಕ್ಕಾಗಿ ನೀವು ಕಳಿಸಿದ ೧ ರುಪಾಯಿ ಮುಟ್ಟಿತು. ನೀವು ಇಷ್ಟು ಉತ್ಸಾಹದಿಂದಲೂ ಅಭಿಮಾನದಿಂದಲೂ ಗ್ರಂಥಾಲಯವನ್ನು ನಡೆಯಿಸಿದ್ದನ್ನು ನೋಡಿ ಯಾವ ಕನ್ನಡಿಗನಿಗೆ ಆನಂದವಾಗಲಿಕ್ಕಿಲ್ಲ? ನಿಜವಾಗಿ ನೀವು ಕನ್ನಡಿಗರಿಗೆ ಮೇಲ ಪಂಕ್ತಿಯನ್ನು ಹಾಕಿ ಕೊಟ್ಟಿರುವಿರಿ. ಹೀಗೆಯೇ ನಿಮ್ಮ ಗ್ರಂಥಾಲಯವು ಬೆಳೆದು ಕನ್ನಡ ಭಾಷಾ ಸೇವೆಯನ್ನು ಮಾಡಲೆಂದು ಮನಃಪೂರ್ವಕವಾಗಿ ಆಶಿಸುತ್ತೇನೆ.

" ನನ್ನ ಮನಸಿನಲ್ಲಿ ಕರ್ನಾಟಕದಲ್ಲಿ ಕನಿಷ್ಟ ಪಕ್ಷಕ್ಕೆ ಒಂದು ನೂರು ವಾಚನಾಲಯಗಳನ್ನು ಸ್ಥಾಪಿಸಿ, ಅವುಗಳನ್ನು ಏಕ ಸೂತ್ರ ಬದ್ಧವಾಗಿ ಮಾಡಬೇಕೆಂದು ಸಂಪೂರ್ಣ ಇಚ್ಛೆಯದೆ. ಹಾಗೆ ನಾವು ಮಾಡಿದರೆ ಮುಂದೆ ಅನೇಕ ಕಾರ್ಯಗಳನ್ನು ಮಾಡಲಿಕ್ಕೆ ಅನುಕೂಲವಾಗುವಂತಿದೆ. ಆದ್ದರಿಂದ, ಕರ್ನಾಟಕಸಭೆಯೆಂಬ ಮಧ್ಯವರ್ತಿ ಸಭೆಯು ಇಲ್ಲಿ ಸ್ಥಾಪನವಾಗಿದ್ದು, ಅವುಗಳ ನಿಯಮಗಳನ್ನು ನಿಮ್ಮ

ಕಡೆಗೆ ರವಾನಿಸಿದ್ದೇವೆ. ಆ ನಿಯಮಗಳಲ್ಲಿ ವಾಚನಾಲಯಗಳ ಸಂಬಂಧದ ನಿಯಮಗಳನ್ನು ನೀವು ಓದಿಕೊಂಡು, ಆ ಪ್ರಕಾರ ಕರ್ನಾಟಕ ಸಭೆಗೆ ಇಂದಿಲ್ಲ ನಾಳೆ ಯಾದರೂ ಗ್ರಂಥಾಲಯವನ್ನು ಅಧೀನವನ್ನಾಗಿ ಮಾಡಬೇಕೆಂದು ನನ್ನ ಇಚ್ಛೆಯದೆ. ಆ ವಿಷಯವಾಗಿ ನೀವು ಏನಾದರೂ ಕೇಳತಕ್ಕದ್ದಿದ್ದರೆ ಕೇಳಬೇಕು ಒಮ್ಮೆಲೇ ನಿಮ್ಮ ಗ್ರಂಥಾಲಯವನ್ನು ಸಭೆಗೆ ಅಧೀನ ಮಾಡಬೇಕೆಂದು ನನ್ನ ಅಭಿಪ್ರಾಯವಿಲ್ಲ. ಯಾಕಂದರೆ, ಅದರ ವಿಷಯವಾಗಿ ಇನ್ನೂ ಕೆಲವು ಸಂಗತಿಗಳು ನಿಶ್ಚಿತವಾಗತಕ್ಕವವೆ. ಮೂಲ ಉದ್ದೇಶವೇನಿರುವದೆಂಬದನ್ನು ಮಾತ್ರ ತಿಳಿಸಿದ್ದೇವೆ.

" ನೀವು ಕೊಟ್ಟ ಈ ಒಂದು ರುಪಾಯಿಯ ಬೆಲೆಯು ಒಂದು ಸಾವಿರ ರುಪಾಯಿಗಳ ಬೆಲೆಯಷ್ಟಿದೆ. ಯಾಕಂದರೆ, ನಿಮ್ಮಂತೆ ಪ್ರೇಮಪೂರ್ವಕವಾಗಿ ಹಣವನ್ನು ಕಳಿಸುವವರು ತೀರ ಕಡಿಮೆ ಹೀಗೆ ಬಂದ ಹಣವೇ ನಿಜವಾಗಿ ಫಲಪ್ರದವಾಗುವದು. ನಾವು ಇತಿಹಾಸ ಮಂಡಲದ ಸಂಬಂಧದಿಂದ ಇನ್ನೂ ಸಾರ್ವಜನಿಕ ರೀತಿಯಿಂದ ಕೈಲಾದ ಮಟ್ಟಿಗೆ ಕೆಲಸ ಮಾಡಹತ್ತಿದ್ದೇವೆ. ನನ್ನ ಮನಸಿನಲ್ಲಿ ಮಂಡಲದ ವತಿಯಿಂದ ಒಂದು ತ್ರೈಮಾಸಿಕವನ್ನು ಹೊರಡಿಸಬೇಕೆಂದು ಅದೆ. ಆ ಪ್ರಯತ್ನದಲ್ಲಿಯೇ ಇದ್ದೇನೆ. ಆದರೆ ಜನರ ಬೆಂಬಲವು ದೊರೆಯುವದೋ ಇಲ್ಲವೋ ಎಂದು ಶಂಕಿತನಾಗಿದ್ದೇನೆ. ಅದನ್ನು ತೆಗೆಯುವದು ನಿಶ್ಚಿತವಾದರೆ ನಿಮಗೆ ತಿಳಿಸುವೆನು.

" ಹಿಂದಿನಂತೆಯೇ ನನ್ನಮೇಲೆ ಪ್ರೇಮವಿಡಬೇಕೆಂದು ಬೇರೆ ಹೇಳಬೇಕಾಗಿಲ್ಲ."

ಧಾರವಾಡ,
ತಾ|| ೮-೬-೧೯.

ತಮ್ಮ
ವೆಂಕಟೇಶ ಭೀಮರಾವ ಆಲೂರ,
B. A. LL. B.

ಯಂತ್ರಗಳೂ, ಯಾಂತ್ರಿಕಲಾಭವೂ.

(ಕ್ರಮಿಕ ೭ನೇ ಪುಸ್ತಕದಲ್ಲಿಯ ೭೭ನೇ ಪಾಠವು.)

ಯಂತ್ರಶಾಸ್ತ್ರವು ಪದಾರ್ಥ ವಿಜ್ಞಾನ ಶಾಸ್ತ್ರದ ಒಂದು ಭಾಗವಾಗಿರುವದು. ನಾವು ವ್ಯವಹಾರದಲ್ಲಿ ನಮ್ಮ ಕೆಲಸಗಳ ಅನುಕೂಲತೆಯ ಸಲುವಾಗಿ ಹಲವುತರದ

ಮುದ್ದೇಬಿಹಾಳ ವಿದ್ಯಾರ್ಥಿಗಳ ಗ್ರಂಥಾಲಯಕ್ಕೆ ಪ್ರತ್ಯುತ್ತರವಾಗಿ ಬರೆಯಲ್ಪಟ್ಟ ಈ ಪತ್ರವು ಭಾಷಾಭಿಮಾನಿಗಳಿಗೂ, ಶಿಕ್ಷಕರಿಗೂ, ಪ್ರೌಢವಿದ್ಯಾರ್ಥಿಗಳಿಗೂ ಮನನೀಯವಾಗಿರುವದರಿಂದ ಆ ಗ್ರಂಥಾಲಯದ ಉಪ-ಕಾರ್ಯದರ್ಶಿಗಳಾದ ಮಿ|| ದೇಸಾಯಿಯವರ ವಿನಂತಿಯ ಮೇರೆಗೆ ಇದನ್ನು ಪ್ರಸಿದ್ಧಿಸಿದ್ದೇವ

ಸಾಧನೆಗಳನ್ನು ಉಪಯೋಗಿಸುತ್ತೇವೆ ಆ ಎಲ್ಲ ಸಾಧನಗಳಿಗೆ ಯಂತ್ರಗಳೆಂಬ ಹೆಸರು. ನಾವು ಉಪಯೋಗಿಸಿಕೊಳ್ಳುವ ಸಾಧನಗಳು ಕೆಲವು ಮೂಲ ಭೂತವಾದ ಯಂತ್ರಗಳನ್ನು ಅವಲಂಬಿಸಿರುತ್ತವೆ. ಅವು ಯಾವವೆಂದರೆ— ಸೊನ್ನೆ, ಗಾಲಿಯು ಅಚ್ಚು ಗಡಗಡೆ, ಇಳುಕಲು, ಬೆಣೆ, ಮಲಸೂತ್ರ. ಈ ಎಲ್ಲ ಮೂಲಯಂತ್ರಗಳ ಬಗ್ಗೆ ಐದನೇ ಮತ್ತು ಆರನೇ ಪುಸ್ತಕಗಳಲ್ಲಿ ಹಲವು ಪಾಠಗಳು ಬಂದಿರುವವು. ಪ್ರಸ್ತುತ ಪಾಠದ ಆರಂಭದಲ್ಲಿ ಯಂತ್ರವೆಂದರೇನು ? ಎಂಬದನ್ನು ಸಿದ್ಧಮಾಡುವದಕ್ಕಾಗಿ ಮೂರು ಪ್ಯಾರಾಗಳನ್ನು ಕೊಟ್ಟಿರುತ್ತದೆ. ನಮ್ಮ ದೃಷ್ಟಿಯಿಂದ ಸೊನ್ನೆ ಗಡಗಡೆ ಮುಂತಾದ ಪಾಠಗಳನ್ನು ಕಲಿಸುವದಕ್ಕಿಂತ ಪೂರ್ವದಲ್ಲಿ ಯಂತ್ರವೆಂದರೇನೆಂಬದನ್ನು ವಿಚಾರ ಮಾಡುವದುಚಿತವು. ಈ ಪಾಠದಲ್ಲಿ ಹುಡುಗರ ಮನಸ್ಸಿನಲ್ಲಿ ಬಿಂಬಿಸುವಂಥ ನಾಲ್ಕು ಸಂಗತಿಗಳು ಇರುವವು. ಅವು:—(೧) ಯಂತ್ರದ ವ್ಯಾಖ್ಯೆ, (೨) ಯಾಂತ್ರಿಕಲಾಭವು. (೩) ಯಂತ್ರಗಳಿಂದ ನಮಗೆ ನಿಜವಾದ ಲಾಭವಾಗುವದಿಲ್ಲ. (೪) ಆರು ಮೂಲಯಂತ್ರಗಳು ನಿಜವಾಗಿ ಎರಡು ಯಂತ್ರಗಳ ರೂಪಾಂತರವು

(೧) ವ್ಯವಹಾರದಲ್ಲಿ ನಾವು ನಿತ್ಯಶಃ ಕೆಲಸಗಳನ್ನು ಮಾಡುವಾಗ ಅನೇಕ ಪ್ರಕಾರದ ಸಾಧನಗಳನ್ನು ಉಪಯೋಗಿಸುತ್ತೇವೆ. ಕೆಲವುಸಾರೆ ಆ ಸಾಧನಗಳಿಂದ ಸ್ವಲ್ಪ ಶಕ್ತಿಯಿಂದ ಹೆಚ್ಚು ಕೆಲಸವಾದಂತೆ ನಮಗೆ ಕಾಣುವದು. ಕೆಲವುಸಾರೆ ಮಾಡತಕ್ಕ ಕೆಲಸದಷ್ಟೇ ಶಕ್ತಿಯು ಬೇಕಾಗುವದು. ಕೆಲವುಸಾರೆಯಂತೂ, ಮಾಡತಕ್ಕ ಕೆಲಸಕ್ಕಿಂತಲೂ ಹೆಚ್ಚು ಶಕ್ತಿಯನ್ನು ಉಪಯೋಗಿಸಬೇಕಾಗುವದು. ಇಂಥ ಪ್ರಸಂಗದಲ್ಲಿ ಯಂತ್ರವನ್ನು ಉಪಯೋಗಿಸುವ ಪ್ರಯೋಜನವೇನಂದರೆ— ಅನುಕೂಲತೆಯು; ಈ ಮಾತು ಕೆಳಗಿನ ಉದಾಹರಣೆಗಳಿಂದ ಸ್ಪಷ್ಟವಾಗುವದು. ಒಬ್ಬ ಮನುಷ್ಯನ ಶಕ್ತಿಮೀರಿ ಇದ್ದಂಥ ಕಲ್ಲನ್ನು ಎತ್ತುವಾಗ ನಾವು ಕಬ್ಬಿಣದಹಾರಿಯನ್ನು ಉಪಯೋಗಿಸುತ್ತೇವೆ ಅದೇ ಯಂತ್ರವು. ಇಲ್ಲಿ ಈ ಯಂತ್ರದ ಸಹಾಯದಿಂದ ಸ್ವಲ್ಪ ಶಕ್ತಿಯಿಂದ ಹೆಚ್ಚು ಕೆಲಸ ಮಾಡಿಕೊಂಡಂತಾಗುತ್ತದೆ ಗಡಗಡಿಯ ಸಹಾಯದಿಂದ ಬಾವಿಯಿಂದ ನೀರನ್ನು ಜಗ್ಗಬೇಕಾದರೆ, ಕೊಡದ ಭಾರದಷ್ಟೇ ಶಕ್ತಿ ಬೇಕಾಗುತ್ತದೆ. ಆದರೆ ಒಂದು ಬೆಂಕಿಯ ಕೆಂಡವನ್ನು ಎತ್ತಬೇಕಾದರೆ, ನಾವು ಚಿಮುಟಿಗೆಯನ್ನು ಉಪಯೋಗಿಸುತ್ತೇವೆ, ಇದಾದರೂ ಯಂತ್ರವೇಸರಿ. ಆದರೆ ಇಲ್ಲಿ ಉಪಯೋಗಿಸುವ ಶಕ್ತಿಯು ಮಾಡಲ್ಪಡುವ ಕೆಲಸಕ್ಕಿಂತ ಹೆಚ್ಚಾಗಿರುತ್ತದೆ. ಇದರಿಂದ ಸ್ವಲ್ಪ ಶಕ್ತಿಯಿಂದ ಹೆಚ್ಚು ಕೆಲಸ ಮಾಡುವದೊಂದೇಯಂತ್ರದ ಮುಖ್ಯೋದ್ದೇಶವಿರುತ್ತದೆಂಬು ಹೇಳಲಿಕ್ಕೆ ಬರುವದಿಲ್ಲ. ಯಾಕಂದರೆ— ಒಮ್ಮೊಮ್ಮೆ ಬರೇ ಅನುಕೂಲತೆಯ ಸಲುವಾಗಿ ಯಂತ್ರಗಳ ಅವಶ್ಯಕತೆ ಇರುವದು. ಕೆಲವು ಯಂತ್ರಗಳಲ್ಲಿ ಈ ಎ

ರಡೂ ಉದ್ದೇಶಗಳು ಕೊನೆಗಾಣುವವು ಕೆಲವು ಯಂತ್ರಗಳಲ್ಲಿ ಯಾವಪ್ರಕಾರದ ಲಾಭವಾಗದೆ, ಯಂತ್ರದಿಂದ ಆ ಕೆಲಸವನ್ನು ಮಾಡಿಕೊಳ್ಳಲಿಕ್ಕೆ ಬರೇ ಅನುಕೂಲತೆ ಮಾತ್ರ ಉಂಟಾಗುವದು ಈ ಕಾರಣದಿಂದ ಈ ಪಾಠದಲ್ಲಿ ಕೊಟ್ಟ ಯಂತ್ರ ಶಬ್ದದ ವ್ಯಾಖ್ಯೆಯಲ್ಲಿ 'ಲಾಭಕರವಾಗುಂತೆ' ಈ ಶಬ್ದವನ್ನು ತೆಗೆದುಹಾಕುವದು ಉಚಿತವೆಂದು ನಮಗೆ ತೋರುತ್ತದೆ.

(೨) ಯಂತ್ರ ಶಾಸ್ತ್ರದಲ್ಲಿ ಮಾಡತಕ್ಕ ಕೆಲಸಕ್ಕೆ ಭಾರವೆಂತಲೂ, ಉಪಯೋಗಿಸಲ್ಪಡುವ ಸಾಮರ್ಥ್ಯಕ್ಕೆ ಶಕ್ತಿಯೆಂತಲೂ, ಅನ್ನುವ ಪರಿಪಾಠ ಉಂಟು. ಒಂದು ಯಂತ್ರದಲ್ಲಿ ಉಪಯೋಗಿಸಲ್ಪಡುವ ಶಕ್ತಿಗಿಂತ ಎತ್ತಲ್ಪಟ್ಟ ಭಾರದ ಪ್ರಮಾಣವು ಹೆಚ್ಚಾದರೆ, ಆ ಯಂತ್ರದಿಂದ ಲಾಭವಾಗುತ್ತದೆಂದು ನಾವು ಅನ್ನುತ್ತೇವೆ ಭಾರದಷ್ಟೇ ಶಕ್ತಿಬೇಕಾದಾಗ ಆ ಯಂತ್ರದಿಂದ ಲಾಭವೂ ಆಗುವದಿಲ್ಲ. ಹಾನಿಯೂ ಆಗುವದಿಲ್ಲವೆಂದು ತಿಳಿದು ಕೊಳ್ಳುತ್ತೇವೆ. ಶಕ್ತಿಯ ಪ್ರಮಾಣವು ಭಾರಕ್ಕಿಂತ ಹೆಚ್ಚಿದ್ದರೆ, ಅಂಥ ಯಂತ್ರದಿಂದ ಹಾನಿಯಾಗುತ್ತದೆಂದು ತಿಳಿಯುತ್ತೇವೆ ಹಾಗಾದರೆ, ಭಾರ, ಶಕ್ತಿ ಇವುಗಳ ಪ್ರಮಾಣದಿಂದ ಯಂತ್ರದಿಂದ ಲಾಭವಾಗುವದೋ, ಹಾನಿಯಾಗುದೋ ಎಂಬದನ್ನು ಗೊತ್ತು ಮಾಡಲಿಕ್ಕೆ ಬರುವದು. ಹೇಗಂದರೆ— $\frac{\text{ಭಾರ}}{\text{ಶಕ್ತಿ}}$ ಈ ಅಪೂರ್ಣಾಂಕದ ಬೇರಿಜು ಒಂದಕ್ಕಿಂತ ಹೆಚ್ಚಾದರೆ, ಆ ಯಂತ್ರದಿಂದ ಯಾಂತ್ರಿಕ ಲಾಭವಾಗುತ್ತದೆಂದೂ, ಅದರ ಬೆಲೆಯು ಒಂದಕ್ಕಿಂತ ಕಡಿಮೆಯಾದರೆ, ಯಾಂತ್ರಿಕ ಹಾನಿಯಾಗುತ್ತದೆಂದೂ ತಿಳಿಯತಕ್ಕದ್ದು.

(೩) ಸೂಕ್ಷ್ಮದೃಷ್ಟಿಯಿಂದ ವಿಚಾರಿಸಿದರೆ, ಯಾವ ಯಂತ್ರದಿಂದ ನಿಜವಾದ ಲಾಭವು ಆಗುವದಿಲ್ಲೆಂದು ಕಂಡು ಬರುವದು ಸೊನ್ನೆಯನ್ನು ಉಪಯೋಗಿಸಿದಾಗ ಸ್ವಲ್ಪ ಶಕ್ತಿಯಿಂದ ಹೆಚ್ಚು ಕೆಲಸವಾದಂತೆ ಕಾಣುವದು ಆದರೆ ಅದೇ ಪ್ರಮಾಣದಿಂದ ಶಕ್ತಿಯು ಹೆಚ್ಚು ಅಂತರವನ್ನು ಕ್ರಮಿಸ ಬೇಕಾಗುವದು. ೧೦ ಪೌಂಡು ಶಕ್ತಿಯಿಂದ ೪೦ ಪೌಂಡು ಭಾರವನ್ನು ೧ ಫೂಟು ಭಾರವನ್ನು ಸೊನ್ನೆಯಿಂದ ಎತ್ತಿತೆಂದು ಕಲ್ಪಿಸಿದರೆ, ೧೦ ಪೌಂಡು ಶಕ್ತಿಗೆ ನಾಲ್ಕು ಫೂಟು ಅಂತರವನ್ನು ಕ್ರಮಿಸಬೇಕಾಗುವದು. ಇದರಿಂದ ಬರಿ ತೋರಿಕೆಯಲ್ಲಿ ಲಾಭವಾದಂತೆ ಕಂಡು ಬರುವದೆಂಬದು ಸ್ಪಷ್ಟವಾಗುವದು. ಒಬ್ಬ ಮನುಷ್ಯನಿಗೆ ೧೦೦ ಪೌಂಡು ಭಾರವು ೨೦೦ ಫೂಟು ಎತ್ತರ ಗುಡ್ಡದ ಮೇಲೆ ಒಯ್ಯಬೇಕಾಗಿರುವದೆಂದು ಕಲ್ಪಿಸುವಾ:— ಇಷ್ಟು ಭಾರವನ್ನು ಒಮ್ಮೆಲೇ ವಹಿಸಿಕೊಂಡು ಹೋಗುವದು ಅಸಾಧ್ಯ ವಿದ್ದದರಿಂದ, ಅವನು ಅದ

ರೊಳಗಿನ ೧೦ ಪೌಂಡು ಭಾರವನ್ನು ಮೇಲೆ ಒಯ್ಯುತ್ತಾನೆ. ಮತ್ತೆ ಕೆಳಗೆ ಇಳಿಯುತ್ತಾನೆ. ಎರನೇ ಸಾರೆ ಮತ್ತೆ ೧೦ ಪೌಂಡು ಭಾರವನ್ನು ತೆಗೆದುಕೊಂಡ ಹೋಗುತ್ತಾನೆ ಈ ಪ್ರಕಾರ ೧೦೦ ಪೌಂಡು ಭಾರವನ್ನು ೧೦ ಪೌಂಡು ಶಕ್ತಿಯಿಂದ ಮೇಲೆ ಒಯ್ದಂತೆ ತೋರುವದು. ಆದರೆ ನಿಜವಾಗಿ ನೋಡಿದರೆ, ಅವನು ಹತ್ತುಸಾರೆ ಮೇಲೆ ಕೆಳಗೆ ಓಡಾಡಬೇಕಾಗುವದು. ಇದೇಪ್ರಕಾರ ಸೊನ್ನೆಯಲ್ಲಾದರೂ, ಹೆಚ್ಚು ಅಂತರವನ್ನು ಕ್ರಮಿಸಬೇಕಾಗುವದು. ಆದ್ದರಿಂದ ನಾವು ಶಕ್ತಿಯಲ್ಲಿ ಪಡಕೊಂಡ ಲಾಭವನ್ನು ಅಂತರದಲ್ಲಿ ಕಳೆದು ಕೊಂಡೆವೆಂದು ವ್ಯಕ್ತವಾಗುವದು. ಸೃಷ್ಟಿ ಶಾಸ್ತ್ರದ ಒಂದು ಮೂಲಸಿದ್ಧಾಂತವಾದರೂ ' ಶಕ್ತಿಯು ಹೆಚ್ಚಾಗುವದಿಲ್ಲ. ಕಡಿಮೆಯೂ ಆಗುವದಿಲ್ಲ 'ವೆಂದು ಜಗತ್ತಿಗೆಲ್ಲ ಕೂಗಿ ಸಾರುತ್ತದೆ.

(೪) ಮೂಲ ಯಂತ್ರಗಳ ಸಂಖ್ಯೆಯು ಆರು ಇದ್ದರೂ, ಅವು ಸೊನ್ನೆ ಮತ್ತು ಇಳಕಲು ಈ ಎರಡು ಯಂತ್ರಗಳ ರೂಪಾಂತರವೇ ಆಗಿರವವು. ಗಡಗಡೆಯೂ ಗಾಲಿಯ ಅಚ್ಚೂ ಸೊನ್ನೆಯ ರೂಪಾಂತರವು ಆಗಿರುವವು. ಬೆಣೆಯೂ, ಮಲಸೂತ್ರವೂ ಇಳುಕಲಿನ ರೂಪಾಂತವು ಆಗಿರುವವು. ಈಮಾತು ಆಯಾ ಪಾಠಗಳಲ್ಲಿ ಸಿದ್ಧ ಮಾಡಲ್ಪಟ್ಟದೆ. ಗಡಗಡೆಯು ಸೊನ್ನೆಯ ರೂಪಾಂತರವಾಗಿರುವದರಿಂದ, ಪ್ರಸ್ತುತ ಪಾಠದಲ್ಲಿ ಮಾಡಿದಂತೆ ಯಂತ್ರಗಳಲ್ಲಿ ಮೂರುಭಾಗಗಳನ್ನು ಮಾಡದೆ, ಸೊನ್ನೆ ಇಳುಕಲು ಎಂಬ ಎರಡೇ ಭಾಗಗಳನ್ನು ಮಾಡುವದುಚಿತವೆಂದು ನಮಗೆ ತೊರುತ್ತದೆ.

N. V. Kolhatkar.
B. A.

ಗ್ರಾಮ್ಯಜನ ವರ್ಣನೆ.

೧. ಹಳ್ಳಿಯ ಶಿಕ್ಷಕ.

ಕಂದ॥ ಅರ್ಜಿಯನೆಂದುಂ ಮಾಡರು ।
ಮರ್ಜಿಯ ಕಾಯ್ವಂಗೆ ರೈತರೆಲ್ಲರು ನಿಜದಿಂ ॥
ಆರ್ಜವ ನೀಂ ಮಾಡೆನ್ನುತ ।
ಗರ್ಜಿಸುವಮಾಸ್ತರಂಗೆ ಹಳ್ಳಿಯ ಜನರು ॥೧॥

ಕವನವ ತಿಗೆಯದಿರೆನ್ನೊಳ್ ।
ಮುದದಿಂದಲಿ ಕಲಿಸೊ! ನಮ್ಮ ಹುಡುಗರಿಗೆಲ್ಲ ॥
ಸದನಕೆ ಬಾರೆಂದೆನ್ನುತ ।
ಬೆದರಿಸುವರ್ಕೆಲವು ಗೌಡ ಕುಲಕರ್ಣಿಯರು ॥೨॥

ಕುಲಕರ್ಣಿಮಗನು ಸಾಲೆಯ । ।
ಒಳೆ ಸರಸದಿ ಕಲಿಯೆ, ಗೌಡ ಕೋಪಿಸದಿರನು ॥
ಬಲು ಕಷ್ಟ, ಗೌಡ ಮಗನಿಗೆ ।
ಕಲಿಸುವದಾ ಮಾಸ್ತರಂಗೆ, ಹಳ್ಳಿಯ ಮಠದೊಳ್ ॥೩॥

ಹಗಲಿರುಳು ಸಾಲೆ ಹಾಕುತ ।
ಮುಗಿಯುತೆ ಕಂಡಲ್ಲಿ ಕರವನೆಲ್ಲಾ ಜನಕೆ ॥
ನಗೆದೋರಲವರ ಮಾತಿಗೆ ।
ಮಿಗೆ ಮೆಚ್ಚುವರವನ ಗುಣಕೆ ಹಳ್ಳಿಯ ಜನರು ॥೪॥

ಬಂದವರ ಮೇಲೆ ಕರೆಯುತ ।
ಚಂದಾಗಿಹ ಕಥೆಯ ಪೇಳಿ ರಂಜಿಸುತವರಂ ॥
ತಂದವರ ಕೈಗೆ ಬತ್ತಿಯ ।
ನೊಂದನು ಸೇದಲ್ಕೆ ಕೊಡಲು ಮೆಚ್ಚುವರವನಂ ॥೫॥

ಸೂಟಿಯೊಳು ಸಾಲೆ ಹಾಕುತ ।
ಪಾಟೀಲನ ಮಗನಿಗೋದು ಪೇಳಲು ನಿರುತಂ ॥
ನಾಟದದು ನಿನ್ನೊಳನ್ಯರ ।
ಕಾಟವು ನಿಜವಾಗಿ ಸಾಲೆ ನೀಟಾಗುವದು ॥೬॥

ಸುಳ್ಳೊಂದರ್ಜಿಯ ಮಾಳ್ಪರು ।
ಒಲ್ಲೆವು ಮಾಸ್ತರನಿದೀಗ ಕಲಿಸುವದಿಲ್ಲಂ ॥
ಹಳ್ಳಿಯನಿಂದೇ ಬಿಡಿಸುತ ।
ಒಳ್ಳೆಯ ದೂರೂರಿಗಿವನ ತಳ್ಳಲು ಬೇಕೈ ॥೭॥

ಮುಂದಿಲ್ಲಿವನನೆ ಇಟ್ಟರೆ ।
ಒಂದಾದರು ಹುಡುಗನನ್ನು ಕಳಿಸೆವು ಮಠಕೆ ।
ಒಂದಿನವಾದರು ತಡೆಯದೆ ।
ಚಂಧದಿ ಸಾಹೆಬರೆ! ವರ್ಗ ಮಾಡಿರಿ ಬೇಗ ॥೮॥

೨. ರಕ್ಷಕನೂ ಶಿಕ್ಷಕನೂ.

ರಕ್ಷಕ:— ಮಾಸ್ತರನೆ! ಹುಡುಗರಲಿ ತುಸು ।
ಭಿಸ್ತಿಯನಿಟ್ಟಿಲ್ಲ ನೀನು ಕೇಳೊಂದಿಷ್ಟು ॥
ಕುಸ್ತಿಯನು ಹಾಕುತಿರುವರು ।
ಪುಸ್ತಕವನ್ನಿಂತು ನನಗೆ ಹಾಕಿದರೇನೈ ॥೧॥
ಏಳೆಂಟು ವರುಷ ಕಲಿಸಿದೆ ।
ಸಾಲೆಯ ನಾನಿವಗೆ ಮನೆಯ ಕೂಳನು ಕೊಟ್ಟು ॥
ಆಳಿನ, ಸಟ್ಟಿನ, ಹತ್ತೀ ।
ಕಾಳಿನ ಲೆಕ್ಕವದು ಬರೆದು ತೋರಲು ಬರದೈ ॥೨॥
ಸಾಕಿನ್ನು ಸಾಲೆಯೊಳಗೆ ।
ನಾಕೇ ದಿನದೊಳಗೆ ಗಳಿಯ ಕಲಿಸಿಯೆ ಬಿಡುವೆಂ ॥
ಹಾಕುವೆನು ಸಣ್ಣ ಮಗನನು, ।
ಆಕಳ ಮೇಯಿಸಲು ನಾಳೆ ಕಳಿಸುವೆನಿವನಂ ॥ ೩ ॥
ಶಿಕ್ಷಕ:— ತರತರದ ಕೆಲಸ ಹೇಳುತ ।
ಮರಿಸಿದಿರೈ ಇವಗೆ ನಾನು ಕಲಿಸಿದನೆಲ್ಲ ॥
ಕರೆಕರೆದು ಹುಡುಗರೆಲ್ಲರು ।
ಬರುತಿಹರೈ! ತಿರುಗಿ ತಿರುಗಿ ಮನೆಮನೆಗಳಲಿ ॥೪॥
ಇದುವರೆಗಾದದ್ದಾಯಿತು ।
ಸದನದೊಳಿನ್ನಿವನ ನಿರಿಸಬೇಡಿರಿ ಬರಿದೇ ॥
ಮುದವೆನ್ನದಿರುವದಿವನೊಳ್ ।
ಅದರಿಂ ಪೇಳುವೆನು ನನ್ನ ಹೃದಯದ ಮಾತಂ ॥೫॥
ಇನ್ನೇನು ಬಹಳ ಹೇಳಲಿ ।
ಇನ್ನೊಂದೇ ವರುಷವೆನ್ನ ಕೈಯೊಳಗಿರಲು ॥
ಚನ್ನಾಗಿ ಬುದ್ಧಿಗಲಿವನು ।
ಇನ್ನೆಲ್ಲಿಯು ಕಳಿಸದಿರ್ರಿ, ಮುನ್ನಿನ ತೆರದೆ ॥ ೬ ॥
ರಕ್ಷಕ:— ಬರುತಿಹನು ನಿತ್ಯ ಸಾಲೆಗೆ ।
ಕರೆಯೆನು ನಾನಿನ್ನು ನನ್ನ ಕೆಲಸದೊಳಿವನಂ ॥
ಇರಿಸಿದೆನು ನಿಮ್ಮ ಫೀಯನು ।

ಕರೆಕೊಳ್ಳಿರಿ! ನನ್ನ ತಪ್ಪು ಕ್ಷಮಿಸಿರಿದೊಮ್ಮೆ॥೭॥

* * * *

ಇನಿತೊಂದು ಸ್ತುತಿಯು ಮಾಡುತ ।
ಜನರಲ್ಲಿ ಮಾಸ್ತರನು ಖ್ಯಾತಿ ಹೊಂದಲು ತಾನೇ ॥
ಮನೆಮನೆಗೆ ಹೋಗಿ ಸಾಲೆಗೆ ।
ವಿನಯದಿ ತರುತಿಹನು ಗ್ರಾಮ್ಯಜನ ಬಾಲರನು ॥೮॥

— **ಉಪೇಂದ್ರಶರ್ಮಾ ತೋಳಮಟ್ಟಿ.**

ಸೃಷ್ಟಿಪ್ರೇಮ.

(ಲೇಖಕ— ಕೇಶವಶರ್ಮಾ ಗಲಗಲಿ)

॥ नाद्रते प्रियमंडनाऽपि महिषी स्नेहेन या पल्लवं. ॥

ಶಕುಂತಲಾ

ಮನೋರಮವಾದ ವಸಂತ ಕಾಲವು ಮಾನವನ ಆಯುಷ್ಯದಲ್ಲಿ ಒಂದು ಸಾರಿಯೇ ಪ್ರಕಟವಾಗುತ್ತಿದ್ದರೆ, ಭಗವಾನ್ ಪ್ರಭಾಕರನ ಉದಯವು ದಿನಾಲು ಆಗದೆ ವರುಷದಲ್ಲಿ ಒಂದೇಸಾರೆಯಾಗುತ್ತಿದ್ದರೆ, ಬಹು ವಿಧವರ್ಣದಿಂದ ಸುರಂಜಿತವೂ ಸುರಮ್ಯವೂ ಆದ ಇಂದ್ರಧನುಷ್ಯವು ಒಮ್ಮೆ ಗೋಚರವಾಗುತ್ತಿದ್ದರೆ, ಸುಂದರಪುಷ್ಪಗಳು ರತ್ನಗಳಂತೆ ದುಷ್ಪ್ರಾಪ್ಯವಾಗಿರುತ್ತಿದ್ದರೆ, ಹಿಮಬಿಂದುಗಳು ಹಿರಣ್ಯದಂತೆ ಕಷ್ಟಪ್ರಾಪ್ಯವಾಗಿದ್ದರೆ, ಚಂದ್ರನಿಗೆ ವಾರ್ಷಿಕ ಕ್ಷಯವೃದ್ಧಿಗಳಿದ್ದರೆ, ನಿರ್ಮಲನೀರು ಅಮೃತದಹಾಗೆ ಸ್ವರ್ಗಗಾಮಿಯಾಗಿದ್ದರೆ ಅವುಗಳು ನಮಗೆ ಇನ್ನೆಷ್ಟು ಆಶ್ಚರ್ಯಕರವಾಗಿ ಪರಿಣಮಿಸುತ್ತಿದ್ದವೋ ಜಗದೀಶನೇಬಲ್ಲ? ಅವುಗಳ ದರ್ಶನದಿಂದ ಈಗ ಆಗುವ ಆನಂದಕ್ಕಿಂತ ಎಷ್ಟೋಮಡಿ ಆನಂದವು ಆಗಬಹುದಾಗಿತ್ತಲ್ಲವೇ? .

ಕರುಣಾಕರನಾದ ಪರಮೇಶನು ಇವುಗಳನ್ನು ವಿಪುಲವಾಗಿ ಮಾಡಿದ್ದರಿಂದ ಅವುಗಳ ಅವಗಣನೆಯನ್ನು ನಾವು ಮಾಡುತ್ತೇವೆ. " **अतिपरिचयादवज्ञा संततगमनादनादरो भवति** " ಎಂದು ಕವಿಯು ಹಾಡಿರುವದು ಅದಕ್ಕೇ. ಜರ್ಮನ್ ಕವಿಯಾದ **ಗಟೆಯು** ಒಂದು ಪ್ರಸಂಗದಲ್ಲಿ ಅಂದಿರುವದೇನಂದರೆ ' ಕಾಮನಬಿಲ್ಲು ಚಿತ್ರ ವಿಚಿತ್ರವಾದದ್ದು; ಕೌತುಕಾಸ್ಪದವಾದುದು; ಆದರೆ ಅದೇ ಒಂದುಗಳಿಗೆಯವರೆಗೆ ಒಂದೇಸವನೆ ಇದ್ದರೆ ಅದನ್ನು ಯಾರೂನೋಡುವದಿಲ್ಲ. ಜನರ ನಡತೆಯೇ ಹೀಗೆ. "

ನಮ್ಮ ಸಂಸ್ಕೃತ ಕವಿಯೂ ಜನರ ಈ ನಡೆಯನ್ನು ಯಥಾರ್ಥವಾಗಿ ಬಣ್ಣಿಸಿದ್ದಾನೆ. “ **नवनवगुणरागी प्रायशःसर्वलोकः** ” ಅತಿ ಪರಿಚಯದಿಂದ ಅವಜ್ಞೆಯನ್ನು ತಳೆದ ಮನುಷ್ಯನು ಅನ್ನುತ್ತಾನೆಃ ‘ ಇದರಲ್ಲೇನದೆ ನೋಡತಕ್ಕದ್ದು? ಆದರೆ ನಿಜವಾಗಿ ನೋಡಿದರೆ ಯಾವಸಂಗತಿಗಳು ಅತ್ಯಂತ ಮನೋಹರವಾಗಿಯೂ, ಅತ್ಯಂತ ಅವಶ್ಯಕವಾಗಿಯೂ ಇರುವವೋ, ಮತ್ತು ಯಾರ ದೃಷ್ಟಿಯು ಶಾಸ್ತ್ರಪೂರಿತವಾಗಿರುವದೋ, ಅವರಿಗೆ ಇಂತಹ ಸಂಗತಿಗಳು ನವೀನ ಮನೋರಂಜನವನ್ನು ಉಂಟುಮಾಡದೆ ಇರಲಾರವು. ಆಕಾಶದಲ್ಲಿಯ ತೇಜಸ್ವಿ ನಕ್ಷತ್ರಗಳ ಕಡೆಗೆ ರುಚಿಹೀನ ಜನರು ನೋರೆಯೆತ್ತಿ ಕೂಡ ನೋಡುವದಿಲ್ಲ. ಜ್ಯೋತಿಃಶಾಸ್ತ್ರಜ್ಞರು ರಾತ್ರಿಬೆಳತನಕ ದುರ್ಬೀನ ಸಹಾಯದಿಂದ ಕಣ್ಣಿನಲ್ಲಿ ಎಣ್ಣೆಹಾಕಿಕೊಂಡು ನೋಡುತ್ತ ಕೂಡುವರು. ಸೃಷ್ಟಿ ಚಮತ್ಕಾರದಿಂದ ಆನಂದವುಂಟಾಗಬೇಕಾದರೆ ರಸಜ್ಞತೆಯು ಬೇಕು. ಹುಂಬನಿಗೆ ಏನಾದೀತು? ಗ್ರೇ ಎಂಬ ಕವಿಯು ಅನ್ನುವದೇನಂದರೆ “ ಗಿರಿಕಂದರದಲ್ಲಿ ವಿಕಸಿತವಾಗುವ ನವಮಲ್ಲಿಕೆಗಳು, ಮೃದುಮಂಜುಲಗೀತವು, ಆಕಾಶ ಮಂಡಲದಲ್ಲಿ ದೇದೀಪ್ಯಮಾನವಾದ ಸೂರ್ಯ ಮಂಡಲವು ಇವೆಲ್ಲವುಗಳಿಂದ ಶೋಭಿಸುವ ಕ್ಷಿತಿತಲವನ್ನು ನೋಡಿದರೆ ಸ್ವರ್ಗದ ಕವಾಟವನ್ನೇ ನನಗೆ ತೆರೆದಿಟ್ಟಂತೆ ಕಾಣುತ್ತದೆ; ಸ್ವಯಂವಿಧಾತನು ತನ್ನ ಕುಶಲ ಹಸ್ತದಿಂದ ನಿರ್ಮಿಸಿಟ್ಟ ಪುಷ್ಪಗಳ, ನೇತ್ರಾನಂದಕರ ವರ್ಣಗಳನ್ನೂ, ಆಕೃತಿಗಳನ್ನೂ ನೋಡಿ ಯಾರಮನಸ್ಸು ತಾನೆ ಆನಂದಸಾಗರದಲ್ಲಿ ಮುಳುಗದು? ಆನಂದವಾಗದಿದ್ದ ಮನುಷ್ಯನಿಗೆ ಏನನ್ನಬೇಕು ? “ **सुखस्त्रस्थचाचं पश्चुपानिः** ” ಮಧು, ಮಾಲತಿ, ವನಜ್ಯೋತ್ಸ್ನೆ, ಸ್ವರ್ಣಚಂಪಕ ಮದನಬಾಣ, ಅಶೋಕ, ಪುನ್ನಗ ಇತ್ಯಾದಿ ತುರುಲತೆಗಳ ಹೆಸರುಗಳೇ ಮೊದಲು ಮನೋಹರವಾಗಿವೆ. ನಾಮಸ್ಮರಣದಲ್ಲಿಯೇ ಮೋಹ ತುಂಬಿತುಳುಕುವದು. ಅಂದಬಳಿಕ ಅವುಗಳ ಹತ್ತರ ಹೋಗಿ ಅವುಗಳ ಸಕಲೇಂದ್ರಿಯ ಮೋಹನ ಮೃದುಮಧುರವಾದ ಸೌರಭವನ್ನು ಆಘ್ರಾಣಿಸುತ್ತ, ಅವುಗಳ ಸತೇಜಸುಸ್ಪಷ್ಟವಾದ ವರ್ಣವೈಚಿತ್ರ್ಯವನ್ನು ನೋಡುತ್ತ, ನಿಂತುಕೊಂಡರೆ ಕ್ಷಣಹೊತ್ತು ಮನುಷ್ಯಲೋಕದ ವಿಸ್ಮೃತಿಯಾಗಿ, ಗಂಧರ್ವ ಕಿನ್ನರ ಅಪ್ಸರೆಯರ ಸಮಾಗಮದಲ್ಲಿದ್ದಂತೆ ಭಾಸವಾದರೆ ಆಶ್ಚರ್ಯವೇನು? ಪುಷ್ಪೋದ್ಯಾನಗಳಲ್ಲಿಯ ವೃಕ್ಷಸ್ಕಂದಗಳಮೇಲೆ ಕುಳಿತ ಶುಕಸಾರಿಕಾ ಕೋಕಿಲಾದಿ ಪಕ್ಷಿಗಳ ಸಹಜ ರಮಣೀಯವೂ ಕಲಮಧುರವೂ ಆದ ಇಂಚರವನ್ನುಕೇಳಿ ಅದಾವನು ಕಾಮಿನಿಯರ ಮಂಜುಮಂಜೀರ (ಸೈಜಣ) ದ ನಾದವನ್ನು ಬಯಸುವನು?

ಗಿರಿನದಿಗಳಿಂದ ನಮಗೆ ಆನಂದವಾಗುವದು. ವಿಶಾಲ ಉತ್ತುಂಗ ಪರ್ವತಗಳ ಗಂಭೀರೋದಾತ್ತವಾದ ರೂಪವು ನೋಟಕ್ಕೆ ಬಿದ್ದೊಡನೆ, ಮೋಹಗೊಳ್ಳದ ಮನುಜ

ನಾರು? ಯುಗಾನುಯುಗಗಳಿಂದ ಮಸ್ತಕದ ಮೇಲೆ ಶುಂಢಾಧಾರವಾಗಿ ಮೇಘವು ವರ್ಷಿಸುತ್ತಿದ್ದರೂ, ಅಚಲವಾಗಿ ನಿಂತು ಅಖಂಡವಾದ ಝಂಝಾವಾತಕ್ಕೆ ಬೆದರದಿರುವ ಶೃಂಗಗಳನ್ನು ತಳೆದ ಪರ್ವತರಾಜನಿಗೆ ಸಜ್ಜನರ ಸಾಮ್ಯವು ಒಪ್ಪುವದಲ್ಲವೇ? ಅಹಹಾ! ಇಂಥ ಪರ್ವತಗಳನ್ನು ನೋಡಿ ಕೌತುಕಾವಿಷ್ಟರು ನಾವು ಆಗಬಹುದಲ್ಲವೇ? ಸೃಷ್ಟಿಸೌಂದರ್ಯದ ರುಚಿಯನ್ನು ಉಂಟುಮಾಡಲಿಕ್ಕೆ ಸೃಷ್ಟಿಶಾಸ್ತ್ರಜ್ಞರು ಕಾರಣರಾದಂತೆ, ಪ್ರಕೃತ್ಯುಪಾಸಕವಾದ ಕವಿಗಣವೂ ಕಾರಣವಾಗಿದೆ. ಜಾನ್‌ರಸ್ಕಿನ್ನನು ಅನ್ನುವದೇನಂದರೆ—‘ ನದೀ ನಿರ್ಝರಗಳಿಗೆ ಜಲಪೂರಣವನ್ನು ಮಾಡುವದು, ವಾಯುವಿನ ಶುದ್ಧತೆಯನ್ನುಂಟುಮಾಡುವದು ಇಷ್ಟೇಕಾರ್ಯವನ್ನು ಗಿರಿರಾಜನು ಮಾಡುತ್ತಾನೆಂದಲ್ಲ; ಇದಕ್ಕೂ ಉನ್ನತವಾದ ಕಾರ್ಯವೆಂದರೆ ಅವನು ತನ್ನ ವಿಶಾಲತೆಯಿಂದ ಮಾನವ ಹೃದಯವನ್ನು ಥಕ್ಕಾಗಿ ಮಾಡಿ, ದೃಷ್ಟಿಯಲ್ಲಿಯ ಮೋಹಪಟಲವನ್ನು ದೂರೀಕರಿಸಿ, ವಿಧಾತೃವಿನ ಅದ್ಭುತ ಸಾಮರ್ಥ್ಯದ ವಿಷಯವಾಗಿ ಅವನಲ್ಲಿ ಪೂಜ್ಯಭಾವವನ್ನು ಹುಟ್ಟಿಸಿ, ಈಶ್ವರ ವೈಭವ ವಿಷಯದಲ್ಲಿ ಸತೃಷ್ಣವಾದ ಹೃದಯವನ್ನು ತೃಪ್ತಿಬಡಿಸುವನು; ಪರ್ವತ ಘಟನೆಯಲ್ಲಿ ಸೃಷ್ಟಿಕರ್ತೃವಿನ ಮಹತ್ತಾದ ಶಿಲ್ಪಚಾತುರಿಯು ಕಂಡುಬರುವದು. ಅದರಿಂದ ಮನುಷ್ಯನಿಗೆ ವಿಶ್ರಾಮಸ್ಥಾನಗಳು ಪ್ರಾಪ್ತವಾಗುವವು. ಸುಖಶಾಂತಿಗಳು ದೊರಕುವವು. ನೋಡುವವನು ಬೋಧಕನಿದ್ದರೆ ಅವನಿಗೆ ಪರ್ವತಗಳು ಸೃಷ್ಟಿಯ ಉತ್ಪತ್ತಿಯಿಂದ ಎಲ್ಲ ಕಥೆಯನ್ನು ಅವನಿಗೆ ಹೇಳುವವು. ಅನಂತ ರಮಣೀಯ ದೃಶ್ಯಗಳನ್ನು ತೋರಿಸುವವು.” “ नीचैराख्यं गिरिमधिवसेस्तत्र विश्रामहेतोः ” ಕಾಲಿದಾಸನ ಮೇಘದೂತನಿಗೆ ನೀಚೈಸ್ ಪರ್ವತವು ವಿಶ್ರಾಂತಿ ಸ್ಥಳವಾಗಲಿಲ್ಲವೇ?

ಅಂತರಿಕ್ಷದ ಚಮತ್ಕೃತಿ ಇದೇ ಮೇರೆಗೆ; ಯಾರು ಪ್ರೇಕ್ಷಾವಂತರೋ ಅವರಿಗೆ ಅಂತರಿಕ್ಷವೆಂದರೆ ವಿಸ್ಮಯ, ಕೌತುಕ, ಆಲ್ಹಾದಗಳ ಅಕ್ಷಯ್ಯನಿಧಾನವು ಹಗಲಿನಲ್ಲಿ ಚಂಡರಶ್ಮಿಯ ಸರ್ವಾತಿಶಾಯಿಯಾದ ಭಾಸ್ವರ ಶುಕ್ಲ ತೇಜವನ್ನು ನೋಡಿ, ಅಸ್ತಾಚಲಚೂಡಾವಲಂಬಿಯಾದ ದಿನಮಣಿಯ ಸಂಧ್ಯಾಸಮಯದ ವೈಭವವನ್ನು ನೋಡಿದರೆ ಕವಿಗಳು ಬೆರಗಾಗಿ ಅನೇಕ ರೀತಿಯಿಂದ ತಮ್ಮ ಕಾವ್ಯಕ್ಕೆ ಹೃದಯಂಗಮತೆಯನ್ನು ತಂದುಕೊಟ್ಟರು. ಆ ಮನೋರಂಜಕವಾದ ಬಿಂಬವು ಮಾಘಕವಿಗೆ ಸುವರ್ಣಗಂಟೆಯಾಗಿ ತೋರಿತು ಮತ್ತೊಬ್ಬನಿಗೆ ಪಶ್ಚಿಮದಿಗಂಗನೆಯ ಕುಂಕುಮ ತಿಲಕವಾಗಿ ತೋರಿತು. ರತ್ನಾಕರ ಕವಿಯು ಅದೇ ಸೂರ್ಯಬಿಂಬವನ್ನು ತಾಳಕ್ಕೆ ಹೋಲಿಸಿರುವನು. ಅಲ್ಪಾವಕಾಶದಲ್ಲಿ ಸೂರ್ಯಾಸ್ತವಾದನಂತರ ಕಾಣುವ ದೃಶ್ಯವಾವದು? ಗಗನಾಂಗಣದಲ್ಲಿ ತನ್ನ ಅಸಂಖ್ಯ ಸಹಚಾರಿಣೀಯರಿಂದ ಒಡ

ಗೂಡಿ ನಿಶಾಧಿಪತಿಯು ಆವಿರ್ಭವಿಸುವನಲ್ಲವೇ? ತನ್ನ ಶರೀರ ನಿರ್ವ್ಯಾಪಕ
ಜ್ಯೋತ್ಸ್ನೆಯಿಂದ ಜಗತ್ತನ್ನು ಬೆಳಗುವ ಚಂದ್ರನ ಮನೋಹರತೆಯ ವರ್ಣಿಸಲು
ಕಾಳಿದಾಸಾದಿಗಳ ಲೇಖನಿಬೇಕು. ೨೦ನೇ ಶತಮಾನದ ಟಾಕು ಸಮರ್ಥವಲ್ಲ. ನಿ
ಖಿಲನೇತ್ರಾನಂದನ, ವಿಶ್ವತಾಪಹರಣ ಅಮೃತಾಂಶು ಆಗಸದಲ್ಲಿ ಉದಿತನಾದನೇ
ದರೆ, ಅವನ ರಮಣೀಯಕವನ್ನು ವರ್ಣಿಸಲಿಕ್ಕೆ ಕನ್ನಡ ಆದಿ ಕವಿಯಾದ
ಪಂಪನು ಬೇಕು.

ನೆರೆದ್ಯೆ ಸಂಜೆಯೊಳೆಂದೊಡೆದೊಡೇನಾತ್ಮಾಂಗದೊಳ್ ರೋಹಿಣೀ ।
ಚರಣಾಲಕ್ತರಾಗಮುಚ್ಚಿರಿದುದೋ ಮೇಣ್ ಯಾಮಿನೀಕಾಮಿನೀ ॥
ವಿರಹಂ ಪೊಣ್ಮಿದುದೋ ತಪೋಗಬಡ ಕೋಡೇರಿಂದ ಮೇನ್ನೊಂದುದೋ ।
ಹರಿಣಂತಾನೆನಿಪಿತ್ತು ರಕ್ತ ರುಚಿಯಿಂ ಬಿಂಬಂ ಸುಧಾಸೂತಿಯ ॥

ಚಂದ್ರನನ್ನು ನೋಡಿ ಪ್ರೇಮಮುಗ್ಧನಾದ ಕವಿಯು ಉತ್ಪ್ರೇಕ್ಷಿಸುತ್ತಾನೆ. ಚಂದ್ರಬಿಂ
ಬವು ರಕ್ತವರ್ಣದಿಂದ ಏಕೆ ಆವಿರ್ಭೂತವಾಯಿತು? ಸಂಧ್ಯಾ ಎಂಬ ಸ್ತ್ರೀಯೊಡನೆ
ಕೂಡಿಕೊಂಡಿಯಾ? ಎಂದು ಅವನ ಪ್ರಿಯಳಾದ ರೋಹಿಣಿಯು ಸಿಟ್ಟಿನಿಂದ ತನ್ನ
ಜಾವಡಿಹಚ್ಚಿದ್ದರಿಂದ ಕೆಂಪಾದ, ಕಾಲಿನಿಂದ ಒದ್ದಳೋ! ರಸಿಕರಾದ ಕವಿಗಳೇ ಸೃಷ್ಟಿ
ಯಲ್ಲಿ ಚಮತ್ಕೃತಿಯನ್ನು ನೋಡುವರು. ಉಲ್ಲಾಸ ಭರದಲ್ಲಿ ಕವಿಗಳಲ್ಲಿ ಕೆಲವರು
ಚಂದ್ರಮನನ್ನು ದಿಗ್ವಧುವಿನ ಕ್ರೀಡಾಕಂದುಕವೆಂದು ಬಣ್ಣಿಸಿದರು. ಮತ್ತೆ ಕೆಲವ
ರು ಸ್ವರ್ಗದಲ್ಲಿಯ ರಾಜಹಂಸವೆಂದರು. ಮತ್ತೊರ್ವನು '**नायं सुधांशुः किं तर्हि
व्योमगंगासरोरुहम्**' ಇವನು ಚಂದ್ರನಲ್ಲ ಆಕಾಶಗಂಗೆಯ ತಾವರೆಯೆಂದನು.
ಕೆಲವರು ನಕ್ಷತ್ರಗಳ ಮಧ್ಯಮಣಿಯೆಂದರು. ಮತ್ತೊಬ್ಬನು ಭಾಮಿನಿಯ ಮುಖ
ವೆಂದನು. ಮುದ್ದುಗುವರನ ಮುದ್ದುಮೊಗವನ್ನು ನೋಡಿ ಪ್ರೇಮಿಕ ವಾತ್ಸಲ್ಯದವಿ
ಯಲ್ಲಿ ಅಧಿಷ್ಠಿತರಾದ ಹೆಂಗಸರ ಲೀಲೆಯನ್ನೇ ಕವಿಗಳು ಚಂದ್ರನ ವಿಷಯವಾಗಿ
ಅಂಗೀಕರಿಸುವರು. ಹೀಗೆ ಚಂದ್ರೋದಯವೂ ನಿರುಪಮಸುಖದಾಯಿಯಾಗಿರುವ
ದಿಶಾವನಿತೆಯರ ಮುಕುಟ ಮಾಣಿಕಗಳಂತೆ ಬೆಳಗುವ ನಕ್ಷತ್ರಗಳೂ ಅಂಬರಕ್ಕೆ ಅ
ನಂತ ಶೋಭೆಯನ್ನುಂಟುಮಾಡುವವು. ರಾತ್ರಿಯನ್ನು, ವಿಶ್ರಾಂತಿ ಶಾಂತಿಗಳು ಸಿ
ಗುವದಕ್ಕಾಗಿ ಈಶ್ವರನು ನಿರ್ಮಿಸಿರುವನೆಂದು ಒಬ್ಬ ಪ್ರೇಮಿಯು ಅನುತ್ತಾನೆ.

—ಕ್ರಮಶಃ

ವಾತಾಪಿಪುರದ ಪೂರ್ವೇತಿಹಾಸವು.

ದಕ್ಷಿಣ ಮಹಾರಾಷ್ಟ್ರದೇಶದೊಳಗೆ ವಿಜಾಪೂರಜಿಲ್ಹೆಯಲ್ಲಿ ವಾತಾಪಿಪುರದ ಬದಾಮಿ) ಎಂಬ ಪ್ರಾಚೀನಕಾಲದಿಂದ ಹೆಸರಾದ ಪಟ್ಟಣವಿರುತ್ತದೆ. ಬಹಳ ಪ್ರಾಚೀನಕಾಲದಲ್ಲಿ ಈ ಪಟ್ಟಣಕ್ಕೆ ವಾತಾಪಿಪುರವೆಂಬ ಹೆಸರು ಇತ್ತು. ಅದರ ಕಾರಣವೇನಂದರೆ:— ವಾತಾಪಿ ಇಲ್ವಲರೆಂಬ ಇಬ್ಬರು ಅಣ್ಣ ತಮ್ಮಂದಿರಾದ ರಾಕ್ಷಸರು ಇರುತ್ತಿದ್ದರು. ನೈಮಿಷಾರಣ್ಯದಿಂದ ಅಗಸ್ತ್ಯಋಷಿಗಳು ತೀರ್ಥ ಯಾತ್ರೆಯ ಸಲುವಾಗಿ ಸಂಚಾರ ಮಾಡುತ್ತ ಮಾಡುತ್ತ ಮಹಾಕೂಟೇಶ್ವರನ ದರ್ಶನಕ್ಕೆ (ದಕ್ಷಿಣಕಾಶಿಗೆ) ಹೋಗಬೇಕೆಂದು ಹೊರಟರು. ಆಗ್ಗೆ ಜನರು ಮಹಾಕೂಟಕ್ಕೆ ಹೋಗುವ ಹಾದಿಯಲ್ಲಿ ಅರಣ್ಯದೊಳಗೆ ವಾತಾಪಿ ಇಲ್ವಲರೆಂಬ ರಾಕ್ಷಸರು ಜನರನ್ನು ಬಹಳ ಪೀಡಿಸುತ್ತಾರೆ; ಕಾರಣ ಅಲ್ಲಿಗೆ ಹೋಗಬಾರದೆಂದು ಬಹು ಪರಿಯಾಗಿ ಹೇಳಿದರು. ಆದಾಗ್ಯೂ ಅವರು ಕೇಳದೆ ಹೊರಟು ಆ ರಾಕ್ಷಸರು ಇರುವಲ್ಲಿಗೆ ಬಂದರು. ಆಗ್ಗೆ ವಾತಾಪಿ ಎಂಬ ರಾಕ್ಷಸನು ಬ್ರಾಹ್ಮಣವೇಷವನ್ನು ಧರಿಸಿ ತಮ್ಮಲ್ಲಿಗೆ ಭೋಜನಕ್ಕೆ ಬರಬೇಕೆಂದು ಅತ್ಯಾಗ್ರಹದಿಂದ ಹೇಳಿಕೊಂಡನು. ಅದಕ್ಕೆ ಅವರು ಒಪ್ಪಿಕೊಂಡು ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡು ಅವರ ಮನೆಗೆ ಹೋದರು. ಅಷ್ಟರಲ್ಲಿ ವಾತಾಪಿಯು ತನ್ನ ತಮ್ಮನಾದ ಇಲ್ವಲನನ್ನು ಮಾಯೆಯಿಂದ ನಾನಾ ತರದ ಪಕ್ವಾನ್ನಗಳನ್ನಾಗಿ ಮಾಡಿದನು. ಆಗ ಅಗಸ್ತ್ಯಋಷಿಗಳು ಭೋಜನವನ್ನು ತೀರಿಸಿಕೊಂಡು ಕುಳಿತಿರಲು ವಾತಾಪಿಯು ಇಲ್ವಲನನ್ನು ಕೂಗಹತ್ತಿದನು. ಆದರೆ ಮೊದಲೇ ಋಷಿಗಳು ಜ್ಞಾನದೃಷ್ಟಿಯಿಂದ ಇವರ ಮರ್ಮವನ್ನೆಲ್ಲ ತಿಳಿದದ್ದರಿಂದ ಉಂಡ ಕೂಡಲೇ ಅವರು ಎಡಗೈಯನ್ನು ಹೊಟ್ಟೆಯ ಮೇಲೆ ಆಡಿಸುತ್ತ 'ನಿನ್ನ ತಮ್ಮನು ಹೊಟ್ಟೆಯಲ್ಲಿ ಜೀರ್ಣನಾಗಿ ಹೋಗಿದ್ದಾನೆ. ಇನ್ನೆಲ್ಲಿಂದ ಬರುವನು' ಎಂದು ಹೇಳಿದರು. ಆಗ ವಾತಾಪಿಯು ಗಾಬರಿಯಾಗಿ ನಡುಗಹತ್ತಿದನು. ಆಗ ಋಷಿಗಳು ಈ ಗುಡ್ಡದ ಓರೆಯಲ್ಲಿ ಕೂತು ಇದೇ ರೀತಿಯಾಗಿ ಜನರನ್ನು ಸಂಹಾರ ಮಾಡುತ್ತಿದ್ದಿರಲ್ಲವೆ? ನಿಲ್ಲು, ನಿನ್ನೊಬ್ಬನನ್ನು ಸಂಹರಿಸುತ್ತೇನೆಂದು ಹೇಳಿ ಜ್ಞಾನದೃಷ್ಟಿಯಿಂದ ನೋಡಲು ಅವನು ಸಹ ಭಸ್ಮನಾಗಿ ಹೋದನು. ಆ ಮೇಲೆ ಆ ಋಷಿಗಳು ಇಲ್ಲೇ ವಾಸಮಾಡಲಿಕ್ಕೆ ಹತ್ತಿದರು. ಆಗ್ಗೆ ಜನರು ಇವರ ಮಹಾತ್ಮೆಯನ್ನು ತಿಳಿದು ಇಲ್ಲಿಗೆ ಬರಹತ್ತಿದರು. ಆದ್ದರಿಂದ ಇಲ್ಲೊಂದು ಪಟ್ಟಣವುಂಟಾಯಿತು ಕಾರಣ ಋಷಿಗಳು ಇದು ವಾತಾಪಿಯ ವಾಸಸ್ಥಾನವಾದದ್ದರಿಂದ ವಾತಾಪಿಪುರವೆಂ

ದು ಹೆಸರನ್ನಿಟ್ಟಿರು. ಈ ಅಗಸ್ತ್ಯಋಷಿಗಳ ಆಶ್ರಮವು ಈ ಊರಲ್ಲಿರುವ ಹೊಂಡದ ಪೂರ್ವಕ್ಕಿರುವ ಗವಿಯಲ್ಲಿ ಇಗ್ಯೂ ಇರುವದು. ಆದ್ದರಿಂದಲೇ ಈ ಹೊಂಡಕ್ಕೆ ಅಗಸ್ತ್ಯತೀರ್ಥವೆಂದು ಆ ಕಾಲದಲ್ಲಿ ಹೆಸರಿತ್ತು

ದ್ವಾಪರಯುಗದ ಅಂತ್ಯಭಾಗದಲ್ಲಿ ಅಂದರೆ ಯುಧಿಷ್ಠಿರ ಶಕದ ಆರಂಭದಲ್ಲಿ ಪುಲಿಂದನೆಂಬ ಅರಸನ ವಶದಲ್ಲಿ ಈ ಪಟ್ಟಣವಿತ್ತು. ಮುಂದೆ ಪಾಂಡವರ ಅಶ್ವಮೇಧದ ಕಾಲದಲ್ಲಿ ಪುಲಿಂದನ ವಂಶವು ನಷ್ಟವಾಯಿತು; ಆ ಮೇಲೆ ಕುಂತಲದೇಶದ ಅರಸನಾದ ಚಂದ್ರಹಾಸನ ವಶವಾಯಿತು. ಮುಂದೆ ಚಂದ್ರಹಾಸನೂ ಆನೂ ಅವನ ವಂಶಜರೂ ಮುನ್ನೂರುವರ್ಷಗಳ ವರೆಗೆ ಆಳಿದರು ಆ ಮೇಲೆ ಪಾಟಣಾದ ರಾಜಪುತ್ರನಾದ ವಿಜಯವರ್ಮನೆಂಬವನಿಗೆ ಕುಷ್ಟರೋಗ ಹತ್ತಿದ್ದರಿಂದ ಆ ರೋಗಪರಿಹಾರಾರ್ಥವಾಗಿ ಮಹಾಕೂಟೇಶ್ವರ (ದಕ್ಷಿಣಕಾಶಿ) ಕ್ಷೇತ್ರಕ್ಕೆ ಹೋಗಬೇಕೆಂದು ಹೊರಟು, ಅವನು ಆನೇಗುಂದಿಗೆ ಬಂದಿದ್ದನು. ಆಗ ಅಲ್ಲಿಯ ಅರಸನು ತನ್ನ ಚಿಕ್ಕ ಮಗಳನ್ನು ಅವನಿಗೆ ಲಗ್ನ ಮಾಡಿಕೊಟ್ಟನು. ಮುಂದೆ ಅವರು ವಾತಾಪಿಪುರದ ಹತ್ತರ ಇರುವ ಗೊಲ್ಲರ ಕೆಪ್ಪದಲ್ಲಿ (ಇದು ಈಗ ಹಾಳಾಗಿದೆ) ವಾಸಮಾಡಿ ದಿನಾಲು ಮಹಾಕೂಟೇಶ್ವರನ ದರ್ಶನಕ್ಕಾಗಿ ಹೋಗುತ್ತಿದ್ದರು. ಒಂದು ದಿವಸ ಅವರು ನಿತ್ಯದಂತೆ ದರ್ಶನ ತೆಗೆದುಕೊಂಡು ಬರುತ್ತಿರುವಾಗ ಬಿಸಿಲಿನ ತಾಪದಿಂದ ಬಳಲಿ ಒಂದು ಮರದ ಬುಡದಲ್ಲಿ ಮಲಗಿಕೊಂಡಿರಲು, ಅವನಿಗೆ ಒಂದು ಸ್ವಪ್ನವು ಬಿತ್ತು. ಅದೇನಂದರೆ:— " ನೀನು ಇಲ್ಲಿಯೇ ಸಮೀಪದಲ್ಲಿರುವ ತೊನಿಬೆಂಚಿ ಎಂಬ ತೀರ್ಥದಲ್ಲಿ ಮೂರು ದಿವಸ ಸ್ನಾನ ಮಾಡು ಅಂದರೆ ರೋಗವು ನಾಶವಾಗುವದು. ಮತ್ತು ಆ ತೀರ್ಥದ ದಕ್ಷಿಣಕ್ಕೆ ಇರುವ ನಾಗನಾಥನ ಕೊಳ್ಳದಲ್ಲಿ ಒಂದು ದೊಡ್ಡದಾದ ಬಂಡೆಗಲ್ಲಿನ ಬುಡದಲ್ಲಿ ಅಪಾರವಾದ ಸಂಪತ್ತು ಇರುವದು. ಅದರ ಕಾವಲಿಗಾಗಿ ಭಯಂಕರವಾದ ಕೃಷ್ಣಸರ್ಪವು ಇರುವದು ಅದನ್ನು ಕೊಂದು ಆ ಸಂಪತ್ತನ್ನು ತೆಗೆದುಕೊಂಡು ಬಂದು ವಾತಾಪಿಪುರವನ್ನು ಕಟ್ಟಿಸು " ಆ ಮೇಲೆ ಎಚ್ಚತ್ತು ಅದರಂತೆ ಮಾಡಲು ಅವನ ರೋಗವು ನಾಶವಾಯಿತು ಮತ್ತು ಆ ಸಂಪತ್ತಿನಿಂದ ವಾತಾಪಿಪುರವನ್ನು ಕಟ್ಟಿಸಿದನು. ಸ್ನಾನ ಮಾಡಿದ ತೊನಿಬೆಂಚಿ ತೀರ್ಥದ ದಂಡೆಯಮೇಲೆ ಈಗ್ಯೂ ಚಿಕ್ಕ ಚೌಕಾದ ದೊಡ್ಡ ಬಂಡೆಗಲ್ಲು ಇರುವದು. ಅದೇ ಈ ಅರಸನು ಸ್ನಾನಮಾಡಿದ ಬಚ್ಚಲವೆಂದು ಈಗ್ಯೂ ಜನರು ತೋರಿಸುತ್ತಿರುವರು.

ವಾತಾಪಿಪುರದ ಈ ವಿಜಯ ವರ್ಮನು ಕೋಷ್ಟರಾಯನೆಂಬ ಹೆಸರಿನಿಂದ

ಬಹುಕಾಲ ಆಳಿದನು. ಅನಂತರ ಇವನ ವಂಶವು ನಷ್ಟವಾಯಿತು. ಮುಂದೆ ಚಾಲುಕ್ಯರು ರಾಜ್ಯವಾಳಿದರು. ಅವರ ತರುವಾಯ ಈ ಪಟ್ಟಣವು ರಾಷ್ಟ್ರಕೂಟರ ವಶವಾಯಿತು. ಮುಂದೆ ಕೆಲಕಾಲದ ಮೇಲೆ ಹೈದರಲ್ಲಿ ಟಿಪ್ಪೂ ಸುಲ್ತಾನರ ವಶವಾಯಿತು. ಆ ಮೇಲೆ ಪೇಶ್ವೆಯರು ಒಂದು ವರ್ಷದ ವರೆಗೆ ಮುತ್ತಿಗೆಹಾಕಿ ಕೈವಶಮಾಡಿಕೊಂಡು ತಮ್ಮ ಪತಿಯಿಂದ ರಾಸ್ತೆ ಎಂಬ ಸರದಾರನನ್ನು ನೇಮಿಸಿದರು ಮುಂದೆ ೧೮೧೮ರಲ್ಲಿ ೨ನೇ ಬಾಜೀರಾಯನಿಗೂ ಇಂಗ್ಲಿಷ ಸರಕಾರದವರಿಗೂ ಯುದ್ಧವಾಗಿ ಅದರಲ್ಲಿ ಬಾಜೀರಾಯನು ಸೋತದ್ದರಿಂದ ಈ ಪಟ್ಟಣವು ನಮ್ಮ ಇಂಗ್ಲಿಷ ಸರಕಾರದವರ ವಶಕ್ಕೆ ಬಂತು. ಈಗ ಇದು ತಾಲೂಕಿನ ಮುಖ್ಯಸ್ಥಳವಾಗಿರುವದು. ಇಲ್ಲಿಯ ಜನಸಂಖ್ಯೆಯು ಈಗ್ಗೆ ಸುಮಾರು ೫-೬ ಸಾವಿರಕ್ಕಿಂತ ಹೆಚ್ಚಿರುವದು.

ಈ ಪಟ್ಟಣವನ್ನು ತಮ್ಮ ವಂಶಜನಾದ ಕೋಣ್ಣರಾಯನು ಕಟ್ಟಿಸಿದನೆಂಬದಕ್ಕೆ ಸಾಕ್ಷಿಯಾಗಿ ಅವನವಂಶಜರು ಅವನದೊಂದು ಪ್ರಚಂಡವಾದ ಕಲ್ಲಿನ ಮೂರ್ತಿಯನ್ನು ಅಗಸ್ತ್ಯ ತೀರ್ಥದ ಪೂರ್ವಕ್ಕಿರುವ ಒಂದು ಗವಿಯಲ್ಲಿ ಸ್ಥಾಪಿಸಿದರು. ಮತ್ತು ಅವನ ಹೆಂಡತಿಯಾದ ಎಲ್ಲಮ್ಮನ ಮೂರ್ತಿಯನ್ನು ಆ ತೀರ್ಥದ ಪಶ್ಚಿಮಕ್ಕೆ ಒಂದು ಗುಡಿಯನ್ನು ಕಟ್ಟಿಸಿ ಅದರಲ್ಲಿ ಸ್ಥಾಪಿಸಿದರು. ಈ ಗುಡಿಯ ಮುಂಬದಿಯಲ್ಲಿ ಸವೆದು ಹೋದದ್ದೊಂದು ಲಿಪಿಯು ಇರುವದು. ಇವೆಲ್ಲವುಗಳನ್ನು ಈಗ್ಯೂ ಕಾಣಬಹುದು; ಮತ್ತು ಈ ಮೂರ್ತಿಗಳ ಪೂಜಾಅರ್ಚೆಗಳ ದೆಶೆಯಿಂದ ಕೆಲವು ಹೊಲಗಳನ್ನು ಪೂರ್ವಕಾಲದಿಂದಲೇ ಇನಾಮುಹಾಕಿಕೊಟ್ಟಿರುವರು. ಅವು ಇಗ್ಯೂ ನಡೆಯುತ್ತವೆ.

—ಎಚ್. ಭೀಮಾಚಾರ್ಯ.

ನಮ್ಮ ಹರಕೆಯು.

(ಸಂಪಾದಕೀಯ)

" ಪ್ರತಿಯೊಬ್ಬನಿಗೆ ಜೀವಿತವನ್ನು ಸಾರ್ಥಕಗೊಳಿಸಲಿಕ್ಕೆ ಅವನನ್ನು ಯೋಗ್ಯನನ್ನಾಗಿ ಮಾಡುವದೇ ಶಿಕ್ಷಣದ ಮುಖ್ಯ ಕಾಯವು; ಹಾಗು ಯಾವದಾದರೊಂದು ದೇಶದಲ್ಲಿಯ ಶಿಕ್ಷಣ ಪದ್ಧತಿಯು ಇಷ್ಟವೋ ಅನಿಷ್ಟವೋ ಎಂಬುದನ್ನು ನಿಷ್ಕರ್ಷಿಸುವದಾದರೂ, ಆ ಶಿಕ್ಷಣವನ್ನು ಪಡೆದಂಥ ಆಯಾದೇಶದ ಜನರ ಕರ್ತೃತ್ವದ ಮೇಲಿಂದಲೆ "

(ಹರ್ಬರ್ಟ ಸ್ಪೆನ್ಸರ.)

ಕನ್ನಡಿಗರೇ !

ಆರೇಳು ವರುಷದ ಮಾತೆಲ್ಲಿ? ಈಗಣ ಮಾತೆಲ್ಲಿ! ಇದರಿಂದ ಈಗ ಕನ್ನ
ಡ ನಾಡಿನೊಳಗೆ ಸಂಪೂರ್ಣ ಜಾಗ್ರತಿಯಾಗಿರುವದೆಂದು ನಮ್ಮ ಆಶಯವಲ್ಲ. ಆಗ
ಕರ್ನಾಟಕದೊಳಗೆ ತೀರ ಕಗ್ಗತ್ತಲೆಯು ಕವಿದಿತ್ತು; ಆದರೆ, ಈಗ ಅದೆಲ್ಲ ದೂರವಾ
ಗಿ ಪ್ರತಿಭಾಸೂರ್ಯನು ಮೂಡಿರುವನೆಂತಲ್ಲ. ಯಾವದಾದರೊಂದು ಕಾರ್ಯವು ನಾ
ವು ಹಾರೈಸುವಷ್ಟು ವೇಗದಿಂದ ಒದಗಿ ಬರಲಾರಂಭಿಸಿದರೆ, ಮನುಷ್ಯನ ಹೆಗ್ಗಳಿಕೆ
ಪಾರವೇ ಇರುತ್ತಿರಲಿಲ್ಲ. ಮನುಷ್ಯನ ಔತ್ಕಂಠ್ಯದಿಂದ ಬಯಸುವ ಕಾರ್ಯವು ಮೆ
ಲ್ಲ ಮೆಲ್ಲಗೆ ಒಂದೊಂದಾಗಿ ಒಂದು ಸಿಕ್ಕಿತು; ಮತ್ತೊಂದು ಸಿಕ್ಕಿತು; ಹೀಗೆ ಅಷ್ಟಿ
ಅಷ್ಟೇ ದೊರಯುವದರಲ್ಲಿಯೇ ಹೆಚ್ಚು ಭೂಷಣವೂ ಆನಂದವೂ ಇರುವದೆಂಬದ
ಭಗವಂತನ ಸತ್ಯಸಂಕಲ್ಪವು; ಮತ್ತು ಈ ಸೃಷ್ಟಿಯು ಮೇಲೆ ನಡೆಯುವ ಕಾರ್ಯ
ಗಳೆಲ್ಲವೂ ಇದೇ ಕ್ರಮದಿಂದ ನಡೆಯುತ್ತಿರುತ್ತವೆ; ನಡೆದಿವೆ; ಹೀಗೆಯೇ ಮುಂ
ನಡೆಯುವವೆಂಬುದು ಸೃಷ್ಟಿ ನಿಯಮವು. ಈ ನಿಯಮಕ್ಕನುಸರಿಸಿ, ಈ ಹೊತ್ತು
ಪ್ರತಿಭಾರವಿಯ ಹೊಂಬಣ್ಣದ ಕಿರಣಗಳಿಂದ ಥಳ ಥಳ ಹೊಳೆಯುವಷ್ಟು ಕನ್ನ
ನಾಡಿಗ ಭಾಗ್ಯವಿರದಿದ್ದರೂ, ಮುಂಜಾವಿನಲ್ಲಿ ಹೇಗೆ ಕಾಗೆ ಗುಬ್ಬಿಗಳ ಕಿಲ ಕಲಾಟ
ಒಳ್ಳೇ ಔತ್ಸುಕ್ಯದಿಂದ ನಡೆದಿರುತ್ತದೋ, ಹಾಗೆ ಚಿಕ್ಕ ಚಿಕ್ಕ ಗ್ರಂಥಕಾರರ ಹಾಗ
ಲೇಖಕರ ಸಪ್ಪಳವೂ, ಅಲ್ಲಲ್ಲಿ ಹಾಡುತ್ತಿರುವ ಬಾಲ ಕವಿಗಳ ಆಲಾಪವೂ ಮಾ
ಸ್ಪಷ್ಟವಾಗಿ ಕೇಳಿಸುತ್ತಲಿದೆ; ಮತ್ತು ಒಬ್ಬರ ಹಿಂದೊಬ್ಬರು 'ಬೆಳಗಾಯಿತು,' 'ಬೆ
ಳಗಾಯಿತು' ಎಂದು ಒಬ್ಬರನೊಬ್ಬರು ಎಬ್ಬಿಸುತ್ತ, ಒಬ್ಬರಿಗೊಬ್ಬರು ಅವುಚಿಕೊ
ಳ್ಳುತ್ತಲಿರುವದನ್ನು ಕಂಡರೆ-- ಪ್ರತ್ಯಕ್ಷ **ಉಷಾದೇವಿಯೇ** ಕನ್ನಡ ನಾಡನ್ನು ಹೊ
ಡೆದೆಬ್ಬಿಸುವ ಮಹದ್ಭಾರವನ್ನು ತನ್ನ ತಲೆಯ ಮೇಲೆ ಹೊತ್ತು ಕೊಂಡಿರುವಂ
ಭಾಸವಾಗುತ್ತದೆ. ಹಕ್ಕಿ ಪಕ್ಕಿಗಳು ನಡಿಸಿರುವ ಈ ಅರುಣೋದಯಕಾಲಕ್ಕೂ ಸು
ರ್ಯೋದಯವಾಗುವ ಕಾಲಕ್ಕೂ ಹೇಗೆ ತಾಸು ಅರ್ಧತಾಸಿಗಿಂತ ಹೆಚ್ಚು ಅಂತ
ವಿರುವದಿಲ್ಲವೋ ಹಾಗೇ, ನಮ್ಮ ನಾಡಿನಲ್ಲು ಪ್ರತಿಭಾರವಿಯ ಉದಯವಾಗಲು
ಚ್ಚೇನು ವೇಳೆ ಹಿಡಿಯಲಿಕ್ಕಿಲ್ಲೆಂದು ಹಾರೈಸಿ, ಮುಂದಣ ಮಾರ್ಗವನ್ನು ನಡೆಯ
ವೆವು.

* * * *

ಈ ಹೊತ್ತು ನಮ್ಮ ಕನ್ನಡನಾಡಿನೊಳಗೆ ಹುಟ್ಟಿರುವ ಸಾಹಿತ್ಯ ವಿಷಯ
ವಾದ ಚಟುವಟಿಕೆಯನ್ನು ಕಂಡು, ಕೆಲಕೆವು ಅಸಹಿಷ್ಣುಗಳಾದ ಪಿಸುಣರಿಗೆ ಇದರ
ಬಗ್ಗೆ ನಗಚಾಟಿಕೆಯು ಅನಿಸಬಹುದು. ಅಷ್ಟೇಕೆ? ನಾವೇ ಸ್ವತಃ ನಮ್ಮ ಕಿವಿಯಿಂ

ವಲೇ ಇಂಥ ಅನೇಕ ಹಾಸ್ಯಾಸ್ಪದ ಮಾತುಗಳನ್ನು ಕೇಳಿದ್ದೇವೆ. ಆದರೆ, ದೂರಿಂದ ಲೇ ಹೀಗೆ ಮೂಗು ಮುರಿಯುವವರು ಯಾವಾಗಲೂ ಲಕ್ಷದಲ್ಲಿಡಕ್ಕದ್ದೇನಂದರೆ— ಸಾಹಿತ್ಯ ಕ್ಷೇತ್ರದೊಳಗೆ ಹೆಜ್ಜೆಯನ್ನಿಕ್ಕುವವರಿಗೆ ಅವರ ಆಳವನ್ನು ತಿಳಿಯದೆ ಚೇಷ್ಟೆ ಮಾಡಲಿ, ಅಥವಾ ಒಂದು ಪಕ್ಷಕ್ಕೆ ಆ ಸಂಪಾದಕರಲ್ಲಿ ಪತ್ರಿಕೆಯನ್ನು ನಡೆಯಿಸುವಷ್ಟು ಸಾಮರ್ಥ್ಯವಿಲ್ಲದಿರಲಿ—ಅದು ಹೇಗೆ ಇರಲಿ, ಇಂಥ ಚಟುವಟಿಕೆಯಿಂದ ಸಾಹಿತ್ಯದ ಪ್ರಗತಿಗೆ ಬಹ್ವಂಶದಿಂದ ಮುಂಜೋಲಿಯೇ ಆಗುತ್ತದೆ ಹೊರತು, ಅದರಿಂದ ಯಾವ ಬಗೆಯ ಹಿಂಜೋಲಿಯಾಗಲಾರದು. ಈ ಹೊತ್ತಿಗೆ ಅತ್ಯಂತ ಸುಸ್ಥಿತಿಗೆ ಬಂದ ಸಾಹಿತ್ಯಗಳನ್ನೆಲ್ಲ ಸೂಕ್ಷ್ಮರೂಪದಿಂದ ನಿರೀಕ್ಷಿಸಿದರೆ, ಅವುಗಳ ಪ್ರಗತಿಯು ಹೀಗೆ ಏಳು ಬೀಳು ಕ್ರಮದಿಂದಲೇ. ಕನ್ನಡಿಗರಾದ ನಾವೇನು ಈ ಬಗ್ಗೆ ಖೇದ ಅಥವಾ ನಾಚಿಕೆಯನ್ನು ವಹಿಸುವ ಕಾರಣವಿಲ್ಲ. ಇನ್ನೂ ಅನೇಕ ಮಾಸಿಕಪುಸ್ತಕಗಳೂ, ವಾರಪತ್ರಗಳೂ, ದೈನಿಕಪತ್ರಿಕೆಗಳೂ ಹುಟ್ಟಲೆಂದೇ ನಾವು ದೇವರನ್ನು ಪ್ರಾರ್ಥಿಸುತ್ತೇವೆ.

ಈ ವಿಷಯವಲ್ಲಿ ಕನ್ನಡನಾಡಿನೊಳಗೆ, ಅದೇಕೆ? ಬಹುತರವಾಗಿ ಎಲ್ಲ ಕಡೆಯಲ್ಲೂ ಒಡೆದು ಕಾಣಿಸುವಂಥ ಮತ್ತೊಂದು ವೈಲಕ್ಷಣ್ಯವೇನಂದರೆ— ಮಾಸ ಪತ್ರಿಕೆಯ ವಿಚಾರವು ಮೊದಮೊದಲು ಅರ್ಧಶಿಕ್ಷಿತ ಜನರ ತಲೆಯಲ್ಲಿಯೇ—ಅದರಲ್ಲಿ ದುಡ್ಡಿಲ್ಲದವರ ತಲೆಯಲ್ಲಿ ಹಣಕಿ ಹಾಕುತ್ತದೆ. ಸುಶಿಕ್ಷಿತರಾದವರು ಇದರ ಬಗ್ಗೆ ವಿಚಾರಿಸುವದಿಲ್ಲ; ವಿಚಾರಿಸಿದರೂ ಅದು ಕಡೆಬಾಳುವದಿಲ್ಲ. ಶ್ರೀಮಂತರ ತಲೆಯಲ್ಲಿಂತೂ ಅದು ಇಣಿಕಿಹಾಕಿದೊಡನೆಯೇ ಪ್ರಾಯಶ್ಚಿತ್ತ ಹೊಂದುತ್ತದೆ. ಇದ್ದು ಬಿಡ್ಡು ಉಳಿದವರಂದರೆ, ಅರ್ಧ ಶಿಕ್ಷಿತ ಮತ್ತು ಅರ್ಧ ಶ್ರೀಮಂತರು— ಕೈಮೇಲೆ ಹೊಟ್ಟೆ ತುಂಬಿಕೊಳ್ಳುವರೇ ಈ ಉದ್ಯೋಗಕ್ಕೆ ಕೈ ಹಾಕುತ್ತಾರೆ. ಸದ್ಯದ ನಮ್ಮ ನಾಡಿನಲ್ಲಂತೂ ಇದರ ಪ್ರತೀತಿಯು ಚನ್ನಾಗಿಯೇ ಬರುವಂತಿದೆ. ಈಗೀಗೇನೋ ಅಶಿಕ್ಷಿತರ ಸಾಹಸವನ್ನು ನೋಡಿ ನಾಚಿಕೊಂಡು ನಮ್ಮ ಸುಶಿಕ್ಷಿತ ಪದವೀಧರರಾದ ಬಂಧುಗಳು ಇತ್ತಕಡೆಗೆ ಮನಸ್ಸು ಹಾಕಿರುವರು; ಆದಗೂ ಕಡಿಮೆ, ಇರಲಿ. ಈ ಬಗ್ಗೆ ನಾವು, ನಮ್ಮಲ್ಲಿ ಸ್ವದೇಶ ಭಕ್ತಿಯ ಅಂಕುರವು ನಿಜವಾಗಿರುವ ಪಕ್ಷಕ್ಕೆ ಎಷ್ಟು ಮಾತ್ರಕ್ಕೂ ನಾಚಿಕೆ ಪಡದೆ, ನಮ್ಮ ಕರ್ತವ್ಯಗಳನ್ನು ಮಾಡಲಿಕ್ಕೆ ಹಿಂಜರಿಯಬಾರದು ಪರಸ್ಪರ ಸಹಾಯ ಬುದ್ಧಿಯು ನಮ್ಮಲ್ಲಿ ಎಲ್ಲಿಯ ವರೆಗೆ ಮೂಡಿಲ್ಲವೋ, ಅಲ್ಲಿಯ ವರೆಗೆ ಪತ್ರಸಂಪಾದಕರಿಗೆ ಬಹಳ ಶ್ರಮಬಡಬೇಕಾಗುವದಾದರೂ, ನಮ್ಮ ಕನ್ನಡ ನಾಡಿನ ಸಂಪಾದಕ ವರ್ಗವು ಎಳ್ಳಷ್ಟಾದರೂ ಎದೆಗುಂದದೆ, ಧೈರ್ಯದಿಂದ ತಮ್ಮ ತಾಯ್ನುಡಿಯ ಸೇವೆಯನ್ನು ಸಾಗಿಸಲಿಕ್ಕೆಬೇಕು.

ಸಾಂಪ್ರತ, ಕನ್ನಡ ಸಂಪಾದಕರು ಮೊದಲು ಎದುರಿಸಬೇಕಾದ ದೊಡ್ಡ ಎ: ರುಗಲ್ಲೆಂದರೆ **ಮೂಢ ಲೋಕಮತವು.** ಆ ಲೋಕಮತವನ್ನೇ ಅವರು ಹೆಚ್ಚಿ ರೇಗಿಸದೆ, ಹುಂ ಎನ್ನುತ್ತ ತಮ್ಮ ಕಾರ್ಯವನ್ನು ಬಿಡದಲೆ ನೇಟಿನಿಂದ ತಮ್ಮ ಧ್ಯ ಯದ ನಿಟ್ಟುಹಿಡಿದು ಸಾಗಿಸಿದರೆ, ಈಹೊತ್ತಿಲ್ಲ ನಾಳೆಯಾದರೂ ಅವರಿಗೆ ಹಬ್ಬ ದಿವಸವನ್ನು ನೋಡುವ ಪ್ರಸಂಗವು ಬಾರದಿರದು. ನಾವೇನು ಬಂದೆರಡು ಶಬ್ದಗ ನ್ನು ನಮ್ಮ ಬಂಧುವರ್ಗದ ಉತ್ತೇಜನಕ್ಕಾಗಿ ಬರೆದಿರುವೆವೋ, ಅವು ನಮಗೂ ತ ತ್ತುತ್ತವೆ. ಮುಖ್ಯವಾಗಿ "ಕರ್ತೃವಿನ ಮನಸ್ಸಿನಲ್ಲಿ ಶುದ್ಧ ಹೇತುವೊಂದಿದ್ದರೆ ಸಾಕು ಅದೊಂದರಿಂದ ಅವನು ಈ ಪ್ರಪಂಚವನ್ನೇ ಗೆಲ್ಲಬಹುದು;" ಎಂಬ ಸ್ವಾಮಿ **ವಿವೇಕಾನಂದ**ರ ಮುತ್ತಿನಂಥ ಮಾತನ್ನು ನಾವು ಕಣ್ಣು ಮುಂದಿರಿಸಿಕೊಂಡೆ ಇದಕ್ಕೆ ಕೈಹಾಕಿರುವೆವು.

ಇನ್ನು ಮುಂದೆ ಬೇಗನೆ "**ಕರ್ನಾಟಕ ಶಿಕ್ಷಣ**" ವೆಂಬ ಹೆಸರಿನಿಂದ ಈ ದ್ವೈಮಾಸಿಕವನ್ನು ಮಾಸಪತ್ರಿಕೆಯನ್ನಾಗಿ ಮಾಡುವದು ನಿಶ್ಚೈಸಿರುತ್ತದೆ. ಆ ದಕ್ಕಾಗಿ ನಾವು ಯಾವ ಗುರಿಯನ್ನಿರಿಸಿಕೊಂಡು ಕೆಲಸ ಮಾಡುವೆವೆಂಬ ಬಗ್ಗೆ ಇದ ಕ್ಕೂ ಹೆಚ್ಚು ವಿಸ್ತರಿಸಿ ಹೇಳಬೇಕಾಗಿಲ್ಲ. ನಮಗೆ ತಿಳಿದಷ್ಟನ್ನು, ಗೊತ್ತಿರುವವನ್ನು, ನೋಡಿದ್ದನ್ನು, ಓದಿದ್ದನ್ನು ನಾವು ಕನ್ನಡಿಗರಿಗೆ ತಿಳಿಯ ಪಡಿಸಿ, ಅವರ ಬಂಧು ಪ್ರೇ ಮವನ್ನು ಜಾಗ್ರತಗೊಳಿಸಬೇಕೆಂಬುದೇ ನಮ್ಮ ಹಂಬಲವು. ನಮ್ಮಿಂದ ಇಷ್ಟೊಂ ದು ಕಾರ್ಯವು ನಿರಾಯಾಸವಾಗಿ ಸಾಗಿದರೆ, ನಾವು ಧನ್ಯರಾದೆವೆಂದು ಬಗೆಯ ವವು. ಆದರೆ, ಅದಾದರೂ ಸುಲಭವೇ? ಅದನ್ನು ವಾಚಕರೇ-ಕನ್ನಡಿಗರೇ-ಅನು ಕೂಲ ಪಡಿಸಬೇಕೇ ಹೊರತು ಇನ್ನಾರು!

ಬಂಧುಗಳೇ, **अल्पारंभो क्षेमकरः** ಎಂಬ ಸವಿನುಡಿಯಂತೆ, ಹೂಂ ಎಂದು ಮೊದಲೇ ರಗಳೆಯನ್ನೆ ಬೆಳಿಸದೆ, ಸವಿ ಹಾಗು ಸ್ವಲ್ಪ ಮಾತಿನಿಂದಲೇ ನಮ್ಮ ಮ ನೋದಯವನ್ನು ನಿಮಗೆ ತಿಳಿಸಿ ನಿಲ್ಲುವೆವು. ಹೆಚ್ಚಿಗೇನು?

*　　*　　*　　*

Karnatak expects every man to do his duty."

ಕನ್ನಡಿಗರಿಗೆ ವಿನಂತಿ:— ಸಾಂಪತ್ರ ಕಾಲಕ್ಕೆ ದೇಶೋನ್ನತಿಗಾಗಿ ಹೆಣ ಗಾಡುತ್ತಿರುವ ನಾ..ರು ಮೇಲ್ಕಾಣಿಸಿದ ಆಂಗ್ಲ ದೇಶಭಕ್ತನ ವಚನವನ್ನು ಎದೆ ಯ ಮೇಲೆ ಕೊರೆದಿಡಲಿಕ್ಕೆಬೇಕು ಕನ್ನಡನಾಡು ಸರ್ವತೋಪರಿ ಹೀನಸ್ಥಿತಿಗೀಡಾ ಗಿ, ಸರ್ವಾಂಗ ಸುಧಾರಣೆಯನ್ನು ಅಪೇಕ್ಷಿಸುತ್ತಿದ್ದರೂ, ಸುಧಾರಣೆಯ ಭಾರವನ್ನೆಲ್ಲ ಒಬ್ಬಿಬ್ಬರೇ ವಹಿಸಿಕೊಳ್ಳುತ್ತೇವೆಂದು ಹವಾಲಿ ತೆಗೆದುಕೊಳ್ಳುವದು ಯುಕ್ತವಲ್ಲ; ಸಾಧ್ಯವೂ ಅಲ್ಲ. ಕನ್ನಡಿಗರಾದ ಪ್ರತಿಯೊಬ್ಬರು ತಮತಮಗೆ ಯುಕ್ತವೆಂದೆಣಿಸಿದ

ಮಾರ್ಗವನ್ನನುಸರಿಸಿ, ಕನ್ನಡ ನಾಡಿನ ಪ್ರಗತಿಗೆ ಸಹಾಯ ಮಾಡತಕ್ಕದ್ದು. ಕನ್ನಡ ನಾಡಿನ ಸದ್ಯದ ದುಃಸ್ಥಿತಿಯ ವಿಷಯವಾಗಿ ವಿಚಾರಮಾಡಲಾರಂಭಿಸಿದರೆ, ವಿಚಾರವಂತನ ಮನಸ್ಸು ಮರಗುವದು. ಒಂದು ಕೋಟಿ ಮಕ್ಕಳಿರುವ ಕರ್ನಾಟಕ ಮಾತೆಯು ಪರದೇಶಿಯಂತೆ, ಮಿಕ್ಕ ಜನಾಂಗದವರ ಮುಂದೆ ಮೋರೆ ಕೆಳಗೆ ಹಾಕಿಕೊಂಡು, ಹರಕು ಬಟ್ಟೆಯನ್ನುಟ್ಟು ಜೀವಿಸುವದೆಂದರೆ ಅತ್ಯಂತ ನಾಚಿಕೆಗೇಡು! ನಿಜವಾಗಿ ಜೀವಿಸುವದೇ ಆದರೆ ಈ ತೆರನಾಗಿ ಜೀವಿಸುವದು ಎಷ್ಟುಮಾತ್ರವೂ ಇಷ್ಟವಲ್ಲ.

ಎರಡೇ ಮಾತಿನಲ್ಲಿ ಹೇಳುವದೆಂದರೆ— ರಾಜಕಾರಣ ಚತುರರು ರಾಜಕೀಯ ಸುಧಾರಣೆಯಲ್ಲಿಯೂ, ಸಾಮಾಜಿಕರು ಸಮಾಜ ಸುಧಾರಣೆಯಲ್ಲೂ, ನೀತಿವಂತರು ಜನರ ನೈತಿಕ ಸುಧಾರಣೆಯಲ್ಲಿಯೂ, ಲೇಖನ ಪ್ರಿಯರು ಲೇಖನದಿಂದಲೂ, ವಾಕ್ಚತುರರು ವ್ಯಾಖ್ಯಾನದಿಂದಲೂ, ಶ್ರೀಮಂತರು ಧನದಿಂದಲೂ ಕನ್ನಡ ನಾಡಿನ ಅಭ್ಯುದಯಕ್ಕೆ ಶುದ್ಧ ಭಾವನೆಯಿಂದ ಪ್ರಯತ್ನಿಸಬೇಕೆಂಬವೇ ನಮ್ಮ ಮುಖ್ಯ ಆಶಯವು.

ಧನ್ಯವಾಗಲಿ ನಮ್ಮ ಹಿರಿಯ ಕನ್ನಡನಾಡು ।
ಧಾನ್ಯಧನ ವಿಜ್ಞಾನ ಕೋಶವೆನಿಸಿ ॥

— ನಾರಾಯಣಶರ್ಮಾ.

ಗಣಿತ ಚಮತ್ಕಾರವು.

:(*):

೧೨	೨೧	೧೯	೧೦	೩
೧	೧೪	೨೫	೧೮	೭
೯	೫	೧೩	೨೨	೧೬
೨೦	೮	೨	೧೧	೨೪
೨೩	೧೭	೬	೪	೧೫

ಈ ಚೌರಸದಲ್ಲಿ ಒಟ್ಟು ಇಪ್ಪತ್ತೈದು ಮನೆಗಳು ಅವೆ. ಇದರಲ್ಲಿ ಒಂದರಿಂದ ಇಪ್ಪತ್ತೈದರ ವರೆಗೆ ಅಂಕಿಗಳನ್ನು ಅಡ್ಡ, ಉದ್ದ, ಮತ್ತು ಮೂಲೆಗಳ ಸಾಲುಗಳಲ್ಲಿದ್ದ ಐದು ಮನೆಗಳ ಬೇರೀಜು ಒಂದೇ ಅಂದರೆ ೬೫ ಬರುವಂತೆ ತುಂಬಿರುತ್ತದೆ. ಆದರೆ ಈ ಅಂಕೆಗಳು ಲಕ್ಷದಲ್ಲಿರುವದು ಬಹಳೇ ಕಠಿಣ. ಆದ್ದರಿಂದ ಇದರ ದೆಶೆಯಿಂದ ಒಂದು ರೀತಿಯನ್ನು ತಯಾರ ಮಾಡಿ, ಅದರ ಸಹಾಯದಿಂದ ಅನೇಕ ಪ್ರಕಾರವಾಗಿ ತುಂಬಿಕೊಳ್ಳಲಿಕ್ಕೆ ಬರುವದು. ಅದು ಕೆಳಗೆ ಬರೆದಂತೆ—

೨	೧	೪	೫	೩
೧	೪	೫	೩	೨
೪	೫	೩	೨	೧
೫	೩	೨	೧	೪
೩	೨	೧	೪	೫

೧೦	೨೦	೧೫	೫	೦
೦	೧೦	೨೦	೧೫	೫
೫	೦	೧೦	೨೦	೧೫
೧೫	೫	೦	೧೦	೨೦
೨೦	೧೫	೫	೦	೧೦

ಈ ಎರಡು ಚೌರಸಗಳಲ್ಲಿ ಅಂಕೆಗಳನ್ನು ತುಂಬಿದ್ದು ಮನಸ್ಸಿನಲ್ಲಿ ಹೀಗೆ ಬರುವದು. ಮೊದಲಿನ ಚೌರಸದಲ್ಲಿ, ೧, ೨, ೩, ೪, ೫ ಈ ಅಂಕೆಗಳು. ಎರಡನೇಚೌರಸದಲ್ಲಿ, ೦, ೫, ೧೦, ೧೫. ೨೦ ಈ ಅಂಕೆಗಳು ಅಡ್ಡ ಮತ್ತು ಉದ್ದ ಸಾಲುಗಳಲ್ಲಿ ಬಂದ ಅಂಕೆಯು ಎರಡುಸಾರೆ ಬರದಂತೆ ತುಂಬಲ್ಪಟ್ಟಿರುವವು. ಇದೇ ರೀತಿಯಿಂದ ಮೊದಲಿನ ಚೌರಸದಲ್ಲಿ ಎಡಗಡೆ ಮತ್ತು ಎರಡನೇ ಚೌರಸದಲ್ಲಿ ಬಲಗಡೆಯ ಮೂಲಿಯು ಮೇಲೆ ನೋಡಿದರ ಬರೆದ ಅಂಕೆಯೇ ಬಂದಿರುವದು. ಇದೇಮಾತು ಈ ಎರಡು ಚೌರಸಗಳಲ್ಲಿ ಕಂಡುಬರುವದು. ಮುಂದೆ ಈ ಚೌರಸಗಳನ್ನು ಒಂದರ ಮೇಲೆ ಒಂದನ್ನು ಇಟ್ಟಿರುತ್ತದೆಂದು ಕಲ್ಪನೆಯನ್ನು ಮಾಡಿ, ಪ್ರತ್ಯೇಕ ಮನೆಗಳ ಬೇರೀಜು ಕ್ರಮವಾಗಿ ಇಡಲು, ಪ್ರಾರಂಭದಲ್ಲಿ ಕೊಟ್ಟ ಅಂಕೆಗಳಚೌರಸ ತಯಾರಾಗುವದು. ಉದಾಹರಣಾರ್ಥ ಎಡಗೈ ಕಡೆಯ ಮೂಲೆಗಳ ಮನೆಗಳ ಅಂಕೆಗಳು ೨, ವ ೧೦, ಕೂಡಿಸಿದರೆ ೧೨, ಈ ಅಂಕೆಯನ್ನು ಹೊಸ ಚೌರಸದ ಎಡಗಡೆಯ ಮೂಲೆಯಲಿ ಇದ್ದ ಮನೆಯಲ್ಲಿ ತುಂಬಿದೆ. ಈ ಪ್ರಕಾರ ಅನೇಕ ಚೌರಸ ತಯಾರ ಮಾಡಲಿಕ್ಕೆ ಬರುವದು. ಈ ಯುಮ ಮಾತ್ರ ವಿಷಮ ಮನೆಗಳು (ಅಂದರೆ ೩. ೫, ೭, ೯ ಇತ್ಯಾದಿ) ಚೌರಸಗಳಿಗೆ ಹತ್ತುವದು. ಕಲಿಯಲಿಚ್ಛಿಸುವವರು ಈ ರೀತಿಯಿಂದ ಚೌರಸ ತುಂಬಿ ನೋಡಿಕೊಳ್ಳಬಹುದು. ಅದರಿಂದ ವಹಿವಾಟಿಯಾಗಿ ಅಂಕೆಗಳನ್ನು ತುಂಬಲಿಕ್ಕೆ ಅನಾಯಾಸವಾಗಿ ಸೋಯಿ ಆಗುವದು. ಇಂಥ ಚಮತ್ಕಾರಗಳಿಂದ, ಬೇಸಲವಾದ ಮನಸ್ಸಿಗೆ ಸುಲಭವಾಗಿ ಆರಾಮವೆನಿಸುತ್ತದೆ.

— ಅಮೀನ ಅಲ್ಲೀಸಾ॥ ಟಪಾಲ.

ಉರ್ದು ಶಾಲಾ ಮಾ ಬಾಗಲಕೋಟಿ.

ಬಾಲಕರ ಶುಶ್ರೂಷೆ.

(ಲೇಖಾಂಕ ೪)

ತಾಯಿಗೆ ಬಾಲಕರ ಶರೀರದ ಶುಶ್ರೂಷೆಯನ್ನು ಮಾಡುವ ಜ್ಞಾನವು ಹೇಗ ಅವಶ್ಯವೋ ಅದರಂತೆ, ಬಾಲಕರಿಗೆ ಪದಾರ್ಥಗಳ ಜ್ಞಾನವೂ ಅವುಗಳ ಉಪಯೋಗವೂ ಹೇಗೆ ಆಗಬೇಕು, ಶಿಕ್ಷಣವನ್ನು ಹೇಗೆ ಕೊಡಬೇಕು, ಅವರಿಗೆ ವಿವೇಕವನ್ನು ಹೇಗೆ ಕಲಿಸಬೇಕು, ಅವರ ಶೋಧನ ಶಕ್ತಿಯನ್ನು ಹೇಗೆ ಬಲಪಡಿಸಬೇಕು, ಇಹಪರ ಲೋಕಗಳಿಗೆ ಸಾಧನೀಭೂತವಾದ ಸತ್ಯವೆಂಬ ಅಮೃತವನ್ನು ಹೇಗೆ ಪಾನ ಮಾಡಿಸಬೇಕು ಇವುಗಳ ಜ್ಞಾನವಾದರೂ ತಾಯಿಗೆ ಅವಶ್ಯವಾಗಿರಬೇಕೆಂದು ವೈದ್ಯ ಶಾಸ್ತ್ರಜ್ಞರ ಅಭಿಪ್ರಾಯವಿರುತ್ತದೆ. ತಾಯಿತಂದೆಗಳ ಸುಖವು ಮಕ್ಕಳ ಮೇಲೆಯೇ ಅವಲಂಬಿಸಿರುವದರಿಂದಲೂ, ಮಕ್ಕಳ ಹೃದಯದಲ್ಲಿ ಸದ್ಗುಣದ ಬೀಜವನ್ನು ಬಿತ್ತುವ ಅತ್ಯಂತ ಮಹತ್ವದ ಕೆಲಸದ ಜ್ಞಾನವು ತಾಯಿಗೆ ಇರಬೇಕೆಂದು ಬೇರೆ ಹೇಳುವ ಕಾರಣವಿಲ್ಲ.

ಸದೃಢವಾಗಿಯೂ, ನಿರೋಗಿಯಾಗಿಯೂ ಆನಂದಯುಕ್ತವಾಗಿಯೂ ಇರುವ ಮಕ್ಕಳು ಯಾವ ಮನೆಯಲ್ಲಿರುವದಿಲ್ಲವೋ ಅಲ್ಲಿ ಸುಖದ ಲೇಶವಾದರೂ ಇರುವದಿಲ್ಲೆಂದು ಖಂಡಿತವಾಗಿ ಹೇಳಬಹುದು. ಒಂದೂವರೆ ತಿಂಗಳ ಕೂಸಿನ ಕಡೆಗೆ ನಾವು ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ, ನಮ್ಮ ಮುದ್ರೆಯು ರೂಪವು ಕನ್ನಡಿಯಲ್ಲಿ ಕಾಣಿಸುವಂತೆ, ಮಕ್ಕಳ ಮುಖಚರ್ಯೆಯ ಮೇಲೆ ತದಾಕಾರ ರೂಪವು ಮೂಡುತ್ತಿರುವದನ್ನು ನೋಡಿದರೆ, ಹುಡುಗರು ದೊಡ್ಡವರಾದ ಮೇಲೆ ಅವರ ಸದಸದ್ವಿಚಾರ ಶಕ್ತಿಯೂ, ನಡೆನುಡಿಗಳೂ ಬಾಲ್ಯತನದ ಶಿಕ್ಷಣದ ಪರಿಣಾಮಗಳಾಗಿರುತ್ತವೆಂದು ಸಹಜವಾಗಿ ತಿಳಿದು ಬರುವದು. ಬಾಲ್ಯಾವಸ್ಥೆಯೂ ಅದರ ಅಸ್ಫುಟ ವೃತ್ತಿಯೂ ಮಣ್ಣಿನ ಮುದ್ದೆಯಂತಿರುವವು ಅದರಿಂದ ಬೇಕಾದ ಮೂರ್ತಿಯನ್ನು ಮಾಡಬಹುದು. ಮನುಷ್ಯನು ಪ್ರಬುದ್ಧನಾದ ಮೇಲೆ, ಅವನ ಗುಣದೋಷಗಳಿಂದುಂಟಾಗುವ ಕೀರ್ತಿ ಅಪಮಾನಗಳಿಗೆ ಅವನನ್ನು ಪೋಷಿಸಿ ನಡೆನುಡಿಗಳನ್ನು ಕಲಿಸಿದವರೇ ಕಾರಣರಾಗುತ್ತಾರೆ. ತಾಯಿ ತಂದೆಗಳು ಮಕ್ಕಳ ದೋಷಗಳನ್ನು ಬಾಲ್ಯದಲ್ಲಿಯೇ ನಿವಾರಣೆಮಾಡದಿದ್ದರೆ ಅದರಿಂದುಂಟಾಗುವ ಘೋರತರವಾದ ಪರಿಣಾಮಕ್ಕೆ ಅವರೇ ಕಾರಣರಾಗುತ್ತಾರೆಂಬ ಬಗ್ಗೆ ಇತಿಹಾಸದಲ್ಲಿ ಅನೇಕ ಉದಾಹರಣೆಗಳು ದೊರಕುವವು ಪ್ರತ್ಯಕ್ಷ ವ್ಯವಹಾರದಲ್ಲಿಯೂ ಇಂಥ ಉದಾಹರಣೆಗಳನ್ನು ನಾವು ನೋಡೇ ನೋಡುತ್ತೇವೆ

ರಶಿಯಾ ದೇಶದಲ್ಲಿ **ಪೀಟರದಿಗ್ರೇಟ**ನೆಂಬ ಚಕ್ರವರ್ತಿಯು ಆಗಿಹೋದನ ಅವನು ಅನೇಕವಿದ್ಯೆಗಳನ್ನು ಕಲಿತು, ಭೂಮಿಯ ಮೇಲಿನ ಯಾವತ್ತು ರಾಜರು ನುಕರಣ ಮಾಡುವಂತೆ ರಾಜ್ಯಕಾರಭಾರವನ್ನು ಮಾಡಿ ಶಾಶ್ವತವಾದ ಕೀರ್ತಿಂ ಪಡೆದನು. ಸ್ವಭಾವತಃ ಅವನು ಒಳ್ಳೇ ಬುದ್ಧಿಯುಳ್ಳವನಿದ್ದಾಗ್ಯೂ, ಬಾಲ್ಯದಲ್ಲಿ ಅ ನಿಗೆ ಒಳ್ಳೇ ಸಹವಾಸವು ದೊರೆಯದಿದ್ದದರಿಂದ, ಅವನಲ್ಲಿ ಕಾಮ ಕ್ರೋಧಗಃ ಬಹು ಪ್ರಬಲವಾಗಿದ್ದವು ಈ ಗುಣಗಳು ತನ್ನ ಪದವಿಗೆ ಅನುಚಿತವಾದವುಗಳೆಂ ತಿಳಿದು ಅವನು ಯಾವಾಗಲು ಪಶ್ಚಾತ್ತಾಪ ಪಡುತ್ತಿದ್ದನು. ಆದದರಿಂದ, ಬಾಲ್ಯ ಲ್ಲಿ ಮಕ್ಕಳ ಹೃದಯವೆಂಬ ಹೊಲದಲ್ಲಿ ಸದ್ಗುಣವೆಂಬ ಬೀಜವನ್ನು ಬಿತ್ತಿದರೆ ದಾಚರಣೆಯೆಂಬ ಗಿಡವು ಹುಟ್ಟಿ ಅದರಿಂದ ಮಾನ, ಧನ, ವಿದ್ಯಾ, ಕೀರ್ತಿ, ಸುಖ ಳೆಂಬ ಫಲಗಳು ದೊರಕುವವು. ಬಾಲ್ಯಕಾಲದಲ್ಲಿ ಮಕ್ಕಳಿಗೆ ಯ್ಯಾವಾಗಲೂ ಸತ್ಸ ವಾಸವು ದೊರೆಯುವದು ಎಷ್ಟು ಮಹತ್ವವಾದದ್ದೆಂಬದನ್ನು ತಾಯಿತಂದೆಗಳು ಚ ನ್ನಾಗಿ ಲಕ್ಷದಲ್ಲಿಡತಕ್ಕದ್ದು. ಚಿಕ್ಕಂದಿನ ಸ್ವಾಭಾವಿಕವಾದ ಉಲ್ಹಾಸವೃತ್ತಿಯ ಹುಡ ಗರ ಸ್ವಭಾವವನ್ನು ತಾಯಿತಂದೆಗಳು ತಮ್ಮ ಶುದ್ಧವಾದ ಆಚರಣೆ ಸದುಪದೇಶ ಳಿಂದ ಉತ್ತರೋತ್ತರ ಬೆಳೆಯಿಸಿ, ಸುಶೀಲತ್ವವನ್ನೂ ಆಜ್ಞಾಧಾರಕತ್ವವನ್ನೂ, ಕೆಟ್ಟ ಕೆಲಸಗಳ ಬಗ್ಗೆ ತಿರಸ್ಕಾರವನ್ನೂ ಅವರಲ್ಲಿ ಉಂಟು ಮಾಡಲಿಕ್ಕೆ ಯತ್ನಿಸತಕ್ಕದ್ದು

ಬಾಲಕರಿಗೆ ಮಾನಸಿಕ ಶಿಕ್ಷಣವನ್ನು ಹೇಗೆ ಕೊಡಬೇಕೆಂಬದರ ಜ್ಞಾನವು ತ ಯಿಗೆ ಚನ್ನಾಗಿ ಇರಲಿಕ್ಕೆ ಬೇಕು. ಯಾಕಂದರೆ, ಗರ್ಭಧಾರಣ ಮೊದಲ್ಗೊಂಡ ಜನನವಾಗುವ ವರೆಗೂ ತಾಯಿಯ ರಕ್ತ ಮಾಂಸಗಳ ಸಂಸರ್ಗದಿಂದಲೂ, ಜನ್ಮ ವಾದಮೇಲೆ ಇತರ ಪದಾರ್ಥಗಳನ್ನು ತಿನ್ನುವ ಯೋಗ್ಯತೆಯು ಬರುವವರೆ ತಾಯಿಯ ಸ್ತನ್ಯಪಾನದಿಂದಲೂ ಮಗುವಿನ ಪೋಷಣೆಯಾಗುತ್ತಿರುವದರಿಂದ ಮ ನುಷ್ಯನ ಶರೀರದಲ್ಲಿ ತಾಯಿಯ ರಕ್ತಭಾಗವೇ ಹೆಚ್ಚಾಗಿರುತ್ತದೆಂದೆನ್ನಲಿಕ್ಕೆ ಅಡ್ಡಿ ಇಲ್ಲ. ಆ ಮೇಲೆ ತಾಯಿಯು ಆಡುವ ಮಾತುಗಳನ್ನೂ, ಮಾಡುವ ಕೆಲಸಗಳ ನ್ನೂ ಮಕ್ಕಳು ಕಲಿಯುವದರಿಂದ ಎಲ್ಲ ವಿಷಯಗಳಲ್ಲಿಯೂ ಮಕ್ಕಳು ತಾಯಿಯ ನ್ನೇ ಅನುಕರಿಸುತ್ತಾರೆಂದು ಪಂಡಿತರ ಅಭಿಪ್ರಾಯವದೆ. ಆದದರಿಂದ ತಾಯಿಯ ಸ್ವಭಾವವೂ ಆಚರಣೆಯೂ ಶುದ್ಧವಾಗಿರಬೇಕು. ಬಾಲಕರ ಸಣ್ಣ ಪುಟ್ಟ ತಪ್ಪುಗಳ ವಿಷಯಕ್ಕೆ ದುರ್ಲಕ್ಷ ಮಾಡಬಾರದು. ಮೂರು ನಾಲ್ಕು ವರುಷ ವಯಸ್ಸುಳ್ಳ ಹು ಡುಗರಿಗೆ ಬಹಳಮಾಡಿ ತಮ್ಮ ದುರ್ಬಲತೆಯು ತಿಳಿಯಹತ್ತುವದರಿಂದ, ಅವು ತಾ ಯಿತಂದೆಗಳ ಕೂಡ ಸ್ವಾಭಾವಿಕವಾದ ಸಲಿಗೆಯಕಿಂತಲೂ ಹೆಚ್ಚು ಸಲಿಗೆ ಮಾ ಡಹತ್ತುತ್ತವೆ. ಈಗ್ಗೆ ತಾಯಿತಂದೆಗಳಿಬ್ಬರೂ ಸಾರಾಸಾರ ವಿಚಾರದಿಂದಲೇ ವರ್ತಿ ಸತಕ್ಕದ್ದು.

ಅತಿ ಪ್ರೀತಿಮಾಡುವದರಿಂದ ಹುಡುಗರು ಕೆಡುವಂತೆ ಅತಿ ಶಿಕ್ಷಿಸುವದಾದರೂ ಅಷ್ಟೇ ಅಥವಾ ಅದಕ್ಕೂ ಹೆಚ್ಚು ಕೆಟ್ಟದ್ದೆಂದು ಹೇಳಬಹುದು. ವಿಶೇಷ ಪ್ರೀತಿಮಾಡುವದರಿಂದ ಹುಡುಗರು ಹಟಮಾರಿಗಳೂ, ತಂದೆತಾಯಿಗಳ ವಿಷಯವಾಗಿ ನಿಷ್ಕಾಳಜಿಯುಳ್ಳವರೂ ಆಗುವಂತೆ, ಅತಿ ಶಿಕ್ಷಿಸುವದರಿಂದ ಹುಡುಗರ ಉಲ್ಲಾಸವೂ ಆನಂದವೂ ಇಲ್ಲದಂತಾಗಿ, ಅವರ ಜಿಜ್ಞಾಸೆಯೂ ಮಹತ್ವಾಕಾಂಕ್ಷೆಯೂ ನಷ್ಟವಾಗಿ ತಂದೆತಾಯಿಗಳ ಮೇಲಿನ ಪ್ರೀತಿಯೂ ಕಡಿಮೆಯಾಗುತ್ತದೆ. ಮಾನಸಶಾಸ್ತ್ರ ಕೋವಿದರಾದ **ಸ್ಟೇಟಲಿ** ಸಾಹೇಬರು ತಮ್ಮ ಗ್ರಂಥದಲ್ಲಿ ಅಂದದ್ದೇನಂದರೆ:—"ಎಷ್ಟೋ ತಂದೆ ತಾಯಂದಿರು, ತಮ್ಮ ಹುಡುಗರು ಸಂಸಾರದಲ್ಲಿ ಮುಂದೆ ಅನೇಕ ಸಂಕಟಗಳನ್ನು ಅನುಭೋಗಿಸಬೇಕಾಗುತ್ತದೆಂತಲೂ, ಅವುಗಳ ಅನುಭವವು ಅವರಿಗಿರಬೇಕೆಂತಲೂ, ನಿರರ್ಥಕವಾದ ಕಲ್ಪನೆಗಳನ್ನು ಮಾಡಿ, ಅನೇಕ ದುಃಖಗಳ ನಿಗ್ರಹಮಾಡಲಿಕ್ಕೆ ಕಲಿಸುತ್ತಿರುತ್ತಾರೆ. ಇದು ಎಂಥ ಘಾತುಕತನದ ಮತ್ತು ಮೂರ್ಖತನದ ತಿಳುವಳಿಕೆಯು! ಸಂಸಾರದಲ್ಲಿ ಸುಖದ ಸಂಗಡ ದುಃಖವನ್ನು ಆಗಾಗ್ಗೆ ಅನುಭೋಗಿಸಬೇಕಾಗುತ್ತದೆಂಬಮಾತು ಅಕ್ಷರಶಃ ನಿಜವಾಗಿದ್ದರೂ, ಅನಿರ್ವಾಹ ಪ್ರಸಂಗದ ಹೊರತಾಗಿ ತಾವು ಸ್ವತಃ ಬಾಲಕರಿಗೆ ದುಃಖವನ್ನನುಭವಿಸುವಂತೆ ಮಾಡುವದು ಸರ್ವಥಾ ಯೋಗ್ಯವಲ್ಲ." ಆಶೆಯನ್ನು ತೋರಿಸಿ ನಿರಾಶೆಯನ್ನುಂಟುಮಾಡುವದೂ, ಸ್ವಭಾವ ಪರೀಕ್ಷೆಯ ನೆಪದಿಂದ ವ್ಯರ್ಥವಾಗಿ ಸಿಟ್ಟಿಗೆ ತರಿಸುವದೂ, ಧೈರ್ಯ, ಸಹನಶೀಲತೆಗಳುಂಟಾಗಬೇಕೆಂದು ಅವರಿಗೆ ತ್ರಾಸಕೊಡುವದೂ ಎಷ್ಟುಮಾತ್ರವೂ ಇಷ್ಟವಾದದ್ದಲ್ಲವೆಂಬದನ್ನು ಪಾಲಕರು ಚನ್ನಾಗಿ ಲಕ್ಷದಲ್ಲಿಡಬೇಕು.

—ವಾಸುದೇವಾಚಾರ್ಯ ಜಾಹಗೀರದಾರ,
ಬಾಗಲಕೋಟ.

ಪದ್ಯಬೋಧ. (ವೇದಾಂತ)

೬ನೇ ಇಯತ್ತೆ.

ವೇಳೆ:— ೩೦ ಮಿನಿಟು.

ಉದ್ದೇಶ:— ಜೀವ-ಶರೀರಗಳ ಭೇದವನ್ನು ತೋರಿಸಿ, ಜೀವ (ಆತ್ಮ)ನು ನಿತ್ಯವೆಂದೂ ದೇಹವು ಅನಿತ್ಯವೆಂದೂ ಸ್ಥಾಪಿಸುವದು.

ಉಪಕರಣಗಳು:— ಕರಿಹಲಿಗೆ, ಖಡು, ಆರನೆಯ ಪುಸ್ತಕ, ಮನುಷ್ಯನ

ಉಪೋದ್ಘಾತ:– ದೇಹವೆಂಬ ಪಟ್ಟಣದಲ್ಲಿ ಜೀವನೆಂಬ ಅರಸನಿರುತ್ತಾನೆ. ಆತನು ಯಾವಾಗಲು ಸುಖವನ್ನೇ ಬೇಡುತ್ತಿರುತ್ತಾನೆ. ಆತನ ಮಂತ್ರಿಯಾದ ಮನಸ್ಸೆಂಬವನು ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚವಿಷಯ ಸುಖಲೋಲುಪನಾದ ಜೀವನು ತಾನು ಯಾರು (ಆತ್ಮನು) ಎಂಬದನ್ನು ಮರೆತು, ಈ ದೇಹವೇ ತಾನೆಂದೂ ಸಂಸಾರ ಸುಖವೇ ಶಾಶ್ವತ ಸುಖವೆಂದೂ ನಂಬಿ ಪ್ರಪಂಚ ಮಾಡುತ್ತಿರಲು, ದೈವಗತಿಯಿಂದ ಸಂಸಾರದಲ್ಲೊದಗುವ ಕಷ್ಟನಷ್ಟಗಳಿಗೆ ಬೇಸತ್ತು, ಆ ಜೀವನು ಪರಮಾತ್ಮನಿಗೆ ಬೇಡಿಕೊಳ್ಳುವದೇನಂದರೆ—

(ಕರಿಯಹಲಿಗೆಯಮೇಲೆ)

೧ ಜಾತಿ–ಹಿಂದು, ಮುಸಲ್ಮಾನ, ಕ್ರಿಸ್ತಿ, ಬೌದ್ಧ, ಪಾರಸಿ, ಯಹುದಿ.

೨ ವರ್ಣ–ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ.

೩ ಕುಲ–ದೇಶಸ್ಥ, ಕೊಂಕಣಸ್ಥ, ಲಿಂಗವಂತ, ಜೈನ, ಕುರುಬ.

೪ ಆಶ್ರಮ--ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ.

೫ ರೂಪ–ಕುರೂಪ, ಸುರೂಪ, ಸಾಧಾರಣ.

೬ ನಾಮ– ರಾಮ, ಕೃಷ್ಣ, ಬಸವ, ಜಿನದತ್ತ, ಹನುಮಂತ.

"ಬ್ರಹ್ಮಬೀಜಮಿದಂ ಸರ್ವಂ ನಾನಾಯೋನಿ ಸಮುದ್ಭವಂ। ಅನ್ಯಜಾತಿ ವಿಜಾತೀನಾಂ ವರ್ಣಾನಾಂ ಕಿಂ ಪ್ರಯೋಜನಂ" ॥ (ಕೈವಲ್ಯನವನೀತ) ಬ್ರಹ್ಮಬೀಜದಿಂದ ಜಗತ್ತೆಲ್ಲ ನಿರ್ಮಾಣವಾಗಿದೆ. ಬ್ರಹ್ಮನು ಬ್ರಾಹ್ಮಣನೆಂದರೆ ಎಲ್ಲ ಪ್ರಾಣಿಗಳಿಗೆ ಬ್ರಾಹ್ಮಣರೆನ್ನಬೇಕಾಗುವದು; ಆತನು ಸುರೂಪಿ ಇದ್ದರೆ, ಎಲ್ಲರ ಮುಖವು ಸುರೂಪವಾಗಿರಬೇಕು; ಇಲ್ಲವೆ ಆತನು ಕುರೂಪಿ ಇದ್ದರೆ ಎಲ್ಲರೂ ಕುರೂಪಿಗಳಾಗಿರಬೇಕು. ಆದರೆ ಜಗತ್ತಿನಲ್ಲಿ ಒಬ್ಬನ ಮುಖದಂತೆ ಮತ್ತೊಬ್ಬನ ಮುಖವಿಲ್ಲ; ಒಬ್ಬನ ಧ್ವನಿಯಂತೆ ಇನ್ನೊಬ್ಬನ ಧ್ವನಿಯಿಲ್ಲ. ಆದುದರಿಂದ ಈ ಆರು ಲಕ್ಷಣಗಳು ಜೀವಕ್ಕೆ ಇಲ್ಲ. (ಮನುಷ್ಯನ ಚಿತ್ರವನ್ನು ತೋರಿಸಿ) ದೇಹಕ್ಕೆ ಮಾತ್ರ ಅವೆ. ದೇಹವಿರುವವರೆಗೆ ಇವೆಲ್ಲ ಲಕ್ಷಣಗಳು ಇರುತ್ತವೆ. ದೇಹವು ನಷ್ಟವಾದ ಕೂಡಲೆ ಇವುಗಳಲ್ಲಿ ಒಂದೂ ಉಳಿಯುವದಿಲ್ಲ. ದೇಹದೊಳಗಿನ ಜೀವ (ಆತ್ಮ)ನು ಕರ್ಮದಿಂದ ಮತ್ತೊಂದು ದೇಹವನ್ನು ಧರಿಸಿದಾಗ ಮೊದಲು ಮನುಷ್ಯನಿದ್ದವನು ಪಶುವಾಗಬಹುದು; ಬ್ರಾಹ್ಮಣನಿದ್ದವನು ಶೂದ್ರನಾಗಬಹುದು. ಕುರುಪಿ ಇದ್ದವನು ಸುರೂಪಿಯಾಗಬಹುದು. ಆದುದರಿಂದ ದೇಹವೇ ತಾನೆಂಬ ಭ್ರಾಂತಿಯುಳ್ಳ ಜೀವನು–ನಾನು ಬ್ರಾಹ್ಮಣನಿದ್ದೇನೆ, ನಾನು ಸರೂಪಿಯಿದ್ದೇನೆ, ನನ್ನ ಹೆಸರು ರಾಮನು ಮುಂತ

ಎನ್ನ ತಿನುತಿವೆ= ನನ್ನನ್ನು ಕಾಡಿಸುತ್ತವೆ.	ದ ಶರೀರದ ಲಕ್ಷಣಗಳು ತನಗೇ ಉಂಟೆಂದು ಭ್ರಾಂತಿಬಟ್ಟು ಮೇಲೆ "ಹೇಳಿದ ಆರು ಭ್ರಮೆಗಳು ನನ್ನನ್ನು ಕಾಡಿಸುತ್ತವೆ, ಕಾರಣ ಇವುಗಳಿಂದ ಮುಕ್ತ (ಬಿಡುಗಡೆ) ಮಾಡೆಂ"ದು **ಸರ್ಪಭೂಷಣ** ಕವಿಯು ದೇವರಿಗೆ ಬೇಡಿಕೊಳ್ಳುತ್ತಾನೆ.
೧ ಆಧ್ಯಾತ್ಮಿಕ= ದೇಹದಲ್ಲಿ ಹುಟ್ಟುವ ತಾಪವು.	ಉದಾ: ಚಳಿಜ್ವರ, ಒಣಜ್ವರ, ಅತಿಸಾರ, ಉಬ್ಬಸ, ತಲೆನೋವು. ಹಲ್ಲುನೋವು, ಕಣ್ಣುಬೇನೆ, ಉದರರೋಗ ಮುಂತಾದ ದೇಹಜಾಡ್ಯಗಳೂ ಕುರುಡ, ಕುಂಟ, ಹೆಳವ ಮುಂತಾದ ಅಂಗವಿಕಾರಗಳೂ.
೨ ಆಧಿಭೌತಿಕ= ದುಷ್ಟಪ್ರಾಣಿಗಳಿಂದ ಒದಗಿದ ದುಃಖ. (ಭೌತಿಕ= ಪಂಚಭೂತಗಳಿಂದಾದ ಪ್ರಾಣಿ.)	ಉದಾ: ನಾಯಿ, ಮಂಗ, ತೋಳ, ಹುಲಿ, ಕರಡಿ, ಹಾವು, ಚೇಳು, ದುರ್ಜನ ಮುಂತಾದ ದುಷ್ಟಪ್ರಾಣಿಗಳಿಂದ ಒದಗುವ ದುಃಖವೂ ಹೆಂಡರು ಮಕ್ಕಳಿಗೆ ವ್ಯಾಧಿಯಿಂದಾಗುವ ದುಃಖವನ್ನು ನೋಡಿ, ತನಗೆ ಆಗುವ ದುಃಖವೂ.
೩. ಆಧಿದೈವಿಕ= ದೇವತಾಕ್ಷೋಭದಿಂದ ಒದಗುವ ದುಃಖವು.— (**ಮೂರು ತಾಪವು**)	ಉದಾ: ಅತಿವೃಷ್ಟಿ, ಅನಾವೃಷ್ಟಿ, ಸಿಡಿಲು, ಮಿಂಚು. ಮಳೆಗಾಳಿಗಳಿಂದೊದಗುವ ದುಃಖವೂ ಗುಡಿ. ಗೋಪುರ, ಮನೆಗಳು ಮಲಗಿದಾಗ ಬೀಳುವದರಿಂದೊದಗುವ ದುಃಖವೂ, ಸ್ವರ್ಗ, ನರಕಗಳ ತಾಪಗಳೂ. (ಸ್ವರ್ಗದಲ್ಲಿ ಮೂರು ತರದ ದುಃಖವಿರುತ್ತದೆ- ೧. ತನಗಿಂತ ಹೆಚ್ಚಿನ ಪದವಿಯುವರನ್ನು ಕಂಡು. ಅದು ತನಗೆ ಪ್ರಾಪ್ತವಾಗಲಿಲ್ಲವಲ್ಲ ! ಎಂಬದು. ೨, ಸ್ವರ್ಗದಲ್ಲಿರುವ ಕಾಲವು ಸಮೀಪಿಸಿತು ಎಂಬದು. ೩., ಪುನಃ ಜನನ ಬಂತೆಂಬದು.)
ನನ್ನನ್ನು ಸುತ್ತುಗಟ್ಟಿ ಸುಡುತ್ತಿರುವವು.	ಒಮ್ಮೊಮ್ಮೆ ಮೂರುತರದ ತಾಪಗಳು ಒಮ್ಮೆಲೆ ಒದಗಲು, ಚಿಂತೆಯಿಂದ ಮನುಷ್ಯನು ಸುಡುವನು. (ಸೊರಗುವನು.)
೧ ಕಾಮ= ಇಚ್ಛಾ ೨ ಕ್ರೋಧ= ಸಿಟ್ಟು ೩ ಲೋಭ= ಜೀನತನ	ಈ ಗುಣಗಳು ಅನುಕ್ರಮದಿಂದ ಹುಟ್ಟುತ್ತವೆ. ಹೇಗಂದರೆ,—ವಸ್ತು ದರ್ಶನದಿಂದ ಕಾಮವು ಹುಟ್ಟುತ್ತದೆ. ಆವಸ್ತು ಪ್ರಾಪ್ತವಾದರೆ ಸರಿ; ಆಗದಿದ್ದರೆ, ಕ್ರೋ

೪ ಮೋಹ = ಪ್ರೀತಿ
೫ ಮದ = ಸೊಕ್ಕು
೬ ಮತ್ಸರ = ಹೊಟ್ಟೇಕಿಚ್ಚು
ಈ ಆರು ದುರ್ಗುಣಗಳು
(ಷಡ್ವರ್ಗವು.)

ಧ ಉಂಟಾಗುತ್ತದೆ. ಆ ಮೇಲೆ ಫಲಪ್ರಾಪ್ತಿಯಾಗಿ ಅದರಲ್ಲಿ ಲೋಭ ಉಂಟಾಗುತ್ತದೆ. ಯಾರುಬೇಡಿದರೂ ಅದನ್ನು ಕೊಡುವದಿಲ್ಲ. ನಂತರ ಅದರಲ್ಲಿ ಪ್ರೀತಿಯು ಹುಟ್ಟುತ್ತದೆ. ಆಮೇಲೆ ಅದನ್ನು ಶೌರ್ಯದಿಂದ ಸಂಪಾದಿಸಿದೆನೆಂದು ತನ್ನನ್ನು ತಾನೇ ಹೊಗಳಿಕೊಳ್ಳುತ್ತಾನೆ; ಮತ್ತೆ ಯಾರಾದರು ಅಂಥವಸ್ತುವನ್ನು ಸಂಪಾದಿಸಿದ್ದರೆ, ಅದರ ವಿಷಯವಾಗಿ ಮತ್ಸರ ಪಡುವನು.

ದೃಷ್ಟಾಂತ— ಒಬ್ಬ ಹುಡುಗನು ಒಂದು ಗಿಳಿಯನ್ನು ಸಾಕಬೇಕೆಂದು (ಕಾಮ) ಒಂದು ಮರದ ಹೊದರಿನಲ್ಲಿರುವ ಗಿಳಿಮರಿಯನ್ನು ಹಿಡಿದನು. ಅದು ತನ್ನ ಸಂಕಟಕ್ಕೆ ಇವನ ಕೈಯನ್ನು ಕಚ್ಚಿತು ಅದರಿಂದ ಅವನು ಸಿಟ್ಟಿಗೆದ್ದು (ಕ್ರೋಧ) ಇನ್ನು ಮೇಲೆ ನಿನ್ನನ್ನು ಬಿಡುವೆನೇ ಎಂದು, ಕೈಗೆ ಅರಿವೆಯನ್ನು ಸುತ್ತಿಕೊಂಡು, ಆಮರಿಯನ್ನು ಹಿಡಿದು, ತೆಗೆದುಕೊಂಡು ಮನೆಯ ದಾರಿಹಿಡಿದನು. ಮಾರ್ಗದಲ್ಲಿ ಒಬ್ಬ ಸೊಗಸುಗಾರನು ಈ ಗಿಳಿಮರಿಯನ್ನ ಸಾಕಲಿಕ್ಕೆ ನನಗೆ ಕೊಡುವಿಯಾ! ಎಂದು ಕೇಳಿದನು. ಅದಕ್ಕೆ ಆಹುಡುಗನು— ನಾನು ಕೈ ಕಡಿಸಿಕೊಂಡು ಕಷ್ಟಬಟ್ಟು ಇದನ್ನು ತಂದಿದ್ದೇನೆ; ಕೊಡುವದಿಲ್ಲ (ಲೋಭ) ಎಂದು ಮನೆಗೆ ಒಯ್ದು, ಹಣ್ಣು ನೀರು ಕೊಟ್ಟು ಜೋಪಾನ ಮಾಡಿ ಮಾತು ಕಲಿಸಿದನು. (ಮೋಹ) ಈ ಗಿಳಿಯ ಮಾತು ಕೇಳಿ ಜನರು ಈ ಹುಡುಗನನ್ನು ಕೊಂಡಾಡಲು, ತನ್ನ ಪೌರುಷದಿಂದಲೇ ಈ ಕಾರ್ಯವಾಯಿತೆಂದು ಅಭಿಮಾನ ಪಡೆದನು. (ಮದ) ಇವನಂತೆ ಮತ್ತೊಬ್ಬ ಹುಡುಗನು ತನ್ನ ಗಿಳಿಮರಿಗೆ ಇದಕ್ಕೂ ಹೆಚ್ಚಿಗೆ ಮಾತು ಕಲಿಸಿದ್ದನು. ಅದನ್ನು ಕಂಡು ಮೊದಲನೆಯ ಹುಡುಗನು ಮನಸ್ಸಿನೊಳಗೆ—ಆ ಗಿಳಿಗೆ ಬೇನೆ ಬರಲಿ; ಇಲ್ಲವೆ ಬೆಕ್ಕು ಹಿಡಿಯಲಿ (ಮತ್ಸರ) ಎಂದು ಚಿಂತಿಸುತ್ತಿರುವನು.

ನನ್ನನ್ನು ಮೋಸಮಾಡಿ ಹಿಡಿದು (ತಮ್ಮಸ್ವಾಧೀನ ಮಾಡಿಕೊಂಡು) ಹಾಳು ಮಾಡುತ್ತವೆ.

ಈ ಆರು ಗುಣಗಳನ್ನು ಬುದ್ಧಿವಂತನಾದವನು ಅವುಗಳ ಸ್ಥಾನಗಳಲ್ಲಿ ಬಂಧಿಸುವನು; ಹೇಗಂದರೆ " ಕಾಮ ನಿಜದಾರ ದೊಳು " ಇತ್ಯಾದಿ.

೧ ಅವಿದ್ಯಾ— ತಪ್ಪುತಿಳುವಳಿಕೆ.

ಅನಿತ್ಯವಾದ ಶರೀರವು ನಿತ್ಯವೆಂದೂ ಆತ್ಮ(ಜೀವ)ಕ್ಕೆ ಜನನ ಮರಣಗಳುಂಟೆಂದೂ ತಿಳಕೊಳ್ಳುವದೇ ಅವಿದ್ಯಾ ಕ್ಲೇಶವು. ದೇಹವೇ ಇಲ್ಲದ ಆತ್ಮನಿಗೆ ಜನ

	ನ ಮರಣಗಳನ್ನು ಕಲ್ಪಿಸುವದು ದುಃಖದಾಯಕ ಸಂಗತಿಯು.
೨ ಅಸ್ಮಿತ- ಮಾಯಾ(ತೋ ರಿ ಅಡಗುವದು- ಇಲ್ಲದ್ದು ಕಾ ಣುವದು; ಕಂಡದ್ದು ಇಲ್ಲದಂ ತಾಗುವದು.)	ಈ ದೇಹವೇ ತಾನೆಂದೂ ಈ ವಸ್ತು (ಹೊನ್ನು, ಹೆಣ್ಣು, ಮಣ್ಣು) ಗಳು ತನ್ನವೆಂದೂ ಮಾಯಾಮೂಲಕವಾಗಿ ತಿಳಕೊಳ್ಳುವದು ಅಸ್ಮಿತ ಕ್ಲೇಶ ವೆನಿಸುತ್ತದೆ.
ರಾಗ- ಪ್ರೀತಿ, ಪರಸತಿ ಯು ಭೋಗದ ಇಚ್ಛೆ.	ಸುಖವೇ ಇಲ್ಲದ ವಸ್ತುಗಳಲ್ಲಿ ಸುಖವುಂಟೆಂದೂ ತಾನು ಸುಖಿಯಾಗಿದ್ದೇನೆಂದೂ ಭಾವಿಸೋಣವೇ ರಾಗ ಕ್ಲೇಶವೆನಿಸುತ್ತದೆ. ರಾಗ (ಭೋಗ) ದಿಂದಲೇ ಕಾಮ ಕ್ರೋಧಾದಿಗಳುಂಟಾಗಿ ಆ ಅರಿಷಡ್ವರ್ಗದಿಂದಲೇ ದುಃಖವುಂಟಾಗುತ್ತವೆ. ಇದರಿಂದ ರಾವಣನು ಸೀತೆಯನ್ನು ಇಚ್ಛಿಸಿ ಮಡಿದನು.
ದ್ವೇಷ -ವೈರಿಯು ಹಾಳಾ ಲೆಂಬ ಭಾವನೆಯು.	ತನ್ನ ಇಚ್ಛೆಯ ವಿರುದ್ಧವಾಗಿ ನಡೆದವನನ್ನು ದ್ವೇಷಿಸುವದು ಮನಸ್ಸಿನ ಸಹಜ ಧರ್ಮವಾಗಿದೆ. ಇದರಿಂ ವಿಷ್ಣು ದ್ವೇಷಮಾಡಿ, ಹಿರಣ್ಯ ಕಶ್ಯಪ, ಹಿರಣ್ಯಾರು ಮಡಿದರು.
ಅಭಿನಿವೇಶ- ದುರಾಗ್ರಹ. (ಕ್ಲೇಶಂಗಳೈದು)	ತನಗೆ ಬುದ್ಧಿ ಇದ್ದರೂ ಒಂದೆಡೆಗೆ ಸ್ಥಾಪಿಸಿದ ಬುದ್ಧಿಯನ್ನು ತಕ್ಕೊಳ್ಳದೆ ದುರಾಗ್ರಹದಿಂದ ಕಾರ್ಯಸಾಧನಕ್ಕೆ ಯತ್ನಿಸೋಣವು ಅಭಿನಿವೇಶ-ಕ್ಲೇಶವೆನಿಸುತ್ತದೆ. ಇದರಿಂದ ಹಿಂದು ಜನರನ್ನು ಹಾಳಮಾಡಬೇಕೆಂದು ದುರಾಗ್ರಹ ತೊಟ್ಟ ಔರಂಗಜೇಬನು ಮೊಗಲ ಸಾಮ್ರಾಜ್ಯವನ್ನು ಅಳಿಯಲಿಕ್ಕೆ ಕಾರಣವಾದನು.
ಶತ್ರುಗಳ ಹಾಗೆ ಹುರಿಯಾ ಸಿಟ್ಟಿನಿಂದ ಕಾದಾಡುತ್ತಿ ವವು.	ಈ ಐದು ಕ್ಲೇಶಗಳು ಅಜ್ಞಾನ ಮೂಲಕವಾಗಿ ಆತ್ಮನಿಗೆ ವೈರಿಗಳಾಗಿವೆ
ದೇವರೇ, ಸಂಸಾರ (ತಾಪ) ಲ್ಲಿ ಕಷ್ಟ ಪಡಲಾರೆನು.	ಸಂಸಾರಲ್ಲಿ ಕಷ್ಟವೇ ಹೆಚ್ಚಾಗಿರುವದು. ಜನ್ಮದುಃಖಂ ಜರಾದುಃಖಂ। ಜಾಯಾದುಃಖಂ ಪುನಃ ಪುನಃ ॥ ಸಂಸಾರೇ ಸಾಗರಂ ದುಃಖಂ । ತಸ್ಮಾ

ಜ್ಞಾಗ್ರಹಿ ಜಾಗ್ರಹಿ ॥ (ಕಾಲಿದಾಸ)

ನೀನು ದಯವಿಟ್ಟು ನಿಜವಾದ ಮೋಕ್ಷ ಸುಖವನ್ನು ಕೊಟ್ಟು (ರಕ್ಷಿಸು).

ದೇವರು ದಯಾಸಾಗರನು.

ಮೋಕ್ಷವೆಂದರೆ- ಜನನ ಮರಣ ರಹಿತವಾದ ಸ್ಥಿತಿಯು. ಸ್ವರ್ಗಕ್ಕೆ ಹೋದವರು ಸ್ವರ್ಗಸುಖದ ಅವಧಿಯು ಮುಗಿದ ಬಳಿಕ ಪುನಃ ಜನಿಸಬೇಕಾಗುವದು. ಆದರೆ ಮೋಕ್ಷವಾದ ಬಳಿಕ ಪುನರ್ಜನ್ಮವಿಲ್ಲ. ಜನನವೇ ಇಲ್ಲದ್ದರಿಂದ ಮರಣವೂ ಇಲ್ಲ. ಅಂದರೆ ಪರಮಾತ್ಮನಲ್ಲಿ ಐಕ್ಯವಾಗುವನೆಂಬರ್ಥ. ಉದಾ: ಸುಧನ್ವನ ಮುಖದಿಂದ ಹೊರಟ ತೇಜಃಪುಂಜವಾದ ಜ್ಯೋತಿಯು ಶ್ರೀಕೃಷ್ಣ ಪರಮಾತ್ಮನ ಮುಖದಲ್ಲಿ ಪ್ರವೇಶ ಮಾಡಿತು.

ಕೈದಳದೊಳೆಸೆವ ತಲೆಯುಂ ನಾಶಿಕಾಗ್ರದೆಡೆ ।
ಗೊಯ್ದು ಮುರಮಥನನಾಘ್ರಾಣಿಸಿದನಾತನೇ '
ಗಯ್ದನೆಂಬುದನಚ್ಯುತನೆ ಬಲ್ಲನಾಗಳಾ ಮೊಗದಿಂದೆ ತನ್ನ ಮೊಗಕೆ ।
ಐದಿತಪನಾತ್ಮಪತಿ ತೇಜದಿಂ... ... .

ಜೈಮಿನಿ ಭಾರತ ೧೩ ನೆಯ ಸಂಧಿ ೫೭ ನೆಯ ಶ್ಲೋಕ.

ಉಳಿದ ಸಂಧಿ, ಸಮಾಸ, ಪ್ರಯೋಗ ಮುಂತಾದ ವ್ಯಾಕರಣ ಭಾಗವು ಯಥಾ ಕ್ರಮವಾಗಿ ಕಲಿಸಲ್ಪಡಬೇಕಾದುದರಿಂದ, ಇಲ್ಲಿ ಹೇಳುವದನ್ನು ಬಿಟ್ಟಿರುವೆನು.

--ರಾ. ಬಾ. ಜೋಶಿ, ಹೆಡ್ ಮಾಸ್ತರ.
ತಂಗಡಗಿ.

ಪ್ರಬೋಧ.

ಉತ್ತಮ ತರದ ಕನ್ನಡ ನುಡಿಯ ಮಾಸಪತ್ರಿಕೆ. ಇದರಲ್ಲಿ ವಿದ್ವಾಂಸರಿಂದ ಬರೆದ ನಿಬಂಧಗಳೂ ಎತಿಹಾಸಿಕ, ಸಾಮಾಜಿಕ, ನೈತಿಕ ವಿಷಯಗಳನ್ನೊಳಗೊಂಡ ಲೇಖಗಳೂ ಕಥೆ ಕಾದಂಬರಿಗಳೂ ಬರುವವು. ಪುಟ ೪೮-೫೬. ವಂದಾಹಣಿ ಅಂಚೇ ವೆಚ್ಚಸೇರಿ ೨-೮-೦

ಬಿ. ಬಿ. ಮುಮದಾಪೂರ.
ಪ್ರಕಾಶಕ ' ಪ್ರಬೋಧ ' ಬೆಳಗಾಂವ.

ಬ್ರಹ್ಮಚರ್ಯ.

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬವು ಯೋಗದ ಅಷ್ಟಾಂಗಗಳು. ಮೊದಲನೆಯ ಅಂಗದಲ್ಲಿ ಅಹಿಂಸಾ, ಸತ್ಯ, ಅಸ್ತೇಯ, ಅಸಂಗ, ಹ್ರಿ, ಅಸಂಚಯ, ಆಸ್ತಿಕ್ಯ, ಬ್ರಹ್ಮಚರ್ಯ, ಮೌನ, ಸ್ಥೈರ್ಯ, ಕ್ಷಮಾ ಮತ್ತು ಅಭಯಗಳೆಂಬ ೧೨ ಪ್ರಕಾರಗಳುಂಟು. ಇಂದು ಬ್ರಹ್ಮಚರ್ಯದ ವಿಷಯಕ್ಕೆ ವಿಚಾರಿಸುವಾ.

ಮೇಲೆ ಹೇಳಿದಂತೆ ಬ್ರಹ್ಮಚರ್ಯವು ಯೋಗಾಂಗವಾಗಿದೆ. ನಾವು ಯೋಗಸಿದ್ಧಿಯನ್ನು ಪಡೆಯ ಬೇಕಾದರೆ, ಅಹಿಂಸೆಯೇ ಮೊದಲಾದ ೧೨ ಪ್ರಕಾರದ ಯೋಗಾಂಗಗಳನ್ನು ಅಭ್ಯಾಸಿಸಿ, ಮುಂದೆ ಅಷ್ಟಾಂಗಯೋಗವನ್ನು ಸಾಧಿಸಬೇಕಾಗುವದು. ಅಂದ ಮೇಲೆ ಬ್ರಹ್ಮಚರ್ಯದ ವಿಷಯಕ್ಕೆ ವಿಚಾರಮಾಡುವದು ಅವಶ್ಯವಿದೆ. ಬ್ರಹ್ಮಚರ್ಯವೆಂದರೆ ಎಂಟೂ ಪ್ರಕಾರದ ಮೈಥುನಗಳಿಂದ ದೂರವಿದ್ದು, ಶುದ್ಧಾಂತಃಕರಣದಿಂದ ಸಂಕಲ್ಪಿತ ಪರಿಪಾಲನ ನಿಯಮವನ್ನು ಅಖಂಡವಾಗಿ ನಡೆಯಿಸುವದು. ಪ್ರತ್ಯಕ್ಷ ಶರೀರದಿಂದ ಸ್ತ್ರೀಸಂಭೋಗವನ್ನು ಮಾಡುವದೇ ಮೈಥುನವೆಂದು ವ್ಯವಹಾರದಲ್ಲಿ ತಿಳಿಯುತ್ತಿರಬಹುದು; ಆದರೆ ಮೈಥುನದಲ್ಲಿ:—

स्मरणं कीर्तनं केलिः प्रेक्षणं गुह्य भाषणं ।
संकल्पोऽध्यवसायश्च क्रियानिर्वृत्तिरेवच ॥ १ ॥
एतन्मैथुनमष्टांगं प्रवदन्ति मनीषिणः ।

(ದಕ್ಷಸಂಹಿತಾ.)

ಅಂದರೆ, ಸ್ತ್ರೀಯ ಸ್ಮರಣವು, ಆಕೆಯ ಸೌಂದರ್ಯವರ್ಣನವು, ಆಕೆಯ ಕಡೆಗೆ ಕಾಮದೃಷ್ಟಿಯಿಂದ ನೋಡೋಣವು, ಏಕಾಂತ ಭಾಷಣವು, ಉಪಭೋಗವನ್ನು ತೆಗೆದುಕೊಳ್ಳುವ ಇಚ್ಛೆಯು, ಪರಸ್ಪರ ಕ್ರೀಡನವು, ವಿಷಯ ಧ್ಯಾನವು, ಮತ್ತು ಅವಳ ಸಂಗವು ಈ ಪ್ರಕಾರ ಎಂಟು ವಿಧಗಳುಂಟು. ಈ ವಿಕಾರಗಳಿಂದ ಕೇವಲ ಅಲಿಪ್ತರಾಗಿರುವದೇ ನಿಜವಾದ ಬ್ರಹ್ಮಚರ್ಯವು.

ಅಧ್ಯಾತ್ಮಿಕ ಭೌತಿಕ ದೃಷ್ಟಿಯಿಂದಲೂ ಐಹಿಕ ಪಾರತ್ರಿಕ ದೃಷ್ಟಿಯಿಂದಲೂ ವಿಚಾರಮಾಡಿದಾಗ್ಯೂ ಬ್ರಹ್ಮಚರ್ಯದ ಮಹತ್ವವು ಕಂಡುಬರುವದು ಆಧ್ಯಾತ್ಮಿಕ ದೃಷ್ಟಿಯಿಂದ ಮೊದಲು ವಿಚಾರಿಸೋಣ:—

ಸ್ತ್ರಿಕನೇ ಆಗಲಿ; ಯಾವಸುಖವನ್ನು ಅನುಭವಿಸುತ್ತಿರುವನು ? ಅವನು ಪಾರಮಾ ರ್ಥಿಕಕ್ಕೆ ಎರವಾಗುವದಂತೂ ಇರಲಿ; ಇಹಲೋಕದಲ್ಲಿಯೇ ಹಲವು ದುಃಖಗಳಿ ಗುರಿಯಾಗುವನು. “ अत्युत्कटैः पुण्यपापैरिहैव फलमश्नुते ”ಎಂಬಂತೆ ಅವನ ಸ್ಥಿ ಯಾಗುವದು. ಇದೆಲ್ಲ ಇಂದ್ರಿಯಾನಿಗ್ರಹತ್ವದ ಕಾರಣವು. ಮನುಷ್ಯನಿಗೆ ಶರೀ ಸಂಪತ್ತು ಅವಶ್ಯವಾದದ್ದು. शरीरमाद्यं खलु धर्मसाधनं ಎಂಬಂತೆ ಶರೀರ ಸಂಪತ್ತು ಧರ್ಮಸಾಧನಕ್ಕೆ ಕಾರಣವಾಗಿರುವದು ಆದು ಸಾಧಿಸಬೇಕಾದರೆ ಅವನು ನಿಯಮಿ ತ ಕಾಲದ ವರೆಗಾದರೂ ಬ್ರಹ್ಮಚರ್ಯವನ್ನು ಪಾಲಿಸತಕ್ಕದ್ದು.

ಮನುಷ್ಯನು ತಿಂದ ಅನ್ನವು ಪಚನವಾಗಿ, ಅದರಿಂದ ಹಾಲಿನಂತೆ ಶುಭ್ರವು ಸ್ವಚ್ಛವೂ ಆದ ರಸವು ಸಿದ್ಧವಾಗಿ, ಉಳಿವದ್ದು ಮಲರೂಪದಿಂದ ಹೊರಗೆ ಹೋಗ ತ್ತದೆ. ಮುಂದೆ, ಆ ಹಾಲಿನಂಥ ರಸವೇ ರಕ್ತವಾಗಿರುವದು. ಈ ರಕ್ತವೇ ಮನುಷ್ಯ ನೆಂಬ ಯಂತ್ರದ ಕಲ್ಲಿದ್ದಲಿಯೂ ನೀರೂ ಆಗಿದೆ- ಯಂತ್ರವು ಸುಯಂತ್ರಿತವಾಗಿ ನ ಡೆಯಬೇಕಾದರೆ ಕಲ್ಲಿದ್ದಲಿಯೂ ನೀರೂ ಅವಶ್ಯವಾಗಿ ಬೇಕಾಗುವವು- ಇವುಗಳ ಕೊರತೆಯಿಂದ ಯಂತ್ರವು ಮೂಲೆಗುಂಪಾಗುವದು. ಈ ಮಾತು ಮನುಷ್ಯನ ದೇ ಹವೆಂಬ ಯಂತ್ರಕ್ಕಾದರೂ ಹತ್ತುವದು.

ಹೀಗೆ ಮನುಷ್ಯನಿಗೆ ರಕ್ತದ ಆವಶ್ಯಕತೆಯು ಬಹಳ. ಮತ್ತು ಈ ರಕ್ತದಿಂದ ಅತಿ ಮಹತ್ವವಾದ ವೀರ್ಯವು ಸಿದ್ಧವಾಗುವದು. ಇದಕ್ಕೆ ಧಾತು, ಶಕ್ತಿ ಇತ್ಯಾದಿ ಹೆಸರುಗಳುಂಟು. ೧ ಹನಿ ವೀರ್ಯವು ತಯಾರಾಗಬೇಕಾದರೆ, ೪೦ ಹನಿ ರಕ್ತವು ಬೇಕಾಗುವದು. ಇಂಥ ಅಮೌಲ್ಯವಾದ ವೀರ್ಯವು ಅವಿಚಾರದಿಂದ ಬಾಲ್ಯದಿಂದ ಲೇ ಕ್ಷಯವಾಗಹತ್ತಿದರೆ ಅದರ ಪ್ರಮಾಣದಿಂದ ರಕ್ತದ ನಾಶವಾಗಿ, ಮನುಷ್ಯನು ಕ್ಷೀಣನಾಗುವದು ಅರಿದೆ? ಮನುಷ್ಯನು ಸದೃಢನಾಗಿದ್ದರೆ ಪರೋಪಕಾರ ಮಾಡಬಲ್ಲ ನು- ಆದರೆ “ ತನಗಿಲ್ಲದ ಪಾಪಿ ಪರರಿಗೇನು ಕೊಡುವದು ?” ಎಂಬಂತೆ ಸ್ವಾರ್ಥವ ನ್ನಾದರೂ ಸಾಧಿಸಲು ಶಕ್ತಿಯಿಲ್ಲದವನಿಗೆ ಪರಾರ್ಥವು ದೂರತೋಪಾಸ್ತವೇ ಸರಿ. ಗಿಡದ ಬುಡದಲ್ಲಿ ಕುಳಿತ ಹೆಳವನು— ತುದಿಯಲ್ಲಿರುವ ಹಣ್ಣುಗಳನ್ನು ಬೇರೆಯವನಿ ಗೆ ಹರಿದು ಕೊಡುವದು ಸಂಭವವೇ? ಹೀಗೆ ಬ್ರಹ್ಮಚರ್ಯಾವರೋಧದಿಂದ ಸ್ವಾರ್ಥ ಪರಾರ್ಥಗಳಿಗೆ ಎರವಾಗುವ ಆಪತ್ತು ಬರುವದು. ಸುಖಾಪೇಕ್ಷೆಯಿಂದ ಕುಲಗೆಟ್ಟವ ನು ಸುಖವನ್ನು ಕಾಣದಿರಲು, ದುಃಖಿಸುವ ಹಾಗೆ, ಇಂಥವರ ಸ್ಥಿತಿಯಾಗುವದು.

ಚಿಕ್ಕತನದಲ್ಲಿಯೇ ವಿಷಯಾಬ್ಧಿಯಲ್ಲಿ ಈಸಬಿದ್ದು, ನೆಲೆಗಾಣದೆ, ಕೈಸೋತು, ಎಷ್ಟೋ ಜನರು ದುಃಖಿಸುವರು. ಈ ಎಲ್ಲತಪ್ಪು ಕೇವಲ ಬಾಲಕರದೆಂದೇ ಹೇಳಲಾ ಗದು. ಅವರ ತಾಯಿತಂದೆಗಳೂ ಕೆಲವಂಶದಿಂದ ಇದಕ್ಕೆ ಕಾರಣವಾಗಿರುತ್ತಾರೆ.

ಈಗಿನ ಎಷ್ಟೋ ಜನರು ತಮ್ಮ ಮಕ್ಕಳಿಗೆ ಬೇಗನೆ ಲಗ್ನಮಾಡಿ, ತಮ್ಮ ಕಣ್ಣೊಬಗನ್ನು ಪಡೆಯಬೇಕೆಂದು ಪ್ರಯತ್ನ ಮಾಡುವರು, ಎಷ್ಟೋ ಜಾಯಾಪತಿಗಳಾದ ಹಸುಗಳಿಗೆ ತಮ್ಮ ಸತೀತ್ವ, ಪತಿತ್ವಗಳ ಕಲ್ಪನೆಯಾದರೂ ಇರುವದಿಲ್ಲ. ಇಂಥಲ್ಲಿ ಪಾಲಕರ ಭ್ರಾಮಕ ಸದ್ಧೇತುವು ಇರುತ್ತಿದ್ದರೂ ಅದು ಪರಿಣಾಮಾಂತ್ಯದಲ್ಲಿ ಘೋರವಾಗುವದು ತಾರುಣ್ಯದ ಪ್ರಥಮಾವಸ್ಥೆಯಲ್ಲಿಯೇ ಸ್ತ್ರೀಸಂಭೋಗ ಮಾಡಿದರೆ ಗರ್ಭವು ನಿಲ್ಲುವದಿಲ್ಲ. ಹಾಲುಗಾಳಿನಿಂದ ಎಂದಾದರೂ ಮೊಳಕೆಯೊಡೆಯಬಹುದೇ ?

ऊनषोडश वर्षायामप्राप्तः पंचविंशतिम् ।
यद्याधत्ते पुमान् गर्भं कुक्षस्थःसविपद्यते ॥ १ ॥
जातो वा न चिरं जीवेज्जीवेद्वा दुर्बलेंद्रियः ।
तस्मादत्यंत-बालायां गर्भादानम् न कारयेत् ॥ २ ॥

(ಸುಶ್ರುತ ಶಾರೀರಸ್ಥಾನೇ—ಅ. ೧೦. ಶ್ಲೋ. ೪೭, ೪೮)

ಅರ್ಥ:— ಹದಿನಾರನೆಯ ವರ್ಷಕ್ಕಿಂತ ಕಡಿಮೆ ವಯಸ್ಸುಳ್ಳ ಸ್ತ್ರೀಯರಲ್ಲಿ ಇಪ್ಪತ್ತೈದನೆಯ ವರ್ಷಕ್ಕಿಂತ ಕಡಿಮೆ ವಯಸ್ಸುಳ್ಳ ಪುರುಷರು ಗರ್ಭವನ್ನು ಸ್ಥಾಪಿಸಿದರೆ ಆ ಗರ್ಭವು ಕು ಯಲ್ಲಿಯೇ ನಾಶವನ್ನು ಹೊಂದುತ್ತದೆ. ಅಂದರೆ ಪೂರ್ಣಕಾಲದವರೆಗೆ ಗರ್ಭದಲ್ಲಿ ಉಳಿದು ಉತ್ಪನ್ನವಾಗುವದಿಲ್ಲ; ಅಥವ ಉತ್ಪನ್ನವಾದರೂ ಚಿರಕಾಲದ ವರೆಗೆ ಜೀವಿಸುವದಿಲ್ಲ; ಜೀವಿಸಿದರೂ ಅತಿದುರ್ಬಲೇಂದ್ರಿಯ ಉಳ್ಳವನಾಗುವದು. ಆದ್ದರಿಂದ ಬಾಲ್ಯಾವಸ್ಥೆಯುಳ್ಳಂಥ ಸ್ತ್ರೀಯಲ್ಲಿ ಗರ್ಭಸ್ಥಾಪನವನ್ನು ಮಾಡಬಾರದು. ಈ ನಿಯಮಾವರೋಧದಿಂದಲೇ ಅನೇಕರು ದುಃಖಿಗಳೂ, ಕ್ಷೀಣಾಯುಷಿಗಳೂ ಆಗುವರು. ಮನುಷ್ಯನು ಸಾಧಾರಣವಾಗಿ ೨೫ ವರ್ಷಗಳವರೆಗಾದರೂ ಬ್ರಹ್ಮಚರ್ಯವನ್ನು ಪಾಲಿಸತಕ್ಕದ್ದು. ಅಂದರೆ ಅದರಿಂದ ಅವನು ೭೦, ೮೦ ವರ್ಷಗಳ ವರೆಗೆ ಸಹಜ ರೀತಿಯಿದ ಬದುಕುವನು. (ಆಕಸ್ಮಿಕವಾಗಿ ಮರಣ ಹೊಂದಿದರೆ ಆ ಮಾತು ಬೇರೆ.)

ಬ್ರಹ್ಮಚರ್ಯಾವಧಿಯಿಂದ ಬೇರೆಯಾಶ್ರಮಗಳ ಅವಧಿಯಾದರೂ ನಿಶ್ಚಯಿಸಲ್ಪಡುವದು. ಸದ್ಯಃಕಾಲದಲ್ಲಿ ಬ್ರಹ್ಮಚರ್ಯಾವಧಿಯು ಕಡಿಮೆಯಾದ್ದರಿಂದಲೂ ಇದ್ದದ್ದಕ್ಕೂ ನಿರ್ಬಂಧವಿಲ್ಲದ್ದರಿಂದಲೂ ನಮ್ಮ ಆಯುಷ್ಯವು ಹೆಚ್ಚೆಂದರೆ, ಅರವತ್ತೇ ವರ್ಷಗಳು! ಅದೂ ಹುಟ್ಟಿದ ಸಂವತ್ಸರವನ್ನು ತಿರುಗಿ ಕಾಣುವದು ಅಪರೂಪ!! ಶಕ್ತಿಯನ್ನಂತು ಹೇಳಲೇ ಬೇಡ; ಸ್ಟೇಶನಕ್ಕೆ ಹೋಗಲಿಕ್ಕೆ ಕುದುರೆಯ ಗಾಡಿಯ ಹೊರ್ತು ನಿರ್ವಾಹವಿಲ್ಲ!!! (ಅಪವಾದದ ಮಾತು ಬೇರೆ) ಸಾಲುದುದಕ್ಕೆ ಚಹಾ, ಕಾಫಿ, ಧೂಮ್ರಪಾನ, ಮೊದಲಾದ ದುಶ್ಚಟಗಳು!!! ಇರಲಿ.

ನಮ್ಮ ಪೂರ್ವಜರನ್ನು ಈ ವಿಷಯಕ್ಕೆ ಹೋಲಿಸಿ ನೋಡಿದರೆ, ನಾವು ತಲೆ ಬಾಗಿಸಬೇಕಾಗುವದು. ಅವರ ವಂಶದವರೆಂದು ಹೇಳಲಿಕ್ಕೆ ಗುಣ, ಸಾಮರ್ಥ್ಯ, ಪದ್ಧತಿ, ಕಲಾ, ಕೌಶಲ್ಯಗಳನ್ನು ಮುಂದೆ ಮಾಡದೆ, ಹರಕು-ಪರಕು ಇತಿಹಾಸವನ್ನು ಮುಂದೆ ಮಾಡುವ ಹೀನಸ್ಥಿತಿಯು ನಮಗೆ ಬಂದೊದಗಿದೆ. ಅವರು ಹಾಕಿಕೊಟ್ಟ ಅನ್ಯಾದೃಶವಾದ ಕೀರ್ತಿಯನ್ನು ತೀಡದೆ ಹೆಮ್ಮೆಯಿಂದ ಅವನತ ಸ್ಥಿತಿಯನ್ನು ಕಂಡೆವು! ಸದ್ಯದ ವಿಷಯವೇ ಇದಕ್ಕೆ ಉದಾಹರಣೆಯಾಗಿದೆ. ಬ್ರಹ್ಮಚರ್ಯದ ಹಲವು ನಿಯಮಗಳನ್ನು ಹಾಕಿಕೊಟ್ಟಿರಲು, ನಾವು ಅವನ್ನೆಲ್ಲ ಮರೆತೆವು. ಹೀಗೆ ಕ್ಷೀಣಶಕ್ತಿಯವರಾದ ನಮಗೆ ಹನುಮಂತ, ಭೀಮಸೇನ, ಅಶ್ವತ್ಥಾಮ ಪ್ರಭೃತಿಗಳ ಸಾಮರ್ಥ್ಯದ ವರ್ಣನೆಯು ಕಟ್ಟುಕಥೆಯಾಗಿ ತೋರಿದರೆ ಆಶ್ಚರ್ಯವೇನು? ಶಾಶ್ವತ ಸುಖಸ್ವಾರಸ್ಯದ ಕಲ್ಪನೆಯು ಪಾಪಿಷ್ಠನಿಗೆ ಉಂಟಾಗುವ ಬಗೆಯೆಂತು?

ಭೂತಕಾಲದಲ್ಲಿ ಘಟಿಸಿದ ಅಲ್ಲದಕೆಲಸಗಳಿಗೆ ಅಸಂತುಷ್ಟರಾಗಿ ಖೇದಪಡುವದಕ್ಕಿಂತ, ಅವು ವರ್ತಮಾನ, ಭವಿಷ್ಯಕಾಲಗಳಲ್ಲಿ ಉಂಟಾಗದಂತೆ ನಡೆಯುವದು ಭೂತಕಾಲದ ಸದ್ವ್ಯಯವೆನಿಸುವದು. ಬ್ರಹ್ಮಚರ್ಯವಿಹೀನರಾದೆವೆಂದು ಚಿಂತಿಸುತ್ತ ಕೂಡ್ರದೆ, ಇನ್ನುಮುಂದಾದರೂ ಪೂರ್ವಜರಂತೆ ಅದನ್ನು ವ್ಯವಸ್ಥಿತ ರೂಪದಿಂದ ನಡೆಯಿಸುವದು ವಿಚಾರವಂತರ ಲಕ್ಷಣವು. ತಾಯಿತಂದೆಗಳಾದರೂ ತಮ್ಮ ಪ್ರೀತಿಗೋಸುಗ ಮಕ್ಕಳ ಆಯುಷ್ಯದ ಹಾನಿಮಾಡದೆ, ಅವರನ್ನು ಯೋಗ್ಯಮಾರ್ಗಾವಲಂಬಿಗಳನ್ನಾಗಿ ಮಾಡುವದು ಯುಕ್ತವಲ್ಲವೆ ?

ನಿತ್ಯವೂ ಬೆಳಗಿನಲ್ಲಿ ಬೇಗನೆದ್ದು, ದೇವರನ್ನು ನೆನೆದು, ಶುದ್ಧಾಂತಃಕರಣದಿಂದ ತನ್ನ ಕಾರ್ಯ ಪ್ರಸಕ್ತನಾಗುವದೂ, ಗುರುಹಿರಿಯರ ಆಜ್ಞಾನುವರ್ತಿಯಾಗುವದೂ ಬ್ರಹ್ಮಚಾರಿಯ ಲಕ್ಷಣವು. ಇದಲ್ಲದೆ ಮನೋವಿಕಾರಗಳೆಂಬ ಶತ್ರುಗಳಿಂದ ದೂರಿರುವದನ್ನು ಅವನು ಮರೆಯಬಾರದು. ಈ ಪ್ರಕಾರ ತನ್ನ ಬ್ರಹ್ಮಚರ್ಯವೆಂಬ ಸಂಕಲ್ಪಿತಪರಿಪಾಲನ ನಿಯಮವನ್ನು ಅಖಂಡವಾಗಿ ಸಾಗಿಸಿ, ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸುವದು ಮನುಷ್ಯನಿಗೆ ವಿಹಿತವಲ್ಲವೆ?

—ವ. ಮಾ. ಕುಲಕರ್ಣಿ,

ಟ್ರೇನಿಂಗ್ ಕಾಲೇಜ, ಧಾರವಾಡ.

೨ ನೆಯ ಭಾಗ.

ನೆಪೋಲಿಯನ್ನನ ವೈಭವ.

ನೆಪೋಲಿಯನ್ನನು ಕಾರ್ಶಿಕನ್ನರ ಚಳವಳಿಯಲ್ಲಿ ಸೇರಿಕೊಂಡದ್ದರಿಂದ ವೇಳೆ ವೇಳೆಗೆ ತನ್ನ ಕೆಲಸದ ಮೇಲೆ ಹಾಜರಾಗುವದು ಅವನಿಗೆ ಆಗಲಿಲ್ಲ. ಇದಕ್ಕಾಗಿ ಅವನ ಹೆಸರು ನೌಕರಿಯಿಂದ ಕಡಿಮೆ ಮಾಡಲ್ಪಟ್ಟಿತು.! ಈ ಕಾಲದಲ್ಲಿ ಅವನ ಸ್ಥಿತಿಯು ಅತಿಶಯ ಚಮತ್ಕಾರವಾಗಿತ್ತು. ಅವನ ಹತ್ತರವಾಗಲಿ, ಅವನ ತಾಯಿಯ ಹತ್ತರವಾಗಲಿ ಧನಸಂಚಯವಿರಲಿಲ್ಲ. ಇಂತಹ ವಿಪನ್ನಾವಸ್ಥೆಯಲ್ಲಿ ದಿವಸಗಳನ್ನು ಕಳೆಯುತ್ತಿರಲು, ಒಮ್ಮಿಂದೊಮ್ಮೆ ಅವನ ಭಾಗ್ಯೋದಯವನ್ನುಂಟು ಮಾಡುವ ಪ್ರಸಂಗವು ಬಂದೊದಗಿತು:—

ಫ್ರಾನ್ಸದ ಅರಸುಅರಸಿಯರನ್ನು **ಜಾಕೋಬಿನ್** ಪಕ್ಷದವರು ಕೊಂದುಹಾಕಿ ತಮ್ಮ ಅಧಿಕಾರವನ್ನು ದೇಶದ ತುಂಬ ನಡೆಯಿಸಹತ್ತಿದರು. ಅತ್ಯಾಚಾರ, ರಕ್ತಪಾತ, ಲೋಕಕ್ಷೋಭಗಳನ್ನು ಮಾಡುತ್ತ ರಾಜ್ಯಸತ್ತೆಯನ್ನು ತಮ್ಮಕೈಯಲ್ಲಿ ತೆಗೆದುಕೊಂಡಿದ್ದರು. ಇದರಿಂದ ದೇಶದಲ್ಲಿ ಅಂತಃಕಲಹಗಳುಂಟಾಗಿ ಬಂಡಾಯಗಳೇಳತೊಡಗಿದವು. ಫ್ರಾನ್ಸದ "ಬುರ್ಬೋನ" ರಾಜ ಮನೆತನದ ಮಿತ್ರರೂ. ಆಪ್ತರೂ ಆದ ಆಸ್ಟ್ರಿಯಾ, ಜರ್ಮನಿ, ಇಂಗ್ಲಂಡ ದೇಶಗಳ ಅರಸರು 'ಜಾಕೋಬಿನ್' ಪಕ್ಷದ ಅತ್ಯಾಚಾರಕ್ಕಾಗಿಬೇಸತ್ತು ಎಲ್ಲರೂ ಒಕ್ಕಟ್ಟಾಗಿ ಫ್ರಾನ್ಸದಮೇಲೆ ದಾಳಿಗಳನ್ನು ಮಾಡಲಾರಂಭಿಸಿದರು. ಹೀಗೆ ಒಂದುಕಡೆಗೆ 'ಜಾಕೋಬಿನ್' ಪಕ್ಷದ ಅತ್ಯಾಚಾರ. ಮತ್ತೊಂಡೆಯಲ್ಲಿ ಪರರಾಷ್ಟ್ರಗಳ ಹಾವಳಿ ಇವುಗಳೊಳಗಿಂದ ಫ್ರಾನ್ಸದೇಶವನ್ನು ಬಿಡಿಸಿ ಶಾಂತತೆಯನ್ನು ನೆಲೆಗೊಳಿಸುವದು ಅತಿಶಯ ಕಠಿಣವಾದ ಕೆಲಸವಾಗಿದ್ದಿತು. ಆದರೆ ನೆಪೋಲಿಯನ್ನನು-ಜಾಣಾಕ್ಷನೂ, ಬುದ್ಧಿವಂತನೂ ಆಗಿದ್ದದರಿಂದ ಅವನು ಆಗ್ಗೆ '*Souper de Beaucaire*' ಎಂಬ ಹೆಸರಿನದೊಂದು ಪತ್ರಕವನ್ನು ಪ್ರಸಿದ್ಧಮಾಡಿ ಸದ್ಯಸ್ಥಿತಿಯಲ್ಲಿ ಫ್ರೆಂಚ ಜನರು ಸ್ವದೇಶದ ಸರಕಾರಕ್ಕೇ ಏಕನಿಷ್ಠೆಯಿಂದ ಸಹಾಯ ಮಾಡುವದು ಯೋಗ್ಯವೂ, ಶ್ರೇಯಸ್ಕರವೂ ಆಗುವದೆಂದು ಪ್ರತಿಪಾದಿಸ ಹತ್ತಿದನು. 'ಜಾಕೋಬಿನ್' ಪಕ್ಷದ ಮುಖಂಡನಾದ **ರಾಬಿಸ್ಪಿಯರನ** ಅತ್ಯಾಚಾರವು-ನೆಪೋಲಿಯನ್ನನ ಲಕ್ಷ್ಯದಲ್ಲಿ ಬಂದಿದ್ದಿಲ್ಲವೆಂತಲ್ಲ; ಆದರೆ ಪರಕೀಯರ ಕೈಕೆಳಗೆ ಗುಲಾಮರಾಗಿರುವದಕ್ಕಿಂತ ಸ್ವದೇಶದ ರಾಜಸತ್ತೆಯ ಕೈಕೆಳಗೆ ಇರುವದೇ ಹಿತವಾದುದೆಂದು ಅಲ್ಲ, ಒಂದಿಲ್ಲ ಒಂದು ವೇಳೆ ತಮ್ಮ ಸರಕಾರದಲ್ಲಿ ಅವಶ್ಯವಾದ

ಸುಧಾರಣೆಗಳನ್ನು ಮಾಡಬಹುದಾದ್ದರಿಂದಲೂ, ನೆಪೋಲಿಯನ್ನನು ಹೀಗೆ ಪ್ರತಿಪಾದಿಸ ತೊಡಗಿದನು. ಇದೇ ಕಾಲಕ್ಕೆ ಫ್ರಾನ್ಸದ ದಕ್ಷಿಣ ಹಾಗೂ ಪಶ್ಚಿಮ ಭಾಗಗಳಲ್ಲಿ ಬಂಡಾಯಗಳು ಪ್ರಾರಂಭನಾದವು. **ತುಲೋನ** ಶಹರದ ರಕ್ಷಣೆಗಾಗಿ ಸರಕಾರದವರು ಒಂದು ದೊಡ್ಡ ಸೈನ್ಯವನ್ನು ಕಳಿಸಿದ್ದರು. ಆದರೆ ಅದಕ್ಕೆ ಯೋಗ್ಯನಾದ ನಾಯಕನು ಇದ್ದಿಲ್ಲ. ಆಗ್ಗೆ ನೆಪೋಲಿಯನ್ನನು ತುಲೋನದ ಹತ್ತರವೇ ಇದ್ದದರಿಂದ ಅವನ ಶೂರತನ, ಚಾತುರ್ಯಗಳನ್ನು ಪೂರ್ಣವಾಗಿ ಬಲ್ಲಂಥ ಅವನ ಮಿತ್ರರು ನೆಪೋಲಿಯನ್ನನನ್ನು ಈ ಕಾರ್ಯದಲ್ಲಿ ನೇಮಿಸಬೇಕೆಂದು ಮುಖ್ಯ ಸೇನಾಪತಿಗೆ ಶಿಫಾರಸ ಮಾಡಿದರು. ಕೂಡಲೆ ಸಹಾಯಕ ಸೇನಾಪತಿಯ ಸ್ಥಳವು ಅವನಿಗೆ ದೊರೆಯಿತು. ನೇಪೋಲಿಯನ್ನನು ಎಲ್ಲ ಪರಿಸ್ಥಿತಿಯನ್ನು ಪೂರ್ಣವಾಗಿ ಅವಲೋಕಿಸಿ ತುಲೋನ ಶಹರವನ್ನು ಮುತ್ತಿಗೆಹಾಕಿ ಜಯ ಪಡೆಯುವ ಸುಲಭವಾದ ಒಂದು ಯುಕ್ತಿಯನ್ನು ಹುಡುಕಿ ತೆಗೆದನು. ಮೂರು ತಿಂಗಳವರೆಗೆ ಸತತವಾದ ಪ್ರಯತ್ನದಿಂದ ತುಸು ಸೈನ್ಯದೊಂದಿಗೆ ತನ್ನ ಯುಕ್ತಿಯೋಜನೆಯನ್ನು ಸಫಲವನ್ನಾಗಿ ಮಾಡಿ ತೋರಿಸಿದನು ! ಈ ಯುದ್ಧದಲ್ಲಿಯ ಅವನ ಲಷ್ಕರಿಯ ಕೌಶಲ್ಯವನ್ನು ಕಂಡು, ಸರಕಾರದವರು ಅವನನ್ನು ಅಭಿನಂದಿಸಿ **ಬ್ರಿಗೇಡಿಯರ ಜನರಲ್** ಎಂಬ ದೊಡ್ಡ ಪದವಿಗೇರಿಸಿದರು. ಸಮುದ್ರದ ದಂಡೆಯ ಹತ್ತರದಲ್ಲಿರುವ ಲಷ್ಕರೀ ಠಾಣ್ಯಾಗಳನ್ನು ವ್ಯವಸ್ಥೆಗೊಳಿಸುವ ಕೆಲಸವನ್ನೂ ನೆಪೋಲಿಯನ್ನನಿಗೇ ಒಪ್ಪಿಸಿದರು.

ಇ. ಸ. (೧೭೯೪) ರಲ್ಲಿ ಇಟಾಲಿಯೊಳಗಿನ ಫ್ರೆಂಚ ಸೈನ್ಯಕ್ಕೆ ಸಹಾಯ ಮಾಡುವದಕ್ಕಾಗಿ ನೆಪೋಲಿಯನ್ನನನ್ನು "ಜೆನೋವೋ" ಪಟ್ಟಣಕ್ಕೆ ಕಳಿಸಿದರು. ಅಲ್ಲಿಯೂ ತನ್ನ ಯೋಜನೆಗಳಿಗನುಗುಣವಾಗಿಯೇ ಎಲ್ಲ ಸಣ್ಣ ದೊಡ್ಡ ಜಯಗಳನ್ನು ಸಂಪಾದಿಸಿದನು. ಅವನು ತಿರುಗಿ ಫ್ರಾನ್ಸಕ್ಕೆ ಬರುವದರೊಳಗಾಗಿಯೇ ಜಾಕೋಬಿನ್ ಪಕ್ಷದ ಮುಖ್ಯಸ್ಥನಾದ **ರಾಬಿಸ್ಪಿಯರ**ನ ವಧೆಯಾಗಿ ಹೋಗಿತ್ತು. ಇದರಿಂದ ಅಧಿಕಾರಸ್ಥರಲ್ಲಿ ಬಹಳ ಹೆಚ್ಚು ಕಡಿಮೆಗಳುಂಟಾದವು. ನೆಪೋಲಿಯನ್ನನು ರಾಬಿಸ್ಪಿಯರನ ಸೇವೆಯನ್ನು ಅತಿಶಯ ದಕ್ಷತೆಯಿಂದ ಮಾಡುತ್ತಿದ್ದದರಿಂದ ಹೊಸ ಅಧಿಕಾರಿಗಳಿಗೆ ಅವನಲ್ಲಿ ಸಂಶಯ ಉಂಟಾಯಿತು. ಆದ್ದರಿಂದ ಅವರು ಅವನನ್ನು ಬೇಕೆಂದು ಪಶ್ಚಿಮಭಾಗದ ಬಂಡುಗಳನ್ನು ಮುರಿಯುವ ಕೆಲಸಕ್ಕೆ ನೇಮಿಸಿದರು. ಆದರೆ ನೆಪೋಲಿಯನ್ನನಿಗೆ ಅದು ತೀರಕ್ಷುಲ್ಲಕವಾಗಿ ತೋರಿದ್ದರಿಂದ ಅವನು ಆ ಕೆಲಸವನ್ನು ನಿರಾಕರಿಸಿದನು. ಆದ್ದರಿಂದ ಮತ್ತೊಮ್ಮೆ ಅವನ ಹೆಸರು ನೌಕರಿಯಿಂದ ಕಡಿಮೆ ಮಾಡಲ್ಪಟ್ಟಿತು. ಆದರೆ ಅದೇ ವೇಳೆಗೆ ಫ್ರೆಂಚ ಸರಕಾರದವರು ತುರ್ಕಸ್ಥಾನದೊಳಗಿನ ಸೈನ್ಯದ ಪುನರ್ಘಟನೆಯ ಕಾರ್ಯವನ್ನಾರಂಭಿಸಿ

ದ್ದರು. ಈ ಕೆಲಸಕ್ಕೆ ತನ್ನನ್ನು ನೇಮಿಸಬೇಕೆಂದು ನೇಪೋಲಿಯನ್ನನು ಒಂದು ಅ ರ್ಜಿಯನ್ನು ಮಾಡಿಕೊಂಡನು. ಆಗಿನ ಅಧಿಕಾರೀ ವರ್ಗದಲ್ಲಿ ಬಾರಾಸ್ ಎಂಬ ಗ್ರಹಸ್ಥನು ಅವನ ಮಿತ್ರನಾಗಿದ್ದನು ಈ ಮಿತ್ರನ ಪ್ರಯತ್ನದಿಂದ ನೆಪೋಲಿಯ ನ್ನನ ಕಾರ್ಯವು ನಿರ್ವಿಘ್ನತೆಯಿಂದ ಕೈಗೂಡಿತು. ಕೂಡಲೆ ಅವನು ಕಾನಸ್ಟಾಂತಿ ನೋಪಲ್‌ಕ್ಕೆ ಹೊರಡತಕ್ಕವನು, ಅಷ್ಟರಲ್ಲಿಯೇ ಪಾರಿಸಪಟ್ಟಣದಲ್ಲಿ ಒಂದು ವಿಲಕ್ಷಣ ಸಂಗತಿಯು ಉದ್ಭವಿಸಿತು. ಇದರಿಂದ ನೆಪೋಲಿಯನ್ನನ ಆಯುಷ್ಯ ಕ್ರಮಕ್ಕೆ ಬೇರೊಂದು ಗತಿಯೇ ದೊರೆತಂತಾಯಿತು.

ರಾಬಿಸ್ಪಿಯರನ ಮರಣದ ನಂತರ ಫ್ರೆಂಚ ಸರಕಾರದ ರಾಜ್ಯ ಪದ್ಧತಿಯೇ ಒದಲಾಗಿದ್ದಿತು. ಇದರಿಂದ ಫ್ರಾನ್ಸದಲ್ಲಿ *Council of Ancients* ಹಾಗೂ *Council of Five Hundred* ಎಂಬೆರಡು ಸಭೆಗಳು ಉತ್ಪನ್ನವಾದವು. ಈ ಎರಡು ಸಭೆಗಳ ಪ್ರತಿನಿಧಿಗಳು ಸ್ವತಂತ್ರ ರೀತಿಯಿಂದ ಜನರಿಂದಲೇ ಆರಿಸಲ್ಪಡಬೇಕೆಂದು ಜನಸಾಮಾನ್ಯದ ಮತವಾಗಿತ್ತು. ಆದರೆ ಮೊದಲಿನ ' **ಜಾಕೋಬಿನ್** ' ಪ. ದವರು ಈ ಪ್ರತಿನಿಧಿಗಳಲ್ಲಿಯ ⅔ ದಷ್ಟು ಜನರನ್ನು ತಾವೇ ಆರಿಸತಕ್ಕದ್ದೆಂಬದೊಂ ದು ನೇಮವನ್ನು ಇಟ್ಟಿದ್ದರು. ಇದರಿಂದ ಮತ್ತೆ ಮೊದಲಿನಂತೆಯೇ ರಾಜ್ಯವ್ಯವಸ್ಥೆ ಯಲ್ಲಿ ಅತ್ಯಾಚಾರಗಳಾಗುವವೆಂಬ ಹೆದರಿಕೆಯಿಂದ ಜನರು ಒಟ್ಟಾಗಿ ಸೇರಿ ದಂಗೆ ಯನ್ನೆಬ್ಬಿಸಲಾರಂಭಿಸಿದರು. ರಾಜಧಾನಿಯ ಸೈನ್ಯದಲ್ಲಿಯ ಸುಮಾರು ೩೦ ಸಾವಿರ ಸೈನಿಕರನ್ನು ಸಹ ತಮ್ಮ ಕಡೆಗೆ ಒಲಿಸಿಕೊಂಡಿದ್ದರು. ಒಟ್ಟು ನಾಲ್ವತ್ತು ಸಾವಿರ ಜ ನರು ಪಾರಿಸ ಪಟ್ಟಣದ ಮೇಲೆ ಒಮ್ಮಿಂದೊಮ್ಮೆ ದಂಗೆಯನ್ನು ಎಬ್ಬಿಸಿದರು. ಸರಕಾ ರದವರು ಕೂಡಲೆ ನೆಪೋಲಿಯನ್ನನನ್ನು ಈ ಬಂಡು ಮುರಿದು ಶಾಂತತೆಯನ್ನುಂಟು ಮಾಡುವದಕ್ಕೆ ನಿಯಮಿಸಿದರು.

ಮೊದಮೊದಲು ನೆಪೋಲಿಯನ್ನನು ಈ ಕೆಲಸವನ್ನು ಕೈಕೊಳ್ಳುವದಕ್ಕೆ ತುಸು ಹಿಂದೆ ಮುಂದೆ ನೋಡಿದನು. ಆದರೆ ' ಈ ವೇಳೆಯಲ್ಲಿ ಬಂಡನ್ನುಮುರಿದು ಸರಕಾರ ದ ಪಕ್ಷವನ್ನೂ ಬಲವುಳ್ಳದ್ದಾಗಿ ಮಾಡದಿದ್ದರೆ ಮುಂದೆ ಅನೇಕ ಅನರ್ಥಗಳುಂಟಾಗ ಬಹುದು; ಬಂಡುಖೋರರ ವಿಜಯವಾದರೆ, ದೇಶದಲ್ಲೆಲ್ಲ ಅರಾಜಕವುಂಟಾಗಿ ಜ ರ್ಮನಿ, ಆಸ್ಟ್ರಿಯಾ ಮೊದಲಾದ ಶತ್ರುರಾಷ್ಟ್ರಗಳು ಫ್ರಾನ್ಸವನ್ನು ಚೂರು ಚೂರಾಗಿ ಒಡೆದು ನುಂಗಿ ಬಿಡಬಹುದು ' ಈ ಕಲ್ಪನೆಗಳಿಂದ ಅವನು ಈ ಹೊಸ ಅಧಿಕಾರವ ನ್ನು ಸ್ವೀಕರಿಸಲೊಪ್ಪಿದನು. ಕೂಡಲೆ, ಬಂಡುಖೋರರ ಸ್ಥಿತಿಯನ್ನು ಚನ್ನಾಗಿ ಅವ ಲೋಕನ ಮಾಡಿ, ಯೋಗ್ಯವೇಳೆಯಲ್ಲಿ ಅತಿಶಯ ಕುಶಲತೆಯಿಂದ ತೋಪುಗಳನ್ನು ಹಾರಿಸಹತ್ತಿದನು! ನಾಲ್ಕೈದು ತಾಸುಗಳ ಅವಧಿಯಲ್ಲಿ ಬಂಡುಖೋರರನ್ನು ಸೋ

ಲಿಸಿ ಓಡಿಸಿಬಿಟ್ಟನು!! ಇದರಲ್ಲಿ ಅತಿಶಯ ಹೆಚ್ಚೆಂದರೆ ಇನ್ನೂರು ಜನರ ಪ್ರಾಣಹಾನಿಯು ಮಾತ್ರ ಆಯಿತು. ನೆಪೋಲಿಯನ್ನನ ಈ ಸಣ್ಣ ವಿಜಯವು ಫ್ರೆಂಚ ರಾಷ್ಟ್ರದ ಹಿತದ ದೃಷ್ಟಿಯಿಂದ ಅತ್ಯಂತ ಮಹತ್ವವಾದದ್ದೆಂದು ದೊಡ್ಡ ದೊಡ್ಡ ಯುರೋಪಿಯನ್ ಇತಿಹಾಸಕಾರರು ಒಪ್ಪಿಕೊಂಡಿರುವರು. ಈ ವಿಜಯದಿಂದ ಫ್ರಾನ್ಸದ ಮೇಲಿನ ಒಂದು ದೊಡ್ಡ ಅರಿಷ್ಟ ಪ್ರಸಂಗವು ನಾಶವಾದಂತಾಯಿತು. ಈಗ್ಗೆ ಫ್ರೆಂಚ ಸರಕಾರದವರು ನೆಪೋಲಿಯನ್ನನನ್ನು ಸ್ವದೇಶದಲ್ಲಿಯ ಲಷ್ಕರಿಯ ಮುಖ್ಯ ಸೇನಾಪತಿಯನ್ನಾಗಿ ಮಾಡಿಬಿಟ್ಟರು!

ಹೀಗೆ ನೆಪೋಲಿಯನ್ನನು ತನ್ನ ಕರ್ತೃತ್ವದಿಂದ ಪ್ರಸಿದ್ಧಿಯನ್ನು ಹೊಂದುತ್ತಿರಲು, ಒಮ್ಮೆ ಅವನಿಗೆ ಸರದಾರ ಮನೆತನದ ವಿಧವೆಯೊಬ್ಬಳ ಪರಿಚಯವಾಯಿತು. ಆವಳ ಸೌಂದರ್ಯವನ್ನು ನೋಡಿ ಅವನ ಮನಸ್ಸಿನಲ್ಲಿ ಪ್ರಣಯ ಕಲ್ಪನೆಯುಂಟಾಯಿತು. ತನ್ನ ಮಿತ್ರನಾದ ಬಾರಾಸ್, ಎಂಬವನ 'ಸಹಾಯದಿಂದ ಆ ವಿಧವೆಯಾದ '**ಜೋಸೆಫಾಯಿನ್ ಬ್ಯೂಹಾರ್ನೆಸ್**' ಎಂಬವಳನ್ನು ಲಗ್ನ ಮಾಡಿಕೊಂಡನು (ಇ. ಸ. ೧೭೯೬). ಲಗ್ನದ ವೇಳೆಗೆ ಅವನ ಹೆಂಡತಿಯು ಎರಡುಮಕ್ಕಳ ತಾಯಿಯಾಗಿದ್ದಳಲ್ಲದೆ, ಅವನಿಗಿಂತ ಒಂದು ವರ್ಷಕ್ಕೆ ಹಿರಿಯಳಾಗಿದ್ದಳು! ನಿಜವಾದ ಪ್ರೇಮಕ್ಕೆ ಯಾವನಿರ್ಬಂಧವಿದೆ? ಈ ಪ್ರಕಾರವಾಗಿ ಅಧಿಕಾರ, ಸ್ತ್ರೀ, ಹಾಗೂ ವೈಭವ ಇವುಗಳ ಲಾಭವಾಗಿ ನೆಪೋಲಿಯನ್ನನ ಭಾಗ್ಯೋದಯವು ಇಲ್ಲಿಗೆ ಪ್ರಾರಂಭವಾಯಿತು.

---

೩ ನೆಯ ಭಾಗ.

ದಿಗ್ವಿಜಯ (ಇತಾಲಿ)

॥ क्रियासिद्धिःसत्वे भवति महतां नोपकरणे ॥

ಇತಾಲಿಯ ಮೇಲೆ ಸ್ವಾರೀ ಮಾಡುವದಕ್ಕೆ ಒಂದು ಯೋಜನೆಯನ್ನು ತಯಾರಿಸಿ ಫ್ರೆಂಚ ಲಷ್ಕರೀ ಸಂಘಕ್ಕೆ ಈ ಮೊದಲೇ ಅದನ್ನು ಒಪ್ಪಿಸಿದ್ದನು. ಅವನ ಯೋಜನೆಯನ್ನು ಅಮಲಿನಲ್ಲಿ ತರುವದಕ್ಕಾಗಿ ಫ್ರೆಂಚ ಸರಕಾರದವರು ಅವನನ್ನೇ ಈ ಕಾರ್ಯಕ್ಕೆ ನಿಯಮಿಸಿದರು. ಮುಖ್ಯ ಸೇನಾಪತಿಯ ಈ ಕೆಲಸವನ್ನು ನೆಪೋಲಿಯನ್ನನು ಅತಿಶಯ ಸಂತೋಷದಿಂದ ಕೈಕೊಂಡನು. ಇತಾಲಿ ದೇಶವನ್ನು ಸಮರ ಭೂಮಿಯನ್ನಾಗಿ ಮಾಡಿದರೆ, ಆಸ್ಟ್ರಿಯಾ ದೇಶದ ಪಾರಿಪತ್ಯವನ್ನು ಮಾ

ಕಲಿಕ್ಕೂ, ಫ್ರಾನ್ಸಕ್ಕೆ ಹೊಸ ಭೂಮಿಗಳನ್ನು ಸಂಪಾದಿಸಿ ಕೊಡಲಿಕ್ಕೂ ಅನುಕೂಲವಾಗುವದೆಂದು ಅವನು ಪೂರ್ಣವಾಗಿ ನಂಬಿದ್ದನು ನೆಪೋಲಿಯನ್ನನ ಚಪಲತೆ, ಸಂಘಟನಾಶಕ್ತಿ ಬೌದ್ಧಿಕ ತೇಜ ಇವುಗಳನ್ನು ಕಂಡು ಅವನ ಕೈಕೆಳಗಿದ್ದ ವಯೋವೃದ್ಧರಾದ ಸರದಾರರು ಚಕಿತರಾಗಿ ಹೋದರು ! ತಮ್ಮ ಮೇಲೆ ನೆಪೋಲಿಯನ್ನನನ್ನು ನಿಯಮಿಸಿದ್ದು ಸಕೃದ್ದರ್ಶನಕ್ಕೆ ಈ ಸರದಾರರಿಗೆ ಸಹನವಾಗಲಿಲ್ಲ. ಆದರೆ ಅವನ ಸಂಗಡ ಕೆಲವು ದಿವಸ ಸಹವಾಸ, ಸಂಭಾಷಣೆಗಳು ನಡೆದಬಳಿಕ, ಅವರ ಮತವು ಬದಲಾಗಿ ಅವನ ವಿಷಯಕ್ಕೆ ಆದರ ಉತ್ಪನ್ನವಾಯಿತು. ಕೈ ಕೆಳಗಿನ ಸೈನಿಕರೂ ಸಹ ಯುದ್ಧಕಲೆಯಲ್ಲಿ ನುರಿತವರೂ ದೇಶಾಭಿಮಾನಿಗಳೂ ಆಗಿದ್ದವರಿಂದ ತಮ್ಮ ದೇಶವನ್ನು ಸದ್ಯದ ವಿಪನ್ನಾವಸ್ಥೆಯಿಂದ ರಕ್ಷಿಸಿ, ಅವರ ಪುರೋವೃದ್ಧಿಗಾಗಿ ಸಾಧ್ಯವಿದ್ದಷ್ಟು ಸ್ವಾರ್ಥತ್ಯಾಗವನ್ನು ಮಾಡಿ ತಮ್ಮ ಜೀವನ್ನು ಸಹ ಕೊಡಲಿಕ್ಕೆ ಸಿದ್ಧರಾಗಿದ್ದರು. ಅದರಲ್ಲಿ ನೆಪೋಲಿಯನ್ನನಂಥ ಮಾರ್ಗದರ್ಶಕನು ದೊರೆದ ಮೇಲೆ ಕೇಳುವದೇನು? ಅವರ ಬಾಹುಗಳು ಮತ್ತಷ್ಟು ಹೆಚ್ಚಿಗೆ ಸ್ಫುರಣ ಹೊಂದಲಾರಂಭಿಸಿದವು. ಇಂತಹ ಅನುಕೂಲ ಪರಿಸ್ಥಿತಿಯನ್ನು ಕಂಡು ನೆಪೋಲಿಯನ್ನನು ಆನಂದ ಭರಿತನಾಗಿ (ಇ. ಸ. ೧೭೯೬) ರಲ್ಲಿ ಇಟಾಲಿ, ಹಾಗೂ ಫ್ರಾನ್ಸ ಇವುಗಳ ಸರಹದ್ದಿನ ಮೇಲಿರುವ ' ನೀಸ್. ಎಂಬ ಪಟ್ಟಣಕ್ಕೆ ಬಂದು ಸಸೈನ್ಯನಾಗಿ ತಳವೂರಿದನು.

ಕೂಡಲೆ ಪೂರ್ವತಯಾರಿಯನ್ನು ಮಾಡಿಕೊಂಡು ನೆಪೋಲಿಯನ್ನನು ಕೆಲ ದಿವಸಗಳ ಅವಧಿಯಲ್ಲಿ ಆಸ್ಟ್ರಿಯನ್ ಸೈನ್ಯವನ್ನು ಪೋನದಿಯಾಚೆಗೆ ಓಡಿಸಿ ಬಿಟ್ಟನು. ಮುಂದೆ " ಮೊಂಡೋವ್ಹಿ ' ಹಾಗೂ ' ಕೇವಾ ' ಎಂಬೆರಡು ಕೋಟೆಗಳನ್ನು ಕೈವಶ ಮಾಡಿಕೊಳ್ಳಲು, ಶತ್ರುಗಳು ಸಂಧಿಗೊಡಂಬಡಬೇಕಾಯಿತು. ಮುಂದೆ ತುಸು ದಿವಸಗಳಲ್ಲಿಯೇ ' ಮಿಲನ್ ' ಶಹರವನ್ನು ಕೈವಶ ಮಾಡಿಕೊಂಡನು. ಈ ಭಾಗದಲ್ಲಿ ' **ಮಾಂಟುವಾ** ' ಕೋಟೆಯ ಮುತ್ತಿಗೆಯು ಬಹಳ ಮಹತ್ವವಾದದ್ದಿತ್ತು. ಇಲ್ಲಿ ೧೫೦೦೦ ಶತ್ರುಗಳ ಸೈನ್ಯವಿತ್ತು. ಈ ಸೈನ್ಯವನ್ನು ಸೋಲಿಸಿದ ಹೊರತು, ನೆಪೋಲಿಯನ್ನನಿಗೆ ಉತ್ತರಕ್ಕಾಗಲಿ, ಪೂರ್ವಕ್ಕಾಗಲಿ ಮೋರೆಯನ್ನು ತಿರುಗಿಸಲಶಕ್ಯವಾಗಿತ್ತು. ಸುಮಾರು ನಾಲ್ಕುತಿಂಗಳವರೆಗೆ ಈ ಶಹರಕ್ಕೆ ಮುತ್ತಿಗೆಯನ್ನು ಹಾಕಿ, ಒಳಗಿನ ಜನರು ತಾವಾಗಿಯೇ ಹಣ್ಣಿಗೆ ಬರುವಂತೆ ಪ್ರಯತ್ನ ನಡೆಯಿಸಿದ್ದನು. ಆದರೆ ಆಸ್ಟ್ರಿಯನ್ ಸೇನಾಪತಿಯಾದ ' ಉರ್ಮ್ಝರ ' ನೆಂಬುವನು ತನ್ನ ೫೦೦೦೦ ಸೈನ್ಯವನ್ನು ಎರಡುಭಾಗಮಾಡಿ ಈ ಮುತ್ತಿಗೆಯನ್ನೆಬ್ಬಿಸುವದಕ್ಕೆ ನೆಪೋಲಿಯನ್ನನ ಮೇಲೆ ಸಾಗಿ ಬಂದನು. ಚಾಣಾಕ್ಷನಾದ ನೆಪೋಲಿಯನ್ನನು

ಈ ಎರಡೂ ಸೈನ್ಯವನ್ನು ಬೇರೆ ಬೇರೆಯಾಗಿ ಸೋಲಿಸಿ ಓಡಿಸಿ ಬಿಟ್ಟನು ! ಶತ್ರುಗ
ಳು ಮತ್ತೊಮ್ಮೆ ಸೈನ್ಯವನ್ನು ಕೂಡಿಸಿಕೊಂಡು ಲೋನಾಟೋ, ರೇವ್ಹಿರೇದೋ, ಎಂ
ಬ ಸ್ಥಳದಲ್ಲಿ ನೆಪೋಲಿಯನ್ನನನ್ನು ಮುತ್ತಿದರು. ಶತ್ರುಸೈನ್ಯದಲ್ಲಿ ಈಗ ಜ್ವರದ
ಬಾಧೆಯುತ್ಪನ್ನವಾದ್ದರಿಂದ ಅವರು ಸಹಜವಾಗಿ ಹಿಂದಿರುಗಲೇ ಬೇಕಾಯಿತು.
ಈಗ್ಗೆ ಸುಮಾರು ಎರಡು ತಿಂಗಳ ವರೆಗೆ ನೆಪೋಲಿಯನ್ನನಿಗೆ ವಿಶ್ರಾಂತಿಯು ಸಿಕ್ಕಂ
ತಾಯಿತು. ಈ ಅವಧಿಯಲ್ಲಿ ಅವನು ಇಟಾಲಿಯ ಕೆಲವು ಪಟ್ಟಣಗಳ ರಾಜಕೀಯ
ಸ್ಥಿತಿಯನ್ನು ಸುಧಾರಿಸುವ ಕಾರ್ಯದಲ್ಲಿ ತೊಡಗಿದನು. **ಮಿಲಾನ** ಪಟ್ಟಣದ ಜ
ನರು ಸುಸಂಸ್ಕೃತರಾಗಿದ್ದರಿಂದ ಅವರು ಸ್ವಾತಂತ್ರ್ಯದ ಭಕ್ತರಾಗಿದ್ದರು. ನೆಪೋಲಿಯ
ನ್ನನು ಲೋಕಸತ್ತಾತ್ಮಕವಾದ ರಾಜ್ಯದ ಮುಖ್ಯ ಸೇನಾಪತಿಯಾಗಿದ್ದರಿಂದಲೂ,
ಫ್ರೆಂಚಸರಕಾರದವರು ಈ ಯುದ್ಧವನ್ನು ಕೇವಲ ಲೋಕಸ್ವಾತಂತ್ರ್ಯದ ರಕ್ಷಣೆಗಾ
ಗಿಯೇ ಪ್ರಾರಂಭಿಸಿದ್ದರಿಂದಲೂ, ಮಿಲಾನದ ಜನರು ಅವನಿಗೆ ಅನುಕೂಲರಾದರು.
ಆಮೇಲೆ ನೇಪೋಲಿಯನ್ನನು ತನ್ನ ಅಧಿಕಾರದೊಳಗೆ ಮಿಲಾನ್, ರಿಗಿಯೋ, ಮೋ
ದೆನಾ, ಫೆರಾರಾ ಹಾಗೂ ಬೋಲೊಗ್ನಾ ಈ ಶಹರಗಳು ಹಾಗೂ ಅವುಗಳ ಸುತ್ತಲಿ
ನ ಪ್ರದೇಶ ಇವುಗಳನ್ನು ಕೂಡಿಸಿ ಒಂದು ಲೋಕಸತ್ತಾತ್ಮಕ ರಾಜ್ಯವನ್ನು ಫ್ರೆಂಚ
ಅಧಿಸತ್ತೆಯ ಕೆಳಗೆ ಸ್ಥಾಪಿಸಿಬಿಟ್ಟನು. !! ಇದರಿಂದ ಅವನಿಗೆ ತನ್ನ ಸೈನ್ಯಕ್ಕೆ ಬೇಕಾ
ದ ಅನ್ನ ಸಾಮುಗ್ರಿಯೂ ಸಹಜವಾಗಿ ಪೂರೈಸಲ್ಪಡಲಾರಂಭಿಸಿತು.

ಇಷ್ಟಕ್ಕೇ ಶಾಂತತೆಯುಂಟಾಗಲಿಲ್ಲ. ಮತ್ತೊಮ್ಮೆ ಅತಿಶಯ ಬಿಕ್ಕಟ್ಟಿನ ಪ್ರ
ಸಂಗವು ನೆಪೋಲಿಯನ್ನನ ಮೇಲೆ ಬಂದೊದಗಿತು. ಆಸ್ಟ್ರಿಯನ್ ಮುಖ್ಯ ಸೇನಾಪ
ತಿಯಾದ " **ಆಲಿವ್ಹಂಜಿ** " ಎಂಬವನು ಬಹಳ ಕರ್ತೃತ್ವಶಾಲಿಯೂ ಶೂರನೂ
ಬುದ್ಧಿವಂತನೂ ಆಗಿದ್ದನು. ಅವನು ಸ್ವತಃ ಮತ್ತೊಮ್ಮೆ **ಮಂಟೂವಾ** ಶಹರದ
ಮುತ್ತಿಗೆಯನ್ನೆಬ್ಬಿಸುವದಕ್ಕೆ ಮೂರು ಕಡೆಯಿಂದ ನೆಪೋಲಿಯನ್ನನ ಮೇಲೆ ಸಾಗಿ
ಬಂದನು. ಈಗ ನೇಪೋಲಿಯನ್ನನ ಸ್ಥಿತಿಯು ಅತಿಶಯ ಚಮತ್ಕಾರಿಕವಾಗಿ ಹೋ
ಯಿತು ! ಮಂಟೂವಾ ಸೈನ್ಯದ ಕಡೆಗೇ ಉಳಿದರೆ ಎರಡು ಆಸ್ಟ್ರಿಯನ್ ಸೈನ್ಯಗಳ
ಏಕತ್ರವಾಗುತ್ತಿದ್ದವು. **ವ್ಹೆರೋನಾ** ಪಟ್ಟಣದಲ್ಲಿ ತಳವೂರಿದರೆ, ಶತ್ರುಪಕ್ಷದ ಕ
ಯಿಂದ ಪರಾಭವ ಹೊಂದುವ ಸಂಭವವು ಬಹಳವಾಗಿತ್ತು. ಆಲಿವ್ಹಂಜಿಯು ಸೈನ್ಯ
ದಮೇಲೆ ಬಿದ್ದರೆ, ಅವನ ಸ್ಥಾನವು ಬಹಳ ಬಿಕ್ಕಟ್ಟಿನದಾಗಿದ್ದಿತು. ಇಂತಹ ಕಠಿಣ
ಪರಿಸ್ಥಿತಿಯಲ್ಲಿ ಬೇರೆ ಯಾವ ಸೇನಾಪತಿಯಾದರೂ ಸಿಕ್ಕಿಕೊಂಡದ್ದಾದರೆ ಅವನ
ನಿಃಸಂಶಯವಾಗಿ ಸೋತು ದಿಕ್ಕೆಟ್ಟು ಓಡಿಹೋಗಬೇಕಾಗುತ್ತಿತ್ತು! ಆದರೆ ನೆಪೋ
ಯನ್ನನ ಧೈರ್ಯ, ಸಮಯ ಸೂಚಕತೆ, ಯೋಗ್ಯವೇಳೆಯಲ್ಲಿ ಯೋಗ್ಯವಾದ ಗಿ

ಕರ್ಮವೀರ ಗಾಂಧೀ.

(ಲೇಖಕ— **ಕೇಶವಶರ್ಮಾ, ಗಲಗಲಿ.**)

ಈ ಜಗತ್ತಿನಲ್ಲಿ ಪರೋಪದೇಶ ಪಂಡಿತರು ಬಹಳ ಜನರು ಇರುವರು. ಆಡಿದಂತೆ, ಉಪದೇಶಮಾಡಿದಂತೆ ಆಚರಿಸುವ ಜನರು ತೀರ ವಿರಲರು. ದೊಡ್ಡ ದೊಡ್ಡ ಮಾತುಗಳನ್ನಾಡಿ ಪ್ರಸಂಗಬಂದಾಗ ಹೇಡಿಯಂತೆ ಕುಳಿತು ಕೊಳ್ಳುವ ಜನರೇನು ನಮ್ಮಲ್ಲಿ ಕಡಿಮೆಯಾಗಿಲ್ಲ. ಬೇಕಾದಂತಹ ಸಂಕಟಪ್ರಸಂಗಗಳು ಬರಲಿ; ಹೆದರದೆ ಕರ್ತವ್ಯ ಪಥದಿಂದ ರೇಖಾಮಾತ್ರವಾದರೂ ಸರಿಯದೆ ಇರುವ ಜನರೇ ಮಹಾತ್ಮ ಕೋಟಿಯಲ್ಲಿ ಗಣಿಸಲ್ಪಡುವರು. ಇಂಥ ಸ್ಥಿತಪ್ರಜ್ಞರ ಉದಯದಿಂದಲೇ ದೇಶಗಳು ಏಳ್ಗೆಯನ್ನು ಹೊಂದುವವು. ಇಂತಹ ಮಹರ್ಷಿಯರ ಕಡೆಗೇ ಆಶಾಪೂರಿತ ಕಟಾಕ್ಷದಿಂದ ನೋಡುತ್ತ ಹತಭಾಗ್ಯಗಳಾದ ದೇಶಗಳು ತಮ್ಮ ಉಜ್ವಲವಾದ ಭವಿಷ್ಯತ್ಕಾಲವನ್ನು ಕುರಿತು ಆಲೋಚಿಸುತ್ತಿರುವವು. ದೇಶದ ಉಜ್ವಲವಾದ ಭವಿಷ್ಯತ್ಕಾಲವು ಸಮೀಪಿಸಿದಾಗಲೇ ಈ ಪ್ರಕಾರದ ಮಹಾತ್ಮರು ದೇಶದಲ್ಲಿ ಹುಟ್ಟುವರು. ಇಂಥವರಲ್ಲಿ ನಮ್ಮ ಚರಿತ್ರ ನಾಯಕರಾದ ' **ಗಾಂಧಿ**' ಯವರು ಒಬ್ಬರಾಗಿದ್ದಾರೆಂದು ಬರೆದರೆ ಲೇಖಕನ ಲೇಖನಿಗೆ ಧಾರ್ಷ್ಟ್ಯ ದೋಷವು ತಟ್ಟಲಿಕ್ಕಿಲ್ಲ.

ಮೋಹನದಾಸ ಕರಮಚಂದ ಗಾಂಧಿ ಯವರ ಜನ್ಮವು ಸನ್ ೧೮೬೯ ಇಸ್ವಿಯ ಅಕ್ಟೋಬರ ತಿಂಗಳ ೨ನೇ ತಾರೀಖಿನ ದಿವಸ ಅಂದರೆ ಭಾದ್ರಪದ ವದ್ಯ ದ್ವಾದಶೀ ಶಕೆ ೧೭೯೧ ದಿವಸ ಕಾಠೇವಾಡ ಪ್ರಾಂತದಲ್ಲಿ **ಪೋರಬಂದರ** ನಗರದಲ್ಲಿ ಒಂದು ವೈಶ್ಯಕುಲದಲ್ಲಿ ಆಯಿತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೂ ' ದ್ವಿಜ, ಎಂಬ ಸಂಜ್ಞೆಯುಂಟು. ಅರ್ಥಾತ್ ದ್ವಿಜ ಕುಲದಲ್ಲಿ ವಾಸಿಸತಕ್ಕ ದೈವಿಕ ಶಕ್ತಿಯು ಇವರಲ್ಲಿ ಪೂರ್ಣವಾಗಿ ನೆಲೆಗೊಂಡಿತ್ತು. ಕ್ಷತ್ರಿಯರ ಧೈರ್ಯವು ಇವರಲ್ಲಿ ಸ್ವಾಭಾವಿಕವಾದುದು. ರಾಜಕಾರಣ ಪಟುತ್ವವು ಇವರ ಕುಟುಂಬಕ್ಕೆ ಅನುವಂಶಿಕವಾಗಿದೆ. ಗಾಂಧಿಯ ಪೂರ್ವಜರು ದಿವಾಣಗಿರಿಯಂಥ ಮಹತ್ವಾದ ಜವಾಬದಾರಿಯ ಕಾರ್ಯಗಳನ್ನು ವಹಿಸಿದ್ದರು. ಗಾಂಧಿಯ ಹಿರಿಯರು ಸುಮಾರು ೨೩ ವರುಷಗಳವರೆಗೆ **ಕಾಠೇವಾಡದಲ್ಲಿ** ದಿವಾಣಗಿರಿಯನ್ನು ಮಾಡಿದ್ದರು. ಅವರ ಒಳ್ಳೇತನಕ್ಕಾಗಿ ಎಲ್ಲ ಜನರು ಅವರನ್ನು ಪ್ರೀತಿಸುತ್ತಿದ್ದರು. ಅವರ ಸ್ವಭಾವವು ಪ್ರಾಮಾಣಿಕತನದ್ದೂ, ಕರಾರಿಯಾದದ್ದೂ ಆಗಿತ್ತು. ಮುಖ್ಯವಾಗಿ ಇವರ ಗುಣದ ವಿಕಾಸವು ಈ ಸಣ್ಣಮಗನಲ್ಲಿ ಪೂರ್ಣವಾಗಿ ಆದದ್ದು ಕಂಡುಬರುವದು.

ಇನ್ನು ನಮ್ಮ ಚರಿತ್ರನಾಯಕನ ತಾಯಿಯ ವಿಷಯವಾಗಿ ಸ್ವಲ್ಪ ಬರೆಯುವಾ:- ಹುಡುಗನ ಭಾವೀ ಆಯುಷ್ಯವು ಬಹಳಮಾಡಿ **ಮಾತೆಯ ಪೂರ್ವಶಿಕ್ಷಣ**ವನ್ನು ಅವಲಂಬಿಸಿರುವದಷ್ಟೇ! ನಮ್ಮ ಚರಿತ್ರನಾಯಕನ ತಾಯಿಯು ಪುರಾಣಮತಾಭಿಮಾನಿಯೂ, ಧರ್ಮನಿಷ್ಠೆಯುಳ್ಳವಳೂ ಆಗಿದ್ದಳು. ಆಕೆಯು ತನ್ನ ಧಾರ್ಮಿಕ ಮತಗಳನ್ನು ಚಲೋರೀತಿಯಿಂದ ಪಾಲಿಸುತ್ತಿದ್ದಳು. ಪಾತಿವ್ರತ್ಯಧರ್ಮವನ್ನು ಪಾಲಿಸುವದರಲ್ಲಿ, ಹುಡುಗರಿಗೆ ಶಿಕ್ಷಣ ಕೊಡುವದರಲ್ಲಿ ಅತಿಶಯ ದಕ್ಷಳಾಗಿರುತ್ತಿದ್ದಳು. ತನ್ನ ಮಕ್ಕಳು ಪ್ರಾಮಾಣಿಕರೂ ಸದ್ವರ್ತನವವರೂ ಆಗಬೇಕೆಂದು ಆಕೆಯು ಯಾವಾಗಲೂ ಅಪೇಕ್ಷಿಸುತ್ತಿದ್ದಳು. ಮತ್ತು ಇದರ ದೆಶೆಯಿಂದ ಯಾವಾಗಲೂ ಅವರ ಕಡೆಗೆ ಲಕ್ಷಕೊಡುತ್ತಿದ್ದಳು. ಆಕೆಯ ಉಡುಪು ತೊಡಪು ಸಾಧಾರಣತರದ್ದು. ಬಹಿರಂಗ ಆಡಂಬರ ಶೋಭೆಯು ವಿಶೇಷವಾಗಿ ಆಕೆಗೆ ಸೇರುತ್ತಿದ್ದಿಲ್ಲ. ವ್ಯವಹಾರಿಕ ರೀತಿ ಸ್ವಲ್ಪ ಆಭರಣಗಳನ್ನು ಧರಿಸುತ್ತಿದ್ದಳು. ತನ್ನ ಗಂಡನ ಅಧಿಕಾರಕ್ಕನುಸಾರವಾಗಿ ಆಕೆಯು ದೊಡ್ಡ ದೊಡ್ಡ ರಾಣಿಯರಗೂಡ ಇರಬೇಕಾಗುತಿದ್ದರೂ ಆಕೆಯು ಸಾಧಾರಣ ಉಡುಪುಗಳನ್ನೇ ಧರಿಸುತ್ತಿದ್ದಳು. ಪತಿವ್ರತೆಯರಾದ ಅಬಲೆಯರಿಗೆ ಇದೇ ಭೂಷಣವು. ಇಂಥ ಪುಣ್ಯವತಿಯಾದ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನು ಧನ್ಯನೇಸರಿ. ತಾಯಿತಂದೆಗಳ ಗುಣಗಳು ನಮ್ಮ ಚರಿತ್ರನಾಯಕನಲ್ಲಿ ಬಿಂಬಿಸಿರುತ್ತವೆ. ಬಾಲ್ಯದಲ್ಲಿ ಆವನ ಶಿಕ್ಷಣವು ಇಂತಹ ಉತ್ತಮ ಶಿಕ್ಷಕರಿಂದ ಉಂಟಾಯಿತೋ ಅಂತಹ ಹುಡುಗನು ಮುಂದೆ **ಜಗದ್ವಂದ್ಯ**ನಾದರೆ ಆಶ್ಚರ್ಯವೇನು?

ಬಾಲ್ಯದಲ್ಲಿ **ಗಾಂಧಿ**ಯವರ ಶಿಕ್ಷಣವು ಪೋರಬಂದರದಲ್ಲಿಯೇ ಆಯಿತು. ಮುಂದೆ ಅವರ ಹಿರಿಯರು ಅಲ್ಲಿಯ ನೌಕರಿಯನ್ನು ಬಿಟ್ಟು ರಾಜಕೋಟಕ್ಕೆ ಬಂದದ್ದರಿಂದ, ಈ ನಗರದಲ್ಲಿ ಮೋಹನದಾಸರ ಶಿಕ್ಷಣವು ಮೊದಲನೇ ಪರೀಕ್ಷೆಯ ವರೆಗೆ ಆಯಿತು. ಗಾಂಧಿಯವರು ಹದಿನೇಳನೇ ವರುಷದಲ್ಲಿಯೇ ಮೊದಲನೇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮೋಹನದಾಸರ ೧೭ ವರುಷಗಳಲ್ಲಿ ಉಲ್ಲೇಖಯೋಗ್ಯವಾದ ಸಂಗತಿಯೆಂದರೆ ಅವರ **ವಿವಾಹವು.** ಆ ಕಾಲದ ರೂಢಿಗನುಸಾರವಾಗಿ ಅವರ ಲಗ್ನವು ೧೩ನೇ ವರುಷದಲ್ಲಿಯೇ ನಿರ್ವರ್ತಿಸಲ್ಪಟ್ಟಿತು. ವಧುವು ಪೋರಬಂದರದವಳೇ ಆಗಿದ್ದಳು. ಲಗ್ನಕ್ಕಿಂತ ಮೊದಲು ವಧುವು ಅತ್ತೆಯ ಮನೆಗೆ ಬರುತ್ತಿರುವದಿಲ್ಲವಾದರೂ, ಸುದೈವದಿಂದ ಲಗ್ನವಾಗುವದಕ್ಕಿಂತ ಪೂರ್ವದಲ್ಲಿ ಮೋಹನದಾಸರ ಪತ್ನಿಯು ಕೆಲವು ತಿಂಗಳುಗಳ ವರೆಗೆ ಇವರ ಮನೆಯಲ್ಲಿಯೇ ಇರುತ್ತಿದ್ದಳು. ಇಲ್ಲಿ ಇರುವಾಗ ಇಬ್ಬರೂ ಚಿಕ್ಕವರು; ಸಣ್ಣವಯಸ್ಸಿನವರು; ಒಂದೇ ಸ್ಥಳದಲ್ಲಿ ಆಡುತ್ತಿದ್ದರು. ಈ ರೀತಿಯಿಂದ ಲಗ್ನದ ಪೂರ್ವದಲ್ಲಿಯೇ ಅವರೀರ್ವರ ಮೈತ್ರಿಯು ಸಂಘಟಿ

ಸಿತ್ತು. ಲಗ್ನ ಸಮಾರಂಭವು ಅತಿಶಯ ವಿಜೃಂಭಣೆಯಿಂದ ಪೋರಬಂದರದಲ್ಲಿ ಉಂಟಾಯಿತು. ವಿವಾಹ ಕಾಲದಲ್ಲಿ ಅವರೀರ್ವರೂ ಚಿಕ್ಕವರಿದ್ದದರಿಂದ ವಧುವರರಿಗೆ ಒಂದು ತರದ ಚಮತ್ಕಾರವೆನಿಸಿತು. **ಮೋಹನದಾಸರ** ವಿವಾಹವು ಬಾಲ್ಯಕಾಲದಲ್ಲಿ ಉಂಟಾಗಿದ್ದರೂ, ಅದರಿಂದ ಅವರಿಗೆ ವಿಶೇಷ ಸುಖವುಂಟಾಗಿದ್ದರೂ ಅವರ ಸದ್ಯದ-ಮತವು ಬಾಲವಿವಾಹದ ವಿರುದ್ಧವಾಗಿದೆ. **ನಮ್ಮ ರಾಷ್ಟ್ರದ ನಿರ್ಬಲತೆಗೆ ಬಾಲವಿವಾಹವು ಮುಖ್ಯ ಕಾರಣವಾಗಿದೆ**ಯೆಂದು ಅವರ ಅಭಿಪ್ರಾಯ. ಹೀಗೆ ಅವರ ನಿಶ್ಚಿತವಾದ ಮತವಿದ್ದರೂ ಬಾಲವಿವಾಹದಿಂದಲೂ ಕೆಲವು ಲಾಭಗಳಿರುತ್ತವೆಂದು ಅವರು ನಂಬುತ್ತಾರೆ. ಈ ದಂಪತಿಗಳ ಕಡೆಗೆ ನೋಡಿದರೆ ಈ ಮಾತಿನ ಸತ್ಯತೆಯು ಕಂಡುಬರುವದು.

ಇನ್ನು ಸ್ವಾವ್ವ ಮೋಹನದಾಸರ ಪತ್ನಿಯವರ ವಿಷಯವಾಗಿ ಸ್ವಲ್ಪ ಬರೆಯುವಾ. ಈ ಪರಮ ಸಾಧ್ವಿಯು 'ಕಸ್ತೂರಬಾಯಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತಾಳೆ. ಕಸ್ತೂರಬಾಯಿಯವರ ಸ್ವಭಾವವು ಮೃದುವೂ ಪ್ರೇಮಲವೂ ಆಗಿದೆ. ನಿಜವಾದ ಪಾತಿವ್ರತ್ಯದ ಧರ್ಮದಂತೆ ಅವರು ಸದಾ ಪತಿಸೇವೆಯಲ್ಲಿ ಮಗ್ನರಾಗಿರುತ್ತಾರೆ. ತಪ್ಪಿ ಆದರೂ ಅವರಿಂದ ಪತಿಯ ಅಜ್ಞೆಯನ್ನು ಉಲ್ಲಂಘಿಸಿವದು ಆಗುವದಿಲ್ಲ. ಸರ್ವದಾ ಆನಂದವೃತ್ತಿ ಇರುವದು, ಸುತ್ತಲಿನ ಜನರ ಕೂಡ ಕೂಡಿನಡೆಯುವದು, ಬೇನೆಯವರ ಆರೈಕೆ ಮಾಡುವದು ಇವು ತಮ್ಮ ಕರ್ತವ್ಯಗಳೆಂದು ಅವರು ತಿಳಿಯುತ್ತಾರೆ. ಈ ತರಹದ ಸುಸ್ವಭಾವಯುಕ್ತ ಪತ್ನಿಯ ಸಹವಾಸದಿಂದ ಮೋಹನದಾಸರ ಮುಂದಣ ಆಯುಷ್ಯಕ್ರಮದಲ್ಲಿ ಸುಲಭತೆಯು ಪ್ರಾಪ್ತವಾಯಿತು. ಅಲ್ಲವಾದರೆ ಪತಿಪತ್ನಿಯರ ಭಿನ್ನವಿಚಾರದಿಂದ ಒಂದೊಂದು ವ್ಯಕ್ತಿಯ ಆಯುಷ್ಯವು ಬೇಸರದ್ದುಂಟಾಯಿತು. ಇಂತಹ ಉದಾಹರಣಗಳು ವಿಪುಲವಾಗಿ ದೊರುವದುಂಟು.

ಇನ್ನೊಂದು ಉಲ್ಲೇಖಾರ್ಹವಾದ ಸಂಗತಿಯೇನಂದರೆ ಮೋಹನದಾಸರ ತಂದೆಯ ಮೃತ್ಯುವಿನದು. ಮೋಹನದಾಸರ ವಿವಾಹ ಸಮಯದಲ್ಲಿ ಅವರ ತಂದೆಯವರಿಗೆ ತೀವ್ರ ರಜೆ ದೊರೆಯಲಿಲ್ಲ. ಅದರಿಂದ ಅವರು ಲಗುಬಗೆಯಿಂದ ಹೊರಟು ಬರುವಾಗ ಅವರ ಗಾಡಿಯು ಬೋಕ್ಕುಬೋರ್ಲಾಗಿ ಬಿದ್ದಿತು. ಇದರಿಂದ ಅವರಿಗೆ ಪೆಟ್ಟುತಗಲಿತು. ಈ ಪೆಟ್ಟಿನಿಂದ ಮುಂದೆ ಅವರು ಯಾವಾಗಲೂ 'ಅಜಾರಿ' ಇರುತ್ತಿದ್ದರು. ಆಗ ಅವರ ಸೇವೆಯನ್ನು ಮೋಹನದಾಸರು ದಕ್ಷತೆಯಿಂದ ಮಾಡುತ್ತಿದ್ದರು. ಶಾಬಾಸ್, ಪಿತೃಭಕ್ತನಾದ ಗಾಂಧಿಯೇ! ಇದು ನಿನಗೆ ಉಚಿತವೇ ಸೈ! ಇದೇ ಅಜಾರಿಯಿಂದ ಕರಮಚಂದರು ಇಹಲೋಕವನ್ನು ಬಿಟ್ಟರು.

ಪರೀಕ್ಷೆಯ ಪಾಸಾಗುವ ಪೂರ್ವದಲ್ಲಿ ಉಲ್ಲೇಖ ಮಾಡುವ ಸಂಗತಿ ಯಾವ

ದೆಂದರೆ ಮೋಹನದಾಸರ ಧರ್ಮಕಲ್ಪನೆಯಲ್ಲಿ ಉಂಟಾದ ಕ್ರಾಂತಿಯು. ಸಣ್ಣ ಹುಡುಗನಿದ್ದಾಗಿನಿಂದ ಧಾರ್ಮಿಕರಾದ ತಾಯಿತಂದೆಗಳ ಉಪದೇಶದಂತೆ ನಡೆಯುವ ಬಾಲಕನ ಧಾರ್ಮಿಕಪ್ರವೃತ್ತಿಯಲ್ಲಿ ಒಮ್ಮೆಲೆ ದೊಡ್ಡ ಪರಿವರ್ತನವುಂಟಾಯಿತು. ಯಾವ ಮೋಹನದಾಸನು ಮೊದಲು ದೇವರ ಪೂಜೆಯನ್ನೂ ಪುಸ್ತಕ ಪಠಣವನ್ನೂ ಮಾಡುತ್ತಿದ್ದನೋ, ಅವನೇ ಮುಂದೆ ಈ ಕೃತ್ಯಗಳನ್ನು ಮಾಡುವದರಲ್ಲಿ ಏನೂ ತಥ್ಯಾಂಶವಿಲ್ಲೆಂದು ತಿಳಕೊಳ್ಳಹತ್ತಿದನು. ಈ ಸಂಬಂಧವಾಗಿ ಅವನು ತನ್ನ ತಾಯಿಗೆ ಹಲವು ಪ್ರಶ್ನಗಳನ್ನು ಮಾಡುತ್ತಿದ್ದನು. ಈ ಕ್ರಾಂತಿಯು ಉಂಟಾಗಲಿಕ್ಕೆ ಎರಡು ಕಾರಣಗಳಾಗಿದ್ದವು. ಒಂದು ಇಂಗ್ರೇಜಿ ಶಿಕ್ಷಣವು; ಇನ್ನೊಂದು ಆಗಿನ ಕಾಲಕ್ಕೆ ಅವನಿಗೆ ಉಂಟಾದ ಜನರ ಸಹವಾಸ. ಧಾರ್ಮಿಕ ಸಂಗತಿಯಲ್ಲಿ ಅವನ ಮತಗಳು ಹೀರ ಪಾಖಂಡಿಗಳಂತೆ ಉಂಟಾದವು. ಮಾಂಸ ತಿಂದ ಹೊರತು ಮೈಯಲ್ಲಿ ಸಾಮರ್ಥ್ಯವು ಬರಲಾರದೆಂದು ಅವನ ಗಟ್ಟಿಮುಟ್ಟಾದ ಮತವು ಉಂಟಾಯಿತು. ಮಾಂಸತಿನ್ನುವದರ ಸಲುವಾಗಿ ಸಿದ್ಧಮಾಡುವ ಕೆಲಸವನ್ನು ಒಬ್ಬ ಮುಸಲ್ಮಾನ ಮಿತ್ರನು ಒಪ್ಪಿಕೊಂಡನು. ಸಂಧ್ಯಾಕಾಲದಲ್ಲಿ ನದಿಯ ದಂಡೆಯ ಮೇಲೆ ಹೋಗಿ ಮಾಂಸ ತಿನ್ನುವದನ್ನು ನಿಶ್ಚಯಿಸಿದರು. ಯಾಕೆಂದರೆ, ಮನೆಯ ಮಂಡಳಿಯು ತುಡುಗಿನಿಂದ ಈ ಕಾರ್ಯವನ್ನು ಮಾಡಬೇಕಾಗಿತ್ತು. ಕೆಲಸವನ್ನು ತುಡುಗಿನಿಂದ ಮಾಡಬೇಕಾತ್ತಿದ್ದದರಿಂದ ಮೋಹನದಾಸನು ಹಲವು ವೇಳೆ ಸುಳ್ಳು ಮಾತಾಡಬೇಕಾಗುತ್ತಿತ್ತು. ಇದರಿಂದ ಅವನಿಗೆ ಬಹಳ ದುಃಖವೆನಿಸುತ್ತಿತ್ತು. ಯಾಕೆಂದರೆ, ಅವ ಅವನು ಸಣ್ಣಹುಡುಗನಿದ್ದಾಗಿನಿಂದಲೇ ಖರೇ ಮಾತಾಡುವ ಒತ್ತಾಯದ ಶಿಕ್ಷಣವು ಕೊಡಲ್ಪಟ್ಟಿತ್ತು. ಒಂದು ದಿವಸ ಸಂಧ್ಯಾಕಾಲದಲ್ಲಿ ಈ ಮಾಂಸಾಹಾರದ ಮಂಡಳಿಯು ನದಿಯ ದಂಡೆಯ ಮೇಲೆ ಹೋಗಿ ಮಾಂಸ ತಿನ್ನುವ ಕಾರ್ಯವನ್ನು ತೀರಿಸಿದರು. ಮೊದಲು ಮೊದಲು ಮೋಹನದಾಸನಿಗೆ ತಿನ್ನಲಿಕ್ಕೆ ನೆಟ್ಟಗೆ ಹತ್ತಲಿಲ್ಲ. ಆದರೆ ಕೆಲವು ದಿವಸಗಳಾದ ಬಳಿಕ ಅದನ್ನು ತಿನ್ನುವದರಲ್ಲಿಯೇ ಅತಿಶಯ ಆನಂದವೆನಿಸಹತ್ತಿತು. ಮೋಹನದಾಸನು ಮನೆಯಲ್ಲಿ ಊಟದ ಸಮಯದಲ್ಲಿ ತನಗೆ ಹಸಿವೆ ಇಲ್ಲೆಂದು ಹೇಳಬೇಕಾಗುತ್ತಿತ್ತು. ಈ ಸುಳ್ಳು ಹೇಳುವದರಿಂದ ಅವನಿಗೆ ಅವರ್ಣನೀಯವಾದ ದುಃಖ ಉಂಟಾಗುತ್ತಿತ್ತು. ಈ ದುಃಖವೇ ಮುಂದೆ ಅವನನ್ನು ಆ ಕಾರ್ಯದಿಂದ ಪರಾಙ್ಮುಖನನ್ನು ಮಾಡಿತು. ಅವನು ನದಿಯ ದಂಡಿಯ ಮೇಲಿನ ಆಟವನ್ನು ಬಿಟ್ಟುಬಿಟ್ಟನು. ಮತ್ತು ಆ ಮಿತ್ರರ ಸಹವಾಸವನ್ನು ಬಿಟ್ಟನು. ಈ ಪ್ರಸಂಗದ ಹೊರತು ತಾಯಿಯ ಮುಂದೆ ಸುಳ್ಳು ಎಂದೂ ಆಡಲಿಲ್ಲ.

ಮೋಹನದಾಸನ ಮೊದಲನೇ ಪರೀಕ್ಷೆಯು ಇಳಿದ ಮೇಲೆ ಅವನ ಕುಟುಂ

ಬದಲ್ಲಿಯ ಒಬ್ಬ ಮಿತ್ರನು ಅವನನ್ನು ಬ್ಯಾರಿಸ್ಟರ ಆಗುವದಕ್ಕಾಗಿ ವಿಲಾಯತಿಗೆ ಹೋಗಲಿಕ್ಕೆ ಅವನನ್ನು ಪ್ರೇರಿಸಿದನು. ಮೊದಲು ಈ ವಿಚಾರಕ್ಕೆ ತಾಯಿಯ ಅನುಮತಿಯು ಸಿಗುವದು ಬಹಳ ಕಷ್ಟವಾಯಿತು. ಯಾಕಂದರೆ ಅವನ ತಾಯಿಯು ಮೊದಲು ವಿಲಾಯತಿಗೆ ಹೋಗಿ ಎಷ್ಟೋ ಹುಡುಗರು ಕೆಡುತ್ತಾರೆಂದು ಕೇಳಿದ್ದಳು. ಅದ್ದರಿಂದ ಆಕೆಯು ಒಪ್ಪಿಕೊಳ್ಳಲಿಲ್ಲ. ಜನರು ತಿಳಿಸಿ ಹೇಳಿದನಂತರ ಒಂದು ಕಟ್ಟಿನಿಂದ ಒಪ್ಪಿಕೊಂಡಳು. ಆ ಕಟ್ಟು ಯಾವದೆಂದರೆ ಆಕೆಯು ತನ್ನ ಮಗನ ಕಡೆಯಿಂದ ಮೂರು ಮಾತುಗಳನ್ನು ನಡಿಸುವ ಬಗ್ಗೆ ಒಬ್ಬ ಜೈನ ಸಾಧುವಿನ ಮಾರ್ಗವಾಗಿ ಆಣೆ ಮಾಡಿಸಿಕೊಂಡಳು. “ ಸರೆ ಕುಡಿಯದಿರುವದು, ಮಾಂಸ ತಿನ್ನದಿರುವದು. ಪರಸ್ತ್ರೀಯರನ್ನು ಮಾತೆಯ ಸಮಾನ ಮನ್ನಿಸುವದು ”. ಈ ಮೇರೆಗೆ ಶಪಥ ಮಾಡಿಸಿಕೊಂಡ ನಂತರ ಇಂಗ್ಲಂಡಕ್ಕೆ ಹೋಗಲು ಅಪ್ಪಣೆಯನ್ನು ಕೊಟ್ಟಳು. ಅವಳಿಗೆ ಅವನ ಬಂಧುಗಳು ದುಡ್ಡಿನ ಸಂಬಂಧ ಚಿಂತೆ ಮಾಡಲಾಗದೆಂದು ಗಟ್ಟಿಮುಟ್ಟಾಗಿ ಹೇಳಿದರು. ಈ ರೀತಿಯಿಂದ ಮೋಹನದಾಸನು ವಿಲಾಯತಿಯ ಪ್ರವಾಸವನ್ನು ಪ್ರಾರಂಭ ಮಾಡಿದನು.

ಲಂಡನಕ್ಕೆ ಮುಟ್ಟುವ ವರೆಗೆ ಉಲ್ಲೇಖಯೋಗ್ಯವಾದ ಯಾವ ಸಂಗತಿಯೂ ಘಟಿಸಲಿಲ್ಲ. ಮೋಹನದಾಸನೂ, ಅವನ ಸಂಗಡಿಗರಾದ ಇಬ್ಬರು ಹಿಂದೀ ವಿದ್ಯಾರ್ಥಿಗಳೂ, ಲಂಡನದಲ್ಲಿ ಒಂದು 'ಡಾಕ್ಸ' ಮಧ್ಯದಲ್ಲಿ ಇಳಿದುಕೊಂಡರು. ಈ ದಿವಸವನ್ನು ಮೋಹನದಾಸರು ಇನ್ನೂ ಮರೆತಿಲ್ಲ. ಯಾಕಂದರೆ ಒಂದು ಭವ್ಯವಾದ ನಗರದಲ್ಲಿ ತನ್ನ ಮಿತ್ರರನ್ನು ಹ್ಯಾಗೆ ಸಂಪಾದಿಸಬೇಕೆಂಬದು ಅವನಿಗೆ ತಿಳಿಯಲಿಲ್ಲ. ಒಂದು ಭೋಜನ ಗೃಹದಲ್ಲಿ ಅವನು ಇಳಿದುಕೊಳ್ಳುವ ನಿಶ್ಚಯ ಮಾಡಿದನು. ದಾರಿ ಹಿಡಿದು ಹೋಗುವಾಗ ಅವನ ಪೋಷಾಕು ಕೆಲಮಟ್ಟಿಗೆ ಇಂಗ್ಲಿಷತರಹವಿಂದ ಮಾಡಲ್ಪಟ್ಟಿದ್ದರೂ ಹಿಂದುಸ್ತಾನದಲ್ಲಿ ಉಂಟಾಗಿದ್ದರಿಂದ ವಿಚಿತ್ರವಾಗಿ ಕಂಡು ಬರಲು. ಅವನ ಕಡೆಗೆ ಜನರು ಟಕಮಕ ನೋಡಹತ್ತಿದರು. ಭೋಜನಗೃಹಕ್ಕೆ ಹೋದ ಮೇಲಂತೂ ಅವನ ಮನಸ್ಸು ಸಮಾಧಾನ ಹೊಂದಲಿಲ್ಲ. ಕೆಲವು ಕಾಲದ ಮೇಲೆ ಒಬ್ಬ ಮಿತ್ರನ ಭೆಟ್ಟಿಯಾದ್ದರಿಂದ ಅವನ ಔದಾಸೀನ್ಯವು ಇಲ್ಲದಂತಾಯಿತು. ಈ ಮಿತ್ರನು ಪ್ರೌಢನಿದ್ದು ಲಂಡನದಲ್ಲಿ ಕೆಲವು ದಿವಸ ಇದ್ದವನಿದ್ದನು. ಅವನಿಗೆ ಮೋಹನದಾಸನನ್ನು ಒಬ್ಬ ಇಂಗ್ಲಿಶಮನ್ನನನ್ನಾಗಿ ಮಾಡಲು ಹತ್ತಿದನು. ಅವನಿಗೆ ಇಂಗ್ಲಂಡದಲ್ಲಿ ಹ್ಯಾಗೆ ನಡೆಯಬೇಕೆಂಬದರ ಬಗ್ಗೆ ಹೇಳಿಕೊಟ್ಟನು. ಅವನು ತನ್ನ ಕಲ್ಪನೆಯಂತೆ ಮೋಹನದಾಸನಿಗೆ ಸಭ್ಯತೆಯ ದೀಕ್ಷೆಯನ್ನು ಕೊಡಲಿಕ್ಕೆ ಆರಂಭಮಾಡಿದನು. ಆದರೆ ತಾಯಿಯ ಮುಂದೆ ಮಾಡಿದ ಶಪಥದ ಸ್ಮರಣದಿಂದ ಮೋಹನ

ದಾಸನ ವರ್ತನವು ಹಿಂದುಸ್ಥಾನಕ್ಕೆ ತಿರುಗಿ ಬರುವ ವರೆಗೂ ಶುದ್ಧವಾಗಿಯೇ ಉಳಿಯಿತು. ಆದರೂ ಮೋಹನದಾಸನು ಮೊದಲು ಮೊದಲು ತನ್ನ ಮಿತ್ರನ ಚಾಳಿಗೆಯಲ್ಲಿ ಕೆಲಮಟ್ಟಿಗೆ ಬಿದ್ದು ತನ್ನ ದುಡ್ಡನ್ನೂ ವೇಳೆಯನ್ನೂ ವ್ಯರ್ಥವಾಗಿ ಕಳೆದುಕೊಂಡನು. ಅವನ ಈ ವರ್ತನವು ಕಟ್ಟಾಗಲಿಕ್ಕೆ ಮುಂದೆ ಒಂದು ಕಾರಣವುಂಟಾಯಿತು. ಏನಂದರೆ ಒಂದು ಮೇಜವಾನಿಯ ಸಲುವಾಗಿ ಮೋಹನದಾಸನಿಗೆ ಒಂದು ದಿವಸ ನಿಮಂತ್ರಣ ಬಂದಿತ್ತು. ಅಲ್ಲಿ ಎಲ್ಲ ಮಂಡಳಿ ಊಟಕ್ಕೆ ಕೂತಾಗ ಸೂಪವನ್ನು (ರಸ) ಬಡಿಸಲು ತಂದರು. ಆಗ ಮೋಹನದಾಸನು ಬಡಿಸುವವನಿಗೆ ಅದರಲ್ಲಿ ಮಾಂಸವಿರುವದೋ ಎಂದು ಕೇಳಿದನು. ಹೀಗೆ ಕೇಳುವಾಗ ಒಬ್ಬ ಮಿತ್ರನು ಅವನನ್ನು ನೋಡಿದನು. ಏನನ್ನು ಕೇಳುತ್ತಾನೆಂದು ಬಡಿಸುವವನಿಗೆ ಪ್ರಶ್ನಮಾಡಿದನು. ನಿಜವಾದ ಸಂಗತಿ ತಿಳಿದ ಬಳಿಕ ಎಲ್ಲರೂ ಹುಡುಗಾಟಿಕೆಮಾಡಿ ನಕ್ಕರು. ಮೋಹನದಾಸನ ನಡಾವಳಿಯು ಶಿಷ್ಟಾಚಾರದ ವಿರುದ್ಧವಾಗಿದೆ ಎಂದು ಅವರು ನಿಶ್ಚಯಿಸಿದರು. ಹೀಗಾದ ಬಳಿಕ ಮೋಹನದಾಸನು ಊಟಬಿಟ್ಟು ಹೊರಟು ಹೋದನು ಅಂದಿನಿಂದ ಈ ಗೆಳೆಯರ ಸಹವಾಸವನ್ನು ಬಿಟ್ಟುಕೊಟ್ಟನು. ಒಂದು ಸಣ್ಣ ಕೋಣೆಯನ್ನು ಬಾಡಿಗೆಯಿಂದ ಹಿಡಿದು ಕೈಯಿಂದ ಅಡಿಗೆ ಮಾಡಿಕೊಳ್ಳಹತ್ತಿದನು. ಅವನು ತಿಂಗಳ ಖರ್ಚನ್ನು ಆಗ ನಾಲ್ಕು ಪೌಂಡಿನ ವರೆಗೆ ತಂದು ಇಟ್ಟನು. ಈ ಪ್ರಕಾರ 'ಫೇಕ್ಸನ್ನ್ ಏಟಿಕೇಟ'ದ ರಜೆ ತಕ್ಕೊಂಡನಂತರ ಮೋಹನದಾಸನಿಗೆ ಬಹಳ ವೇಳೆಯು ಸಿಗಹತ್ತಿತು. ಆ ವೇಳೆಯಲ್ಲಿ ಅವನು ಶಿಕ್ಷಣವನ್ನೇ ಹೆಚ್ಚಾಗಿ ಸಂಪಾದಿಸಿದನು. ಹೀಗೆ ದಿವಸಗಳು ಹೋಗುತ್ತಿರಲು ಧರ್ಮವಿಚಾರದಲ್ಲಿ ಉಂಟಾದ ಎಚ್ಚರವು ತಿರುಗಿ ಹೆಚ್ಚಾಗಿ ಒಲಿಯಹತ್ತಿತು. ಮನೆಯಲ್ಲಿದ್ದಾಗ ಸ್ವತಂತ್ರವಿಚಾರಗಳನ್ನು ಪ್ರಕಟಿಸಲಿಕ್ಕೆ ಅಡಚಣಿ ಇದ್ದು ಈಗ ಅದು ಇಲ್ಲದಂತಾಯಿತು. ಆದರೆ ಅವನಿಗೆ ಈಗ ತೋರಹತ್ತಿದ್ದೇನಂದರೆ-ನಾನು ಒಂದೂ ಧರ್ಮದ ಅಭ್ಯಾಸವನ್ನು ಸರಿಯಾಗಿ ಮಾಡಿರುವದಿಲ್ಲ. ಅಂದ ಬಳಿಕ ಇವರಲ್ಲಿ ಏನೂ ಅರ್ಥವಿಲ್ಲೆಂದು ಹೇಳಲು ನನಗೆ ಅಧಿಕಾರವು ಬರುವದಿಲ್ಲ.

ಈ ವಿಚಾರವು ನಡೆದಿರುವಾಗ ಮೋಹನದಾಸನಿಗೆ ಡಾಕ್ಟರ 'G. A.' ಇವರ ಪರಿಚಯುವಾಯಿತು. ಧಾರ್ಮಿಕ ಸಂಗತಿಗಳಲ್ಲಿ ಇವರ ಗೂಡ ಹಾಗೂ ಇತರ ಜನರ ಗೂಡ ವಾದವಿವಾದ ಮಾಡುತ್ತಿರಲು, ಧಾರ್ಮಿಕ ವಿಷಯದಲ್ಲಿ ತಮಗಿದ್ದ ಅಪೂರ್ಣ ಜ್ಞಾನದಿಂದ ಮೋಹನದಾಸರಿಗೆ ಬಹಳ ಖೇದವೆನಿಸಹತ್ತಿತು. ಇತರ ಜನರಿಗೆ ಮೋಹನದಾಸರು ತಮ್ಮ ಧರ್ಮದಲ್ಲಿ ಪೂರ್ಣ ಪಂಡಿತರಿರುತ್ತಾರೆಂದು ತೋರುತ್ತಿತ್ತು. ಕೆಲಕೆಲವುಸಾರೆ ಮೋಹನದಾಸರಿಗೆ ಡಾಕ್ಟರರು ಕ್ರಿಶ್ಚಿಯನರು ಯಾಕಾ

ಪೃಥ್ವೀರಾಜ.

ಅಜನು ತಂದುದಂತ. (ಉದಂತ= ಸುದ್ದಿ)

(ಚಂಪಕೋತ್ಪಲ ವೃತ್ತಗಳು.)

ಒದಗಿರಲಾಗ ಭಾದ್ರಪದಶುದ್ಧದ ದ್ವಾದಸಿಯೆಮ್ಮ ದೇಶದೊಳ್ ।
ಉದಯಿಪ ಕಾಲವಾಗಿಹುದಗಸ್ತ್ಯನು ದಕ್ಷಿಣದಿಗ್ವಿಭಾಗದೊಳ್ ॥
ಘನಚಯವೆಲ್ಲವೂ ಜಲದಜನ್ಮವನೆತ್ತಿರಲಾಗಿ ಭೂಮಿಯೊಳ್ ।
ಮನಕತಿಹರ್ಷವಾಗುವದು ನೋಡಲು ನಿರ್ಮಲವಾದವ್ಯೋಮದೊಳ್ ॥೧॥

ಜನರಿಗೆತಾಪವನ್ನು ಕೊಡುತಿರ್ದನು ಸೂರ್ಯನು ತನ್ನತೇಜದಿಂ ।
ಹೊಸದಲಿ ಬಂದ ರಾಜಪರಿಚಾರಕನಂತೆ ನೃಶಂಸನಂತಿರೆ ॥
ಹೊಳೆಕೆರೆಹೊಂಡಗಳ್ ತಿಳಿದುಕೊಳ್ಳುತಲಿರ್ದವು ಮೆಲ್ಲಮೆಲ್ಲನೆ ।
ಸುಜನನ ಸ್ನೇಹದಲ್ಲಿರುವ ನೀಚಮನುಷ್ಯನ ಚಿತ್ತದಂತಿರೆ ॥ ೨ ॥

ಡುರಕಯಹಾಕಿಹೋರಿಗಳು ಮುಂದಿಗೆಹರುಷವನುಂಟು ಮಾಳ್ಪವು ।
ಜನರಿಗೆ ತ್ರಾಸಮಾಡುವವು ಪಾದದೆಶಿಷ್ಪಿಯ ಕೆತ್ತುವೆಮ್ಮೆಗಳ್ ॥
ಮುದವನುತೋರುತಿರ್ದವು ಶುನಂಗಳು ತಮ್ಮಯ ಪ್ರೇಮದಾಟದಿಂ ।
ಹುಡುಗರನಂಜಿಸುತ್ತಿಹವು ಗೋವುಗಳಾದರು ತಮ್ಮಕೋಡಿನಿಂ ॥ ೩ ॥

ಬಿಡುವುದು ತನ್ನಪಕ್ಷವನು ಮುಂದಿಗೆ ಮುಗ್ಧ ಮಯೂರವೃಂದವು ।
ಕೊಡುವುದು ತನ್ನಶೃಂಗವನು ಗೋವು,ವರಾಹ,ಕುರಂಗ ಸಂಘವು ॥
ಹರಿದುಬಿಸಾಡಿ ಬಿಟ್ಟುವದು ಕಂಚುಕವನ್ನು ಭುಜಂಗವರ್ಗವು ।
ಅತಿಶಯಕ್ರೂರನಂತಿರೆ ವಿಶೇಷಕೃತಘ್ನನ ಹಾಗೆಭೂಮಿಗೆ ॥ ೪ ॥

ಛಳಿಜ್ವರಬಾಧೆಯಲ್ಲಿ ಬಹು ಕಷ್ಟವನುಂಡ ಮನುಷ್ಯರೆಲ್ಲರೂ ।
ಭಿಸಿಬಿಸಿನೀರುಬಿಟ್ಟು ಹೊಸವಾರಿಗೆ ವಾಂಛೆಯ ಮಾಡುತಿರ್ದರು ॥
ಕೆಸರುತಳಕ್ಕೆಕೂತಿರುವ ಹೊಂಡ ನದೀ ಪಯವನ್ನು ನೋಡಲು ।
ಜಲರುಚಿ ಬಲ್ಲಮಾನವರು ಬಿಟ್ಟರು ವಾಪಿಯ ತಿಕ್ತತೋಯಮಂ ॥ ೫ ॥

ಹುಣಸಿಯು, ಸೌಂತಿ, ನೆಲ್ಲಿ, ಹಸಿಮೆಣಸಿನಕಾಯನು, ಬೋರೆಹಣ್ಣನು ।
ಬೆಳುವಲ, ಬೆಂಡಿ, ಲಿಂಬಿಯು, ಪಲಾಂಡು, ಮುಲಂಗಿಯ ಬಾಗವಾಸರು॥

ಕಣಿಗಿಲು-ಚಂಡು-ಮಲ್ಲಿ-ಸಿರಿವಂತಿಗೆ-ಚಂಡಸುಗಂಧಿ ಹೂವನು ।
ತರುವರು ಮಾಲೆಕಾರರು ವಿಲಾಸಿಜನಕ್ಕೆ ಗೃಹಸ್ಥಮಂದಿಗೆ ॥ ೬ ॥

ನಗೆಮೊಗಮಾಡಿ, ಚಂಡಿಕೆಯದ್ದುಡಿಸಿ, ವಿಪ್ರರು ಕೇಳುತಿರ್ದರು ।
ನಡೆ! ನಡೆ! ನನ್ನಕೂಡ ನರಸಪ್ಪನ ಪಕ್ಷಕೆ ನಾಳಿನೂಟಕೆ ॥
ಕೊಡಿಸುವೆನರ್ಧರೂಪ್ಯಕದ ದಕ್ಷಿಣೆಯನ್ನುವಿವಾದವಿಲ್ಲದೆ ।
ಹೊಡಿ! ತಿಳಿವಷ್ಟುತುಪ್ಪವನು ಮುಂಡಿಗೆ ಹೋಳಿಗೆಯನ್ನು ಬುಂದೆಯುಂ॥೭॥

ಕೇಳುವರಯ್ಯ! ಬತ್ತಿರುವ ಸಸ್ಯದವಾರ್ತೆಯನೇ! ಕೃಷೀವಲರ್ ।
ಪೇಳುವರೆಲ್ಲ ಬ್ರಾಹ್ಮಣರ ಪತ್ನಿಯರಾಗಲು ಭಕ್ಷ್ಯಗೋಷ್ಠಿಯಂ ॥
ನೋಡುವರಯ್ಯ! ತಾವುಹಸಿಹುಲ್ಲಿನ ಭೂಮಿಗಳನ್ನು ಗೋಪರು ।
ಶೋಧಿಸುತಿರ್ದರೆಲ್ಲರು ಗೃಹಸ್ಥರು ವೈದಿಕರನ್ನು ಶ್ರಾದ್ಧಕೆ ॥ ೮ ॥

ಬೆಳಸಿಯತಿಂದು ಚೀರುವರು ಹಕ್ಕಿಯಕಾಯ್ವ ಮನುಷ್ಯರೆಲ್ಲರೂ ।
ಜಿಗಿಜಿಗಿದಾಡಿ ಬೀಳುತಿಹವೈ! ತಿಳಿನೀರಿನಮೇಲೆ ಮೀನುಗಳ್ ॥
ನವಣಿಯಕುಟ್ಟಿ ಹುಂಕರಿಸುತಿರ್ದರು ಮುಂದಿಗೆ ಬೈಯ್ಯುತಿರ್ದರು ।
ಹರಿದಿಹ ಕಾಯಿಸಸ್ಯವನು ನೋಡಿನಿರುದ್ಯಮರಾದ ಸ್ತ್ರೀಯರು ॥ ೯ ॥

ಒಣಗಿದ ಮಾರ್ಗವನ್ನುಹಸಿಯಾರಿದ ಭೂಮಿಗಳನ್ನು ಕಾಣಲು ।
ಛಕಡಿಗಳನ್ನು ಹೊಡಲೆಡೆಹೂಡಲು ತತ್‌ಕ್ಷಣ ಸಿದ್ಧರಾದರು ॥
ಚರಗವಚಲ್ಲಿ, ಕ್ರೀಡೆಯನು ಮಾಡಲು, ಜಾತ್ರೆಗಳನ್ನು ನೋಡಲು ।
ಕೃಷಕರು ಗಾಡಿಕಾರರು ಘಟಿಂಗರು ಸಾಧುಗಳಾದರೂ ತದಾ ॥ ೧೦ ॥

* * * * *

ಜನರಜಮೀರದಲ್ಲಿರುವ ನಾಗಗಿರೀಶಿರದಲ್ಲಿ ಶೋಭಿಪ ।
ಅನಲಸಮೀಗಸಂಭವನ ಸದ್ಮದೆ ಸಮ್ಮುದದಿಂದೆ ಕೂಡಿಹರ್ ॥
ವಿಧ ವಿಧದಿಂ ಸರೋವರದ ಮೇಲೆ ಶಿಲೋಚ್ಚಯದಲ್ಲಿ ಮೂಡಿದ ।
ತುಲಸಿಯು ಪತ್ರಿಯಂತೃಣದ ಪುಷ್ಪದಸಂಗ್ರಹವನ್ನು ಮಾಡುವರ್ ॥೧೧॥

ತುಳುಕಲಿಯಾಗಿ ತೋರುವದು ಶೈಲವಗಸ್ತ್ಯನ ಭಕ್ತಮಂದಿಯಿಂ ।
ಕಲಕಲವಾಗಿ ಘೂಣಿಸುವದಾಶ್ರಮವೆಲ್ಲವು ಸ್ತೋತ್ರಪಾಠದಿಂ ॥
ಘಮಘಮವಾಗಿ ಹೋಗಿಹುದು ಪೂಜೆಗೆತಂದ ಪ್ರಸೂನರಾಶಿಯಿಂ ।
ಬಹುಶುಭವಾಗಿ ಶೋಭಿಪುದು ಚಲ್ಲಿದ ಕುಂಕುಮ ಗಂಧ ಮಾಲ್ಯದಿಂ ॥೧೨॥

ತುಸುಭಯವಿಲ್ಲದಾಗಿದೆ ಗಿರೀಂದ್ರವು ಬಂದ ಮನುಷ್ಯವೃಂದದಿಂ ।
ವಿಪುಲ ಮನೋಜ್ಞವಾಗಿದೆ ವಿನೂತನಪಲ್ಲವ ವೃಕ್ಷರಾಜಿಯಿಂ ॥
ಸರಸ ಪ್ರಶಸ್ತ ಕಾಂತಿಯುತವಾಗಿದೆ ಸೂರ್ಯನ ಸ್ವಚ್ಛತೇಜದಿಂ ।
ಮೃದುಮಯವಾಗಿ ಹೋಗಿದೆ ನವೀನತೃಣಾಂಕುರದಿಂ ತುಷಾರದಿಂ ॥೧೩॥

ಕುಲಕುಲಯೆಂದು ಹಾಸ್ಯವನುಗೆಯ್ಯುವ ಹಾಗೆಯದೊಂದು ಹಳ್ಳವು ।
ಗಿರಿಶಿರದಿಂದ ಬರ್ಪುದು ವಿನಿರ್ಮಲ ಮಾಡಲಗಸ್ತ್ಯದೇಶಮಂ ।
ವಿಧ ವಿಧ ವರ್ಣದಿಂದೆ ಬಹುಚಿತ್ರಿತಮಾದ ಪತಂಗವೃಂದಗಳ್ ।
ಗಿಡಗಿಡದಿಂದೆ ಹಾರುತಿಹವೈ! ಮಕರಂದದ ಪಾನ ಮಾಡಲು ॥ ೧೪ ॥

ಜುಲಿಯುವವಲ್ಲಿ ಕೀಟ್ಬಸರಿನೇರಿಲದತ್ತಿಯ ಮಾಮರಂಗಳ ।
ಫಲಗಳನುಂ ಚಿಗುರ್ಗಳನು ಭಕ್ಷಿಸಿ ಸಂಚರಿಸುತ್ತರಣ್ಯದ ॥
ಹೊಳೆಕೆರೆಯಲ್ಲಿ ನೀರ್ಕುಡಿದು ಕೂತುಪ್ರಮೋದದಿ ವೃಕ್ಷಶಾಖೆಯೊಳ್ ।
ಗಿಳಿಗಳು ಕೋಕಿಲಂಗಳು ಮಯೂರಗಳುಂ ಗೊರವಂಕಗುಬ್ಬಿಗಳ್ ॥೧೫॥

ಜನರಕಲಾಟ, ಮಂತ್ರಗಳ ಘೋಷ, ವಧೂಜನಗಾನಗೀನಕೆ ।
ಕಹಳೆಬಜಂತ್ರಿ-ತಾಳಗಳ ಹ್ರಾದಕೆ ವೀಣೆಯ ದಿವ್ಯನಾದಕೆ ॥
ನಲಿವರ ಪಾದಸಪ್ಪಳಕೆ, ಹಾಡುವಮಂದಿಯ ಕೈಯ್ಯಪೆಟ್ಟಿಗೆ ।
ಹುಡುಗರು ಮಾಳ್ಪಗದ್ದಲಕೆ, ಪ್ರೌಢರ ಡಿಮ್ಮನಗಾರಿವಾದ್ಯಕೆ ॥ ೧೬ ॥

ದ್ವಿಜರ ಕಠೋರವಾಣಿಗೆ ವಿವಾದಕೆ, ಸೂರ್ಯನ ಕ್ರೂರರಶ್ಮಿಗೆ ।
ಬೆದರಿದವಾಗ ತಾವು ಹೊರಬೀಳದೆ ನಿದ್ರೆಯ ನಪ್ಪಿಕೊಂಡವು ॥
ನರಿಗಳರಣ್ಯ ಬೆಕ್ಕುಗಳು ಗೋವುಗಳುಂ ವೃಕ-ಕೃಷ್ಣನಾರಗಳ್ ।
ಹುಲಿಗಳು ಚಿರ್ಚ-ಸಿಂಹಗಳು ಭಲ್ಲಗಳುಂ ಕಿಟಿ-ಕಾಡಕೋಣ್ಗಳುಂ ॥೧೭॥

ಸುಳಿವುದು ಹಳ್ಳದಿಂ ಬಹುಲ ಶೀತವನಾಂತಿರುವಂಥ ವಾತವು ;
ಬರುವುದು ಪುಷ್ಪದಿಂ ವಿಪುಲ ವಾಸವನಾಂತಿರುವಂಥ ವಾಯುವು ॥
ಚರಿಸುವುದಲ್ಲಿ ವೃಕ್ಷಗಳ ಸಂದಣಿಯಿಂ ಮಿಗೆ ಮಂದಮಾರುತಂ ।
ಕಳೆವುದು ಹೀಗೆ ಮೂರುಗುಣಯುಕ್ತ ಸಮೀರವು ಸರ್ವತಾಪಮಂ॥ ೧೮ ॥

ತೈಲವಿಲಿಪ್ತರಾಗಿ ಗಿರಿಹಳ್ಳದೆ ಮಜ್ಜನ ಮಾಡಿಯಾತ್ರಿಕರ್ ।
ಶಂಖದೆ ವಾರಿಯಂ, ಕರದೊಳಕ್ಷತ-ಚಂದನ ಶ್ವೇತ ಪುಷ್ಪಮಂ ॥
ಕೊಂಡುಕೃತಾಂತದಿಕ್ಕಿನಲಿ ತಂಡವ ಮಾಡಿಯಗಸ್ತ್ಯದೇವಗೆ ।
ಅಂಜಲಿಬದ್ಧರಾಗಿ ವರಮಂತ್ರದೆ ಪ್ರಾರ್ಥಿಸುತಿರ್ದರೈ! ತದಾ ॥ ೧೯ ॥

* * * *

ಪಾಲಿಸು! ಕುಂಭಸಂಭವನೆ! ರಾಮನಿಗಸ್ತ್ರವನಿತ್ತ ವೀರನೇ ।
ಪಾಲಿಸು! ಆತಪಾತಪಿವಿನಾಶಕನೇ! ತಮಿಳೋಕ್ತಿಕಾಂತನೇ! ॥
ಪಾಲಿಸು! ವಿದ್ಯೆಬುದ್ಧಿಯು ವಿದರ್ಭಕುಮಾರಿಯು ಪ್ರೀತಿ ಪಾತ್ರನೇ! ।
ಪಾಲಿಸು! ನಮ್ಮಮೇಲೆ ದಯವನ್ನು ಕೃಪಾಕರ ತಾಪಸೇಂದ್ರನೇ! ॥೨೦॥

ಶರಣು! ಅಗಸ್ತ್ಯದೇವನಿಗೆ! ಅಗ್ನಿಸಮೀರರ ಸೂನು ಶ್ರೇಷ್ಠಗೆ ।
ಶರಣು! ವಲಕ್ಷವರ್ಣನಿಗೆ ಮಿತ್ರವರುಣರ ಪುತ್ರವರ್ಯಗೆ ॥
ನಹುಷನ ದರ್ಪಮಂ ಕಡಿದ, ವಿಂಧ್ಯದ ಗರ್ವವನಪ್ಪು ನುಂಗಿದ ।
ಜಲಧಿಯ ಪಾನಮಾಡಿದ ಯತೀಂದ್ರಗೆ ನಮ್ಮನಮೋನಮಸ್ಸುಗಳ್॥೨೧॥

ನೃಪನ ಕುಮಾರಿಯಾದ, ವನದಲ್ಲಿಯ ತಾಪಗಳನ್ನು ತಾಳಿದ ।
ಅತಿಪತಿಭಕ್ತಳಾದ. ಮುನಿಪತ್ನಿಗೆ ನಮ್ಮ ನಮೋನಮಸ್ಸುಗಳ್ ॥
ಬಹುಗುಣವಂತಿಯೇ! ಸಕಲಭಾಗ್ಯನಿಧಾನೆ! ಮಹಾನುಭಾವಳೇ! ॥
ಅರಸುವಿದರ್ಭನಂದಿನಿ! ತಪಸ್ವಿನಿ! ಲೋಪೆಯೆ ಮುದ್ರಯೇ! ಪೊರೆ ॥೨೨॥

* * * *

(ಮೂರರಿಂ ವಿಶೇಷಕವು)

ನೃಪಸುತೆಗೆಂದು ಸೇರುವದೊ! ಕಾನನವಾಸವು ತಾನು ನೆಟ್ಟಗೆ ।
ಗುಡಿಸಲು ಚಂದಕಾಣುವದೆ! ಸೌಧಗಳಿಂದಲು ರಾಜಪುತ್ರಿಗೆ ॥
ಶಬರರೊಳಿಂತು ಕಾಲವನು ನೂಕುವಳೇ ಮಹಿಷೀ ಕುಮಾರಿಯು ।
ಮುನಿಗಳೊಳೇನು! ಸೌಖ್ಯವನು ಕಂಡಳು ಭೂಮಿಪರನ್ನು ನೋಡಳು ॥

ಆರ್ಯರ ದೇಶಕೋಶವನುಪೇಕ್ಷಿಸಿ, ದಕ್ಷಿಣಕಿರ್ದನಾರ್ಯರೊಳ್ ।
ಸೇರಿದ ಸಾಧ್ವಿಯೇ ನಿನಗೆ ತುಲ್ಯರೆ! ತಾವುಳಿದಿರ್ದ ಸ್ತ್ರೀಯರು ॥
ತಾಪಗಳನ್ನು ತಾಳಿ ಮುನಿಮಾನವ ಕಾಯುವರೇನರಣ್ಯದೊಳ್ ॥
ಭೋಗಗಳನ್ನು ಧಿಃಕ್ಕರಿಸಿ, ಸಾಧನ ಮಾಡುವರೇನೆ! ಪುಣ್ಯಮಂ ॥

ಹೋಗುವರೇನೆ! ವಲ್ಲಭಗೆ ಮಾನಿನಿಯರ್ವಿಪಿನಾಂತರಾಳ ದೊಳ್ ।
ಮಾಡುವರೇನೆ! ಪ್ರೇಮವನು ದೀನ ವನೇಚರನಲ್ಲಿ ಕಾಂತೆಯರ್ ॥
ಪೇಳುವರಿಂತು ತಾಪಸನ ಪತ್ನಿಯ ವಾರ್ತೆಯನಲ್ಲಿ ನಾರಿಯರ್ ।
ಭಾಮಿನಿಯುಂಗನಾ ಜನಕೆ, ಕಾಮಿನಿಯರ್ಗೆ, ಕುಮಾರಿ ವೃಂದಕೆ ॥೨೩॥

ಸಾಭಾರ ಸ್ವೀಕಾರ.

(*Acknowledgements.*)

(೧) **ಮನಸ್ಸಿಗುಪದೇಶ** (ಪದ್ಯಪುಸ್ತಕ) —ಲೇಖಕರು- ಎಚ್. **ಚಿದಂಬರಯ್ಯ,** ಬೆಂಗಳೂರು— ಪ್ರಕಾಶಕರುಃ **ಯಶವಂತರಾವ್** ಜಠಾರ B. A. L. L B. ಸಂಪಾದಕ, ಪ್ರಭಾತ, ಧಾರವಾಡ (ಪದ್ಯಗಳುಃ ೨೦೫; ಬೆಲೆ ೪ ಆಣೆ·)

(೨) **ಸಮಾಜ ಸೇವಾಸಂಘ,** ನಲವಡಿ(ಧಾ):—೧೯೧೮-೧೯ ರ ವಾರ್ಷಿಕ ರಿಪೋರ್ಟು.

ಇವುಗಳಲ್ಲದೆ, ಪರಿವರ್ತನ ಕ್ರಮದಿಂದ ಕೆಳಗೆ ಬರೆವ ಪತ್ರಿಕೆಗಳನ್ನು ಕಳಿಸುತ್ತಿರುವದಕ್ಕಾಗಿ ಆಯಾಯ ಸಂಪಾದಕರಿಗೆ ನಾವು ಕೃತಜ್ಞರಾಗಿರುವೆವು:—

ಶುಭೋದಯ,	ವಾರಪತ್ರಿಕೆ,	ಧಾರವಾಡ	೩-೦-೦
ಕರ್ನಾ. ವೃತ್ತ,	"	"	೨-೪-೦
ಕಂಠೀರವ,	"	ಮಂಗಳೂರು.	೨-೫-೦
ಸ್ವದೇಶಾಭಿಮಾನಿ,	"	"	೨-೫-೦
ವಾಗ್ಭೂಷಣ,	ಮಾಸಪತ್ರಿಕೆ,	ಧಾರವಾಡ,	೨-೪-೦
ಪ್ರಭಾತ,	"	"	೨-೦-೦
ವಿದ್ಯಾರ್ಥಿ,	"	"	೧-೮-೦
ವೀ. ಧ. ತರಂಗಿಣಿ,	"	"	೧-೬-೦
ಕನ್ನಡ ಶಿಕ್ಷಕ,	ತ್ರೈಮಾಸಿಕ,	"	೦-೧೨-೦
ಪ್ರಬೋಧ,	ಮಾಸಪತ್ರಿಕೆ.	ಬೆಳಗಾವ,	೨-೮-೦
ಜ್ಞಾನಾಂಜನ,	"	"	೨-೦-೦
ಕನ್ನಡ ಸಹಕಾರಿ,	"	ಮಂಗಳೂರು,	೧-೦-೦
ನಂದಿನಿ	"	ನಂಜನಗೂಡು	೨-೮-೦
ಮಧುರವಾಣಿ,	"	ಮೈಸೂರು.	೧-೮-೦
ವಿಜ್ಞಾನ	"	ಬೆಂಗಳೂರು	೩-೦-೦
ಕ ಸಾ. ಪತ್ರಿಕೆ.	ತ್ರೈಮಾಸಿಕ	"	೩-೦-೦
ಪ್ರಬುದ್ಧ ಕರ್ನಾಟಕ	"	"	೧-೦-೦

ಸಮಾಲೋಚನೆ.

(Reviews & Notes.)

(೧) ವಿದ್ಯಾರ್ಥಿಗಳ ಗ್ರಂಥಾಲಯ, ಮುದ್ದೇಬಿಹಾಳ:—

ತಾ। ೨೦-೬-೧೯೧೫ನೇ ದಿವಸ ವಿದ್ಯಾರ್ಥಿಗಳಿಂದಲೇ ಸ್ಥಾಪಿತವಾದ ಈ ಗ್ರಂಥಾಲಯದ ೪ನೇ ವಾರ್ಷಿಕ ಉತ್ಸವವು ತಾ॥ ೩-೬-೧೯ನೇ ದಿವಸ ಸಾಂಗವಾದದ್ದು ನೋಡಿ ನಮಗೆ ಆನಂದಾಭಿಮಾನಗಳೆನಿಸುವವು. ಈಗ ನಾಲ್ಕು ವರುಷಗಳಿಂದ ಈ ಸಂಸ್ಥೆಯ ಅಧ್ಯಕ್ಷರಾದ ಮಿ। ಕೊರಬು ಇವರ ನೇತೃತ್ವದ ಕೆಳಗೆ ಈ ಗ್ರಂಥಾಲಯವು ಊರ್ಜಿತಾವಸ್ಥೆಯನ್ನು ಹೊಂದುತ್ತ ನಡೆದಿರುವದು. ಸದ್ಯಕ್ಕೆ ಇಲ್ಲಿ ೨೪೮ ಪುಸ್ತಕಗಳಿರುವದೆಂದೆಲೂ, ವಿದ್ಯಾರ್ಥಿಗಳು ವರ್ಗಣಿಇಲ್ಲದೆ ಪುಸ್ತಕಗಳನ್ನು ಓದುವರೆಂತಲೂ, ಹೆ। ಮಾ। ರಾದ **ಶ್ರೀ. ಗುರುನಾಥ ಮಹಾದೇವ ಜೋಶಿಯವರೂ** ಉಳಿದ ಅಸಿ। ಮಾಸ್ತರರೂ ಊರೊಳಗಿನ ಸದ್ಗೃಹಸ್ಥರೂ ಈ ಸಂಸ್ಥೆಗೆ ಸಹಾಯ ಮಾಡುತ್ತಿರುವರೆಂತಲೂ ಸದ್ಯದ ಕಾರ್ಯದರ್ಶಿಗಳಾದ ಮಿ। ಕೃ. ರಾ. **ಕುಲಕರ್ಣಿ**ಯವರ ರಿಪೋರ್ಟಿನ ಮೇಲಿಂದ ತಿಳಿಯುತ್ತದೆ.

ನಮ್ಮ ಕರ್ನಾಟಕದಲ್ಲಿ ಮಾದರಿಯದಾದ ಈ ಸಂಸ್ಥೆಯು ಚಿರಕಾಲ ವೃದ್ಧಿಸುತ್ತಿರಲೆಂದೂ, ಉಳಿದೆಡೆಗಳಲ್ಲಿ ಶಿಕ್ಷಕರೂ ಶಿಕ್ಷಣಾಭಿಮಾನಿಗಳೂ ಇಂಥ ಕಾರ್ಯಗಳಿಗೆ ಉತ್ತೇಜನವನ್ನು ಕೊಡುತ್ತಿರಲೆಂದೂ ಹಾರೈಸುತ್ತಿರುವೆವು. ಶಾಲಾಖಾತೆಯ ಅಧಿಕಾರಿಗಳೂ ಗ್ರಾಂಟಿನ ರೂಪದಿಂದಲೂ, ಸರಕಾರೀ ಪುಸ್ತಕಗಳ ರೂಪದಿಂದಲೂ ಇಂತಹ ಗ್ರಂಥಾಲಯಗಳಿಗೆ ಏಕೆ ಸಹಾಯವನ್ನು ಮಾಡಬಾರದು ?

ಈ ಗ್ರಂಥಾಲಯಕ್ಕೆ ಈಗ ೪ ವರುಷಗಳಿಂದಲೂ ಅಧ್ಯಕ್ಷರಾಗಿದ್ದ ಮಿ। **ಕೊರ**ಬು ಇವರು ವರ್ಗಾಗಿ ಹೋಗುವದರಿಂದ, ಈ ಸಂಸ್ಥೆಯ ವತಿಯಿಂದ ಅವರಿಗೆ ತಾ॥ ೮-೭-೧೯ನೇ ದಿವಸ, ಅಲ್ಲಿಯ ಸ। ಜಜ್ಜರಾದ ರಾ। ಸಾ। **ಫಡಕೆ**ಯವರ ಅಧ್ಯಕ್ಷತೆಯಲ್ಲಿ, ತಾಂಬೂಲಸಮಾರಂಭವು ಬಹು ವಿಜೃಂಭಣೆಯಿಂದ ನಡೆಯಿತೆಂತಲೂ, ಜವಾಬನಿಶಿ ಕಾರಕೂನರಾದ ಮಿ। **ರಾಮಾಚಾರ್ಯರು** ೫ರು. ದೇಣಿಗೆಯನ್ನು ಕೊಟ್ಟರೆಂತಲೂ ಕಾರ್ಯದರ್ಶಿಗಳು ತಿಳಿಸುತ್ತಾರೆ. ಅನುಕರಣೀಯವು !

(೨) ವಿಜ್ಞಾನ (ಸಚಿತ್ರ ಮಾಸಪತ್ರಿಕೆ), ಬೆಂಗಳೂರು.

ಸುಮಾರು ಒಂದು ಕೋಟಿ ಜನರುಳ್ಳ ನಮ್ಮ ಕನ್ನಡನಾಡಿನಲ್ಲಿ ವಿಜ್ಞಾನ

ಷಯಕವಾದ ಮಾಸಪತ್ರಿಕೆಯೆಂದರೆ ಇದೊಂದೇ. ಈ ಪತ್ರಿಕೆಯ ಲೇಖಕರು ಬಿ. ಏ. ಎಮ್. ಏ. ಮೊದಲಾದ ಪದವೀಧರರಾದ ವಿದ್ವಾಂಸರಿದ್ದು ಸುಲಭ ಭಾಷೆಯಲ್ಲಿ ವಿಷಯವು ಸುಗಮವಾಗುವಂತೆ ಲೇಖನಗಳನ್ನು ಬರೆಯುತ್ತಿರುವರು. ಇಂಥ ಉತ್ತಮ ಪತ್ರಿಕೆಗೆ ಪ್ರೋತ್ಸಾಹನವಿಲ್ಲವೆಂದರೆ ನಮಗೆ ಅತಿಶಯ ನಾಚಿಕೆಗೇಡು! ಗ್ರಾಹಕರ ಅಭಾವದ ಮೂಲಕ ಕೆಲಕಾಲ ವಿಶ್ರಾಂತಿ ತೆಗೆದುಕೊಳ್ಳಬೇಕಾಗಿರುವದೆಂದು ಪತ್ರಿಕೆಯ ಸಂಪಾದಕರು ಬರೆಯುವದನ್ನು ನೋಡಿ ಯಾವ ಕನ್ನಡಿಗನ ಹೃದಯವು ಕರಗದು! ಪತ್ರಿಕೆಯು ಸರ್ವಾಂಗಮನೋಹರವಾಗಿರುವದರಿಂದಲೂ, ಚಾಲಕರು ಇನ್ನೂ ಉತ್ತಮವಾದ ಸುಧಾರಣೆಗಳನ್ನು ಮಾಡಲಿಕ್ಕಿರುವದರಿಂದಲೂ ಓದಬಲ್ಲ ಪ್ರತಿಯೊಬ್ಬ ಕನ್ನಡಿಗನು ಅದನ್ನು ಪ್ರೋತ್ಸಾಹಿಸಬೇಕು. ಶಿಕ್ಷಕರಿಗೂ ಪ್ರೌಢ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯೋಗ!

ಭಾಷಾಭಿಮಾನಿಗಳೇ ಇನ್ನಾದರೂ ಎಚ್ಚರಾಗಿರಿ!!

(೩) ಕನ್ನಡಿಗರಿಗೆ ಗುರುತಿಲ್ಲದ ಅಪ್ಪಯ್ಯನು.

‘ ಇಂಡಿಯನ್ ರಿವ್ಯೂ ’ ಎಂಬ ಇಂಗ್ಲಿಷ ಮಾಸಪತ್ರಿಕೆಯ ಜುಲೈ ಸಂಚಿಕೆಯಲ್ಲಿ ಮ॥ **ಚಂದಾವರಕರ** ಎಂಬುವರು “**Appayya,** *a Kanarese poet.*” (ಕನ್ನಡ ಕವಿಯಾದ ಅಪ್ಪಯ್ಯನು) ಎಂಬದೊಂದು ಲೇಖವನ್ನು ಬರೆದು. ಕನ್ನಡಿಗರಿಗೆ ಚೂರು ಚಾರು ಆ ಕವಿಯ ಪರಿಚಯ ಮಾಡಿಕೊಟ್ಟಿರುವರು. ಇಂಥ ಕನ್ನಡ ಕವಿಗಳು ಇನ್ನು ಎಷ್ಟು ಜನ ಮೂಲೆಗುಂಪಾಗಿ ಬಿದ್ದಿರುವರೊ? ಅದರೂ. ಸಾಂಪ್ರತ ಕವಿಯ ಬಗ್ಗೆ ಉಪಲಬ್ಧವಿರುವ ಸಂಕ್ಷಿಪ್ತ ವೃತ್ತಾಂತವನ್ನು ಓದಿದರಂತೂ ಆ ಕವಿಯ ಪೂರ್ಣ ಜೀವನ ಚರಿತ್ರೆಯನ್ನೂ ಆತನ ಪದ್ಯಗಳನ್ನೂ ಕೇಳಬೇಕೆಂಬ ಕುತೂಹಲವುಂಟಾಗುತ್ತಿದೆ.

ಕನ್ನಡಿಗರೆನಿಸಿಕೊಳ್ಳುವವರು ಮೊದಲು ತಂತಮ್ಮ ಪ್ರಾಂತದೊಳಗೆ ಯಾವ ಯಾವ ಕವಿಗಳು ಯಾವ ಯಾವ ಕಾಲಕ್ಕೆ ಆಗಿ ಹೋದರೆಂಬುದನ್ನೂ ಆ ಕವಿಗಳ ಉಪಲಬ್ಧವಿರುವ ಪದ್ಯಗಳನ್ನೂ ಪ್ರಸಿದ್ಧ ಪಡಿಸಿ, ಜನರಲ್ಲಿ ಅಭಿಮಾನ ವುಂಟಾಗುವಂತೆ ಮಾಡಬೇಕು. ಕರ್ನಾಟಕ ಪ್ರಾಂತದಲ್ಲಿ ಕಾರವಾರವು ಪ್ರಯಾಣಕ್ಕೆ ಅನುಕೂಲವಿಲ್ಲದ್ದರಿಂದ ಈ ಹೊತ್ತು ನಮಗೆ ಅದು ಅತ್ಯಂತ ಅಪರಿಚಿತ ಸ್ಥಾನವಾಗಿ ಪರಿಣಮಿಸಿದೆ. ನಿಜವಾಗಿ ಅಲ್ಲಿಯ ವರ್ತಮಾನವೇ ತಿಳಿಯದಾಗಿದೆ! ಈ ಅಜ್ಞಾನವು ಪ್ರಚಲಿತವಿರುವ ಮಾಸಪತ್ರಿಕೆಗಳ ದ್ವಾರದಿಂದಲೇ ಹೋಗಲಾಡಿಸಬೇಕೇ ಹೊರತು ಬೇರೊಂದು ಮಾರ್ಗವಿಲ್ಲ. ಆದ್ದರಿಂದ, ಭಾಷಾಭಿಮಾನಿಗಳೇ, ಮೇಲ್ಕಾಣಿಸಿದ ಕವಿ

ಯ ಬಗ್ಗೆ ಪೂರ್ಣ ಸಂಗತಿಯನ್ನು ಪ್ರಸಿದ್ಧ ಪಡಿಸಿ, ನಮ್ಮ ಜಿಜ್ಞಾಸೆಯನ್ನು ತೃಪ್ತಿಗೊಳಿಸುವಿರೆಂದು ನಂಬಿದ್ದೇವೆ. **— ಕರ್ನಾಟ ಶಿಕ್ಷಕ.**

ಬಾಗಲಕೋಟ. **ಕರ್ನಾಟಕ ಶಿಕ್ಷಣ.** ಜಿ. ವಿಜಾಪೂರ.

(ಶುದ್ಧ ಹೊಸಗನ್ನಡ ಮಾಸಪತ್ರಿಕೆ.)

ಉದ್ದೇಶ:— ಕನ್ನಡಿಗರಲ್ಲಿ ಶಿಕ್ಷಣ ಜಾಗ್ರಯತಿನ್ನೂ, ಭಾಷೆಯ ಬಗ್ಗೆ ಆದರವನ್ನೂ ಹುಟ್ಟಿಸಿ, ಕರ್ನಾಟಕದ ಬೇರೆ ಬೇರೆ ಭಾಗಗಳ ಭಾಷಾಭೇದಗಳನ್ನು ಹೋಗಲಾಡಿಸಲಿಕ್ಕೆ ಯತ್ನಿಸುವದು; ಹೊಸ ಲೇಖಕರ ಲೇಖನ ಸಾಮರ್ಥ್ಯವನ್ನು ಬೆಳೆಯಿಸುವದು.

ವಿಷಯ:— ಶಿಕ್ಷಣ, ಭಾಷೆಯ ಏಕರೂಪತೆ, ಪರಸ್ಪರ ಸಹಕಾರಿತ್ವ, ಆರೋಗ್ಯ. ಜೀವನ ಚರಿತ್ರೆ, ವಿಜ್ಞಾನ ಶಾಸ್ತ್ರ, ಐತಿಹಾಸಿಕ ಕಾದಂಬರಿ, ಗ್ರಂಥವಿಮರ್ಶೆ, ಪ್ರಚಲಿತ ಕನ್ನಡ, ಮರಾಠಿ, ಇಂಗ್ಲಿಷ, ಬಂಗಾಲಿ ಪತ್ರಿಕೆಗಳ ಆಂಬೋಣ ಈ ವಿಷಯಗಳನ್ನು ಕುರಿತ ಗದ್ಯ—ಪದ್ಯಾತ್ಮಕ ಲೇಖನಗಳು ಸುಲಭ ಹಾಗು ಶುದ್ಧವಾದ ಭಾಷೆಯಲ್ಲಿ ಪ್ರಕಟಿಸಲ್ಪಡುವವು.

ಲೇಖಕರು:— ಬೇರೆ ಬೇರೆ ಭಾಗಗಳ ವಿದ್ವಾಂಸರು ತಮ್ಮ ಜ್ಞಾನದಾನವನ್ನು "ಶಿಕ್ಷಣ"ದ ಮುಖಾಂತರ ಕನ್ನಡಿಗರಿಗೆ ಮಾಡಿಕೊಡಲಿಕ್ಕೆ ಸಿದ್ಧರಿರುವರು! ಪ್ರಸಂಗದಲ್ಲಿ ಹಣಕೊಟ್ಟಾದರೂ ಸ್ಫೂರ್ತಿದಾಯಕವಾದ ಲೇಖನಗಳನ್ನು ಬರೆಯಿಸುವೆವು.

ವರ್ಗಣಿ:— ವರುಷಕ್ಕೆ ಮುಂಗಡ ಅಂಚೇವೆಚ್ಚ ಸಹಿತ (೨ ರು.) ಇದನ್ನು ಒಮ್ಮೆಲೇ ಕೊಡಲಿಕ್ಕಾಗದಿದ್ದವರು ೬ ತಿಂಗಳಿಗೊಂದು ರೂಪಾಯಿಯಂತೆ ಕೊಟ್ಟೂ ಚಂದಾದಾರರಾಗಬಹುದು. ವಿದ್ಯಾರ್ಥಿಗಳಿಗೂ, ಶಾಲಾ ವಾಚನಾಲಯಗಳಿಗೂ ರು. ೧-೮-೦. ೬ ತಿಂಗಳಿಗೆ ೧೨ಆ. ಮಾದರಿ ಸಂಚಿಕೆಗೆ ೩ಆ. ಟಿಕೀಟು!

ವಿಜ್ಞಾಪನೆ:— ಭಾಷಾ ಸುಧಾರಣೆಯೊಂದಿಗೆ ಶಿಕ್ಷಣ ಜಾಗ್ರತಿಯಾದರೆ, ಕರ್ನಾಟಕದ ಭಾಗ್ಯರವಿಯು ಉದಯವಾಯಿತೆಂದೇ ತಿಳಿಯಬೇಕು. ಇಂತಹ ಪ್ರಯತ್ನಗಳಿಗೆ ಕನ್ನಡಿಗರೆಲ್ಲರು ಅವಶ್ಯವಾಗಿ ಪ್ರೋತ್ಸಾಹಿಸಬೇಕಲ್ಲವೇ? ಬರುವ ವಿನಾಯಕ ಚತುರ್ಥಿಯ ಸುಮುಹೂರ್ತದ ಮೇಲೆ ಈ ಪತ್ರಿಕೆಯ ೧ನೇ ಸಂಚಿಕೆ ಸರ್ವಾಂಗ್ಮನೋಹರವಾಗಿ ಹೊರಬೀಳುವದು! ಅವಶ್ಯಕರು ತ್ವರೆ ಮಾಡಬೇಕು.

ಜೇ. ವಿ. ಬಳವಂತರಾವ್.

ಪ್ರಕಾಶಕ, ಬಾಗಲಕೋಟ.

ಶಿಕ್ಷಣದ ಮಹತ್ವ.

೧. ಶಿಕ್ಷಕನೆಂದರೆ ಯಾರು?

शिष्टा क्रिया कस्याचिदात्मसंस्था संक्रान्तिरन्यस्य विशेषयुक्ता ॥
यस्योभयं साधुसशिक्षकाणां धुरिप्रतिष्ठापयितव्य एव ॥१॥

ಕೆಲ ಶಿಕ್ಷಕರಲ್ಲಿ ಸ್ವತಃ ವಿಷಯವನ್ನು ತಿಳಿದುಕೊಳ್ಳುವ ಸಾಮರ್ಥ್ಯವು ಚನ್ನಾಗಿರುವದು. ಕೆಲವರಲ್ಲಿ ತಿಳಿದುಕೊಂಡ ವಿಷಯನ್ನು ಅತ್ಯಂತ ಸ್ಪಷ್ಟವಾಗಿ ತಿಳಿಸಿಕೊಡುವ ಸಾಮರ್ಥ್ಯವು ಬಲವತ್ತರವಾಗಿ ತೋರುವದು. ಇವೆರಡೂ ಗುಣಗಳುಳ್ಳವನೇ ಶಿಕ್ಷಕರಲ್ಲಿ ಶ್ರೇಷ್ಠನೆನಿಸುವನೆಂದು ಒಬ್ಬ ಕವಿವರನ ಉಕ್ತಿಯು. ಶಿಕ್ಷಕನೆಂದರೆ ಕಲಿಸುವವನು. ಶಾಲೆಯಲ್ಲಿಯ ವಿಷಗಳನ್ನಷ್ಟೇ ಅಲ್ಲದೆ ರೀತಿ, ಪದ್ಧತಿ, ಆಚಾರ, ನಡತೆಗಳನ್ನಾದರೂ ಕಲಿಸತಕ್ಕವನೆಂಬ ಭಾವವು ಸ್ಫುಟವಾಗಿ ತೋರುತ್ತಿರುವದರಿಂದ, ಈ ಎಲ್ಲ ವಿಷಯಗಳೂ ಆತನಿಗೆ ಅವಶ್ಯವಾಗಿ ಗೊತ್ತಿರಬೇಕಾಗುವದು. ಇಂಥ ಶಿಕ್ಷಕನಲ್ಲಿರತಕ್ಕ ಗುಣಗಳಾವವೆಂದು ಮುಂದೆ ವಿಚಾರಿಸುವಾ ಶಿಕ್ಷಕನಿಗೆ ಸರಿಯಾದ ಕೆಲವು ಪರ್ಯಾಯ ಶಬ್ದಗಳುಂಟು— ಉಪಾಧ್ಯಾಯ, ಅಧ್ಯಾಪಕ, ಆಚಾರ್ಯ, ಗುರು ಮುಂತಾದವುಗಳು. ಆಚಾರ್ಯ, ಗುರು ಪದಗಳ ಪ್ರಯೋಗದಿಂದ ಪೂರ್ವಕಾಲದ-ಮನುಮಹರ್ಷಿಯ ಕಾಲದ-ಆಚಾರ್ಯ, ಗುರುಗಳ ಸ್ಮರಣವಾಗುತ್ತದೆ. ಸ್ಮೃತಿಕಾರರು ಗುರು ಶಬ್ದವನ್ನು ತಂದೆಯೆಂಬ ಅರ್ಥದಲ್ಲಿ ಪ್ರಯೋಗಿಸಿದ್ದಾರೆ. ಭಗವಾನ್ ಯಾಜ್ಞ್ಯವಲ್ಕ್ಯರನ್ನುವದೇನಂದರೆ –

उपनीय गुरुः शिष्यं महाव्याहृतिपूर्वकम् ॥
वेदमध्यापयेदेनं शौचाचारांश्च शिक्षयेत् ॥ १५।२। याज्ञ०

ಗುರುಗಳು ಶಿಷ್ಯನ ಉಪನಯನವನ್ನು ಮಾಡಿ, ಅವನಿಗೆ ಮೊದಲು ಭೂಃ, ಭುವಃ ಮುಂತಾದ ವ್ಯಾಹೃತಿಗಳನ್ನು ಹೇಳಿ, ನಂದರ ವೇದಗಳನ್ನೂ, ಮುಂದೆ ಹೇಳಿದ ಶೌಚಾಚಾರಗಳನ್ನು ಕಲಿಸಬೇಕು. ಹಾಗು स गुरुर्यः क्रियाः कृत्वा वेदमस्मै प्रयच्छति ಗರ್ಭಾದಾನಾದಿ ಉಪನಯಾಂತ ಕ್ರಿಯೆಗಳನ್ನು ಮಾಡುವವನೇ **ಗುರು**, ಅರ್ಥಾತ್ **ತಂದೆಯು.** ಆತನು ಬ್ರಾಹ್ಮಣನಿದ್ದರೆ ಪುತ್ರನ ಉಪನಯದ ನಂತರ ಅವನಿಗೆ ವೇದಗಳನ್ನಾದರೂ ಕಲಿಸಬೇಕು.

ಮುಂದೆ ಉಪಾಧ್ಯಾಯ, ಆಚಾರ್ಯ ಎಂಬೆರಡು ಶಬ್ದಗಳುಳಿದವು ಭಗವಾನ್ ಮನುಮಹರ್ಷಿಗಳ ಅಭಿಪ್ರಾಯವೇನಂದರೆ:—

उपनीय तु यः शिष्यं वेदमध्यापयेद्द्विजः ।
सकल्पं सरहस्यं च तमाचार्यं प्रचक्षते ॥१४०।२।मनु.

ಶಿಷ್ಯನ ಉಪನಯನವನ್ನು ಮಾಡಿ, ಕಲ್ಪವೆಂದರೆ ಯಜ್ಞವಿದ್ಯೆ, ರಹಸ್ಯವೆಂದರೆ ಉಪನಿಷತ್ತು, ಇವುಗಳಿಂದ ಸಹಿತವಾಗಿ ಸಮಗ್ರ ವೇದಶಾಖೆಯನ್ನು ಕಲಿಸಿದವನು **ಆಚಾರ್ಯ**ನೆನಿಸುವನು.

एकदेशं तु वेदस्य वेदांगान्यपि वा पुनः ।
योऽध्यापयति वृत्यर्थमुपाध्यायः स उच्यते ॥१४१।२। मनु.

ವೇದದ ಒಂದು ಭಾಗವನ್ನು—ಮಂತ್ರವನ್ನು-ಬ್ರಾಹ್ಮಣವನ್ನು, ಇಲ್ಲವೆ ವೇದರಹಿತ ವ್ಯಾಕರಣ ಮುಂತಾದವುಗಳನ್ನು ಉದರ ಪೋಷಣಾರ್ಥವಾಗಿ ಕಲಿಸುವವನು—**ಉಪಾಧ್ಯಾಯನೆನಿಸುವನು.** ಅಂದರೆ ಇದರಲ್ಲಿ ಉಪಾಧ್ಯಾಯನಿಗಿಂತ ಆಚಾರ್ಯನೂ, ಆಚಾರ್ಯನಿಗಿಂತ ಗುರುವೂ, ಹೆಚ್ಚಿನವನೆಂದು ಹೇಳುವದೇ ತಾತ್ಪರ್ಯವು. ಇನ್ನು, ಇಲ್ಲಿ ವ್ಯವಹಾರಕ್ಕನುಸರಿಸಿ ಶಿಕ್ಷಕನಿಗೆ, ಶಿಕ್ಷಕನೂ, ಅಧ್ಯಾಪಕನೂ, ಗುರುವೂ ಎಂಬ ಶಬ್ದಗಳನ್ನು ಈ ನಿಬಂಧದಲ್ಲಿ ಪ್ರಯೋಗಿಸಿದರೂ ಪ್ರತಿಬಂಧವಿಲ್ಲ.

೨. ಪೂರ್ವಕಾಲದ ಗುರು-ಶಿಷ್ಯ ಪದ್ಧತಿಯು.

ಪೂರ್ವಕಾಲದಲ್ಲಿ ಒಬ್ಬ ಗುರು, ಅನೇಕ ಶಿಷ್ಯರೆಂಬುವದೇ ಪದ್ಧತಿಯು ಆಗಿತ್ತು. ಆ ಗುರು ಸರ್ವವಿಷಯಗಳಲ್ಲಿಯಾದರೂ ಪಾರಂಗತನಾಗಿರುತ್ತಿದ್ದದರಿಂದ, ಅನೇಕ ಶಿಷ್ಯರು ಆ ಒಬ್ಬ ಗುರುವಿನಿಂದ ಸರ್ವ ವಿಷಯಜ್ಞಾನವನ್ನರ್ಜಿಸಿ ಕೃತಾರ್ಥತೆಯನ್ನು ಪಡೆಯುತ್ತಿದ್ದರು. ಇಂಥ ಅನೇಕ ಶಿಷ್ಯರು ಬಂದಾಗ್ಯೂ ಅವರೆಲ್ಲರಿಗೂ ಕಲಿಸುವದಕ್ಕಾಗಿ ಒಬ್ಬನೇ ಗುರು ಸಾಕಾಗುತ್ತಿದ್ದನು. ಶಿಷ್ಯರು ಅಂಥ ಗುರುವನ್ನು ಕೇವಲ ಏಕನಿಷ್ಠೆಯಿಂದಲೂ, ಅನನ್ಯಭಾವದಿಂದಲೂ ಹಗಲಿರುಳು ಸಂತೋಷಿಸುವದೂ, ಸೇವಿಸುವದೂ ಇದೇ ತಮ್ಮ ಮುಖ್ಯಕರ್ತವ್ಯವೆಂದು ಬಗೆದು, ಅದರಲ್ಲಿಯೇ ತಲ್ಲೀನರಾಗಿ ಬಹು ಶ್ರಮದಿಂದ ಆ ಗುರು ಕೃಪೆಯನ್ನು ಸಂಪಾದಿಸುತ್ತಿದ್ದರು. ಪೂರ್ವಕಾಲದಲ್ಲಿ ವಿದ್ಯಾರ್ಜನೆ ಮಾಡುತ್ತಿರುವ ಶಿಷ್ಯರಿಗೆ ಪ್ರಪಂಚದ ಭಾರವೇ ಇದ್ದಿಲ್ಲ. ಈಗಿನ ಕಾಲದ ಪದ್ಧತಿಯು ಪೂರ್ವಕಾಲದಿಂದ ತೀರ ಭಿನ್ನವಾದ್ದರಿಂದ ಅದಕ್ಕೆ ತಕ್ಕ ವಿದ್ಯಾರ್ಜನದಿಂದಲೇ ಯೋಗಕ್ಷೇಮ ಸಾಗಿಸಬೇಕಾಗಿರುವದು. ಪೂರ್ವಕಾಲದ ವಿದ್ಯೆಗೂ ಸಾಂಪ್ರತ ಕಾಲದ ವಿದ್ಯೆಗೂ ಅತ್ಯಂತ ಭೇದವಿರುವದರಿಂದ, ವಿದ್ಯಾರ್ಜನೆಯ ಕ್ರಮದಲ್ಲಾದರೂ ಭೇದ ತೋರುವದು.

೩. ಸಾಂಪ್ರತ ಕಾಲವು.

ಸಾಂಪ್ರತ ಕಾಲಕ್ಕೆ ವ್ಯವಹಾರೋಪಯುಕ್ತವಾದ ವಿದ್ಯೆಗಳ ಅರ್ಜಿಸದೆ ಸಾಗುವಂತೆಯೇ ಇಲ್ಲ. ಆದ್ದರಿಂದ ಇಂಥ ವಿದ್ಯೆಗಳನ್ನು ಗಳಿಸುವದಕ್ಕಾಗಿ ಅನೇಕ ಸಾಧನಗಳನ್ನು ಸರಕಾರದವರು ಮಾಡಿದ್ದಾರೆ. ಅನೇಕ ಶಾಲೆಗಳನ್ನು ಸ್ಥಾಪಿಸಿ, ಅಲ್ಲಲ್ಲಿ ಕಲಿಸುವದಕ್ಕಾಗಿ ಅಧ್ಯಾಪಕರ ವ್ಯವಸ್ಥೆಯನ್ನೂ ಅಂಥ ಅಧ್ಯಾಪಕರನ್ನು ಸಿದ್ಧಮಾಡುವದಕ್ಕಾಗಿ ಕಾಲೇಜ ಮುಂತಾದ ಎಲ್ಲ ಸಾಮಗ್ರಿಗಳನ್ನೂ ಸಿದ್ಧಪಡಿಸಿದ್ದಾರೆ. ಅದಕ್ಕೆ ನಿಯಮಗಳನ್ನೂ ರಚಿಸಿದ್ದಾರೆ. ಆಯಾಯ ನಿಯಮಗಳಂತೆ ಸಣ್ಣ ದೊಡ್ಡ ಶಾಲೆಗಳು ನಡೆದಿರುವವು. ಇಂಥ ಶಾಲೆಗಳಲ್ಲಿ ಶಿಕ್ಷಣ ಕ್ರಮವು ಸೊಗಸಾಗಿ ಸಾಗಿರುವದು. * * * *

ಇನ್ನು, ಶಿಕ್ಷಣವೆಂದರೇನು? ಶಿಕ್ಷಣವು ಎಷ್ಟು ಮಹತ್ವದ್ದು ಇದರ ವಿಷಯವಾಗಿ ಸ್ವಲ್ಪ ಚಿಂತಿಸುವ — ಎಮ್. ಎ. ಪದವೀಧರರಾದ ಮಿಸ್. **ಎಲಿನರ ನ್ಯಾಗ್‌ಡಾಗಲ್** ಎಂಬ ಮಹಾ ವಿದುಷಿಯರು ಶಿಕ್ಷಣ ವಿಷಯಕ್ಕೆ ಒತ್ತಟ್ಟಿಗೆ ಹೀಗೆ ಅಂದಿರುವರು:— ಶಿಕ್ಷಣವು ಬಹು ಮಹತ್ವದ ವಿಷಯವಾಗಿರುವದು. ಶಿಕ್ಷಣದ ನಾಮಮಾತ್ರದಿಂದ ಬಾಲಕರ ಸ್ಮರಣೆಯಾಗದಿರಲಾರದು." ಅಂಶತಃ ಬಾಲಕರ ಮೇಲಿರುವ ನಮ್ಮ ಸಹಜವಾದ ಪ್ರೇಮದಿಂದಲೂ, ಅಂಶತಃ ಸ್ವಂತ ನಿಜವಾದ ಮಹತ್ವದಿಂದಲೂ ಶಿಕ್ಷಣ ವಿಷಯವು ಬಹು ರಮಣೀಯವೂ ಆನಂದದಾಯಕವೂ ಆಗಿರುವದು. ಸರ್ವ ಸಾಮಾಜಿಕ ಸುಧಾರಣೆಯ ವಿಷಯಗಳ ಮೂಲದಲ್ಲಿ ಶಿಕ್ಷಣವು ಅವಶ್ಯವಾಗ್ಗಿದ್ದೇ ಇರುವದು. ಶಿಕ್ಷಣವು ಪೂರ್ಣಸ್ಥಿತಿಯನ್ನು ಪಡೆದ ಬಳಿಕ ಸಾಮಾಜಿಕ ಸುಧಾರಣೆಯ ಪ್ರಶ್ನಗಳೇ ಉದ್ಭವಿಸಲಾರವು. ಯಾಕೆಂದರೆ, ಅಂಥ ಸ್ಥಿತಿಯಲ್ಲಿ ರಾಷ್ಟ್ರದಲ್ಲಿರುವ ಸರ್ವ ಸ್ತ್ರೀಪುರುಷರೂ ಸಮಾಜದ ವಿಷಯಕ್ಕಾಗಿ ತಾವು ತ್ರಿಕರಣ ಪೂರ್ವಕವಾಗಿ ಮಾಡತಕ್ಕ ಇತಿ ಕರ್ತವ್ಯವನ್ನು ನಿಜವಾಗಿ ಮಾಡುತ್ತಿರುತ್ತಾರೆ. ಆದದರಿಂದ ಸಾಮಾಜಿಕ ಅನಿಷ್ಟಗಳೆಲ್ಲ ತಾವೇ ನಷ್ಟವಾಗಿ ಹೋಗುವವು. ಆದ್ದರಿಂದಲೇ **ಪ್ಲೇಟೋ** ಎಂಬುವ ವಿದ್ವಾಂಸನು ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯನ್ನು ಶೋಧಿಸಿ ತೆಗೆದಾಗ್ಗೆ, ತನ್ನ ಮುಖ್ಯ ಕರ್ತವ್ಯವಾದ ೬ನೇ ಭಾಗವನ್ನು ಬಾಲಕಬಾಲಿಕೆಯರ ಶಿಕ್ಷಣಕ್ಕಾಗಿಯೇ ನಿಯಮಿಸಿಟ್ಟಿರುವನು.

ಆದ್ದರಿಂದಲೇ ಈ ರಾಷ್ಟ್ರದಲ್ಲಿರುವ ತರುಣರಿಗೆ ಕಲಿಸುತ್ತಿರುವ ಶಿಕ್ಷಣದ ಮಹತ್ವವೂ ಹಾಗು ಶಿಕ್ಷಣದ ಯೋಗ್ಯ ಪದ್ಧತಿಯನ್ನು ಯುಕ್ತಿಯಿಂದ ಶೋಧಿಸಿ ತೆಗೆಯುವದರ ಮಹತ್ವವೂ ಕಂಡುಬರುವದು. ಸರ್ವದಾ ಸರ್ವರೂ ಶಿಕ್ಷಣದ ಅನೇಕ

ಯುಕ್ತಿಗಳಲ್ಲಿ ತೋರಿಸುತ್ತಿರುವ ಹಾಗು ತಳೆದಿರುವ ಸ್ಥಿರವಾದ ಪ್ರೇಮವು "ನಮ್ಮ ಬಾಲಕರಿಗೆ ಅತ್ಯಂತ ಹಿತವಾಗಬೇಕೆಂದು" ನಾವು ಧರಿಸುತ್ತಿರುವ ನಮ್ಮ ನಿಷ್ಕಪಟ ಕಾಂಕ್ಷೆಯಿಂದಲೇ ಉದ್ಭವಿಸುವದು. ತನಗಿಂತ ತನ್ನ ಮಗನು ವಿದ್ಯಾವಂತನಾಗಬೇಕೆಂಬ ಚಿಂತೆಯನ್ನೇ ಹಗಲಿರುಳು ವಹಿಸುತ್ತಿರುವನು. ಬಾಲಕರಿಗೆ ಶಿಕ್ಷಣದ ಭಾಗವು ಮನೆಯಲ್ಲಿಯೇ ತಂದೆತಾಯಿಗಳಿಂದಲೂ, ಇಲ್ಲವೆ ಸತತ ಮನೆಗೆ ಬರುತ್ತಿರುವವರಿಂದಲೂ ಯಾರಿಗೂ ತಿಳಿಯದಂತೆ ಗುಪ್ತವಾಗಿ ತನ್ನಿಂದ ತಾನೇ ದೊರೆಯುತ್ತಿರುವದೆಂಬ ಸಂಗತಿಯು ನಿಜವೇ. ಆದರೆ ಮನೆತನದ ನಡಾವಳಿಯು ಮಾತ್ರ ತಂದೆತಾಯಿಗಳ ಸ್ವಭಾವದ ಮೇಲೆಯೇ ಪೂರ್ಣವಾಗಿ ಅವಲಂಬಿಸಿರುವದರಿಂದ, ಅವರವರ ಸ್ವಭಾವದ ರೂಪವನ್ನೇ ಆ ಮನೆತನದ ಸ್ವಭಾವವಾದರೂ ಹೊಂದುವದು. ಇಂಥ ಸ್ವಭಾವವು ಶಿಕ್ಷಣದ ಮೇಲೆಯೇ ಅವಲಂಬಿಸಿರುವದೆಂದ ಬಳಿಕ ತಂದೆತಾಯಿಗಳ ಶಿಕ್ಷಣವು ಬಾಲಕರ ಸ್ವಭಾವಕ್ಕೂ ಮನೆತನದ ಸ್ವಭಾವಕ್ಕೂ ಮೂಲಕಾರಣವಾಗಿರುವದೆಂದು ಬೇರೆ ಹೇಳಲವಶ್ಯವಿಲ್ಲ. ಇಂಥ ಶಿಕ್ಷಣವು ಶಿಕ್ಷಕರಿಂದ ದೊರೆಯುವದೆಂಬುವದು ಸಹಜವೇ. ಆದ್ದರಿಂದಲೇ ಪ್ರತ್ಯಕ್ಷವಾಗಿಯೂ, ಅಪ್ರತ್ಯಕ್ಷವಾಗಿಯೂ ದೊರೆಯುತ್ತಿರುವ ಶಿಕ್ಷಣದ ಪರಿಣಾಮಮವೂ ಶಿಕ್ಷಕರ ಮೇಲಿನ ಭಾರವೂ ಇವೆರಡೂ ನಿಸ್ಸೀಮವಾಗಿರುವವು.

ಜೋಸೆಫ್ ಲ್ಯಾಂಡನ್ ಪಂಡಿತರು ಶಿಕ್ಷಣವಿಷಯವಾಗಿ ಅನ್ನುವದೇನಂದರೆ— ಉಪಯೋಗ ದೃಷ್ಟಿಯಿಂದ ವಿಚಾರಿಸಿದರೆ, ಶಿಕ್ಷಣ ಸಾಮಗ್ರಿಗಳು ಅಂದರೆ- ಕಟ್ಟಡಗಳೂ, ಕೋಣೆಗಳೂ, ಸಾಮಾನುಗಳೂ, ಶಿಕ್ಷಕರೂ ಈ ಸರ್ವ ಸಾಮಗ್ರಿಯೇ ಶಿಕ್ಷಣವೆನಿಸುವದು. ಮತ್ತೊಂದು ದೃಷ್ಟಿಯಿಂದ ನೋಡಿದರೆ ಕಲವು ಸಂಗತಿಗಳನ್ನು ಬಾಯಿಯಿಂದಲೇ ಹೇಳುವ ಬಾಲಕರ ಶಕ್ತಿಯೂ, ವಾಚನ, ಲೇಖನ, ಗಣಿತ ಮುಂತಾದವುಗಳ ಜ್ಞಾನವೂ ಶಿಕ್ಷಣವೆನಿಸಬಹುದು. ಶಿಕ್ಷಕನ ದೃಷ್ಟಿಯಿಂದ ಇವೆರಡೂ ಶಿಕ್ಷಣವೆನಿಸಲರಿಯವು. ಕೇವಲ ಜ್ಞಾನವೂ ಶಿಕ್ಷಣವಲ್ಲ; ಜ್ಞಾನಾರ್ಜನದ ಸಾಧನವೂ ಶಿಕ್ಷಣವಲ್ಲ. ಜ್ಞಾನವನ್ನು ದೊರಕಿಸಿಕೊಡುವದು ಕೇವಲ ಸಾಧನವಾಗಿರುವದಲ್ಲದೆ ಅದು ಅಂತಿಮ ಸಾಧ್ಯವಲ್ಲ. ನಿಜವಾದ ಶಿಕ್ಷಣವೆಂದರೆ— ಬೆಳವಣಿಗೆ, ಪ್ರೌಢತನ ಪಡೆಯೋಣ. ಮುಖ್ಯವಾಗಿ ಮಾನಸಿಕ, ನೈತಿಕ. ಬಲವನ್ನು ಪಡೆಯುವದೇ ಶಿಕ್ಷಣವು.

ಇನ್ನು, ಯಾವದಾದರೊಂದು ಶಿಕ್ಷಣ ಕ್ರಮದಲ್ಲಿ ಬಾಲಕರ ಭಾವೀಕಲ್ಯಾಣವೇ ಮುಖ್ಯವಿಚಾರದ ಸಂಗತಿಯಾಗಿರಬೇಕು. ಕೇವಲ ಪರೀಕ್ಷೆಯ ದೃಷ್ಟಿಯೇ ಸಾಕಾಗುವದಿಲ್ಲ. ಕಲಿತ ಜ್ಞಾನವನ್ನು ಸರಿಯಾಗಿ ನಮ್ಮ ದಿನಂಪ್ರತಿಯ ಆಚರಣೆಯಲ್ಲಿಯೂ ಕೃತಿಯಲ್ಲಿಯೂ ತರುವದೇ ಶಿಕ್ಷಣದ ಮುಖ್ಯವಾದ ಪರಿಣಾಮವು.

ಕಂಠೀರವ.

(ಕ್ರೈಸ್ತವರ್ಗದ ವಾರ ಪತ್ರಿಕೆ)

ವಾರ್ಷಿಕ ವರ್ಗಣಿ ಅಂಚೆವೆಚ್ಚಸೇರಿ ರೂ. ೨ ೫ ೦

ಇದರಲ್ಲಿ ಸಾಮಾಜಿಕ, ರಾಜಕೀಯ, ವಿದ್ಯಾವಿಷಯಕ ಲೇಖನಗಳು ನಿಷ್ಪಕ್ಷಪಾತದಿಂದ ಚರ್ಚಿಸಲ್ಪಡುವವು. ಪ್ರಬಂಧಗಳಿಗಾಗಿ ಒಂದು ಸ್ಥಳವು ಕಾದಿಡಲ್ಪಟ್ಟಿದೆ. ಜಾಹೀರಾತುಗಳಿಗೂ ಅನುಕೂಲ!

ಸಂಪಾದಕ, 'ಕಂಠೀರವ,'
ಹಂಪನಕಟ್ಟೆ, ಮಂಗಳೂರು (ದ. ಕ.)

ಕನ್ನಡ ಶಿಕ್ಷಕ.

ಈ ತ್ರೈಮಾಸಿಕ ಪುಸ್ತಕವು ಶಿಕ್ಷಕ ಶಿಕ್ಷಿತೆಯರ ಸಲುವಾಗಿಯೂ, ಹಿರಿ ಚಿಕ್ಕ ಮಕ್ಕಳ ಸಲುವಾಗಿಯೂ, ಹೊರಡುತ್ತದೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

ವಾರ್ಷಿಕ ವರ್ಗಣಿ ಅಂಚೆ ವೆಚ್ಚ [illegible]

ಒಂದು ಪ್ರತಿಗೆ [illegible]

[illegible]

[illegible]

[illegible]

ಯುಕ್ತಿಗಳಲ್ಲಿ ತೋರಿಸುತ್ತಿರುವ ಹಾಗು ತಳೆದಿರುವ ಸ್ಥಿರವಾದ ಪ್ರೇಮವು "ನಮ್ಮ ಬಾಲಕರಿಗೆ ಅತ್ಯಂತ ಹಿತವಾಗಬೇಕೆಂದು" ನಾವು ಧರಿಸುತ್ತಿರುವ ನಮ್ಮ ನಿಷ್ಕಪಟ ಕಾಂಕ್ಷೆಯಿಂದಲೇ ಉದ್ಭವಿಸುವದು. ತನಗಿಂತ ತನ್ನ ಮಗನು ವಿದ್ಯಾವಂತನಾಗಬೇಕೆಂಬ ಚಿಂತೆಯನ್ನೇ ಹಗಲಿರುಳು ವಹಿಸುತ್ತಿರುವನು. ಬಾಲಕರಿಗೆ ಶಿಕ್ಷಣದ ಭಾಗವು ಮನೆಯಲ್ಲಿಯೇ ತಂದೆತಾಯಿಗಳಿಂದಲೂ, ಇಲ್ಲವೆ ಸತತ ಮನೆಗೆ ಬರುತ್ತಿರುವವರಿಂದಲೂ ಯಾರಿಗೂ ತಿಳಿಯದಂತೆ ಗುಪ್ತವಾಗಿ ತನ್ನಿಂದ ತಾನೇ ದೊರೆಯುತ್ತಿರುವದೆಂಬ ಸಂಗತಿಯು ನಿಜವೇ. ಆದರೆ ಮನೆತನದ ನಡಾವಳಿಯು ಮಾತ್ರ ತಂದೆತಾಯಿಗಳ ಸ್ವಭಾವದ ಮೇಲೆಯೇ ಪೂರ್ಣವಾಗಿ ಅವಲಂಬಿಸಿರುವದರಿಂದ, ಅವರವರ ಸ್ವಭಾವದ ರೂಪವನ್ನೇ ಆ ಮನೆತನದ ಸ್ವಭಾವವಾದರೂ ಹೊಂದುವದು. ಇಂಥ ಸ್ವಭಾವವು ಶಿಕ್ಷಣದ ಮೇಲೆಯೇ ಅವಲಂಬಿಸಿರುವದೆಂದ ಬಳಿಕ ತಂದೆತಾಯಿಗಳ ಶಿಕ್ಷಣವು ಬಾಲಕರ ಸ್ವಭಾವಕ್ಕೂ ಮನೆತನದ ಸ್ವಭಾವಕ್ಕೂ ಮೂಲಕಾರಣವಾಗಿರುವದೆಂದು ಬೇರೆ ಹೇಳಲವಶ್ಯವಿಲ್ಲ. ಇಂಥ ಶಿಕ್ಷಣವು ಶಿಕ್ಷಕರಿಂದ ದೊರೆಯುವದೆಂಬುವದು ಸಹಜವೇ. ಆದ್ದರಿಂದಲೇ ಪ್ರತ್ಯಕ್ಷವಾಗಿಯೂ, ಅಪ್ರತ್ಯಕ್ಷವಾಗಿಯೂ ದೊರೆಯುತ್ತಿರುವ ಶಿಕ್ಷಣದ ಪರಿಣಾಮಮವೂ ಶಿಕ್ಷಕರ ಮೇಲಿನ ಭಾರವೂ ಇವೆರಡೂ ನಿಃಸ್ಸೀಮವಾಗಿರುವವು.

ಜೋಸೆಫ್ ಲ್ಯಾಂಡನ್ ಪಂಡಿತರು ಶಿಕ್ಷಣವಿಷಯವಾಗಿ ಅನ್ನುವದೇನಂದರೆ— ಉಪಯೋಗ ದೃಷ್ಟಿಯಿಂದ ವಿಚಾರಿಸಿದರೆ, ಶಿಕ್ಷಣ ಸಾಮಗ್ರಿಗಳು ಅಂದರೆ- ಕಟ್ಟಡಗಳೂ, ಕೋಣೆಗಳೂ, ಸಾಮಾನುಗಳೂ, ಶಿಕ್ಷಕರೂ ಈ ಸರ್ವ ಸಾಮಗ್ರಿಯೇ ಶಿಕ್ಷಣವೆನಿಸುವದು. ಮತ್ತೊಂದು ದೃಷ್ಟಿಯಿಂದ ನೋಡಿದರೆ ಕೆಲವು ಸಂಗತಿಗಳನ್ನು ಬಾಯಿಯಿಂದಲೇ ಹೇಳುವ ಬಾಲಕರ ಶಕ್ತಿಯೂ, ವಾಚನ, ಲೇಖನ, ಗಣಿತ ಮುಂತಾದವುಗಳ ಜ್ಞಾನವೂ ಶಿಕ್ಷಣವೆನಿಸಬಹುದು. ಶಿಕ್ಷಕನ ದೃಷ್ಟಿಯಿಂದ ಇವೆರಡೂ ಶಿಕ್ಷಣವೆನಿಸಲರಿಯವು. ಕೇವಲ ಜ್ಞಾನವೂ ಶಿಕ್ಷಣವಲ್ಲ; ಜ್ಞಾನಾರ್ಜನದ ಸಾಧನವೂ ಶಿಕ್ಷಣವಲ್ಲ. ಜ್ಞಾನವನ್ನು ದೊರಕಿಸಿಕೊಡುವದು ಕೇವಲ ಸಾಧನವಾಗಿರುವದಲ್ಲದೆ ಅದು ಅಂತಿಮ ಸಾಧ್ಯವಲ್ಲ. ನಿಜವಾದ ಶಿಕ್ಷಣವೆಂದರೆ– ಬೆಳವಣಿಗೆ, ಪ್ರೌಢತನ ಪಡೆಯೋಣ, ಮುಖ್ಯವಾಗಿ ಮಾನಸಿಕ, ನೈತಿಕ, ಬಲವನ್ನು ಪಡೆಯುವದೇ ಶಿಕ್ಷಣವು.

ಇನ್ನು, ಯಾವದಾದರೊಂದು ಶಿಕ್ಷಣ ಕ್ರಮದಲ್ಲಿ ಬಾಲಕರ ಭಾವೀಕಲ್ಯಾಣವೇ ಮುಖ್ಯವಿಚಾರದ ಸಂಗತಿಯಾಗಿರಬೇಕು. ಕೇವಲ ಪರೀಕ್ಷೆಯ ದೃಷ್ಟಿಯೇ ಸಾಕಾಗುವದಿಲ್ಲ. ಕಲಿತ ಜ್ಞಾನವನ್ನು ಸರಿಯಾಗಿ ನಮ್ಮ ದಿನಂಪ್ರತಿಯ ಆಚರಣೆಯಲ್ಲಿಯೂ ಕೃತಿಯಲ್ಲಿಯೂ ತರುವದೇ ಶಿಕ್ಷಣದ ಮುಖ್ಯವಾದ ಪರಿಣಾಮವು.

ಕಂಠೀರವ.

(ಶ್ರೇಷ್ಠವರ್ಗದ ವಾರ ಪತ್ರಿಕೆ)

ವಾರ್ಷಿಕ ವರ್ಗಣಿ ಅಂಚೆವೆಚ್ಚಸೇರಿ ರು. ೨-೫-೦

ಇದರಲ್ಲಿ ಸಾಮಾಜಿಕ, ರಾಜಕೀಯ, ವಿದ್ಯಾವಿಷಯಕ ಲೇಖನಗಳು ನಿಷ್ಪಕ್ಷಪಾತದಿಂದ ಚರ್ಚಿಸಲ್ಪಡುವವು. ಪ್ರಬಂಧಗಳಿಗಾಗಿ ಒಂದು ಪುಟವು ಕಾದಿಲ್ಪಡಟ್ಟಿದೆ. ಜಾಹೀರಾತುಗಳಿಗೂ ಅನುಕೂಲ!

--ಸಂಪಾದಕ, 'ಕಂಠೀರವ,'
ಹಂಪನಕಟ್ಟೆ, ಮಂಗಳೂರು (ದ. ಕ.)

ಕನ್ನಡ ಶಿಕ್ಷಕಿ.

ಈ ತ್ರೈಮಾಸಿಕ ಪುಸ್ತಕವು ಶಿಕ್ಷಕ ಶಿಕ್ಷಕಿಯರ ಸಲುವಾಗಿಯೂ. ಬೇರೆ ಹೆಣ್ಣುಮಕ್ಕಳ ಸಲುವಾಗಿಯೂ, ಹೊರಡುತ್ತದೆ. ಬೇಕಾದವರು ಕೆಳಗಿನ ವಿಳಾಸಿಗೆ ಬರೆಯಬೇಕು.

ವಾರ್ಷಿಕ ವರ್ಗಣಿ ಅಂಚೇ ವೆಚ್ಚ ಸೇರಿ ೧ ೧೨-೦

ಒಂದು ಪ್ರತಿಗೆ ೦-೪-೦

ಮಿಸ್. ಎಚ್. ಎಲ್. ಪ್ಯಾಕಾಕ್ಷಿ.
ಹೆಣ್ಣುಮಕ್ಕಳ ಶಾಲೆಗಳ ಇನ್ಸಪೆಕ್ಟ್ರೆಸ್, ದ. ಭಾ., ಧಾರವಾಡ.

उत्तम सूर्यछाप केशर.

ಉತ್ತಮ ಸೂರ್ಯಛಾಪ ಕೇಶರ.

ನಮ್ಮಲ್ಲಿ ಮಾರಲಿಕ್ಕೆ ಸಿಗುವದು. ಬೇಕಾದವರು ತರಿಸಿಕೊಳ್ಳಬಹುದು.

— ಚಂದ್ರಿಕಾ ಬುಕ್ ಡೆಪ್ಪೋ ಬಾಗಲಕೋಟೆ.

ಕರ್ಣಾಟಕ ಚಂದ್ರಿಕೆ

ಸಂಪುಟ ೧೦] ಕಾರ್ತಿಕ ಶು, ಮತ್ತು ಮಾರ್ಗಶಿರ ಸಂಚಿಕೆ [೭-೮

Cover Printed at the W. M. Press, Mysore.

ಪ್ರತಿ ಪೂರ್ಣಿಮೆಯಲ್ಲಿಯೂ ಪ್ರಕಟಿಸಲ್ಪಡುತ್ತಿದೆ
ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆ
ಯವರಿಂದ ಪ್ರೋತ್ಸಾಹಿತವಾದುದು.

ವಾರ್ಷಿಕ ಚಂದಾ—ರೂ. ೧—೪—೦

ವಿಷಯಾನುಕ್ರಮಣಿಕೆ

ಅಪರಾಜಿತೆ	...	...	೯—೩೪
ಚಮತ್ಕಾರ ರತ್ನಾವಳಿ	...	...	೯—೩೪
ಗೃಹಿಣೀಧರ್ಮದೀಪಿಕೆ	...	...	೯—೨೪

ಸ್ವೀಕಾರ.

ಆದರಪೂರ್ವಕವಾಗಿ ನಮ್ಮ ಚಂದ್ರಿಕೆಯ ಭಾಂಡಾಗಾರಕ್ಕೆ ಕಳುಹಿಸಿಕೊಟ್ಟಿರುವ "ಶಾಲೆಯತೋಟ" "ನಗೆಗೇಡು" "ಆಂಗ್ಲೇಯ ಚರಿತ್ರಸಂಗ್ರಹ" "ದೈವಭಕ್ತಿ" "ಸುಮಿತ್ರ" "ಭರತನಸಂಕ್ಷಿಪ್ತ ಇತಿಹಾಸ" ಎಂಬ ಗ್ರಂಥಗಳನ್ನು "ವಿದ್ಯೋದಯ" "ಆಲ್‌ಇಂಡಿಯಾ ಅಡ್ವರ್ಟೈಸರ್" "ಬೆಂಗಳೂರು ಡಿಸ್ಟ್ರಿಕ್ಟ್‌ಪತ್ರಿಕೆ" "ಸತ್ಯವಾದಿ" ಎಂಬ ಪತ್ರಿಕೆಗಳನ್ನು ಸ್ವೀಕರಿಸಿರುವೆವು. ಗುಣಾನುವಾದವನ್ನು ಮುಂದೆ ಅರಿಕೆಮಾಡುವೆವು.

"ಸಂಪಾದಕ"

Printed by K. Ramanarasimhaiya at the G. T. A. Press, Mys

28 - 12 - 1917

ನೀನು ನನ್ನೊಡನೆ ಬಂದರೆ ತಿಳಿಸುವೆನು" ಎಂದನು ಪಾಠಕಮಹಾಶಯ್ರ, ಈ ವಕ್ತಾರನು ಯಾರೆಂಬುದನ್ನೂ ಅವನು ಸಹಚರರೊಡನೇನು ಮಾತಾಡು ತ್ತಿದ್ದನೆಂಬುದನ್ನೂ ಕುರಿತು ಒಂದೆರಡು ವಿಷಯಗಳನ್ನಿಲ್ಲಿ ಪ್ರಸ್ತಾಪಿಸುವೆವು. ಆದಿನ ಗಿರೀಶಚಂದ್ರನ ಮನೆಗೆ ಕನ್ಯಾರ್ಥಿಯಾಗಿ ಬಂದಿದ್ದ ಅಂಬಾಶಂಕರನೇ ಈಗ ದುರ್ಗಾದಾಸ ಶ್ಯಾಮವರ್ಮರೊಡನೆ ಮಾತನಾಡುತ್ತಿದ್ದವನು. ಇವನ ಹೇಳಿಕೆಯಿಂದಲೇ ಆದಿನ ಉಪವನಪ್ರಾಂತದಲ್ಲಿ ಆಕನ್ಯೆಯನ್ನು ಬಲಾತ್ಕಾರವಾಗಿ ಅಪಹರಿಸಿಕೊಂಡು ಹೋಗುವುದಕ್ಕೆ ಶ್ಯಾಮವರ್ಮನೂ ದುರ್ಗಾದಾಸನೂ ಪ್ರಯತ್ನಿಸಿ ವಿಫಲಮನೋರಥರಾದುದು. ಅಂಬಾಶಂಕರನು ಈಗ ಅವರಿಬ್ಬರೊಡನೆಯೂ ಏನೋ ಕಿವಿಮಾತನ್ನಾಡಿ ಭೋಜನಶಾಲಾಧಿಕಾರಿಗೆ ಸಲ್ಲಿಸಬೇಕಾಗಿದ್ದ ಹಣವನ್ನು ಸಲ್ಲಿಸಿ ಅಲ್ಲಿಂದ ಹೊರಟನು ಬೀದಿಯ ಬಾಗಿಲ ಬಳಿಗೆ ಬರುವಷ್ಟರಲ್ಲಿ ದುರ್ಗಾದಾಸನು "ಅಂಬಾ, ಅಲ್ಲಿ ನೋಡು, ಇದಿರಿಗೆ ಬರುತ್ತಿರುವವನೇ ಅಪರಾಜಿತೆಯನ್ನು ನಮ್ಮ ಕೈಯಿಂದ ತಪ್ಪಿಸಿದ ನೀಚನು. ಅಯ್ಯೋ! ಆಗ ನಿರಾಯುಧರಾಗಿದ್ದುದರಿಂದ ಕೆಲಸ ಕೆಟ್ಟಿತು" ಎಂದನು ದುರ್ಗಾದಾಸನು "ಅಂಬಾ. ಅವನು ನಮ್ಮನ್ನು ಗುರುತಿಸಿದನೇ?" ಎಂದನು ಅಂಬಾಶಂಕರನು "ಇವನನ್ನು ನಾನು ಬಲ್ಲೆನು ಇವನೂ ನನ್ನನ್ನು ಒಂದೆರಡುವೇಳೆ ನೋಡಿರುವನು ಇರಲಿ? ಇವನ ವಿಷಯವನ್ನು ನಾನು ನೋಡಿಕೊಳ್ಳುವೆನು." ಎಂದನು ದುರ್ಗಾದಾಸನು "ಅಂಬಾ, ಇವನು ಕೃಷ್ಣನಗರದವನಲ್ಲವೆ?" ಎಂದು ಕೇಳಿದನು ಅಂಬಾಶಂಕರನು ಅಹುದು ಇವನ ವಿಷಯವನ್ನು ಕುರಿತು ತರುವಾಯ ಮಾತನಾಡೋಣ, ನಡೆಯಿರಿ." ಎಂದನು. ಮೂವರೂ ಮುಂದೆ ಹೊರಟರು ಆ ಬೀದಿಯಲ್ಲಿ ಉತ್ತರದಿಕ್ಕಿಗೆ ಬಹುದೂರ ಹೋದಬಳಿಕ ಬಲಗಡೆಗೆ ಒಂದು ಸಣ್ಣದಾರಿಯಿದ್ದಿತು ಅವರು ಅಲ್ಲಿ ತಿರುಗಿ ಮುಂದೆ ಹೊರಟರು ಒಂದುಪ್ಪರಿಗೆಯ ಮನೆಯು ಅವರ ಮಾರ್ಗವನ್ನು ನಿರೋಧಿಸಿತು ಅಂಬಾಶಂಕರನೂ ಅವನ ಅನುಯಾಯಿಗಳೂ ಆಮನೆಯೊಳಕ್ಕೆ ಹೋಗಿ ಕದವನ್ನು ಮುಚ್ಚಿದರು ಶ್ಯಾಮವರ್ಮನು "ಅಂಬಾ, ಈಗ ನಾವು ಕಂಡೆವಲ್ಲಾ ಅವನು ಯಾರು? ಅವನ ಹೆಸರೇನು?" ಎಂದು ಕೇಳಿದನು. ಅಂಬಾಶಂಕರನು "ಶ್ಯಾಮವರ್ಮ, ಕೇಳು ಅವನ ಹೆಸರು ಧೀರೇಂದ್ರ ಅವನು ಕೃಷ್ಣನಗರದಲ್ಲಿ ನ್ಯಾಯವಾದಿಯಾಗಿ

ರುವನು. ಆಗಾಗ ಈ ಪೂರಿಗೆ ಬಂದು ಹೋಗುತ್ತಿರುವನು. ಬುದ್ಧಿ ವಂತನೂ ಧೈರ್ಯಶಾಲಿಯೂ ಅಹುದು. ಆದರೆ ಉದಾಸೀನನು. ಈ ಅವನ ದುರ್ದೈವವು ಅವನನ್ನು ನಮಗೆ ವಿಘ್ನಕಾರಿಯಾಗಿ ಬರುವಂ ಪ್ರೇರೇಪಿಸುತ್ತಿರಬಹುದು ಬರಲಿ, ನೋಡೋಣ. ದುರ್ಗಾ, ಒಂದು ಕಾಗ ವನ್ನು ಕೊಡು" ಎಂದನು ದುರ್ಗಾದಾಸನು ಕಾಗದವನ್ನು ಕೊಟ್ಟನು ಅಂಬಾಶಂಕರನು ಕಾಗದವನ್ನು ಬರೆದು ಮುಗಿಸುವ ವೇಳೆಗೆ ಯಾರೋ ಕದವನ್ನು ಶಬ್ದಮಾಡಿದರು ದುರ್ಗಾದಾಸನು ಬೇಗ ಹೋಗಿ ಕದದ ಸಂ ಯಲ್ಲಿ ನೋಡಿ ಹಿಂತಿರುಗಿ ಬಂದು, "ಅಂಬಾ, ಆ ಹುಡುಗನೇ ಬಂದು ಬಾಗಿಲಲ್ಲಿ ನಿಂತಿರುವನು" ಎಂದನು ಅಂಬಾಶಂಕರನು "ಯಾರು? ಧೀರೇ ಪ್ರನೇ? ನಮ್ಮನ್ನು ಹಿಂದಟ್ಟಿಬಂದಿರುವನೇ ? ಒಳ್ಳೆಯದು, ಶ್ಯಾಮವರ್ಮ ಇನ್ನು ಕಾಲವಿಳಂಬ ಮಾಡಲಾಗದು ನೀನೀಗಲೇ ಹರನಗರಕ್ಕೆ ಹೊರಡ ಎಲ್ಲ ವಿಷಯಗಳಲ್ಲಿಯೂ ನಾನು ಹೇಳಿದಂತೆ ಜಾಗರೂಕನಾಗಿ ನೋಡಿಕೆ ದುರ್ಗಾ, ನೀನೂ ಹೊರಡು ರಾತ್ರಿ ಹನ್ನೆರಡುಗಂಟೆಯ ಬಂಡಿಯ ನನ್ನನ್ನು ನೋಡುವ ಹಿಂದುಗಡೆಯ ಬಾಗಿಲಿಂದಲೇ ಹೊರಟುಹೋಗೋಣ ಎಂದು ತಾನು ಬರೆದಿದ್ದ ಕಾಗದವನ್ನು ತೆಗೆದುಕೊಂಡು ತನ್ನ ಅನುಯ ಯಿಗಳೊಡನೆ ಹೊರಟುಹೋದನು. ಅವರು ಹೊರಟುಹೋದ ಬಂದೆರ ಮುಹೂರ್ತವಾದ ಬಳಿಕ ಆ ಮನೆಯೊಳಗಿನಿಂದ ಒಬ್ಬ ಮುದುಕಿಯ ಬಂದು ಬೀದಿಯ ಬಾಗಿಲನ್ನು ತೆರೆದಳು ಒಬ್ಬ ಯುವಕನು ಒಳಕ್ಕೆ ಪ್ರ ಶಿಸಿದನು ಮುದುಕಿಯು "ಅಪ್ಪಾ, ನೀನು ಯಾರು ? ಏಕೆ ಬಂದಿರುವೆ ಎಂದು ಕೇಳಿದಳು ಆಗಂತುಕನು "ಅಮ್ಮಾ, ನಾನು ನನ್ನ ಮಿತ್ರನನ ನೋಡುವುದಕ್ಕೆ ಬಂದಿರುವೆನು" ಎಂದನು ಮುದುಕಿಯು "ನಿನ್ನ ಮಿತ್ರ ಯಾರು" ಎಂದು ಕೇಳಿದಳು ಆಗಂತುಕನು "ಅಂಬಾಶಂಕರ" ಎಂದನು ಮುದುಕಿಯು "ಅಪ್ಪಾ! ನಿನ್ನ ಹೆಸರು ಧೀರೇಂದ್ರನೋ?" ಎಂದು ಕೇ ದಳು. ಆಗಂತುಕನು ಅಹುದೆಂದನು. ಮುದುಕಿಯು "ಅಪ್ಪಾ, ಅಂಬಾಶಂಕರ ಧೀರೇಂದ್ರನೆಂಬುವನು ಬಂದು ಕೇಳಿದರೆ ಈ ಕಾಗದವನ್ನು ಕೊಡೆ ನನಗೆ ತಿಳಿಸಿಕೊಟ್ಟು ಹೊರಟುಹೋದನು" ಎಂದೊಂದು ಕಾಗದವ

ಟ್ಟಳು. ಆಗಂತುಕನು ಆ ಕಾಗದವನ್ನೊಡೆದು ಓದಿಕೊಂಡನು. ಅದರ ಕ್ಕಣೆಯು ಈ ರೀತಿಯಾಗಿದ್ದಿತು:——

ಧೀರೇಂದ್ರ, ನೀನಿನ್ನೂ ಬಾಲಕ! ಕಷ್ಟಪಟ್ಟು ವಿದ್ಯಾಭ್ಯಾಸಮಾಡಿ ನ್ಯಾಯವಾದಿಯಾಗಿರುವೆ. ನೀನು ವಿವಾಹಿತನಾಗಬೇಕಾದುದು ನ್ಯಾಯವೇ ಸರಿ ದರೆ ನಿನ್ನ ಮನಸ್ಸು ಯಾವ ಕನ್ನೆಯಲ್ಲಿ ಅನುರಕ್ತವಾಗಿರುವುದೋ ಆ ನ್ನೆಯಿಂದ ನಿನಗೆ ಹಾನಿಯುಂಟಾಗುವ ಸಂಭವವೇ ಹೆಚ್ಚಾಗಿರುವುದು ಅದು ರಣ ನೀನವಳ ಚಿಂತೆಯನ್ನು ಬಿಡು ನಿನ್ನ ನಡವಳಿಕೆಗಳನ್ನು ನೋಡಿದರೆ ನು ನನ್ನ ಮಾರ್ಗಕ್ಕೆ ಅಡ್ಡಿಯಾಗುವೆಯೆಂದು ತೋರುತ್ತಿರುವುದು. ಇದು ನಗೆ ವ್ಯರ್ಥಶ್ರಮವಲ್ಲದೆ ಮತ್ತೆ ಬೇರೆಯಲ್ಲ ಮುಂದೆ ಹೀಗೆ ಪ್ರವ ಸದೆ ಎಚ್ಚರದಿಂದಿರಬೇಕೆಂದು ತಿಳಿಸಿರುವೆನು. 'ಅಂಬಾಶಂಕರ'

ಆಗಂತುಕನು ಆ ಪತ್ರಿಕೆಯನ್ನೋದಿಕೊಂಡು "ಈಗ ಅವರೆ ರೂ ಒಳಗೆ ಮಾತಾಡುತ್ತಿರುವರಲ್ಲವೆ?" ಎಂದು ಕೇಳಿದನು. ಮುದುಕಿಯು ಮನೆಗೆ ಹಿಂದುಗಡೆಯಲ್ಲಿ ಮತ್ತೊಂದು ಬಾಗಿಲಿರುವುದೆಂದೂ ಅಂಬಾಶಂಕ ರೂ ಅವನ ಸಹಚರರೂ ಆ ಬಾಗಿಲಿಂದ ಹೊರಟುಹೋದರೆಂದೂ ತಿಳಿ ಸಳು ಆಗಂತುಕನು ನಿರುತ್ತರನಾಗಿ ನಿಂತಿದ್ದು "ಮತ್ತೆ ಅವರು ಯಾವಾಗ ರುವರು?" ಎಂದು ಕೇಳಿದನು. ಮುದುಕಿಯು ತನಗೇನೂ ತಿಳಿಯದೆಂದೂ ರಡುತಿಂಗಳು ಮೂರುತಿಂಗಳಿಗೊಂದಾವೃತ್ತಿ ಅವರು ಒಬ್ಬೊಬ್ಬರಾಗಿಯೋ ಟ್ಟಾಗಿಯೋ ಬಂದು ಒಂದೆರಡು ದಿನಗಳು ಅಲ್ಲಿ ಊಟಮಾಡಿಕೊಂಡಿದ್ದು ಹೊರಟುಹೋಗುವಾಗ ತನಗೇನಾದರೂ ಹಣ ಕಾಸುಗಳನ್ನು ಕೊಟ್ಟು ಹೊರಟುಹೋಗುವರೆಂದೂ, ಈಬಾರಿ ಮಾತ್ರ ಅವರು ತನಗೇನನ್ನೂ ಕೊಡ ಲ್ಲವೆಂದೂ ತಿಳಿಸಿದಳು. ಆಗಂತುಕನು ತಾನು ಮಣಿಪುರದಬೀದಿಯ ಇಪ್ಪ ನೆಯ ಸಂಖ್ಯೆಯ ಮನೆಯಲ್ಲಿರುವೆನೆಂದೂ ಮತ್ತೆ ಅವರೇನಾದರೂ ಅಲ್ಲಿಗೆ ದರೆ ತನಗೆ ವರ್ತಮಾನ ತಿಳಿಸಬೇಕೆಂದೂ ಆ ಮುದುಕಿಗೆ ಹೇಳಿ ಅವಳ ಯಲ್ಲಿ ಒಂದು ರೂಪಾಯಿಯನ್ನಿಟ್ಟು ಹೊರಟುಹೋದನು ಮುದುಕಿ ಯು ಕದವನ್ನು ಮುಚ್ಚಿಕೊಂಡಳು. ಆಗಂತುಕನ ಹೆಸರು ಧೀರೇಂದ್ರನೆಂ ಬನನ್ನೂ ಗಿರೀಶಚಂದ್ರನ ಮಗಳನ್ನು ವಿಪತ್ತಿನಿಂದುದ್ಧಾರಮಾಡಿದವನು ವನೇ ಎಂಬುದನ್ನೂ ಪಾಠಕಮಹಾಶಯರು ಪ್ರಸಂಗವಶದಿಂದ ತಿಳಿದೇ

ಇರುವರು. ಇನ್ನು ನಾವು ಅವನನ್ನು ಧೀರೇಂದ್ರನೆಂದೇ ಕರೆಯುವೆವು. ಧೀರೇಂದ್ರನು ಬೀದಿಗೆ ಬಂದೊಡನೆಯೇ ಒಂದು ಕುದುರೆಯ ಬಂಡಿಯು ಇದಿರಾಗಿ ಬರುತ್ತಿದ್ದಿತು ಅವನು ಆ ಬಂಡಿಯವನನ್ನು ಕರೆದು ದೊಡ್ಡ ಅಂಗಡಿಬೀದಿಯಲ್ಲಿರುವ ಗಿರೀಶಚಂದ್ರನ ಮನೆಯ ಕಡೆಗೆ ಬಂಡಿಬಿಡು ವಂತೆ ಅವನಿಗೆ ತಿಳಿಸಿ ಬಂಡಿಯೇರಿ ಹೊರಟುಹೋದನು

ನಾಲ್ಕನೆಯ ಪರಿಚ್ಛೇದ.

"ದೇವಪುರದ ಪ್ರಯಾಣ"

ಅಪರಾಜಿತೆಯು ತನ್ನನ್ನು ಸಾಕಿದ ಕಾಂತಿಮತಿಯನ್ನು ಬಿಟ್ಟು ಅರೆಗಳಿಗೆಯಾದರೂ ಇರುತ್ತಿರಲಿಲ್ಲವೆಂದು ಹಿಂದೆಯೇ ತಿಳಿಸಿರುವೆವಷ್ಟೆ ಪೂರ್ಣಿಮೆಯ ದಿನ ಸಂಧ್ಯಾಕಾಲದಲ್ಲಿ ಕಾಂತಿಮತಿಯು ಶಿವದರ್ಶನಕ್ಕೋ ಸುಗ ದೇವಾಲಯಕ್ಕೆ ಹೋದಳು. ಪ್ರದೋಷಕಾಲವು ಮೀರಿ ಒಂದೆರಡು ಗಳಿಗೆಯಾದರೂ ಅವಳು ಹಿಂತಿರುಗಿ ಬರಲಿಲ್ಲ. ಅಪರಾಜಿತೆಯು ಕಾಂ ಮತಿಯ ಆಗಮನವನ್ನೇ ಇದಿರುನೋಡುತ್ತ ತಲೆಬಾಗಿಲಲ್ಲಿ ಬಂದು ನಿಂ ದ್ದಳು ಯಾವನೋ ಒಬ್ಬ ಬ್ರಾಹ್ಮಣನು ಓಡುತ್ತ ಬಂದು "ಗಿರೀಶಚಂದ್ರ ಮುಖ್ಯೋಪಾಧ್ಯಾಯರ ಮನೆಯು ಇದೇ ಅಲ್ಲವೆ?" ಎಂದು ಕೇಳಿದನು ಅಪರಾಜಿತೆಯು ಅಹುದೆಂದಳು ಬ್ರಾಹ್ಮಣನು "ಅಮ್ಮಾ, ನೀವು ಅವ ಮಗಳೆಂದು ತೋರುವುದು. ನಿಮ್ಮನ್ನು ಸಾಕಿದ ಕಾಂತಿಮತಿಯೆಂ ಸ್ತ್ರೀಯು ದೇವಾಲಯದಿಂದ ಬರುತ್ತಿದ್ದಾಗ ಒಂದು ಭಯಂಕರವಾದ ಹಾ ಅವಳನ್ನು ಕಡಿದ.ಬಿಟ್ಟಿತು ಕಾಂತಿಮತಿಯು ಅಲ್ಲಿಯೇ ಸಂಕಟಪಡು ಬಿದ್ದಿರುವಳು" ಎಂದನು. ಹದಿಮೂರುವರ್ಷದ ಅಜ್ಞಳಾದಾಬಾಲೆಯ ತನ್ನ ಕಾಂತಿಮತಿಗೆ ಸಂಭವಿಸಿದ ವಿಪತ್ತನ್ನು ಕೇಳಿ ದುಃಖಿತಳಾಗಿ ಮ ಮಾತಾಡದೆ ದೇವಾಲಯದಕಡೆಗೆ ಓಡತೊಡಗಿದಳು. ಬ್ರಾಹ್ಮಣನು "ಅಮ್ಮಾ

ಈ ಕಾಲುದಾರಿಯಿಂದ ನಾನು ಕರೆದುಕೊಂಡು ಹೋಗುವೆನು, ಬನ್ನಿ. ಆ ಮಾರ್ಗವಾಗಿ ಹೋದರೆ ಬಹುದೂರವಾಗುವುದು" ಎಂದು ಹೇಳುತ್ತ ಬಂದು ಬದಿಯಕಡೆಗೆ ತಿರುಗಿದನು. ಅಪರಾಜಿತೆಯು ಅವನನ್ನು ಅನುಸರಿಸಿ ಹೊರಟಳು. ಬ್ರಾಹ್ಮಣನು ಎಲ್ಲೆಲ್ಲಿಯೋ ತಿರುಗಿ ನಿರ್ಜನವಾಗಿದ್ದ ಕೃಷ್ಣ ನಗರದ ಮಾರ್ಗದಕಡೆಗೆ ಹೊರಟನು. ಅಪರಾಜಿತೆಯು ಗಾತ್ರನಾದರೂ ಅವನೊಡನೆ ಊರ್ಧ್ವಶ್ವಾಸದಿಂದ ಓಡುತ್ತಿದ್ದಳು. ಅಂಧಕಾರದಿಂದ ಮಾರ್ಗವೇ ತಿಳಿಯದಂತಾಯಿತು. ಮುಂದೆ ಓಡುತ್ತಿದ್ದಾ ಬ್ರಾಹ್ಮಣನು ತಟ್ಟನೆ ನಿಂತು ಬಿಟ್ಟನು. ಅಪರಾಜಿತೆಯು "ಅಯ್ಯಾ, ನಮ್ಮ ಕಾಂತಿಮತಿಯೆಲ್ಲಿ?" ಎಂದು ಆತುರದಿಂದ ಕೇಳಿದಳು. ಆ ಬ್ರಾಹ್ಮಣನು ಗಟ್ಟಿಯಾಗಿ ನಕ್ಕನು. ನಗೆಯಿಂದ ಅಪರಾಜಿತೆಯ ಪ್ರಾಣವಾಯುವು ಹೃದಯಕುಹರವನ್ನು ಬಿಟ್ಟು ಚಲಿಸಲಾರಂಭಿಸಿತು. ಬ್ರಾಹ್ಮಣನು "ಹುಡುಗೀ, ಇನ್ನೇನು! ಕಾಂತಿಮತಿಯು ಬರುವ ವೇಳೆಯಾಯಿತು ಸ್ವಲ್ಪ ನಿಲ್ಲು" ಎಂದು ಹೇಳಿ ಳ್ಳು ಹಾಕಿದನು. ಆ ಅಂಧಕಾರದಲ್ಲಿ ವೃಕ್ಷಶ್ರೇಣಿಯಿಂದ ಪ್ರತಿ ಶಬ್ದವು ಕೇಳಬಂದಿತು. ಕ್ಷಣಮಾತ್ರದಲ್ಲಿ ಮತ್ತೊಬ್ಬ ವ್ಯಕ್ತಿಯು ಅಲ್ಲಿಗೆ ಬರಲು ಅಪರಾಜಿತೆಯು ತಾನು ಕಳ್ಳರ ಕೈಗೆ ಸಿಕ್ಕಿಬಿದ್ದೆನೆಂದು ತಿಳಿದುಕೊಂಡು ಟ್ಟಿಯಾಗಿ ಅರಿಚುತ್ತ ನೆಲದಮೇಲೆ ಬಿದ್ದಳು. ಅಲ್ಲಿಂದ ಮುಂದೆ ನಡೆದುದ ಲ್ಲ ನಮ್ಮ ವಾಚಕಮಹಾಶಯರಿಗೆ ಪೂರ್ವಭಾವಿಯಾಗಿಯೇ ತಿಳಿಸಿರು ವು. ಧೀರೇಂದ್ರನು ಉಪವನದಿಂದ ಬಂದುದನ್ನು ಅರಿತು ಅದಸ್ಯುಗಳು ಲಾಯನಮಾಡಿದರು. ಧೀರೇಂದ್ರನು ಅಪರಾಜಿತೆಯನ್ನು ಅವಳ ಇಷ್ಟಾನು ಸಾರವಾಗಿ ಮನೆಗೆ ಕರೆತಂದು ಗಿರೀಶಚಂದ್ರನ ಬಳಿಯಲ್ಲಿ ಬಿಟ್ಟನು. ಅಪರಾಜಿತೆಗೆ ಸಂಭವಿಸಿದ್ದ ಈ ವಿಪತ್ತಿನ ವಿಷಯವು ಕಾಂತಿಮತಿಗೂ ಗಿರೀ ಶಚಂದ್ರನಿಗೂ ತಿಳಿದೇ ಇರಲಿಲ್ಲ. ಅವರು ಇದನ್ನೆಲ್ಲ ಕೇಳಿ ಆಶ್ಚರ್ಯ ಸಂತೋಷಗಳಿಂದ ಕೂಡಿ ಧೀರೇಂದ್ರನನ್ನು ಬಹಳವಾಗಿ ಕೊಂಡಾಡಿದರು. ಅಪರಾಜಿತೆಯು ನಡೆದ ಸಂಗತಿಯನ್ನೆಲ್ಲ ಗಿರೀಶನೊಡನೆ ತಿಳಿಸಿ ಧೀರೇಂದ್ರ ನಿಗೆ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಸಾಲದೆಂದು ಹೇಳಿದಳು. ಗಿರೀಶನು ತನ್ನ ಏಕಮಾತ್ರ ಪುತ್ರಿಗೆ ಸಂಘಟಿಸುತ್ತಿದ್ದ ಅಪಮೃತ್ಯುವು ನಿವಾರಣೆಯಾದುದಕ್ಕೋಸುಗ ದೇವರನ್ನು ಕೊಂಡಾಡಿ ತನ್ನ ಭಾಗ್ಯದೈವ

ದಂತೆ ಒಂದು ಕಾಪಾಡಿದ ಧೀರೇಂದ್ರನನ್ನು ಆದಿನ ತನ್ನ ಮನೆಯಲ್ಲಿಯೆ ಇದ್ದು ಸತ್ಕಾರ ಹೊಂದಿ ತೆರಳಬೇಕೆಂದು ಪ್ರಾರ್ಥಿಸಿದನು. ಧೀರೇಂದ್ರನ ಅಪರಾಜಿತೆಯು ರೂಪವಿನಯಾದಿಗಳನ್ನು ಕಂಡು ಮುಗ್ಧನಾಗಿ ಗಿರೀಶ ಪ್ರಾರ್ಥನೆಯನ್ನು ನಿರಾಕರಿಸಲಾಗದೆ ಅಲ್ಲಿಯೇ ನಿಂತನು. ಆದಿನ ಧೀರೇಂದ್ರನಿಗೆ ಕಾಂತಿಮತಿಯು ಮಾಡಿದ ಉಪಚಾರವನ್ನು ವಿವರಿಸಲಳವಲ್ಲ ಭೋಜನಾದಿಗಳು ನೆರವೇರಿದ ಬಳಿಕ ಧೀರೇಂದ್ರನು ಗಿರೀಶಚಂದ್ರನೊಡ "ನಿಮಗೆ ಯಾರಾದರೂ ಶತ್ರುಗಳಿರುವರೋ?" ಎಂದು ಕೇಳಿದನು. ಗಿರಿಶನು ಇಲ್ಲವೆಂದನು ಧೀರೇಂದ್ರನು ಅನ್ಯಮನಸ್ಕನಾಗಿ ಕುಳಿತುಬಿಟ್ಟನು ಗಿರೀಶನು ಶತಪಥವನ್ನು ಸಂಚರಿಸುತ್ತಿದ್ದನು. ಆಕಸ್ಮಿಕವಾಗಿ ಅವನ ದೃಷ್ಟಿಯು ಒಂದು ಕಾಗದದಮೇಲೆ ಬಿದ್ದಿತು. ಅವನದನ್ನು ಕೈಗೆ ತೆಗೆದುಕೊಂಡ ಓದತೊಡಗಿದನು. –

"ಗಿರೀಶಚಂದ್ರ, ಅಪರಾಜಿತೆಯನ್ನು ನನಗೆ ಕೊಟ್ಟು ಮದುವೆಮಾಡಲೊಪ್ಪುವೆಯಾದರೆ ಕಮಲಪುರದ ಬೀದಿಯ ಮೂವತ್ತನೆಯ ಸಂಖ್ಯೆಯ ಮನೆಯಲ್ಲಿರುವ ಅಂಬಾಶಂಕರನಿಗೆ ಎಂದು ಪತ್ರವನ್ನು ಬರೆ. ನನಗೆ ಕೈಸೇರುವುದು ಎಂದಿದ್ದಿತು. ಗಿರೀಶನು ಅದನ್ನು ಧೀರೇಂದ್ರನ ಮುಂದೆ ಹಾಕಿದನು. ಧೀರೇಂದ್ರನು ಓದಿ ನೋಡಿಕೊಂಡು "ಮಹಾಶಯ, ಈಗ ನಾನು ಕಾರ್ಯಾಂತರವಿರುವುದರಿಂದ ಹೋಗುವೆನು" ಎಂದನು ಗಿರೀಶನು ಮೂರು ನಾಲ್ಕು ದಿನಗಳು ತನ್ನ ಬಳಿಯಲ್ಲಿಯೇ ಇರಬೇಕೆಂದೂ, ಅಪರಾಜಿತೆಗೆ ಅವನ ವಿಷಯದಲ್ಲಿ ಅತಿಶಯವಾದ ಪ್ರೀತಿಯೂ ಗೌರವವೂ ಉಂಟಾಗಿರುವುದರಿಂ ಅವಳ ಸಮ್ಮತಿಯಿಲ್ಲದ ತಾನು ಧೀರೇಂದ್ರನನ್ನು ಕಳುಹಿಸಲಾಗುವುದಿಲ್ಲವೆಂದೂ ತಿಳಿಸಿದನು. ಧೀರೇಂದ್ರನು ಅವನ ಇಷ್ಟಾನುಸಾರ ಅಲ್ಲಿಯೇ ಇರುವುದಾಗಿ ತಿಳಿಸಿ ತಾತ್ಕಾಲಿಕವಾದ ಒಂದು ಕೆಲಸಕ್ಕೋಸುಗ ಆ ಸ್ಥಳವನ್ನು ಬಿಟ್ಟು ಹೊರಟು ಭೋಜನಶಾಲೆಯ ಬಳಿಗೆ ಬಂದನು. ಅಲ್ಲಿಂದ ಮುಂ ನಡೆದುದನ್ನು ಪಾಠಕ ಮಹಾಶಯರೇ ಪ್ರತ್ಯಕ್ಷವಾಗಿ ಕಂಡಿರುವರಲ್ಲವೆ ಧೀರೇಂದ್ರನು ಅಂಬಾಶಂಕರನೇ ಮೊದಲಾದವರನ್ನು ಕಂಡು ಸಂಶಯದಿಂ ಅವರನ್ನು ಹಿಂಪಟ್ಟಿ ಬಂದು ಅವರು ತಪ್ಪಿಸಿಕೊಂಡು ಹೋದಬಳಿಕ ಮುದುಕಿಯು ಕೊಟ್ಟ ಪತ್ರಿಕೆಯಿಂದಲೂ ಆಡಿದ ಮಾತಿನಿಂದಲೂ ಒಂ

ದು ವಿಷಯಗಳನ್ನು ಗ್ರಹಿಸಿ ಈಗ ಮತ್ತೆ ಗಿರೀಶಚಂದ್ರನ ಮನೆಗೆ ಬಂದ ರೆ ಗಿರೀಶನು ಮನೆಯಲ್ಲಿರಲಿಲ್ಲ. ಕಾಂತಿಮತಿಯು ಗೃಹಕೃತ್ಯಗಳನ್ನು ನೋಡಿಕೊಳ್ಳುತ್ತ ಮನೆಯೊಳಗಿದ್ದಳು ಅಪರಾಜಿತೆಯೊಬ್ಬಳೇ ಕುಳಿತಿ ದ್ದಳು. ಧೀರೇಂದ್ರನು ಬಂದನೆಂಬುವನ್ನು ಅವಳು ಕಾಣಲಿಲ್ಲ ಧೀರೇಂದ್ರನು ಹಿಂದುಗಡೆಯಿಂದ ಹೋಗಿ ಅವಳ ಕಣ್ಣನ್ನು ಮುಚ್ಚಿದನು. ಅಪರಾಜಿತೆಯು ಪ್ರತಿಭಟಿಯಾಗಿ ಕಣ್ಣನ್ನು ಬಿಡಿಸಿಕೊಳ್ಳಲು ಯತ್ನಿಸಿದಳು. ಸಾಧ್ಯವಾಗ ಲ್ಲಿಲ್ಲ. ಅವಳು "ಕಾಂತೀ, ಯಾರು? ಇದೆಂತಹ ಸರಸ?" ಎಂದಳು. ಧೀರೇಂದ್ರನು ಧ್ವನಿಯನ್ನು ಮರೆಯಿಸಿಕೊಂಡು "ಅಪರಾ, ಇದೊಂದು ಹೊಸಬಗೆಯ ಸರಸ" ಎಂದನು. ಅಪರಾಜಿತೆಯು ಸುಮ್ಮನಿದ್ದಳು. ಧೀರೇಂ ದ್ರನು ಕಣ್ಣುಗಳನ್ನು ಬಿಟ್ಟು "ಅಪರಾ, ಸರಸವಾಡಲಾಗದೇನು?" ಎಂದು ಕೇಳಿದನು. ಅಪರಾಜಿತೆಯು ತಲೆಯೆತ್ತಿ ನೋಡಿ ಲಜ್ಜಿತಳಾಗಿ "ಕ್ಷಮಿಸ ಬೇಕು" ನನಗೆ ತಿಳಿಯಲಿಲ್ಲ. ಕಾಂತಿಮತಿಯೇನಾದರೂ ಹೀಗೆ ವಿನೋದ ಮಾಡುತ್ತಿರುವಳೇನೋ ಎಂದು ಭಾವಿಸಿದೆನು" ಎಂದಳು

ಧೀರೇಂದ್ರ—ಅಪರಾ, ಹಾಗಾದರೆ ನಾನು ನಿನ್ನೊಡನೆ ಸರಸವಾಡ ಬಹುದೋ?

ಅಪರಾ—ಆಡಬಹುದು ನನಗದು ಸಮ್ಮತ.

ಧೀರೇಂದ್ರ—ಅದೇಕೆ ಸಮ್ಮತ? ನಾನಾದರೆ ಹೆಚ್ಚೇನು?

ಅಪರಾ—ತಾವು ನನ್ನನ್ನು ವಿಪತ್ತಿನಿಂದ ಉದ್ಧಾರಮಾಡಿರುವಿರಿ. ಈ ದೇಹವು ತಮ್ಮದು. ತಮಗೆ ಸೇರಿದ ವಸ್ತುವನ್ನು ತಮ್ಮ ಇಷ್ಟಾನುಸಾರ ವಾಗಿ ತಾವು ಉಪಯೋಗಿಸಿಕೊಳ್ಳಬಲ್ಲಿರಿ. ಅದನ್ನು ಯಾರೂ ಆಕ್ಷೇಪಿಸ ಲಾರರು.

ಧೀರೇಂದ್ರ—ಅಪರಾ, ನೀನಾಡುವಂತೆಯೇ ನಮ್ಮನಮ್ಮ ಈ ಸಂಬಂ ಧವು ಕ್ಷಣಿಕವಾಗದೆ ಶಾಶ್ವತವಾಗಿದ್ದೀತೆ?

ಅಪರಾ—ಇರಬಾರದೇಕೆ? ಅಡ್ಡಿಮಾಡುವವರುಯಾರು?

ಧೀರೇಂದ್ರ—ಅಪರಾ, ನೀನಿನ್ನೂ ಅವಿವಾಹಿತೆ ನಿಮ್ಮ ತಂದೆಯು ನಿನ್ನನ್ನು ಯಾರಿಗೆ ಕೊಟ್ಟು ವಿವಾಹಮಾಡುವರೋ ತಿಳಿಯದು. ನಿನಗೆ ವಿವಾಹವಾದ ಬಳಿಕ ಸ್ವತ್ವಾಧಿಕಾರಿಯು ಬೇರೊಬ್ಬನಾಗುವನು.

ವಿವಾಹದ ವಿಷಯವನ್ನೆತ್ತಿದ ಕೂಡಲೇ ಅಪರಾಜಿತೆಯ ಮುಖ ಕೆಂಪೇರಿತು. ಅವಳು ಉತ್ತರವಿಲ್ಲದವಳಾಗಿ ಕುಳಿತುಬಿಟ್ಟಳು. ಆ ವೇಳೆ ಗಿರೀಶಚಂದ್ರನೂ ಮನೆಗೆ ಬಂದನು. ಧೀರೇಂದ್ರನು ಏನನ್ನೋ ಆಲೋ ಸುತ್ತ ತನ್ನ ಬಳಿಯಲ್ಲಿದ್ದ ಒಂದು ಕಾಗದವನ್ನು ನೋಡುತ್ತಿದ್ದನು. ಗಿ ಶನು "ಧೀರೇಂದ್ರ ಕುಮಾರ, ನಮ್ಮ ಕುಲದೈವವಾದ ಮೃತ್ಯುಂಜಯ ದರ್ಶನಾರ್ಥವಾಗಿ ದೇವಪುರಕ್ಕೆ ಹೊರಡಬೇಕೆಂದು ನಿಶ್ಚಯಿಸಿರುವೆ ಈದಿನರಾತ್ರಿಯ ಬಂಡಿಯಲ್ಲಿಯೇ ಪ್ರಯಾಣ ಮಾಡಬೇಕೆಂದಿರುವೆ ನೀವೂ ನಮ್ಮೊಡನೆಯೇ ಬಂದರೆ ಮುಖ್ಯವಾಗಿ ನನಗೂ ಅಪರಾಜಿತೆಗ ಬಹು ಸಂತೋಷವಾಗುವುದು" ಎಂದನು ಅಪರಾಜಿತೆಯು ಧೀರೇಂದ್ರ ಉತ್ತರವನ್ನೇ ಇದಿರುನೋಡುತ್ತಿದ್ದಳು. ಧೀರೇಂದ್ರನು ಏನೋ ಆಲೋ ಸುತ್ತಿದ್ದನು ಅಪರಾಜಿತೆಯು ಆತುರಗೊಂಡು "ಧೀರೇಂದ್ರ ಕುಮಾ ನಿಮಗೆ ನಮ್ಮಮೇಲೆ ನಿಜವಾದ ಪ್ರೀತಿಯಿದ್ದರೆ ಹೊರಡುವಿರಿ" ಎಂದಳ ಧೀರೇಂದ್ರನಿಗೆ ಅವಳಾಸರಳೋಕ್ತಿಯನ್ನು ಕೇಳಿ ಬುದ್ಧಿಯೇ ಶೂನ್ಯವಾ ಹೋಯಿತು. ಅವನು ಮರುಮಾತಾಡದೆ ಒಪ್ಪಿಕೊಂಡನು. ಗಿರೀಶ ಪ್ರಯಾಣಕ್ಕೆ ಬೇಕಾಗುವ ಸಾಮಗ್ರಿಗಳನ್ನು ಅಣಿಮಾಡುವಂತೆ ಕಾ ಮತಿಗೆ ತಿಳಿಸಿ ರೆಯಿಲಿನ ಬಳಿಗೆ ಬಂಡಿಯನ್ನು ಗೊತ್ತುಮಾಡುವುದಕೋ ಸುಗ ಒಬ್ಬ ಸೇವಕನನ್ನು ಕಳುಹಿಸಿದನು. ಯಥಾಕಾಲದಲ್ಲಿ ಎಲ್ಲವೂ ಮಾಡಲ್ಪಟ್ಟವು ರಾತ್ರಿ ಹತ್ತುಗಂಟೆಯ ವೇಳೆಗೆ ಗಿರೀಶನು ಅಪರಾಜಿ ಧೀರೇಂದ್ರರೊಡನೆ ಕಾಂತಿಮತಿಯನ್ನು ಕರೆದುಕೊಂಡು ರೆಯಿಲಿನ ನಿಲ್ದಾ ವನ್ನು ಸೇರಿದನು. ಬಂಡಿಗಳು ಪ್ರಯಾಣಿಕರನ್ನು ಕುಳ್ಳಿರಿಸಿಕೊಂ ಹನ್ನೊಂದುಗಂಟೆಗೆ ಸರಿಯಾಗಿ ವಸುದೇವಪುರದಿಂದ ದೇವಪುರದ ಮಾ ವಾಗಿ ಹೊರಟುಬಿಟ್ಟವು

ಐದನೆಯ ಪರಿಚ್ಛೇದ.

"ಮೃತ್ಯುಂಜಯೇಶ್ವರನ ದೇವಾಲಯ"

ಬೆಳಗ್ಗೆ ಏಳುಗಂಟೆಯ ಹೊತ್ತಿಗೆ ಹೊಗೆಬಂಡಿಯು ದೇವಪುರದ ಸ್ಟೇಷನಿನಲ್ಲಿ ನಿಂತಿತು ಗಿರೀಶನೂ ಧೀರೇಂದ್ರನೂ ಸ್ತ್ರೀಯರನ್ನು ಕೆಳಕ್ಕಿಳಿಸಿ ಸೇವಕರಿಂದ ಸಾಮಗ್ರಿಗಳನ್ನು ಹೊರಿಸಿಕೊಂಡು ಪಾದಚಾರಿಗಳಾಗಿ ಸ್ಟೇಷನನ್ನು ಬಿಟ್ಟುಹೊರಟರು. ಸ್ವಲ್ಪದೂರ ಹೋಗುವುದರೊಳಗಾಗಿ ಜವಾನನೊಬ್ಬನು ಓಡಿಬಂದು ಕೃಷ್ಣನಗರದ ಧೀರೇಂದ್ರ ಕುಮಾರರೆಂಬವರು ಯಾವಾದಿಗಳಾರು? ಎಂದು ಕೇಳಿದನು. ಧೀರೇಂದ್ರನು ತಾನೇ ಎಂದು ಹೇಳಲು ಅವನೊಂದು ಪತ್ರಿಕೆಯನ್ನು ಅವನ ಕೈಗಿತ್ತು ಹೊರಟುಹೋದನು. ಧೀರೇಂದ್ರನದನ್ನೊಡೆದು ನೋಡಿಕೊಂಡನು. ತರುವಾಯ ಯಾವ ಮಾತನ್ನೂ ಆಡದೆ ಅಪರಾಜಿತೆಯ ಮುಖವನ್ನೇ ದೃಷ್ಟಿಸುತ್ತ ಏನೋ ಆಲೋಚಿಸುತ್ತಿದ್ದನು. ಗಿರೀಶಚಂದ್ರನು ಇದೊಂದನ್ನೂ ಲಕ್ಷಿಸದೆ ಬಂದು ಕುದುರೆ ಬಂಡಿಯನ್ನು ನಿಷ್ಕರ್ಷೆಮಾಡಿ ಪದಾರ್ಥಗಳನ್ನೆಲ್ಲ ಅದರಲ್ಲಿ ತುಂಬಿಸಿ ಸ್ತ್ರೀಯರನ್ನೂ ಬಂಡಿಯಲ್ಲಿ ಕುಳ್ಳಿರಿಸಿ ತಾನೂ ಧೀರೇಂದ್ರನೂ ಮತ್ತೊಂದು ಬಂಡಿಯಲ್ಲಿ ಕುಳಿತುಕೊಳ್ಳುವಂತೆ ಏರ್ಪಡಿಸಿದನು ಇಬ್ಬರೂ ಬಂಡಿಯನ್ನೇರಿದರು. ಎರಡುಬಂಡಿಗಳೂ ಸ್ಟೇಷನಿನ ಕಡೆಯಿಂದ ನಗರಾಭಿಮುಖವಾಗಿ ಹೊರಟುವು. ಗಿರೀಶಚಂದ್ರನಿಗೆ ದೇವಪುರದಲ್ಲಿ ಚಿರಪರಿಚಿತನಾದ ಒಬ್ಬ ಬ್ರಾಹ್ಮಣನು ಪುರೋಹಿತನಾಗಿದ್ದನು ಅವನ ಹೆಸರು ಚಂದ್ರಶೇಖರ ತರ್ಕಾಲಂಕಾರ. ಅವನಿಗೆ ಮನೆತಪ್ಪಿದ ಒಬ್ಬ ಹೆಣ್ಣುಮಗಳೂ ಒಬ್ಬ ಮಡದಿಯೂ ಇದ್ದರು. ಬಂಡಿಗಳೆರಡೂ ಅವರ ಮನೆಯಬಾಗಿಲಿಗೆ ಬಂದುನಿಂತವು. ಚಂದ್ರಶೇಖರನ ಮಗಳಹೆಸರು ತಾರಾಮತಿ. ತಾರಾಮತಿಯು ಈ ಬಂಡಿಗಳೆರಡನ್ನೂ ನೋಡಿ ಪರಸ್ಥಳದವರಾರೋ ಬಂದಿರುವರೆಂದು ತಮ್ಮ ತಾಯಿಗೆ ತಿಳಿಸಿದಳು. ತಾಯ್ಮಕ್ಕಳಿಬ್ಬರೂ ಬೀದಿಗೆ ಬಂದು ನಿಂತರು. ಪುರೋಹಿತನ ಪತ್ನಿಯು ಗಿರೀಶಚಂದ್ರನನ್ನು ಆಗಾಗ ನೋಡಿದ್ದವಳಾದುದರಿಂದಲೂ ವಸು ದೇವಪುರದಿಂದ ಯಾರೋ ಬರುವರೆಂದು ತಂತಿಯವಾರ್ತೆಯೊಂದು ಮುಂದಾಗಲೇ ಬಂದಿದ್ದುದರಿಂದಲೂ ಅವಳು ದೇವೀಪೂಜೆಯನ್ನು ಮಾಡುತ್ತ ಕುಳಿ

ತಿದ್ದ ಚಂದ್ರಶೇಖರನ ಬಳಿಗೆ ಹೋಗಿ ಗಿರೀಶಚಂದ್ರನು ಸಪರಿವಾರನಾಗಿ ಬ
ರುವನೆಂದು ತಿಳಿಸಿದಳು. ಚಂದ್ರಶೇಖರನು ಅಂದಿನ ಪೂಜೆಯನ್ನು ಅಷ್ಟ
ಮುಗಿಸಿ ಹೊರಕ್ಕೆ ಬಂದನು. ಗಿರೀಶನೂ ಧೀರೇಂದ್ರನೂ ಅಷ್ಟು ಹೊ
ನೊಳಗಾಗಿ ಬಂಡಿಯಲ್ಲಿದ್ದ ಪದಾರ್ಥಗಳನ್ನೆಲ್ಲ ಕೆಳಕ್ಕಿಳಿಸಿ ಮನೆಯೊಳ
ಸಾಗಿಸಿದ್ದರು. ಚಂದ್ರಶೇಖರತರ್ಕಾಲಂಕಾರನು ಗಿರೀಶನನ್ನೂ ಅಪರಾ
ಯನ್ನೂ ಕುಶಲಪ್ರಶ್ನೆಮಾಡಿ ಅವರನ್ನೆಲ್ಲ ಒಳಕ್ಕೆ ಕರೆದುಕೊಂ
ಹೋಗಿ ಅತ್ಯಾದರದಿಂದ ಸತ್ಕರಿಸಿದನು. ಸ್ನಾನಾದಿಕರ್ಮಗಳನ್ನು ನೆರವೆ
ಸಿದ ಬಳಿಕ ಗಿರೀಶನು ದೇವತಾಸಂದರ್ಶನಕ್ಕೋಸುಗ ಎಲ್ಲರನ್ನೂ ಕರೆ
ಕೊಂಡು ಹೊರಟನು. ಚಂದ್ರಶೇಖರನೂ ಅವನ ಹೆಂಡತಿಮಕ್ಕಳ
ಪೂಜಾಸಾಮಗ್ರಿಗಳನ್ನು ತಟ್ಟೆಗಳಲ್ಲಿ ಅಣಿಮಾಡಿಕೊಂಡು ಅವರ ಸ
ಡಲೇ ಹೊರಟರು. ಧೀರೇಂದ್ರನೊಬ್ಬನೇ ಈ ಗುಂಪನ್ನು ಬಿಟ್ಟು ಬೇರೆಯ
ಬರುತ್ತಿದ್ದನು. ಕಾಂತಿಮತಿಯೂ ಪುರೋಹಿತನ ಪತ್ನಿಯೂ ಕಾಲಾ
ಗುಣ್ಯವಾದ ಮಾತುಗಳನ್ನಾಡಿಕೊಂಡು ಬರುತ್ತಿದ್ದರು. ಅವರ ಮುಂದು
ಗಿರೀಶನೂ ಪುರೋಹಿತನೂ ಮಾತನಾಡಿಕೊಂಡು ಬರುತ್ತಿದ್ದರು. ಪುರೋ
ಹಿತನ ಮಗಳು ಒಂದೊಂದುಬಾರಿ ತಾಯಿಯ ಸಂಗಡವೂ ಒಂದೊಂದುಬ
ತಂದೆಯ ಸಂಗಡವೂ ಸೇರಿಕೊಳ್ಳುತ್ತ ಇಬ್ಬರ ಮಾತುಗಳಿಗೂ ಲಕ್ಷ್ಯ
ಟ್ಟುಕೊಂಡು ಹೋಗುತ್ತಿದ್ದಳು. ಅಪರಾಜಿತೆಯನ್ನು ಯಾರೂ ಮಾತನಾ
ಸಲಿಲ್ಲ. ಅವಳು ಸ್ವಲ್ಪದೂರ ಒಬ್ಬಳೇ ನಡೆದುಬಂದು ಕಡೆಗೆ ಧೀರೇಂದ್ರ
ಜತೆಯನ್ನು ಸೇರಿಕೊಂಡಳು. ಧೀರೇಂದ್ರನು "ಅಪರಾ, ನಿಮ್ಮ ತಂದೆ
ವರು ಇಲ್ಲಿ ಮೂರುನಾಲ್ಕು ದಿನಗಳಿರಬಹುದೇನೋ?" ಎಂದನು. ಅ
ರಾಜಿತೆಯು "ಇದ್ದಾರೆಂದು ತೋರುವುದು. ತಾವು ಪ್ರಶ್ನೆಮಾಡಲಿಲ್ಲವೆ
ಎಂದಳು. ಧೀರೇಂದ್ರನು "ನಾನು ಕೇಳಲಿಲ್ಲ. ದೇವಪುರಕ್ಕೆ ಅವರು ಬಂ
ಗಲೆಲ್ಲ ಎಷ್ಟು ದಿನಗಳಿರುವ ಪದ್ಧತಿ?" ಎಂದು ಕೇಳಿದನು. ಅಪರಾ
ತೆಯು "ಅವರು ಬಂದುವಾರದವರೆಗೂ ಇರುವ ಪದ್ಧತಿಯುಂಟು. ಈಬಾ
ಏನುಮಾಡುವರೋ ತಿಳಿಯದು. ಇಲ್ಲಿ ಮೃತ್ಯುಂಜಯೇಶ್ವರನ ಸೇವೆಯ
ಭಕ್ತಾದಿಗಳ ಸಂದರ್ಶನವೂ ಬಹು ಸಂತೋಷಕರಗಳಾಗಿರುವುವು. ಬಹು
ದೂರದಿಂದ ಹಲವುಮಂದಿ ಯಾತ್ರಿಕರು ಇಲ್ಲಿಗೆ ಬಂದು ದೇವತಾಪ್ರಾರ್ಥ

ನ್ನು ಸಲ್ಲಿಸಿಹೋಗುವರು. ಭಕ್ತಾದಿಗಳು ಈ ದೇವತಾಸನ್ನಿಧಿಯಲ್ಲಿ
ವ ಮನೋರಥವನ್ನು ಪ್ರಾರ್ಥಿಸಿಕೊಂಡರೂ ಅದು ಕ್ಷಿಪ್ರದಲ್ಲಿಯೇ
ಡುವುದು'' ಎಂದಳು. ಧೀರೇಂದ್ರನು ನಗುತ್ತ " ಅಪರಾ, ಹಾಗಾ
ಈಗ ದೇವತಾಸನ್ನಿಧಿಯಲ್ಲಿ ನೀನು ಪ್ರಾರ್ಥಿಸಿಕೊಳ್ಳುವುದೇನಾದರೂ
ವುದೋ ? '' ಎಂದನು. ಅಪರಾಜಿತೆಯು " ನನಗಾವಬಯ್ಕೆಯೂ
" ಎಂದಳು. ಧೀರೇಂದ್ರನು "ಅಪರಾ, ನನ್ನ ಬಯ್ಕೆಯೊಂದಿರುವುದು
ನ್ನು ಮೃತ್ಯುಂಜಯೇಶ್ವರನು ಕೈಗೂಡಿಸಿದರೆ ನೀನು ಹೇಳಿದಮಾತು
ಯವೆಂದು ನಂಬುವೆನು'' ಎಂದನು. ಅಪರಾಜಿತೆಯು "ನೀವು ದೇವತಾ
ಧಿಯಲ್ಲಿ ನಿಮ್ಮ ಪ್ರಾರ್ಥನೆಯನ್ನು ಒಪ್ಪಿಸಿರಿ. ನಿಸ್ಸಂದೇಹವಾಗಿ
ಕೈಗೂಡುವುದು. ನಮ್ಮೂರಿನವರನೇಕರು ತಮ್ಮ ಇಷ್ಟಾರ್ಥಗಳನ್ನು
ದುಕೊಂಡಿರುವುದನ್ನು ನಾನೇ ಕಣ್ಣಾರೆನೋಡಿರುವೆನು" ಎಂದಳು.
ರೇಂದ್ರನು ಪ್ರತ್ಯಕ್ಷವಾಗಿ ಕಾಣುವುದಕ್ಕೆ ಸಾಕ್ಷಿಯೇಕೆ? ನೋಡೋಣ"
ದನು. ಅಪರಾಜಿತೆಯು "ಮಹಾಶಯ, ತಮ್ಮ ಮನೋರಥವಾವುದೋ
ನ್ನು ನನಗೂ ಸ್ವಲ್ಪ ತಿಳಿಸುವಿರಾ?" ಎಂದು ಕೇಳಿದಳು. ಧೀರೇಂದ್ರನು
ಪ್ಪಹೊತ್ತು ಸುಮ್ಮನಿದ್ದು " ಅಪರಾ, ನಾನು ಬಾಯಿಬಿಟ್ಟು ತಿಳಿಸ
ಕೇ? ನೀನೇ ಊಹಿಸಲಾರೆಯಾ ? " ಎಂದು ಕೇಳಿದನು. ಅಪರಾಜಿತೆಗೆ
ೋಚನೆಗಿಟ್ಟಿತು. ಅವಳು ಸ್ವಲ್ಪಹೊತ್ತು ಸುಮ್ಮನಿದ್ದು "ನನಗೇನೂ
ರುವುದಿಲ್ಲ. ತಾವೇ ತಿಳಿಸಬೇಕು" ಎಂದಳು. ಧೀರೇಂದ್ರನು ನಗುತ್ತ
ನೇ ತಿಳಿಸಬೇಕಾದರೆ ಅದನ್ನಿಲ್ಲಿ ತಿಳಿಸಲಾರೆನು. ದೇವತಾಸಾನ್ನಿಧ್ಯದಲ್ಲಿ
ಮಾಡಿಕೊಂಡ ಬಳಿಕ ತಿಳಿಸುವೆನು" ಎಂದನು. ಎಲ್ಲರೂ ದೇವಾಲಯದ
ಗೆ ಬಂದರು. ಭಕ್ತಾದಿಗಳು ಭಗವನ್ನಾಮಗಳನ್ನು ಪಠಿಸುತ್ತ ದೇವಾ
ಯವನ್ನು ಪ್ರದಕ್ಷಿಣೆ ಮಾಡುತ್ತಿದ್ದರು. ಜನಸಂಮರ್ದವು ಬಹಳವಾಗಿ
ು. ಹಲವುಮಂದಿ ಭಿಕ್ಷುಕರು ಭಗವನ್ನಾಮಗಳನ್ನು ಉಚ್ಚರಿಸುತ್ತ
ಾದಿಗಳಿಂದ ಹಣಕಾಸುಗಳನ್ನು ಯಾಚಿಸಿ ತೆಗೆದುಕೊಳ್ಳುತ್ತ ಆಗಾಗ—
ಕವು ಅಸ್ಥಿರವೆಂದೂ, ಈಗ ಕೊಟ್ಟುದು ಪ್ರಾಣಿಯ ಜತೆಯಲ್ಲಿ
ಲೋಕಕ್ಕೆ ಬರುವುದಲ್ಲದೆ ಅವಿಸಿಟ್ಟುದು ಅಲ್ಲಿಯೇ ಅದೃಶ್ಯವಾಗುವು
ದೂ, ಇಂದೋ ನಾಳೆಯೋ ಸಾಯುವ ಬಾಳಿಗೆ 'ಇಲ್ಲ' ಎಂದು ಹೇಳಬಾ

ರದೆಂದೂ ವೈರಾಗ್ಯೋಪದೇಶವನ್ನು ಮಾಡುತ್ತ ತಂತಮ್ಮ ಉದರಪೋಷಣೋಪಾಯವನ್ನು ನೋಡಿಕೊಳ್ಳುತ್ತಿದ್ದರು. ಗಿರೀಶನು ಪುರೋಹಿತನೊಡನೆ ಗರ್ಭಾಂಕಣವನ್ನು ಪ್ರವೇಶಿಸಿದನು. ಅವನ ಮಗಳೂ ಪರಿವಾರವೂ ಅವನ ಹಿಂದೆ ನಿಂತು ದೇವತಾಸಂದರ್ಶನವನ್ನು ಮಾಡಿದರು. ಭಗವಂತನಾದ ಮೃತ್ಯುಂಜಯೇಶ್ವರನು ತ್ರಿಶೂಲಧಾರಿಯಾಗಿ ಮಾರ್ಕಂಡೇಯನಿಗೆ ಅಭಯಹಸ್ತವನ್ನಿತ್ತು ವೈವಸ್ವತನನ್ನು ಮೆಟ್ಟಿ ನಿಂತಿದ್ದನು. ಅವನ ವ್ಯಾಪಾರವು ಭಯಂಕರವಾಗಿದ್ದರೂ ಮುಖವು ಅತಿಸೌಮ್ಯವಾಗಿ ಭಕ್ತರ ಹೃದಯಕಮಲಗಳನ್ನು ವಿಕಸನಮಾಡುತ್ತಿದ್ದಿತು. ಭಗವಂತನಾದ ಮೃತ್ಯುಂಜಯೇಶ್ವರನ ಉತ್ತಮಾಂಗದಲ್ಲಿ ದೇವತರಂಗಿಣಿಯಾದ ಗಂಗೆಯು ಕಿಲಕಿಲನೆ ನಗುತ್ತ ತಲೆದೋರುತ್ತಿದ್ದಳು. ಅಪರಾಜಿತೆಯು ದೇವಮೂರ್ತಿಯನ್ನು ಭಕ್ತಿಭಾವದಿಂದ ವಂದಿಸಿ ಮನದಣಿಯೆ ಸ್ತೋತ್ರಮಾಡಿದಳು. ದೇವನೀರಾಜನವಾದ ಬಳಿಕ ಅಪರಾಜಿತೆಯು ಧೀರೇಂದ್ರನ ಕಡೆಗೆ ತಿರುಗಿ "ಮಹಾಶಯ, ದೇವಮೂರ್ತಿಯು ಎಷ್ಟು ಮನೋಹರವಾಗಿರುವುದು! ನೋಡಿದಿರಾ? ಈ ಮೂರ್ತಿಯನ್ನು ಎಷ್ಟು ಹೊತ್ತು ನೋಡುತ್ತ ನಿಂತಿದ್ದರೂ ಮನಸಿಗೆ ತೃಪ್ತಿಯಾಗುವುದೇ ಇಲ್ಲ" ಎಂದಳು. ಧೀರೇಂದ್ರನು "ಅಪರಾ, ಮೃತ್ಯುಂಜಯೇಶ್ವರನಿಗೂ ಸಂಸಾರದ ಆಸೆಯು ತಪ್ಪಲಿಲ್ಲವಲ್ಲವೆ?" ಎಂದನು. ಅಪರಾಜಿತೆಯು "ಅದು ಹೇಗೆ?" ಎಂದಳು. ಧೀರೇಂದ್ರನು "ಕಾಣದಿಲ್ಲವೆ? ಅದೊ, ನೋಡು. ನೀಲಾಂಬುದದ ನಡುವೆ ತೊಳತೊಳಗುವ ಮಿಂಚಿನಂತೆ ಜಟಾಮಂಡಲ ಮಧ್ಯದಲ್ಲಿ ಮೆರೆಯುತ್ತಿರುವ ಮಂದಾಕಿನಿಯು ಎಷ್ಟು ಮನೋಹರವಾಗಿ ಕಾಣಿಸುತ್ತಿರುವಳು. ಭಗವಂತನಿಗೂ ಕುಟುಂಬಸಂರಕ್ಷಣೆಯ ಭಾರವು ತಲೆಯಮೇಲೆಯೇ ಬಿದ್ದಿರುವುದಲ್ಲಾ!" ಎಂದನು. ಅಪರಾಜಿತೆಯು ನಗುತ್ತ "ಅದಿರಲಿ, ತಾವು ದೇವತಾ ಸನ್ನಿಧಿಯಲ್ಲಿ ಏನನ್ನೋ ಪ್ರಾರ್ಥಿಸಿಕೊಳ್ಳಬೇಕೆಂದಿದ್ದಿರಲ್ಲವೆ? ಈಗ ಸಕಾಲವಾಗಿರುವುದು. ಮರೆಯದೆ ಪ್ರಾರ್ಥಿಸಿಕೊಳ್ಳೋಣವಾಗಲಿ" ಎಂದಳು. ಧೀರೇಂದ್ರನು "ಅಪರಾ, ದೇವತಾಸಂದರ್ಶನಕ್ಕಿಂತ ಮೊದಲೇ ನಾನು ಪ್ರಾರ್ಥಿಸಿಕೊಂಡುದಾಯ್ತು. ವರವು ಮಾತ್ರ ದೊರೆಯಲಿಲ್ಲ" ಎಂದನು. ಅಪರಾಜಿತೆಯು "ಮಹಾಶಯ, ತಾವು ಆ ಸಂದೇಹವನ್ನೇ ಬಿಟ್ಟುಬಿಡಬೇ

ೃತ್ಯುಂಜಯೇಶ್ವರನು ವರಪ್ರದಾನವಮಾಡಿದನೆಂದೇ ನಂಬಿರಿ. ಈಗ ಅಪ್ಪಣೆ
ಗಲಿ. ತಮ್ಮ ಮನೋರಥವೇನು?" ಎಂದು ಕೇಳಿದಳು. ಧೀರೇಂದ್ರನು
ಅಪರಾ, ನಾನಿನ್ನೂ ಅವಿವಾಹಿತನೆಂಬುದನ್ನು ನೀನು ಬಲ್ಲೆಯಲ್ಲವೆ? ಅವಿ
ಾಹಿತನಾದವನಿಗೆ ಬಯ್ಕೆಯಾವುದಿರಬಹುದು ? ನೀನರಿಯೆಯೋ ? ಅನು
ೂಪಳೂ ಉತ್ತಮವಂಶೀಯಳೂ ಸೌಂದರ್ಯವತಿಯೂ ಆದ ಮಡದಿ
ುನ್ನು ಅನುಗ್ರಹಿಸಬೇಕೆಂದೇ ಈಶ್ವರನಲ್ಲಿ ನನ್ನ ಪ್ರಾರ್ಥನೆ ಆದರೆ
ಪ್ರಾರ್ಥನೆಯು ನೆರವೇರುವುದು ಎಷ್ಟುಮಟ್ಟಿಗೋ ?" ಎಂದನು. ಅಪ
ಾಜಿತೆಯು ಅಪ್ರತಿಭಳಾಗಿ ನಿಂತುಬಿಟ್ಟಳು. ಧೀರೇಂದ್ರನು "ಅಪರಾ,
ಂತಹ ಕನ್ಯೆಯು ನಿನ್ನನ್ನು ಬಿಟ್ಟರೆ ಈಲೋಕದಲ್ಲಿ ಮತ್ತೆಲ್ಲಿಯೂ ಇಲ್ಲ
ೇ ಇಲ್ಲ. ಮೃತ್ಯುಂಜಯೇಶ್ವರನು ನಿನ್ನನ್ನೇ ನನಗೆ ಅರ್ಧಾಂಗಿಯನ್ನಾಗಿ
ಾಡಿದರೆ ನೀನು ಹೇಳಿದ ಮಹತ್ವವು ನಿಶ್ಚಯವಾಗುವುದು. ಇಲ್ಲವಾ
ರೆ ಏನೋ-ನೀನೇ ಹೇಳು. ನನಗೆ ತೋರುವುದಿಲ್ಲ" ಎಂದನು. ಅಪರಾಜಿ
ಯು ನಿರುತ್ತರಳಾಗಿ ನಿಂತಿದ್ದಳು. ಧೀರೇಂದ್ರನು ಉತ್ಸುಕನಾಗಿ "ಏನು?
ೃತ್ಯುಂಜಯೇಶ್ವರನ ಮಹತ್ವವು ಸುಳ್ಳೇ?" ಎಂದು ಕೇಳಿದನು. ಅಪ
ಾಜಿತೆಯು "ಎಂದಿಗೂ ಸುಳ್ಳಾಗುವುದಿಲ್ಲ." ಎಂದಳು. ಚಂದ್ರಶೇಖರ
ರ್ಣಾಲಂಕಾರನ ಮಗಳು ಇವರಿವರ ಸಂಭಾಷಣೆಯನ್ನು ಸ್ವಲ್ಪಮಟ್ಟಿಗೆ
ೇಳಿದಳು. ಗಿರೀಶಚಂದ್ರನು ಮಗಳ ಕಡೆಗೆ ತಿರುಗೀ "ಅಪರಾ, ದೇವತಾ
ದರ್ಶನವಾಯಿತಲ್ಲವೆ? ಇನ್ನು ನಡೆ, ಹೋಗೋಣ." ಎಂದು ಎಲ್ಲ
ಡನೆಯೂ ಹಿಂತಿರುಗಿದನು. ದೇವಾಲಯದ ಬಾಗಿಲಿಗೆ ಬರಲು ಅವನ
ಷ್ಟಿಯು ಜನಸಮುದಾಯದಲ್ಲಿದ್ದ ಒಂದು ವ್ಯಕ್ತಿಯಮೇಲೆ ಬಿದ್ದಿತು.
ೀಶನು "ಇವನಿಲ್ಲಿಗೇಕೆ ಬಂದನು?" ಎಂದುಕೊಂಡನು. ಧೀರೇಂ
ನು ಇದಾವುದನ್ನೂ ಗಮನಿಸಲಿಲ್ಲ. ಅವನ ಮನಸ್ಸಿನಲ್ಲಿ ಅಪರಾಜಿ
ಮಾಡಿದ ಮುಗ್ಧವಚನಗಳು ನಾಟಿಹೋಗಿದ್ದುವು. ಎಲ್ಲರೂ ಯಥಾಕಾ
ಲ್ಲಿ ಮನೆಯನ್ನು ಸೇರಿದರು. ಪುರೋಹಿತನಪತ್ನಿಯು ಎಲ್ಲರಿಗೂ ಉಪ
ರಗಳನ್ನು ಹೇಳಿ ಊಟಕ್ಕೆ ಬಡಿಸಿದಳು. ಭೋಜನಾನಂತರ ಗಿರೀಶ
ಂದ್ರನೂ ಧೀರೇಂದ್ರನೂ ಮಾತನಾಡುತ್ತ ಕುಳಿತರು ಧೀರೇಂದ್ರನು
ನಗರದಿಂದ ತನಗೆ ಬಂದಿದ್ದ ಕಾಗದವನ್ನು ತೆಗೆದು ತೋರಿಸಿ "ಮಹಾ

ಶಯ, ನನ್ನ ಮಿತ್ರನೊಬ್ಬನು ಕೃಷ್ಣನಗರದಲ್ಲಿ ಮುಮೂರ್ಷವಾಗಿ ಬಿದ್ದಿರುವನು. ಅವನ ಅಪಾರವಾದ ಐಶ್ವರ್ಯಕ್ಕೆ ಸಮೀಪಬಂಧುವಾದ ಬಾಲೆಯೊಬ್ಬಳಲ್ಲದೆ ಮತ್ತಾರೂ ಇಲ್ಲ. ಈಗ ಆತನು ಮೃತಿಪತ್ರವನ್ನು ಬಯಿಸುವುದಕ್ಕೋಸುಗ ನನಗೆ ವರ್ತಮಾನವನ್ನು ಕಳುಹಿರುವನು. ಅದಕಾರಣ ನಾನು ಈ ರಾತ್ರಿಯೇ ಕೃಷ್ಣನಗರಕ್ಕೆ ಪ್ರಯಾಣಮಾಡಬೇಕಾರುವುದು. ಅಲ್ಲಿಯ ಕಾರ್ಯಗೌರವವನ್ನನುಸರಿಸಿ ನಿಲ್ಲಬೇಕಾಗುವುದು. ಎಂದನು. ಗಿರೀಶಚಂದ್ರನು "ಮಹಾಶಯ, ತಮ್ಮನ್ನು ಇಷ್ಟುಜಾಗ್ರತೆಯಾ ಅಗಲುವುದಕ್ಕೆ ನನಗೆ ಮನಸ್ಸಿಲ್ಲ. ತಮ್ಮ ಮಿತ್ರನಿಗೆ ಉಂಟಾಗಿರುವ ವಿಪತ್ತನ್ನು ಕೇಳಿಯೂ ತಮ್ಮನ್ನು ತಡೆಯುವುದು ಉಚಿತವಲ್ಲವಾದುದರಿಂ ಸುಮ್ಮನಾಗಬೇಕಾಯಿತು. ನಾವೂ ಮೂರು ನಾಲ್ಕು ದಿನಗಳೊಳಗಾ ವಸುದೇವಪುರಕ್ಕೆ ಹೊರಟುಬರುವೆವು. ತಾವು ಅಲ್ಲಿಗೆ ಬಂದಾಗಲೆಲ್ಲ ನಮ್ಮ ಮನೆಗೆ ಬಂದು ಹೋಗಬೇಕು." ಎಂದನು. ಧೀರೇಂದ್ರನ "ಮಹಾಶಯ, ಅಪರಾಜಿತೆಯನ್ನು ವಿವಾಹಮಾಡಿಕೊಳ್ಳಲಪೇಕ್ಷಿ ತಮ್ಮಲ್ಲಿಗೆ ಬಂದಿದ್ದ ಅಂಬಾಶಂಕರನ ವಿಷಯದಲ್ಲಿ ತಾವು ಬಹುಜಾರೂಕರಾಗಿರಬೇಕು. ಅವನಿಂದ ಅನಿಷ್ಟಘಟನೆಯಾಗುವ ಸಂಭವವುಂಟು ಸಾಧ್ಯವಾದರೆ ಅಪರೆಯ ಮದುವೆಯನ್ನು ಜಾಗ್ರತೆಯಾಗಿ ನೆರವೇರಿಸುವುದೊಳ್ಳೆಯದು." ಎಂದನು ಗಿರೀಶನ ಮುಖವು ವಿವರ್ಣವಾಯಿತು. ಅಂಬಶಂಕರನೆಂಬ ಹೆಸರು ಕಿವಿಗೆ ಸೋಕಿದೊಡನೆಯೇ ಅವನ ಕೈಕಾಲುಗಳ ನಡುಗಿದುವು. ನಾಲಗೆಯು ದ್ರವಹೀನವಾಯಿತು. ಬಾಯಿಂದ ಮಾತ ಹೊರಡದಂತಾಗಲು ಅವನು "ಧೀರೇಂದ್ರಕುಮಾರ," ಎಂದು ಕೂ ಏನನ್ನೂ ಹೇಳದೆ ಸುಮ್ಮನಿದ್ದನು. ಧೀರೇಂದ್ರನು "ಮಹಾಶಯ, ಇನ ನಾನು ಹೊರಡುವೆನು." ಎನಲು, ಗಿರೀಶನು ಸ್ವಲ್ಪ ಚೇತನಿಸಿಕೊಂ "ತಾವು ಹೊರಡುವುದು ನನಗೆ ಇಷ್ಟವಾಗಿಲ್ಲ. ತಾವು ತಿಳಿಸಿದ ಮನುಷ್ಯನು ಒಂದೆರಡಾವೃತ್ತಿ ನನ್ನ ಬಳಿಗೆ ಬಂದು ಮನೆಯನ್ನು ಕ್ರಯಕ್ಕೆ ಕೇಳೆಂದೂ, ಮಗಳನ್ನು ಕೊಟ್ಟು ಮದುವೆಮಾಡೆಂದೂ, ಬಹಳವಾಗಿ ಪೀಡಿ ನನಗೆ ಭಯೋತ್ಪಾದನೆಯನ್ನು ಮಾಡಿಹೋದನು. ಕೆಲವು ನಡವಳಿಕೆಳನ್ನು ನೋಡಿದರೆ ಆದಿನ ನಮ್ಮ ಅಪರಾಜಿತೆಗೆ ಸಂಭವಿಸಿದ್ದ ವಿಪತ್ತಿಗ

ವನೇ ಕಾರಣನಾಗಿರಬಹುದೆಂದು ತೋರುವುದು. ಈದಿನವೂ ದೇವಾಲಯ
ಂದ ಬರುವಾಗ ಅವನಂತೆಯೇ ಇದ್ದ ಒಬ್ಬನನ್ನು ಕಂಡೆನು. ಅವನಿಲ್ಲಿಗೇಕೆ
ಂದಿರುವನೆಂದು ಭಯವುಂಟಾಯಿತು. ತಾವೂ ಈಗ ಹೊರಟುಹೋಗಿಬಿ
ರೆ ಈ ಪರಸ್ಥಳದಲ್ಲಿ ನಿಲ್ಲುವುದು ಹೇಗೆಂದು ಅಂಜುತ್ತಿರುವೆನು.'' ಎಂದ
ಧೀರೇಂದ್ರನು "ಮಹಾಶಯ, ಅಷ್ಟು ಭಯಪಡಬೇಕಾದವಶ್ಯಕವೇನೂ
ಲ್ಲ. ಧೈರ್ಯವನ್ನವಲಂಬಿಸಿರಿ ಅಪರಾಜಿತೆಯು ನಿದ್ರಿಸುತ್ತಿರುವಳೇ
ೀ? ನಾನು ಹೋಗಿಬರುವೆನು. ಅವಳನ್ನು ಕಂಡು ಮಾತನಾಡಲಾಗಲಿಲ್ಲ"
ಂದನು. ಗಿರೀಶನು "ಧೀರೇಂದ್ರಕುಮಾರ, ನನಗೆ ಮತ್ತೊಂದು ಚಿಂತೆ
ುಂಟಾಗಿರುವುದು. ನಾನು ಬೇರೊಬ್ಬರಿಗೆ ವಾಗ್ದಾನಮಾಡದಿದ್ದ ಪಕ್ಷದಲ್ಲಿ
ವು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಅಪರಾಜಿತೆಯನ್ನು ತಮ್ಮ
ರ್ಧಾಂಗಿಯನ್ನಾಗಿಯೇ ಮಾಡಬಹುದಾಗಿದ್ದಿತು. ಈಗ ಉಪಾಯಾಂತರ
ಲ್ಲವಾಗಿರುವುದು. ಅವಳೇನೋ ತಮ್ಮಲ್ಲಿಯೇ ಅನುರಕ್ತೆಯಾಗಿರುವ
ದು ಈದಿನ ದೇವಾಲಯಕ್ಕೆ ಹೋಗುವಾಗಲೂ ಅಲ್ಲಿರುವಾಗಲೂ ಹಿಂತಿ
ಗಿ ಬರುವಾಗಲೂ ವ್ಯಕ್ತವಾಯಿತು. ಮಾಡತಕ್ಕುದೇನು ? ಅವಳ ಇಷ್ಟಾ
ಸಾರ ನಡೆಯಿಸಲಾಗುವುದಿಲ್ಲ." ಎಂದನು. ಧೀರೇಂದ್ರನಿಗೆ ಈವರೆಗೂ
ನಸ್ಸಿನಲ್ಲಿ ಅಡಗಿದ್ದ ಆಶಾಸಹಸ್ರವು ಬರಿದಾಗಿಹೋಯಿತು. ತಲೆಯ
ೀಲೆ ಬರಸಿಡಿಲು ಬಡಿದಂತಾಯಿತು. ಪ್ರಯಾಣಸನ್ನದ್ಧನಾಗಿದ್ದವನು
ಲ್ಲಿಂದ ಹೊರಡುವುದಕ್ಕೂ ಅಲ್ಲಿಯೇ ನಿಲ್ಲುವುದಕ್ಕೂ ತೋರದೆ ಬುದ್ಧಿ
ೂನ್ಯನಾಗಿ ನಿಂತುಬಿಟ್ಟನು. ಗಿರೀಶನು "ಪ್ರಯಾಣಕ್ಕೆ ಹೊತ್ತು ಮೀರುತ್ತಿ
ದಿತು. ವಿಘ್ನವಾಗಬಾರದು ಹೊರಡಿರಿ.'' ಎಂದು ಹೇಳಿದನು. ಧೀರೇಂ
ನು ನಿಟ್ಟುಸಿರುಬಿಟ್ಟು, ಯಾವಮಾತನ್ನೂ ಆಡದೆ ಹೊರಟುಹೋದನು.

ಆರನೆಯ ಪರಿಚ್ಛೇದ.

"ಅಪರಾಜಿತ ಎಲ್ಲಿಹೋದಳು!"

ಧೀರೇಂದ್ರನು ಪ್ರಯಾಣಮಾಡಿದಬಳಿಕ ಗಿರೀಶನು ಬಲುಹೊತ್ತು ನಿದ್ರೆಹಿಡಿಯದೆ ಹೊರಳಾಡಿದನು. ಅವನ ಮನಸ್ಸಿನಲ್ಲಿ ಹಲವುಬಗೆಯ ಚಿಂತೆಗಳು ಪದಾರ್ಪಣಮಾಡಿದುವು. ದೇವಪುರದಂತಹ ಪುಣ್ಯಕ್ಷೇತ್ರಕ್ಕೆ ಬಂದರೂ ನಿರಾತಂಕವಾಗಿರುವುದಕ್ಕೆಲ್ಲವಾಯಿತಲ್ಲಾ! ಎಂದು ವ್ಯಥೆಪಟ್ಟನು. ಅವನಿಗೆ ಅಂಬಾಶಂಕರನಿಂದ ಅನಿಷ್ಟಸಂಘಟನೆಯಾಗುವುದೇನೋ ನಿಶ್ಚಯವೆಂದು ತೋರಿತು. ಆ ಅನಿಷ್ಟವಾವುದು? ಒಂದೆರಡು ಭೂಸ್ವಾಸ್ಥ್ಯಗಳಲ್ಲದೆ ಮತ್ತಾವ ಐಶ್ವರ್ಯವೂ ಇಲ್ಲವಾದುದರಿಂದ ಅದಕ್ಕೆ ಯಾವ ಚ್ಯುತಿಯೂ ಉಂಟಾಗಲಾರದು. ಮತ್ತೇನುತಾನೆ ಆದೀತು? ಅಪರಾಜಿತೆಯನ್ನು ಅಪಹರಿಸಿಕೊಂಡು ಹೋಗುವುದೊಂದಿರಬಹುದೇ? ಅವಳನ್ನೇಕೆ ಅಪಹರಿಸುವುದು! ಮದುವೆಯಾಗುವುದಕ್ಕೆತಾನೆ. ಒಂದುವೇಳೆ ಅವಳನ್ನು ಬಲಾತ್ಕಾರದಿಂದ ಅವನೇ ಮದುವೆಯಾದರೆ ನಷ್ಟವೇನಾದೀತು? ಹರಚರಣ ಉಪಾಧ್ಯಾಯನಿಗೆ ಮಾಡಿರುವ ವಾಗ್ದಾನವು ವ್ಯರ್ಥವಾಗುವುದು. ಇಷ್ಟೇತಾನೆ? ಆದರೆ ಅದಕ್ಕಿಂತ ನಷ್ಟವುಂಟೆ? ಮಾತಿಗೆ ತಪ್ಪಿದವನು ಮಾನವನೇ ಅಲ್ಲ ಬಲಾತ್ಕಾರಕ್ಕೆ ಒಳಪಟ್ಟವನು ಮಾತನ್ನುಳಿಸಿಕೊಳ್ಳುವುದು ಹೇಗೆ? ಆದರೆ ಅಪರಾಜಿತೆಯು ಅಪಾತ್ರನ ವಶವಾಗುವಳು! ಇದೊಂದೇ ದುಃಖಕರವಾದುದು ಅವಳು ಅಂಬಾಶಂಕರನಲ್ಲಿ ಅನುರಕ್ತೆಯಲ್ಲ. ಅವಳ ಅನುರಾಗವು ಧೀರೇಂದ್ರಕುಮಾರನಲ್ಲಿರುವುದು. ಅವಳ ಇಷ್ಟವನ್ನು ಅನುಸರಿಸಬೇಕಾದರೆ ಧೀರೇಂದ್ರನಿಗೇ ಅವಳನ್ನು ಕೊಟ್ಟು ಮದುವೆಮಾಡಬೇಕು. ಅದಾಗಲಾರದೆಂದು ಹೇಳಿಬಿಟ್ಟುದಾಯಿತು ಅಂಬಾಶಂಕರನು ಅತ್ಯಾಚಾರವನ್ನು ನಡೆಯಿಸುವನಾದರೆ ಅಪರಾಜಿತೆಯನ್ನು ಅವನ ಕೈತಪ್ಪಿಸುವುದಕ್ಕೆ ಧೀರೇಂದ್ರನೊಬ್ಬನೇ ಸಮರ್ಥನು. ಅಂತಹ ಸಮರ್ಥನೂ ಈಗ ಕೃಷ್ಣನಗರಕ್ಕೆ ಹೊರಟುಹೋದನು ಅವನಿಗೂ ಅಪರಾಜಿತೆಯಲ್ಲಿ ಮನಸ್ಸಿರ

ಆಂಧ್ರದೇಶದಿಂದ ಬಂದವನೆಂದು ತಿಳಿಸುವಂತೆ ಉಪಾಯ ಹೇಳಿಕೊಟ್ಟ ಮಿತ್ರನು ಹೊರಟುಹೋದ ತರುವಾಯ ಕಿರಿಯವಸಂತಕನು ತನ್ನ ಸೇವಕನಾದ ಕಿರಿಯಲಕ್ಷ್ಮಣನ ಕೈಗೆ ಸ್ವಲ್ಪ ಧನವನ್ನು ಕೊಟ್ಟು ತಾನು ತಿರುಗಿಬರುವವರೆಗೂ ಸತ್ರದ ಬಳಿಯಲ್ಲಿಯೇ ಜಾಗರೂಕತೆಯಿಂದಿರು ಎಂದು ನಿಯಮಿಸಿ, ತಾನು ಊರಿನಲ್ಲಿ ನಾಲ್ಕು ದಿಕ್ಕುಗಳನ್ನೂ ಬಳಸಿ ಜನರ ಇತರ ವ್ಯವಹಾರಗಳನ್ನು ನೋಡಿಕೊಂಡು ಊಟದವೇಳೆಗೆ ಹಿಂತಿರುಗಿ ಬರುವೆನೆಂದು ಹೇಳಿ ಹೊರಟು ಹೋದನು. ಲಕ್ಷ್ಮಣನು ವಾಕ್ಚಮತ್ಕೃತಿಯುಳ್ಳವನೂ, ಉಲ್ಲಾಸಿಯೂ ಆಗಿದ್ದುದರಿಂದ ವಸಂತಕನು ಮನಸ್ಸಿಗೆ ವ್ಯಾಕುಲವಾಗಿ ಹೊತ್ತುಹೋಗದೆ ಬೇಸರವಾದಾಗಲೆಲ್ಲ ಈ ಸೇವಕನನ್ನು ಕರೆದು ಅವನೊಡನೆ ವಿನೋದ ವಚನಗಳಿಂದಲೂ ಹಾಸ್ಯವಾದಗಳಿಂದಲೂ ಕಾಲಕ್ಷೇಪಮಾಡುವ ಪದ್ಧತಿಯಿದ್ದಿತು. ಆದುದರಿಂದ ಸಾಧಾರಣವಾಗಿ ಸೇವಕರಿಗೆ ಯಜಮಾನರ ಬಳಿಯಲ್ಲಿರುವ ಸ್ವಾತಂತ್ರ್ಯಕ್ಕಿಂತಲೂ ಲಕ್ಷ್ಮಣನಿಗೆ ವಸಂತಕನ ಬಳಿಯಲ್ಲಿ ಹೆಚ್ಚಾದ ಸ್ವಾತಂತ್ರ್ಯವೂ ಸಲಿಗೆಯೂ ಇದ್ದಿತು.

ಕಿರಿಯವಸಂತಕನು ತನ್ನ ಸೇವಕನನ್ನು ಬಿಟ್ಟು ಹೊರಟ ತರುವಾಯ ಒಂದೆಡೆಗೆ ಹೋಗಿನಿಂತು ತಾನು ಸೋದರನನ್ನೂ ತಾಯಿಯನ್ನೂ ಹುಡುಕುವುದಕ್ಕೋಸುಗ ಹೊರಟು ದೇಶದೇಶಗಳಲ್ಲಿಯೂ ವ್ಯರ್ಥವಾಗಿ ಅಲೆಯುತ್ತಿರುವುದನ್ನೂ, ತಾನು ಅಲೆದ ನೆಲೆಗಳಲ್ಲೆಲ್ಲಿಯೂ ಅವರ ಸುಳಿವು ಸ್ವಲ್ಪವಾದರೂ ತಿಳಿಯದಿರುವುದನ್ನೂ ಚಿಂತಿಸಿ "ಅಯ್ಯೋ, ಮಹಾ ಸಮುದ್ರದಲ್ಲಿ ಒಂದು ಜಲಬಿಂದುವು ಮತ್ತೊಂದು ಜಲಬಿಂದುವನ್ನು ಹುಡುಕುವುದಕ್ಕೆ ಹೊರಟು ಆ ಮಹಾರ್ಣವದಲ್ಲಿ ತಾನೂ ಕಾಣಿಸದೆ ಅಡಗಿಹೋದಂತೆ ಮಂದಭಾಗ್ಯನಾದ ನಾನು ತಾಯಿಯನ್ನೂ ಒಡಹುಟ್ಟಿದವರನ್ನೂ ಹುಡುಕಿ ಕರೆತರುವೆನೆಂದು ಹೊರಟು ಮನೆಬಾಗಿಲುಗಳನ್ನು ಬಿಟ್ಟು ಕಂಡರಿಯದ ನಾಡಿನಲ್ಲಿ ಕಂಗೆಡುತ್ತಿರುವೆನಲ್ಲವೆ?" ಎಂದು ಆಲೋಚಿಸುತ್ತ ತಾನು ಮಾಡಿದ ಪ್ರಯತ್ನಗಳನ್ನೆಲ್ಲ ನೆನಪಿಗೆ ತಂದುಕೊಳ್ಳುತ್ತಿರಲು ಅಲ್ಲಿಗೆ ಹಿರಿಯಲಕ್ಷ್ಮಣನು ಬಂದನು. ಕಿರಿಯ ವಸಂತಕನು ಅವನನ್ನು ತನ್ನ ಸೇವಕನೆಂದೇ ಭಾವಿಸಿ ಇಷ್ಟು ಜಾಗ್ರತೆಯಾಗಿ ಅಲ್ಲಿಗೆ ಬಂದುದಕ್ಕೋಸುಗ ಆಶ್ಚರ್ಯಪಟ್ಟು "ಹೇ

ವನ್ನು ಎಲ್ಲಿಟ್ಟು ಬಂದೆ?" ಎಂದು ಕೇಳಿದನು. ಇಬ್ಬರು ವಸಂತಕರೂ ಇಬ್ಬರು ಲಕ್ಷ್ಮಣರೂ ಬಾಲ್ಯದಲ್ಲಿದ್ದಂತೆಯೇ ಈಗಲೂ ಏಕರೀತಿಯಾಗಿದ್ದುದರಿಂದ ಇಂತಹ ಭ್ರಾಂತಿಯುಂಟಾಗುವುದೇನೂ ಅತಿಶಯವಲ್ಲ. ಕಿರಿಯ ವಸಂತಕನು ಹೀಗೆ ಕೇಳಿದೊಡನೆಯೇ ಹಿರಿಯ ಲಕ್ಷ್ಮಣನು ಆ ಮಾತಿನ ಅರ್ಥವನ್ನು ಅರಿಯದೆ ಅವನನ್ನೇ ತನ್ನ ಒಡೆಯನೆಂದು ಭಾವಿಸಿ ತಾನು ಬಂದ ಕಾರ್ಯವನ್ನು ಕುರಿತು ಅವನೊಡನೆ "ಅಯ್ಯಾ, ಇಷ್ಟು ಹೊತ್ತಾಗಿ ಹೋದರೂ ನೀವು ಮನೆಗೆ ಬಾರದುದರಿಂದ ನಿಮ್ಮ ಪತ್ನಿಯು ನಿಮ್ಮನ್ನು ಬೇಗ ಊಟಕ್ಕೆ ಕರೆತರುವಂತೆ ನನಗಾಜ್ಞಾಪಿಸಿ ಕಳುಹಿರುವರು. ಒಲೆಯ ಮೇಲಿದ್ದ ಹುಳಿಯು ಹಾಗೆಯೇ ಇಂಗಿಹೋಯಿತು. ಅನ್ನವೂ ಪಲ್ಲೆಯವೂ ತಂಗಳಾಗಿಹೋದುವು, ಬೇಗನೆ ನಡೆಯಿರಿ." ಎಂದನು. ಕಿರಿಯ ವಸಂತಕನು ಆ ಮಾತುಗಳನ್ನು ಪರಿಹಾಸೋಕ್ತಿಯೆಂದು ಭಾವಿಸಿ "ಇದು ಪರಿಹಾಸಕ್ಕೆ ಸಮಯವಲ್ಲ. ಹಣವನ್ನು ತಾರದೆ ಬರಿಗೈಯಲ್ಲಿ ಬಂದೆಯೇನು? ನಿಶ್ಚಯವನ್ನು ಹೇಳು" ಎಂದು ಕೇಳಲು, ಹಿರಿಯ ಲಕ್ಷ್ಮಣನು ಮೊದಲಂತೆಯೇ "ನಿಶ್ಚಯವಾಗಿಯೂ ಹಣವಾವುದೋ ನಾನರಿಯೆನು. ನಿಮ್ಮ ಪತ್ನಿಯವರು ನಿಮ್ಮನ್ನು ಊಟಕ್ಕೆ ಕರೆತರಬೇಕೆಂದು ಹೇಳಿದುದರಿಂದ ಬಂದೆನು." ಎಂದನು. ಕಿರಿಯ ವಸಂತಕನು ಆ ಮಾತಿಗೆ ಕೋಪಿಸಿಕೊಂಡು "ಪತ್ನಿಯಾವಳು?" ಎಂದು ಕೇಳಲು, ಹಿರಿಯ ಲಕ್ಷ್ಮಣನು "ಯಾವಳೇ? ನೀವು ವಿಧ್ಯುಕ್ತ ರೀತಿಯಲ್ಲಿ ವಿವಾಹಮಾಡಿಕೊಂಡಿರಲ್ಲಾ! ಆಕೆ" ಎಂದನು. ಕಿರಿಯವಸಂತಕನಿಗೆ ಹೆಂಡತಿಯಿಲ್ಲವಾದುದರಿಂದ ಅವನು ಮತ್ತಷ್ಟು ಕೋಪಗೊಂಡು ಕಣ್ಣುಗಳನ್ನು ಕೆರಳಿಸಿ "ಎಲಾ, ನಾನು ನಿನ್ನೊಡನೆ ಒಂದೊಂದು ಬಾರಿ ವಿನೋದವಾಗಿ ಮಾತನಾಡುತ್ತಿದ್ದುದರಿಂದ ಈಗ ನೀನು ಹದ್ದುಮೀರಿ ಸಮಯಾಸಮಯವನ್ನರಿಯದೆ ಹೇಳನಮಾಡುತ್ತಿರುವೆ. ಈಗ ನನ್ನ ಮನಸ್ಸಿಗೆ ಉಲ್ಲಾಸವಿಲ್ಲವೆಂಬುದನ್ನರಿತಿರು. ಜೋಕೆ! ನಾವು ಈ ಗ್ರಾಮಕ್ಕೆ ಹೊಸಬರಾಗಿರುವುದರಿಂದ ಆ ಹಣವನ್ನಾರ ಬಳಿಯಲ್ಲಿಟ್ಟು ಬಂದಿರುವೆಯೋ ಬೇಗ ತಿಳಿಸು "ಎಂದು ಕೇಳಿದನು. ಹಿರಿಯ ಲಕ್ಷ್ಮಣನು ಅವನನ್ನು ತನ್ನ ಒಡೆಯನೆಂದೇ ಭಾವಿಸಿದ್ದನಾದುದರಿಂದ—ಈ ಗ್ರಾಮಕ್ಕೆ ನಾವು ಹೊಸಬರಾಗಿರುವೆವು—ಎಂಬ ಮಾತನ್ನು ಕೇಳಿ ಪರಿಹಾಸವೆಂದೇ ನಿಶ್ಚಯಿಸಿ

ನಗುತ್ತ " ಅಯ್ಯಾ, ಊಟಮಾಡಿ ತಾಳತುಕೊಂಡ ಬಳಿಕ ನಿಮ್ಮ ಮಡದಿಯೊಡನೆಯೂ ನಾದಿನಿಯೊಡನೆಯೂ ಬೇಕಾದಷ್ಟು ಹೊತ್ತು ಸರಸವಾಡಿರಿ. ಬೆಳಗ್ಗಿನಿಂದ ಮನೆಯವರೆಲ್ಲ ಊಟವಿಲ್ಲದೆ ಸಾಯುತ್ತಿರುವರು. ಹಣವಾವುದೋ ಅದನ್ನು ನಾನರಿಯೆನು. ಬೇಗಹೊರಡಿರಿ, ಹೋಗೋಣ" ಎಂದನು. ಈ ಮಾತಿನಿಂದ ಕಿರಿಯ ವಸಂತಕನ ಶಾಂತತೆಯೆಲ್ಲ ಮಾಯವಾಗಲು ಅವನು " ಎಲಾ, ನಿನ್ನ ಒಡತಿಯೂ ಅವಳ ಮನೆಯೂ ಹಾಳಾಗ" ಎಂದು ಬಯ್ದು ಅವನನ್ನು ಹೊಡೆದನು. ಹಿರಿಯ ಲಕ್ಷ್ಮಣನು ಒಡನೆಯೇ ಮನೆಗೆ ಓಡಿಹೋಗಿ ತನ್ನ ಒಡೆಯನು ಊಟಕ್ಕೆ ಬಾರೆನೆಂದು ಹೇಳಿದನೆಂದೂ, ಮನೆಯೂ ಇಲ್ಲ. ಮಡದಿಯೂ ಇಲ್ಲವೆಂದು ಹೇಳಿ ತನ್ನನ್ನು ಹೊಡೆದು ಕಳುಹಿಸಿದನೆಂದೂ ಮುಖವನ್ನು ಕಿರಿದುಮಾಡಿಕೊಂಡು ತನ್ನ ಒಡತಿಯೊಡನೆ ತಿಳಿಸಿದನು.

ತನಗೆ ಮಡದಿಯಿಲ್ಲವೆಂದು ಪತಿಯಾಡಿದನೆಂಬ ವಿಷಯವು ಕಿವಿಗೆ ಸೋಕಿದೊಡನೆಯೇ ಸೀತೆಯು ಕಣ್ಣೀರುಕರೆಯುತ್ತ ಸ್ವಲ್ಪಕಾಲ ದುಃಖಿಸಿ "ಎಲೈ, ನೀನೇ ಮತ್ತೊಂದು ಬಾರಿ ಹೋಗಿ ನನ್ನಕಾಂತನನ್ನು ಕರೆದುತಾ" ಎಂದು ಭೃತ್ಯನನ್ನು ಕಳುಹಿಸಿ, ತಾನು ಯಾವಾಗಲೂ ಪತಿಯಮೇಲೆ ಜಾಂತ್ವ ಶಂಕೆಯನ್ನಿಟ್ಟುಕೊಂಡಿರುವವಳಾದುದರಿಂದ ಆತನು ಈಗ ಮತ್ತಾವಳೋ ಒಬ್ಬಳನ್ನು ಮೋಹಿಸಿ ತನ್ನಮೇಲಣ ಅನುರಾಗವನ್ನುಮರೆತನೆಂದೂಹಿಸಿ ಪತಿಯನ್ನು ಹಲವುಬಗೆಯಲ್ಲಿ ನಿಂದಿಸಿ ಅಳತೊಡಗಿದಳು. ಆಗ ಅವಳ ತಂಗಿಯಾದ ಸುಭದ್ರೆಯು ಅಲ್ಲಿಗೆ ಬಂದು ಹೀಗೆ ನಿಷ್ಕಾರಣವಾಗಿ ಮನಸ್ಸಿನಲ್ಲಿ ಇಲ್ಲದ ಸಲ್ಲದ ಅನುಮಾನವನ್ನಿಟ್ಟುಕೊಂಡು ಪ್ರಾಣವಲ್ಲಭನಾದ ವಸಂತಕನನ್ನು ಹಳಿಯುತ್ತ ದುಃಖಿಸುವುದು ಧರ್ಮವಲ್ಲವೆಂದು ಅಕ್ಕನಿಗೆ ಬೋಧಿಸಿ, ಅವಳನ್ನು ಕರೆದುಕೊಂಡು ತಮ್ಮ ಭಾವನನ್ನು ಕರೆತರುವುದಕ್ಕೆ ಹೊರಟಳು.

ಕಿರಿಯವಸಂತಕನು ಸತ್ರದ ಬಳಿಗೆ ಹೋಗಿ ನೋಡಲಾಗಿ ಕಿರಿಯ ಲಕ್ಷ್ಮಣನು ಸುಖವಾಗಿ ಹಣವನ್ನಿಟ್ಟುಕೊಂಡು ಬೀದಿಯ ಬಾಗಿಲ ಬಳಿಯಲ್ಲಿ ನಿಂತಿದ್ದನು. ವಸಂತಕನು ಅವನನ್ನು ಕಂಡು ಮೊದಲು ಹಣವೆಂದರೇನೆಂಬುದನ್ನರಿಯದವನಂತೆ ಮಾತನಾಡಿದುದಕ್ಕೋಸುಗ ನಿಂದಿಸಿದನು,

ಕಿರಿಯ ಲಕ್ಷ್ಮಣನು ತಾನೇನನ್ನೂ ಅರಿಯೆನೆಂದು ವಾದಿಸುತ್ತಿರಲು ಆ ವೇಳೆಗೆ ಸರಿಯಾಗಿ ಸೀತೆಯು ಅಲ್ಲಿಗೆ ಬಂದು ತನ್ನ ಗಂಡನೆಂಬ ನಂಬಿಕೆಯಿಂದ ವಸಂತಕನ ಕೈಯನ್ನು ಹಿಡಿದುಕೊಂಡು ಬಾರೆಂದು ಎಳೆಯುತ್ತ "ಎಲೈ ಪ್ರಾಣಕಾಂತನೆ, ಇದೇನನ್ಯಾಯವು? ಎಂದೂ ನನ್ನನ್ನು ನೋಡದವನಂತೆ ಬೆರಗಾಗಿ ನನ್ನ ಮುಖವನ್ನು ಬೆದಬೆದರಿ ನೋಡುತ್ತಿರುವೆ? ನನ್ನಮೇಲಿದ್ದ ಮೊದಲಿನ ಅನುರಾಗವೆಲ್ಲಿ? ಯಾವ ಸಮುದ್ರದಲ್ಲಿ ಕಲೆತುಹೋಯಿತು? ಕೈಹಿಡಿದ ಮಡದಿಯನ್ನು ಅರಿಯೆನೆಂದು ಬೊಂಕಿ ನಿನ್ನ ಅನುರಾಗವನ್ನು ಪರನಾರಿಯಲ್ಲಿಡುವುದಕ್ಕೆ ನಿನಗೆ ಹೇಗೆ ಮನಸ್ಸೊಪ್ಪಿತು?" ಎಂದು ಬಿರುನುಡಿಗಳಾಡುತ್ತ ಗಳಗಳನೆ ಕಣ್ಣೀರು ಕರೆಯ ತೊಡಗಿದಳು. ನಿಶ್ಚಯವಾಗಿ ಕಿರಿಯವಸಂತಕನು ಹುಟ್ಟಿದುದು ಮೊದಲು ಇಂದಿನವರೆಗೂ ಅವಳ ಮುಖವನ್ನು ಕಂಡವನೇ ಅಲ್ಲ. ಹೀಗೆ ಅನ್ಯಕಾಂತೆಯು ಬಂದು ನೀನು ನನ್ನ ಗಂಡನೆಂದು ಕೈಹಿಡಿದುಕೊಂಡು ಎಳೆಯುತ್ತ, ಆಶ್ಚರ್ಯ ಕೋಪಗಳಿಂದ ಮನಕರಗುವಂತೆ ಪ್ರಾರ್ಥಿಸುತ್ತಿರಲು, ಅವನು ಕಂಪಿತದೇಹನಾಗಿ ತೊದಲ್ನುಡಿಯಿಂದ "ಎಲೇ ಅಸೃತೋದರೀ, ನಿನ್ನಪ್ರಾಗಲ್ಭ್ಯವನ್ನು ನನ್ನಲ್ಲಿ ತೋರಿಸುವುದಕ್ಕೆ ಬಂದೆಯಾ? ಸಾಕು, ಸಾಕು ಇನ್ನು ಮಾತಾಡದೆ ನಿನ್ನ ದಾರಿಯನ್ನು ನೋಡಿಕೊಂಡು ಹೊರಡು." ಎಂದು ಗದರಿಸಿ, ಅವಳು ಕದಲದಿರಲು ತಾನವಳ ಪತಿಯಲ್ಲವೆಂದೂ ಎರಡುಗಂಟೆಗಳ ಕಾಲಕ್ಕೆ ಹಿಂದೆ ಆವೂರಿಗೆ ತಾನು ಬಂದವನೆಂದೂ ನಾನುಭಗಳೊಡನೆ ಎಷ್ಟೋ ಹೇಳಿದನಾದರೂ ಆ ಮದವತಿಯ ಮಾತಿನ ಮುಂದೆ ಅವನ ಚತುರೋಕ್ತಿಯು ವ್ಯರ್ಥವಾಗಿ ಹೋಯಿತು. ಅವಳು ನನ್ನನ್ನುಳಿದು ಎಲ್ಲಿಹೋಗುವೆಯೆಂದು ಕೈಬಿಡದೆ ಮನೆಗೆಳೆಯಲು ಕಿರಿಯವಸಂತಕನು ಅವಳ ನಿರ್ಬಂಧದಿಂದ ಬಿಡುತೆಪೊಂದಲರಿಯದೆ ಕಟ್ಟಕಡೆಗೆ ಅವಳೊಡನೆ ತನ್ನ ಸಹೋದರನ ಮನೆಗೆ ಹೋಗಿ ಉಪಾಯಾಂತರವಿಲ್ಲದೆ ಊಟಕ್ಕೆ ಕುಳಿತನು. ಆಗಳಾಸುಂದರಿಯು 'ಪ್ರಾಣೇಶ್ವರಾ' ಎಂದೂ ಅವಳ ತಂಗಿಯು "ಭಾವಾ" ಎಂದೂ ಕರೆಯುತ್ತಿರಲು ಕಿರಿಯವಸಂತಕನು ಇದೇನಿಂದ್ರಜಾಲವೋ ಎಂದಾಶ್ಚರ್ಯಪಡುತ್ತ ಕನಸು ಕಾಣುತ್ತಿರುವೆನೇನೋ ಎಂದು ಭ್ರಾಂತಿಗೊಳ್ಳುತ್ತ ಮತ್ತೆ ಮತ್ತೆ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋದನು. ತನ್ನೊಡೆಯನ ಹಿಂದೆ ಬಂದ ಕಿರಿಯ

ಲಕ್ಷ್ಮಣನು ಅಡಿಗೆಯಮನೆಯೊಳಕ್ಕೆ ಹೋಗಲು ಅಲ್ಲಿದ್ದ ಅವನ ಸೋದರನ ಮಡದಿಯಾದ ಗೌರಿಯೆಂಬುವಳು "ಕಾಂತಾ!" ಎಂದು ಕೂಗಿದಳು. ಅವನೂ ಕಿರಿಯವಸಂತಕನಿಗಿಂತ ಅತಿಶಯವಾಗಿ ಆಶ್ಚರ್ಯಪಡತೊಡಗಿದನು.

ಆಗ ಸೀತೆಯಿಂದ ಕಳುಹಲ್ಪಟ್ಟ ಹಿರಿಯ ಲಕ್ಷ್ಮಣನು ತನ್ನೊಡೆಯನೊಡನೆ ಕಲೆತು-ನಿಮ್ಮ ಮಡದಿಯು ನಿಮ್ಮನ್ನು ಕರೆತರಹೇಳಿದಳೆಂದು ತಿಳಿಸಿದ ತಪ್ಪಿಗೋಸುಗ ಕ್ಷಣಕಾಲಕ್ಕೆ ಮೊದಲು ನೀವು ನನ್ನನ್ನು ಹೊಡೆದಿರಲ್ಲವೆ? ಈಗಲಾದರೂ ಬರುವಿರಾ? ಮತ್ತೆ ಹೊಡೆದು ಕಳುಹುವಿರಾ?—ಎಂದು ಕೇಳಲು ಆತನು ಆಶ್ಚರ್ಯಪಟ್ಟು ತನಗೇನೂ ತಿಳಿಯದೆಂದು ಹೇಳಿ ಅವನೊಡನೆ ಹೊರಟು ಮನೆಯೊಳಗಡೆ ಕಿರಿಯ ವಸಂತಕನು ಊಟಮಾಡುತ್ತಿದ್ದಾಗ ಬಾಗಿಲ ಬಳಿಯಲ್ಲಿ ನಿಂತು, ಕದ ತೆರೆಯಿರೆಂದು ಕೂಗಿದನು. ಯಾರು ಬಂದರೂ ಕದ ತೆರೆಯಲಾಗದೆಂದು ತಮ್ಮೊಡತಿಯು ಮೊದಲೇ ಹೇಳಿದ್ದಳಾದುದರಿಂದ ಸೇವಕರಾರೂ ಕದವನ್ನು ತೆರೆಯಲಿಲ್ಲ. ಹಿರಿಯ ವಸಂತಕನೂ ಅವನ ಸೇವಕನೂ ಅಷ್ಟಕ್ಕೆ ಸುಮ್ಮನಾಗದೆ "ನಾವು! ವಸಂತಕನೂ ಲಕ್ಷ್ಮಣನೂ ಬಂದಿರುವೆವು—ಕದವನ್ನು ತೆರೆಯಿರಿ' ಎಂದು ಕೂಗಿದರು. ಒಳಗಿದ್ದವರು ಆ ಮಾತುಗಳನ್ನು ಕೇಳಿ ಕಿಲಕಿಲನೆ ನಕ್ಕು, ವಸಂತಕನು ತನ್ನ ಪತ್ನಿಯೊಂದಿಗೆ ಊಟಮಾಡುತ್ತ ಒಳಗಿರುವನೆಂದೂ ಲಕ್ಷ್ಮಣನು ಅಡಿಗೆಮನೆಯಲ್ಲಿರುವನೆಂದೂ ಹೇಳಿ ಕದ ತೆರೆಯದಿದ್ದರು. ಹಿರಿಯ ವಸಂತಕನು ಕದವೊಡೆದು ಹೋಗುವಂತೆ ಹೊಡೆದು ಅರಿಚಿಕೊಂಡರೂ ಫಲವಾಗದಿದ್ದುದರಿಂದಲೂ ತನ್ನ ಭಾರ್ಯೆಯೊಡನೆ ಅವನೋಬ್ಬನು ಕುಳಿತು ಊಟಮಾಡುತ್ತಿರುವನೆಂಬುದನ್ನು ಕೇಳಿ ಕೋಪವುಂಟಾದುದರಿಂದಲೂ ಕಡೆಗೆ ತನ್ನಸೇವಕನೊಡನೆ ಆ ಸ್ಥಳವನ್ನು ಬಿಟ್ಟು ಹೊರಟು ಹೋದನು.

ಕಿರಿಯ ವಸಂತಕನು ಊಟಮಾಡಿದ ತರುವಾಯ ಸೀತೆಯು ತನ್ನ ಮುಷ್ಕರವನ್ನು ಬಿಡದೆ ಪತಿಯನ್ನು ಕಂಡಂತೆಯೇ ಕಂಡು ಮಾತನಾಡುತ್ತಿದ್ದುದರಿಂದಲೂ, ಆಗ ಲಕ್ಷ್ಮಣನು ಬಂದು ತನ್ನನ್ನೊಬ್ಬ ಅಡಿಗೆಯವಳು ಗಂಡನೆಂದು ಭಾವಿಸಿ ಮಾತನಾಡಿಸುತ್ತಿರುವಳೆಂದು ಹೇಳಿದುದರಿಂದಲೂ ಮತ್ತಷ್ಟು ಆಶ್ಚರ್ಯಪಟ್ಟು ಹೇಗಾದರೂ ಅವಕಾಶಮಾಡಿಕೊಂಡು ಅಲ್ಲಿಂದ

ಓಡಿಹೋಗಬೇಕೆಂದು ನಿಶ್ಚಯಿಸಿಕೊಂಡನು. ಊಟಮಾಡುತ್ತಿದ್ದಾಗ ಸುಭದ್ರೆಯು ತನಗೆ ಮಾಡಿದ ಆದರಕ್ಕೆ ಅವನು ಅತಿ ಸಂತುಷ್ಟನಾಗಿದ್ದರೂ ಮನಸ್ಸಿನಲ್ಲಿ ಜಾರತ್ವಶಂಕೆಯನ್ನಿಟ್ಟುಕೊಂಡು ಮಾತುಮಾತಿಗೂ ಸಿಡು ಸಿಡುಗುಟ್ಟುತ್ತಿದ್ದ ಸೀತೆಯ ಕೃತ್ಯಗಳಿಗೆ ಮಾತ್ರ ಮನಸ್ಸಿನಲ್ಲಿ ಬಹಳವಾಗಿ ನೊಂದುಕೊಂಡಿದ್ದನು. ಅಡಿಗೆಯ ಮನೆಯಲ್ಲಿ ಪಿಶಾಚಿಯಂತೆ ಕೈಹಿಡಿದು ಕದ ಲದಿದ್ದ ಹೊಸ ಹೆಂಡತಿಯನ್ನು ಕಂಡು ಕಿರಿಯ ಲಕ್ಷ್ಮಣನ ಕೋಪವೂ ಇಮ್ಮಡಿಯಾಗಿದ್ದಿತು. ಆದುದರಿಂದ ಅವರಿಬ್ಬರೂ ಯಾವಾಗ ಸಮಯ ದೊರೆಯೀತೋ ಯಾವಾಗ ಈ ರಕ್ಕಸಿಯರ ಕೈಗಳಿಂದ ಬಿಡುತೆಗೊಂಡು ಸುಖವಾಗಿಹೋಗುವೆವೋ ಎಂದು ನಿಮಿಷವನ್ನೊಂದು ಯುಗವನ್ನಾಗಿ ಕಳೆ ಯುತ್ತಿದ್ದರು.

ಕಿರಿಯವಸಂತಕನು ಏನೋ ಉಪಾಯಮಾಡಿ ಅವರನ್ನು ಮರೆಯಿಸಿ ತಪ್ಪಿಸಿಕೊಂಡು ಬೀದಿಯಲ್ಲಿ ಹೋಗುತ್ತಿರಲು ಒಬ್ಬ ಅಕ್ಕಸಾಲಿಗನು ಇದಿ ರಾಗಿ ಬಂದು ಅವನನ್ನು ಹಿರಿಯವಸಂತಕನೆಂದು ಭ್ರಮಿಸಿ "ವಸಂತಕಾ, ಇದೊ, ನೀನು ನನಗೆ ಹೇಳಿದ್ದ ಚಂದ್ರಹಾರವನ್ನು ಮಾಡಿ ತಂದಿರುವೆನು. ತೆಗೆದುಕೊ" ಎಂದು ಕೈಗಿತ್ತನು. ವಸಂತಕನು ಅದು ತನ್ನದಲ್ಲವೆಂದು ಹಿಂದಕ್ಕೆ ಕೊಡಲು ಆ ಅಕ್ಕಸಾಲಿಗನದನ್ನು ತೆಗೆದು ಕೊಳ್ಳದೆ ನಿನ್ನ ಅಜ್ಞೆ ಗೋಸುಗ ಇದನ್ನು ಮಾಡಿದೆನೇ ಹೊರತು ಇಲ್ಲದಿದ್ದರೆ ಮಾಡುತ್ತಲೇ ಇರ ಲಿಲ್ಲ. ಇದರಿಂದ ನನಗೇನು ಪ್ರಯೋಜನ?" ಎಂದದನ್ನು ಅಲ್ಲಿಯೇ ಬಿಟ್ಟು ಹೊರಟುಹೋದನು. ಇಂತಹ ಇಂದ್ರಜಾಲಗಳು ನಡೆಯುತ್ತಿದ್ದ ಆ ಪಟ್ಟಣದಲ್ಲಿ ಇನ್ನು ಅರೆನಿಮಿಷವಾದರೂ ನಿಲ್ಲಲಾಗದೆಂದು ಕಿರಿಯವಸಂ ತಕನು ನಿಶ್ಚಯಿಸಿ ತನ್ನ ಸೇವಕನನ್ನು ಕರೆದು "ನೀನೀಗಲೇ ಹೋಗಿ ಬಂಡಿಯನ್ನೊಂದನ್ನು ತೆಗೆಯಿಸಿ ಕೊಂಡು ಜಾಗ್ರತೆಯಾಗಿ ಬಂದು ನಮ್ಮ ಸಾಮಗ್ರಿಗಳನ್ನು ಅದಕ್ಕೆ ತುಂಬು; ನಾವು ಹೊರಡೋಣ" ಎಂದಾಜ್ಞಾ ಪಿಸಿದನು.

ಕಿರಿಯ ವಸಂತಕನಿಗೆ ಭ್ರಾಂತಿಯಿಂದ ಚಂದ್ರಹಾರವನ್ನಿತ್ತು ಹೋದ ಅಕ್ಕಸಾಲಿಗನು ತಾನು ಮತ್ತಾರಿಗೋ ಕೊಡಬೇಕಾಗಿದ್ದ ಸಾಲಕ್ಕೋಸುಗ ಸ್ವಲ್ಪ ಹೊತ್ತಿನೊಳಗಾಗಿ ರಾಜಭಟರಿಂದ ಹಿಡಿಯಲ್ಪಟ್ಟನು. ರಾಜಭಟರು

ಅವನನ್ನು ಹಿಡಿದುಕೊಂಡು ಕರೆದುಯ್ಯುತ್ತಿರುವಾಗ ಆಕಸ್ಮಿಕವಾಗಿ ಹಿರಿಯ ವಸಂತಕನು ಆ ಮಾರ್ಗವಾಗಿಯೇ ಬರಲು ಅಕ್ಕಸಾಲಿಗನು ತಾನು ಹಾರವನ್ನು ಇವನ ಕೈಗೇ ಕೊಟ್ಟೆನೆಂದು ಭ್ರಮಿಸಿ "ಅಯ್ಯಾ, ಈಗ ನಿಮ್ಮ ಕೈಗೆ ಕೊಟ್ಟ ಚಂದ್ರಹಾರದ ಕೂಲಿಯನ್ನು ದಯೆಯಿಟ್ಟು ಕೊಡಿಸಿದರೆ ಯುಕ್ತ ಸಮಯದಲ್ಲಿ ಸಹಾಯ್ಯವಾಡಿದಂತಾಗುವುದು. ನೀವು ಕೊಡಬೇಕಾದ ಕೂಲಿಯು ನಾನು ಕೊಡಬೇಕಾಗಿರುವ ಸಾಲಕ್ಕೆ ಸಮನಾಗಿರುವುದರಿಂದ ಈಗ ನೀವದನ್ನು ಕೊಟ್ಟರೆ ಈ ರಾಜಸೇವಕರಿಂದ ಬಿಡುತೆಗೊಳ್ಳುವೆನು." ಎಂದು ಪ್ರಾರ್ಥಿಸಿದನು. ಹಿರಿಯ ವಸಂತಕನು ಆ ಮಾತುಗಳಿಗೆ ಆಶ್ಚರ್ಯಪಟ್ಟು "ನೀನೆಂದರೇನು? ಚಂದ್ರಹಾರವೆಂದರೇನು? ಸುಮ್ಮನೆ ಹೊರಡು" ಎಂದನು. ಅಕ್ಕಸಾಲಿಗನು ಕ್ಷಣಕಾಲಕ್ಕೆ ಮೊದಲು ನಾನು ನಿಮ್ಮ ಕೈಗೆ ಹಾರವನ್ನು ಕೊಟ್ಟು ಹೋದೆನಲ್ಲವೆ? ಇಷ್ಟರೊಳಗಾಗಿ ಇಲ್ಲವೆನ್ನುತ್ತಿರುವಿರಲ್ಲಾ! ಇದೆಲ್ಲಿಯ ನ್ಯಾಯ?" ಎಂದು ಕೇಳಿದನು. ಹೀಗೆ ಇಬ್ಬರೂ ತಂತಮ್ಮ ಪಕ್ಷವೇ ನ್ಯಾಯವಾದುದೆಂಬ ನಂಬಿಕೆಯಿಂದ ಕೊಟ್ಟೆನೆಂದು ಅಕ್ಕಸಾಲಿಗನೂ ನನಗೆ ಕೊಡಲೇ ಇಲ್ಲವೆಂದು ಹಿರಿಯ ವಸಂತಕನೂ ನಡುಬೀದಿಯಲ್ಲಿ ಜಗಳವಾಡ ತೊಡಗಿದರು. ವಸಂತಕನೇನೋ ಅಕ್ಕಸಾಲಿಗನು ತನಗೆ ಹಾರವನ್ನು ಕೊಡಲಿಲ್ಲವೆಂದು ದೃಢವಾಗಿ ನಂಬಿದ್ದನು. ಅಕ್ಕಸಾಲಿಗನು ತನ್ನನ್ನೇ ಅಣ್ಣನೆಂದು ಭ್ರಮಿಸಿ ಚಂದ್ರಹಾರವನ್ನು ಕೊಟ್ಟುದು ನಿಶ್ಚಯವಾದುದರಿಂದ ಇವನಿಗೆ ಒಡವೆಯನ್ನು ಕೊಟ್ಟುದುಂಟೆಂದು ದೃಢವಾಗಿ ನಂಬಿದ್ದನು. ಬಳ್ಳಿಯ ಮಾತಿನಲ್ಲಿ ಕೂಲಿಯು ದೊರೆಯುವುದಸಂಭವವೆಂದು ತೋರಿಬರಲು ಅವನು ಹಿರಿಯವಸಂತಕನನ್ನು ಧರ್ಮಾಧಿಕಾರಿಗಳ ಬಳಿಗೆ ಹಿಡಿತರಬೇಕೆಂದು ರಾಜಭಟರನ್ನು ಪ್ರಾರ್ಥಿಸಿದನು. ಅವರಾತನ ಪ್ರಾರ್ಥನೆಯ ಪ್ರಕಾರ ಹಿರಿಯ ವಸಂತಕನನ್ನು ಹಿಡಿದು ಧರ್ಮಸ್ಥಾನಕ್ಕೆ ಕರೆದುಕೊಂಡು ಹೊರಟರು.

ಧರ್ಮಸ್ಥಾನಕ್ಕೆ ಹೋದರೆ ಎಲ್ಲಿ ಅಪಮಾನವುಂಟಾಗುವುದೋ ಎಂದು ಹಿರಿಯ ವಸಂತಕನು ಭಯಪಡುತ್ತ ರಾಜಭಟರ ಹಿಂದೆ ಹೋಗುತ್ತಿರಲು ಅವನ ಸೋದರನ ಸೇವಕನಾದ ಕಿರಿಯ ಲಕ್ಷ್ಮಣನು ಬಂಡಿಯನ್ನು ತೆಗೆಯಿಸಿಕೊಂಡು ಆ ಮಾರ್ಗವಾಗಿ ತನ್ನ ಒಡೆಯನಿಗೆ ತಿಳಿಸಬೇ

ಕೆಂದು ಬರುತ್ತಿದ್ದನು. ಹಿರಿಯ ವಸಂತಕನು ಅವನನ್ನು ತನ್ನ ಸೇವಕನೆಂದೇ ಭ್ರಮಿಸಿ ಸ್ವಲ್ಪ ಸಂತೋಷಿಸಿ ಅವನು ಮಾತನಾಡಬೇಕೆಂದಿರುವಷ್ಟರಲ್ಲಿ "ಲಕ್ಷ್ಮಣಾ, ನೀನೀಗಲೇ ಓಡಿಹೋಗಿ ಸೀತೆಯೊಡನೆ ನನ್ನ ಅವಸ್ಥೆಯನ್ನು ತಿಳಿಸಿ ಪೆಟ್ಟಿಗೆಯಲ್ಲಿಟ್ಟಿರುವ ರೂಪಾಯಿಯ ಗಂಟನ್ನು ನಾನು ತರಹೇಳಿದೆನೆಂದು ತಿಳಿಸಿ ತೆಗೆದುಕೊಂಡು ಬಾ" ಎಂದು ಹೇಳಿದನು. ಕಿರಿಯಲಕ್ಷ್ಮಣನು "ಅಯ್ಯೋ! ಇಷ್ಟು ಹೊತ್ತು ಮಾಡುಪಟ್ಟು ತಪ್ಪಿಸಿಕೊಂಡು ಬಂದಮನೆಗೇ ಮತ್ತೆ ಹೋಗೆಂದು ಹೇಳುತ್ತಿರುವನಲ್ಲಾ! ಇದೇನು?" ಎಂದಾಶ್ಚರ್ಯಪಟ್ಟು ತನ್ನ ಒಡೆಯನನ್ನು ರಾಜಭಟರು ಸೆಳೆದುಯ್ಯುತ್ತಿರುವುದನ್ನು ಪ್ರತ್ಯಕ್ಷವಾಗಿ ಕಂಡುದರಿಂದ ಹಾಸ್ಯವಲ್ಲವೆಂದು ತಿಳಿದು, ಬಂಡಿಯನ್ನು ತಂದಿರುವೆನೆಂದು ಹೇಳಲು ಯತ್ನಿಸಿಯೂ ಅವಕಾಶ ದೊರೆಯದೆ, ಮರು ಮಾತಿಲ್ಲದವನಾಗಿ ಹೊರಟು ಸೀತೆಯಮನೆಗೆ ಹೋಗುವ ದಾರಿಯಲ್ಲಿ ಉದ್ದಕ್ಕೂ "ಅಯ್ಯೋ, ಆ ಹಾಳುಮನೆಗೆ ಹೋದೊಡನೆಯೇ ಗೌರಿಯು ನನ್ನನ್ನು—ಪ್ರಿಯನೇ ಪ್ರಿಯನೇ! ಎಂದು ಹಿಡಿದುಕೊಳ್ಳುವಳಲ್ಲಾ! ಈ ಬಾರಿ ನಾನವಳ ಕೈಯಿಂದ ಹೇಗೆ ತಪ್ಪಿಸಿಕೊಂಡು ಬರಲಿ? ಯಾವಾಗಲೂ ಸೇವಕರು ಅಸ್ವತಂತ್ರಜೀವನರಾಗಿ ತಮ್ಮ ಒಡೆಯರ ಅಜ್ಞಾನುಸಾರವಾಗಿ ನಡೆಯಬೇಕಾದವರಾದುದರಿಂದ ಈಗ ನಾನು ಆ ಮನೆಗೆ ಹೋಗದೆ ತಪ್ಪದು." ಎಂದು ಹೇಳಿಕೊಳ್ಳುತ್ತ ಹೊರಟುಹೋದನು.

ಕಿರಿಯ ಲಕ್ಷ್ಮಣನು ವಸಂತಕನ ಮನೆಯ ಬಳಿಗೆಬಂದು ಬಾಗಿಲ ಬಳಿಯಲ್ಲಿದ್ದ ಸೀತೆಯನ್ನು ನೋಡಿ "ರಾಜಭಟರು ವಸಂತಕನನ್ನು ಧರ್ಮಸ್ಥಾನಕ್ಕೆ ಕರೆದುಯ್ಯುತ್ತಿರುವರು. ಪೆಟ್ಟಿಗೆಯಲ್ಲಿರುವ ರೂಪಾಯಿಗಳನ್ನು ಜಾಗ್ರತೆಯಾಗಿ ಈಸಿಕೊಂಡು ಬರಹೇಳಿ ನನ್ನನ್ನು ಕಳುಹಿರುವನು." ಎಂದು ಬೇಗಬೇಗ ಹೇಳಿದನು. ಪತಿಗೆ ಕಷ್ಟವುಂಟಾಗಿರುವುದೆಂಬ ಮಾತನ್ನು ಕೇಳಿದೊಡನೆಯೇ ಸೀತೆಯು ಎದೆಯೊಡೆದುಹೋಗಲು ತಟ್ಟನೆ ಒಳಕ್ಕೆ ಹೋಗಿ ರೂಪಾಯಿಯ ಚೀಲವನ್ನು ತಂದು ಲಕ್ಷ್ಮಣನ ಕೈಗಿತ್ತಳು. ಲಕ್ಷ್ಮಣನು ಆ ಹಣವನ್ನು ತರುತ್ತ ಮಾರ್ಗಮಧ್ಯದಲ್ಲಿಯೇ ಕಿರಿಯವಸಂತಕನನ್ನು ಕಂಡನು ಕಿರಿಯವಸಂತಕನಾದರೋ ತನಗಾದಪಟ್ಟಣದಲ್ಲಿ ಕಾಣಬರುತ್ತಿದ್ದ ವಿಚಿತ್ರ ವ್ಯಾಪಾರಗಳಿಗೆ ಬೆಕ್ಕಸಬೆರಗಾಗಿ ಏನುಮಾಡುವುದಕ್ಕೂ

ತೋರದೆ ನಾಲ್ಕು ದಿಕ್ಕನ್ನೂ ನೋಡುತ್ತ ನಿಂತಿದ್ದನು. ಅವನ ಸಹೋದರನಾದ ಹಿರಿಯ ವಸಂತಕನು ಆ ಗ್ರಾಮದಲ್ಲಿ ಹೆಸರು ಹೊಂದಿದವನಾದುದರಿಂದ ಈ ಕಿರಿಯ ವಸಂತಕನನ್ನು ಕಂಡವರೆಲ್ಲ ಅವನೆಂದೇ ಭ್ರಮಿಸಿ ಪೂರ್ವಪರಿಚಿತರಂತೆ ಈತನಿಗೆ ವಂದನೆಮಾಡುತ್ತ ಕುಶಲ ಪ್ರಶ್ನೆಯನ್ನು ವಿಚಾರಿಸಿ ಗೌರವಿಸುತ್ತಿದ್ದರು. ಕೆಲವರು-ನಿಮಗೆ ನಾವು ಕೊಡಬೇಕಾಗಿದ್ದ ಸಾಲವನ್ನು ಇದೊ, ತೆಗೆದುಕೊಳ್ಳಿರಿ ಎಂದು ಕೊಡುತ್ತಿದ್ದರು. ಮತ್ತೆ ಕೆಲವರು ತಾವು ಮಾಡಿದ ಮಹೋಪಕಾರವನ್ನು ನಾವು ಎಂದೆಂದಿಗೂ ಮರೆಯಲಾರವೆಂದು ನೆಲಮುಟ್ಟ ನಮಸ್ಕರಿಸುತ್ತಿದ್ದರು. ಅವನು ಒಬ್ಬರನ್ನೂ ಕಾಣದವನಾದರೂ ಎಲ್ಲರೂ ಅವನನ್ನು ಹೀಗೆ ಸಮಸ್ತ ವಿಧಗಳಲ್ಲಿಯೂ ಗೌರವಿಸುತ್ತಿರಲು ಬಟ್ಟೆ ಹೊಲಿಯುವವನೊಬ್ಬನು ಬಂದು "ಇದೊ, ನಿಮಗೆ ಕವಚಕ್ಕೋಸುಗ ಬಟ್ಟೆಯನ್ನು ತಂದಿರುವೆನು. ನಿಮ್ಮ ಮೈಯಳತೆಯನ್ನು ಕೊಡಿರಿ" ಎಂದು ಪ್ರಾರ್ಥಿಸಿದನು. ಮತ್ತೊಬ್ಬನು ಬಂದು "ನಿಮ್ಮ ಬಟ್ಟೆಗಳು ಸಿದ್ಧವಾಗಿರುವುವು. ಈ ದಿನ ಸಾಯಂಕಾಲ ಅವನ್ನು ನಿಮಗೆ ತಂದೊಪ್ಪಿಸುವೆನು." ಎಂದು ಹೇಳಿಹೋದನು. ಇನ್ನೊಬ್ಬನು "ಅಯ್ಯಾ, ನಿಮ್ಮ ಕೆಲಸವನ್ನೇ ಮಾಡುತ್ತಿರುವೆನು. ನಾಳೆ ತಂದೊಪ್ಪಿಸುವೆನು." ಎಂದು ವಾಗ್ದಾನಮಾಡಿ ಹೊರಟುಹೋದನು.

ಕಿರಿಯ ವಸಂತಕನು ಇದನ್ನೆಲ್ಲ ಕಂಡು ಮತಿಗೆಟ್ಟು ಎಲ್ಲಿಯೋ ಪಿಶಾಚಗಳ ಪಟ್ಟಣಕ್ಕೆ ಬಂದಂತಾಯಿತಲ್ಲಾ ಎಂದು ಚಿಂತಿಸುತ್ತಿರುವಾಗ ಆ ಲಕ್ಷ್ಮಣನು ಬಂದು "ನಿಮ್ಮನ್ನು ಧರ್ಮಸ್ಥಾನಕ್ಕೆ ಕರೆದುಯ್ಯುತ್ತಿದ್ದ ರಾಜಭಟರ ಕೈಯಿಂದ ಹೇಗೆ ತಪ್ಪಿಸಿಕೊಂಡು ಬಂದಿರಿ?" ಎಂದು ಕೇಳಿ ನೀವು ತರಹೇಳಿದ ಹಣವನ್ನು ತಂದೆನು" ಎಂದು ಕಿರಿಯವಸಂತಕನ ಮನಸ್ಸಿಗೆ ಮತ್ತಷ್ಟು ವಿಸ್ಮಯವನ್ನುಂಟುಮಾಡಿದನು. ಲಕ್ಷ್ಮಣನು ರಾಜಭಟರು ಕರೆದುಯ್ದುದು, ತಾನು ಹೇಳದುದೂ ಸೀತೆಯನ್ನು ಕೇಳಿ ತಂದೆನೆಂದು ಹಣವನ್ನು ಕೈಗಿತ್ತುದೂ ಕಿರಿಯವಸಂತಕನಿಗೆ ಮತ್ತಷ್ಟು ಮೌಢ್ಯವನ್ನುಂಟುಮಾಡಿದುವು. ಅವನು ಈ ಲಕ್ಷ್ಮಣನಿಗೆ ಮತಿಭ್ರಮೆಯುಂಟಾಗಿರಬಹುದೆಂದು ನಿಶ್ಚಯಿಸಿ, ತಾನೂ ವಂಚಿತನಾಗಿ ಕೆಲಸಗಾಣದೆ ಅಲೆಯುತ್ತಿರುವುದನ್ನು

ದುದಲ್ಲದೆ "ಮಧ್ಯಾಹ್ನ ನಾವು ಊಟಮಾಡಿದ ಮನೆಗೆ ಹೋಗಿ ನೀವು ತರಹೇ

ಪರ್ಯಾಲೋಚಿಸಿ, ಕಣ್ಣುಗಳನ್ನು ಮುಚ್ಚಿಕೊಂಡು "ಜಗದೀಶ್ವರಾ ಈ ಆಪತ್ಸಮುದ್ರದಿಂದ ನಮ್ಮನ್ನು ಹೇಗಾದರೂ ಪಾರುಮಾಡಿ ರಕ್ಷಿಸು ಎಂದು ದೇವತಾಪ್ರಾರ್ಥನೆಮಾಡುತ್ತಿದ್ದನು.

ಹೀಗೆ ಭಗವನ್ನಾಮಸ್ಮರಣೆಯನ್ನು ಮಾಡುತ್ತಿರುವಾಗ ಮತ್ತೊಬ್ಬ ಸುಂದರಿಯು ಬಂದು "ವಸಂತಕನೇ, ಇಂದು ಮಧ್ಯಾಹ್ನ ನೀನು ನಮ್ಮ ಮನೆಯಲ್ಲಿ ಊಟಮಾಡುತ್ತಿದ್ದಾಗ ನನಗೆ ಕೊಡುವೆನೆಂದು ಹೇಳಿದ ಚಂದ್ರಹಾರವೆಲ್ಲಿ?" ಎಂದು ಕೇಳಿದಳು. ಕಿರಿಯ ವಸಂತಕನಿಗೆ ಆ ಮಾತಿನಿಂದ ತಾಳ್ಮೆಯು ತಪ್ಪಲು "ಎಲೆ ಮಾಯಗಾರ್ತಿ, ಸಾಕು ಸುಮ್ಮನಿರು" ಎಂದು ದೂಷಿಸಿ, "ನಿನಗೆ ನಾನು ಆನಾಗಲೂ ಚಂದ್ರಹಾರವನ್ನು ಕೊಡುವೆನೆಂದು ಹೇಳಲೇ ಇಲ್ಲ. ನಿನ್ನಮನೆಯಲ್ಲಿ ಊಟಮಾಡಲೂ ಇಲ್ಲ, ನಿನ್ನನ್ನು ನಾನು ನೋಡಿದುದು ಇಲ್ಲ, ಇದಕ್ಕೆ ಮೊದಲು ನಿನ್ನ ಮುಖವನ್ನು ಅರಿಯಲೇ ಅರಿಯೆನು. ಹೊರಟುಹೋಗು.'' ಎಂದು ಗದರಿಸಿದನು. ಅವಳು "ಎಲೈ ಅನೃತವಾದಿಯೇ, ನೀನು ನಮ್ಮ ಮನೆಯಲ್ಲಿ ಈ ದಿನ ಮಧ್ಯಾಹ್ನ ಊಟ ಮಾಡುತ್ತಿದ್ದಾಗ ಚಂದ್ರಹಾರವನ್ನು ಕೊಡುವೆನೆಂದು ಮಾತುಕೊಡಲಿಲ್ಲವೆ? ಒಳ್ಳೆಯದಾಯಿತು, ಬಿಡು. ಚಂದ್ರಹಾರವಿಲ್ಲದ ಪಕ್ಷದಲ್ಲಿ ನೀನು ನನ್ನಿಂದ ತೆಗೆದುಕೊಂಡ ಚಿನ್ನದುಂಗುರವನ್ನಾದರೂ ಕೊಟ್ಟುಬಿಡು." ಎಂದು ಜಗಳ ಮಾಡಿದಳು. ಆಗ ವಸಂತಕನಿಗೆ ಬುದ್ಧಿಯು ಸ್ವಾಧೀನತಪ್ಪಿ "ಎಲೆ, ಮಿಥ್ಯಾವಾದಿನಿ, ನಿನ್ನ ಉಂಗುರವನ್ನೂ ಕಾಣೆನು, ನಿನ್ನನ್ನೂ ಕಾಣೆನು, ತೊಲತೊಲಗು."ಎಂದು ಕೂಗುತ್ತ ಓಡತೊಡಗಿದನು. ಅವನ ವಿಚಿತ್ರವಾದ ಚರ್ಯೆಯನ್ನೂ ಉನ್ಮತ್ತದೃಷ್ಟಿಯನ್ನೂ ಕಂಡು ಆ ಸ್ತ್ರೀಯು–ಅಯ್ಯೋ ಈ ದಿನ ಮಧ್ಯಾಹ್ನ ನಮ್ಮ ಮನೆಯಲ್ಲಿ ಸುಖವಾಗಿ ಕುಳಿತು ಊಟಮಾಡಿ ಚಂದ್ರಹಾರವನ್ನು ಕೊಡುವೆನೆಂದು ಹೇಳಿ ನನ್ನ ಉಂಗುರವನ್ನು ಕೊಂಡು ಹೋಗಿ ಈಗಾಗಲೇ ನಾನೇನೂ ಅರಿಯೆನೆಂದು ಬೊಗಳುತ್ತಿರುವನಲ್ಲಾ ! ಇದೇನಾಶ್ಚರ್ಯವು!—ಎಂದು ಚಿಂತಿಸುತ್ತಿದ್ದಳು. ಆ ವೂರಿನವರಿಗೆಲ್ಲರಿಗೂ ಉಂಟಾದ ಭ್ರಮೆಯೇ ಈ ಸ್ತ್ರೀಗೂ ಉಂಟಾಯಿತು.

ಈ ಸುಂದರಿಯು ಹೇಳಿದಂತೆ ಮಧ್ಯಾಹ್ನದಲ್ಲಿ ಅವಳ ಮನೆಗೆ ಹೋಗಿದ್ದನು. ಹಿರಿಯ ವಸಂತಕನು ಮನೆಯ ಬಾಗಿಲಲ್ಲಿ ಕೂಗಿ ಸೇವಕರು

ತನ್ಮೋಶೆಯುನಲ್ಲವೆಂದು ತಿಳಿದು ಬಾಗಿಲು ತೆರೆಯದಿದ್ದುದರಿಂದ ಬಲು ಕೋಪಗೊಂಡು ತಟ್ಟನೆ ಹಿಂತಿರುಗಿ ಅವಳು ಇಲ್ಲದ ಸಲ್ಲದ ಸಂಶಯವನ್ನಿಟ್ಟುಕೊಂಡು ಅವಳ ಮನೆಗೆ ಹೋಗಿದ್ದೆಯೆಂದೂ ಇವಳ ಮಗೆ ಹೋಗಿದ್ದೆಯೆಂದೂ ದೋಷಾರೋಪಣೆಮಾಡಿ ಮುಖವನ್ನು ಗಂಟಿಕ್ಕಿಕೊಂಡು ಹಿಂದೆ ಹಲವುಬಾರಿ ಬಾಗಿಲು ತೆರೆಯದಿದ್ದಂತೆಯೇ ಈದಿನವೂ ತನ್ನ ಪರಿಚಾರಿಣಿಯರಿಗೆ ಹೇಳಿ ಹಾಗೆ ಮಾಡಿಸಿರುವಳೆಂದು ನಿಶ್ಚಯಿಸಿ, ಕದ ತೆರೆಯದಿದ್ದುದಕ್ಕೆ ತಕ್ಕ ಫಲವನ್ನನುಭವಿಸಲಿ—ಎಂದು ಮತ್ತೆಲ್ಲಿಯಾದರೂ ಊಟಮಾಡಬೇಕೆಂದು ನಿಶ್ಚಯಿಸಿ, ಈಗ ಬಂದಿದ್ದಾ ಸ್ತ್ರೀಯಮನೆಗೆ ಹೋದನು. ಅವಳೂ ಅವನನ್ನು ಅತ್ಯಾದರದಿಂದ ಕಂಡು ಗೌರವಿಸಿ ಷಡ್ರಸೋಪೇತವಾದ ಭೋಜನವನ್ನು ಮಾಡಿಸಲು ಅವನು ಸಂತುಷ್ಟನಾಗಿ ಮಡದಿಯಮೇಲಣ ಕೋಪದಿಂದ ಅವಳಿಗೋಸುಗ ಮಾಡಿಸುತ್ತಿರುವ ಚಂದ್ರಹಾರವನ್ನು ಇವಳಿಗೆ ಕೊಡುವೆನೆಂದು ವಾಗ್ದಾನಮಾಡಿ ಇವಳ ಬೆರಲಲ್ಲಿದ್ದ ಉಂಗುರವನ್ನೀಸಿಕೊಂಡನು. ಅಕ್ಕಸಾಲಿಗನು ಸ್ವಲ್ಪಹೊತ್ತಿಗೆ ಮೊದಲು ಭ್ರಮೆಗೊಂಡು ಕಿರಿಯ ವಸಂತಕನ ಕೈಗಿತ್ತುಹೋದುದು ಆ ಚಂದ್ರಹಾರವನ್ನೇ. ಈ ಸುಂದರಿಯು ತನಗೆ ಚಂದ್ರಹಾರ ದೊರೆಯುವುದೆಂಬ ಸಂತೋಷದಿಂದ ಬೆರಲಲ್ಲಿದ್ದ ಉಂಗುರವನ್ನು ತತ್ಕ್ಷಣವೇ ತೆಗೆದುಕೊಟ್ಟಿದ್ದಳು. ಕಿರಿಯವಸಂತಕನು ಆ ಉಂಗುರವನ್ನು ತೆಗೆದುಕೊಂಡು ತಾನೇನನ್ನೂ ಅರಿಯದವನಂತೆ ಮರುಳುನೋಟವನ್ನು ನೋಡುತ್ತ ಮಿತಿಮೀರಿದ ಕೋಪದಿಂದ ಅವಾಚ್ಯಗಳನ್ನಾಡಿ ಇದುವರೆಗೆ ತಾನೆಂದೂ ಅವಳ ಮುಖವನ್ನೇ ಕಾಣದವನಂತೆ ಅಪಲಾಪಿಸುತ್ತ ಓಡಿಹೋದುದರಿಂದ ಅವನಿಗೆ ಚಿತ್ತಚಾಂಚಲ್ಯವುಂಟಾಗಿರುವುದು ನಿಶ್ಚಯವೆಂದು ದೃಢಪಡಿಸಿಕೊಂಡು ಈ ವಿಷಯವನ್ನವನ ಮಡದಿಗೆ ತಿಳಿಸಬೇಕೆಂದು ಹೊರಟು ಸೀತೆಯ ಬಳಿಗೆ ಹೋಗಿ ಈ ವಿಷಯಗಳನ್ನೆಲ್ಲ ಹೇಳುತ್ತಿರಲು ಹಿರಿಯವಸಂತಕನು ಒಬ್ಬ ರಾಜಭಟನೊಡನೆ ಅಲ್ಲಿಗೆ ಬಂದು ಕಿರಿಯ ಲಕ್ಷ್ಮಣನು ಯಾವ ಹಣವನ್ನು ತೆಗೆದುಕೊಂಡುಹೋದನೋ ಅದನ್ನೇ ಪೆಟ್ಟಿಗೆಯಿಂದ ತೆಗೆದುಕೊಡೆಂದು ಕೇಳಿದನು. ಅಯ್ಯೋ! ಪಾಪ! ಪ್ರಮಾದ ವಶದಿಂದ ಕಿರಿಯಲಕ್ಷ್ಮಣನು ಅದನ್ನು ತೆಗೆದುಕೊಂಡುಹೋಗಿ ಕಿರಿಯವಸಂತಕನಿಗೆಕೊಟ್ಟ ಸಂಗತಿಯು ಇವನಿಗೆ ತಿಳಿ

ಯಲ್ಲೇ ತಿಳಿಯದು. ಧರ್ಮಾಧಿಕಾರಿಯು ಇವನ ಪರಿಚಿತನಾಗಿದ್ದುದರಿಂದ ಮನೆಗೆ ಹೋಗಿ ಹಣವನ್ನು ರಾಜಭಟನ ಕೈಗೆ ಕೊಟ್ಟು ಕಳುಹಿಸಬಹು ದೆಂದು ಅಪ್ಪಣೆಯಿತ್ತು ಹಿರಿಯ ವಸಂತಕನನ್ನು ಮನೆಗೆ ಕಳುಹಿಸಿಕೊಟ್ಟಿದ್ದನು.

ಈಗಳಾಹಿರಿಯ ವಸಂತಕನು ಮಧ್ಯಾಹ್ನ ಊಟಕ್ಕೆ ಮನೆಗೆ ಬಂದಾಗ ಕದವನ್ನು ತೆರೆಯದೆ ಹೋದೆಯಲ್ಲಾ ಎಂದು ಸೀತೆಯನ್ನು ಮೂದಲಿಸಿ, ಆಳನ್ನು ಕಳುಹಿಸಿದರೂ ಆಪತ್ಸಮಯದಲ್ಲಿ ಹಣ ಕಳುಹಿಸದೆ ಇದ್ದುದು ನ್ಯಾಯವೇ?—ಎಂದು ದೂಷಿಸಲು, ಅವಳು ತನ್ನಪತಿಗೆ ಬುದ್ಧಿ ಭ್ರಮಣೆ ಯುಂಟಾಗಿರುವುದೆಂದು ಮತ್ತೊಬ್ಬ ಸುಂದರಿಯು ಬಂದು ತಿಳಿಸಿದ ಮಾತು ಸುಳ್ಳಲ್ಲವೆಂದು ನಂಬಿದಳು. ಊಟಮಾಡುತ್ತಿದ್ದಾಗ ಅವನು ನಾನು ನಿನ್ನ ಪತಿಯಲ್ಲವೆಂದೂ ಇಂದಿನವರೆಗೂ ನಾನು ಕಾಂಚೀಪುರಕ್ಕೆ ಬಂದವನೇ ಅಲ್ಲವೆಂದೂ ಹೇಳುತ್ತಿದ್ದುದೂ ನೆನಪಿಗೆ ಬರಲು, ತನ್ನಪತಿಗೆ ಬುದ್ಧಿ ಭ್ರಮೆಯುಂಟಾಗಿರುವುದು ನಿಸ್ಸಂದೇಹವೆಂದು ವಿಶ್ವಯಿಸಿಕೊಂಡಳು. ತರು ವಾಯ ರಾಜಭಟರಿಗೆ ಕೊಡಬೇಕಾದ ಹಣವನ್ನು ಕೊಟ್ಟು ಅವರನ್ನು ಕಳುಹಿಸಿ ತನ್ನ ಮನೆಯಲ್ಲಿದ್ದ ಪರಿಚಾರಕರನ್ನೆಲ್ಲ ಕರೆದು ನೀವೀತನ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿ ಕತ್ತಲೆಯ ಕಿರುಮನೆಯಲ್ಲಿ ಕೂಡಿಸಿ ಯಾರಾದರೊಬ್ಬರು ಬೇಗಹೋಗಿ ಒಬ್ಬ ಚಿಕಿತ್ಸಕನನ್ನು ಕರೆದುತನ್ನಿರಿ— ಎಂದಾಜ್ಞಾಪಿಸಿದಳು. ಪರಿಚಾರಕರು ಹಿರಿಯವಸಂತಕನನ್ನು ನಿಷ್ಕರುಣೆ ವಾಗಿ ಹಿಡಿದು ಕಟ್ಟಲಾರಂಭಿಸಿದೊಡನೆಯೇ ಆತನು ತನಗೆ ಚಿತ್ತಚಾಂಚಲ್ಯ ವಿಲ್ಲವೆಂದೂ ಸುಮ್ಮನೆ ಕಾಡಬೇಡಿರೆಂದೂ ಮೊರೆಯಿಟ್ಟನು. ಆದರೆ ಅವನ ಮೊರೆಯನ್ನು ಯಾರೂ ಲಾಲಿಸಲಿಲ್ಲ. ಅಯ್ಯೋಪಾಪ! ಅಣ್ಣ ತಮ್ಮಂದಿರಿಬ್ಬರೂ ಏಕರೂಪವಾಗಿದ್ದುದೇ ಇಂತಹ ದುರವಸ್ಥೆಗೆ ಕಾರಣವಾ ಯಿತು. ಹಿರಿಯವಸಂತಕನು ಕಟ್ಟುವುದಕ್ಕೆ ಅವಕಾಶಕೊಡದೆ ತಪ್ಪಿಸಿ ಕೊಂಡು ಕೂಗಿದಂತೆಲ್ಲ ಅಲ್ಲಿದ್ದವರಿಗೆ ಅವನು ಉನ್ಮತ್ತನೆಂಬ ಅಭಿಪ್ರಾ ಯವು ದೃಢಪಡುತ್ತ ಬಂದಿತು. ಇಷ್ಟರಲ್ಲಿ ಹಿರಿಯಲಕ್ಷ್ಮಣನು ಅಲ್ಲಿಗೆ ಬರಲು ರೂಪಾಯಿಯ ಚೀಲವನ್ನೇನುಮಾಡಿದೆಯೆಂದು ಕೇಳಿದೊಡನೆಯೇ ಅವನು ತಾನೇನನ್ನೂ ಅರಿಯೆನೆಂದು ದಿಗ್ಭ್ರಮೆಹಿಡಿದಂತೆ ನಾಲ್ದೆಸೆಯನ್ನೂ

ನೋಡುತ್ತ ಮಧ್ಯಾಹ್ನದಲ್ಲಿ ಊಟಕ್ಕೆ ಬಂದಾಗ ಮನೆಯವರು ಕದವನ್ನೇ ತೆರೆಯಲಿಲ್ಲವೆಂಬ-ತನ್ನೊಡೆಯನು ಹೇಳಿದ ಕಥೆಯನ್ನೇ ಮತ್ತೆ ಹೇಳತೊಡಗಲು ಒಡೆಯನಿಗೆ ಹಿಡಿದ ಹುಚ್ಚೇ ಸೇವಕನಿಗೂ ಹಿಡಿದಿರುವುದೆಂದು ನಿಶ್ಚಯಿಸಿ ಅಲ್ಲಿದ್ದವರು ಅವನನ್ನು ಕಟ್ಟಿ ಕರೆದುಕೊಂಡು ಹೋಗಿ ಹಿರಿಯ ವಸಂತಕನೊಡನೆ ಕತ್ತಲೆಯ ಕಿರುಮನೆಯಲ್ಲಿ ಕೂಡಿದರು.

ಸೀತೆಯು ತನ್ನ ಪತಿಯನ್ನು ಕಿರುಮನೆಯಲ್ಲಿ ಭದ್ರಪಡಿಸಿ ಬೀದಿಯ ಬಾಗಿಲಿಗೆ ಬಂದು ಚಿಕಿತ್ಸಕನಿಗೋಸುಗ ಇದಿರುನೋಡುತ್ತ ನಿಂತಳು. ಇಷ್ಟರಲ್ಲಿ ಒಬ್ಬ ಪರಿಚಾರಿಣಿಯು ಬೀದಿಯಿಂದ ಓಡುತ್ತ ಬಂದು ಸೀತೆಯನ್ನು ನೋಡಿ “ಅಮ್ಮಾ, ನಿನ್ನ ಪತಿಯೂ ಅವನ ಸೇವಕನೂ ಕಾವಲುಗಾರರ ಕೈಯಿಂದ ತಪ್ಪಿಸಿಕೊಂಡು ಹಿತ್ತಿಲಕಡೆಯಿಂದ ಓಡಿಹೋಗಿರಬೇಕು. ಈಗ ತಾನೆ ಅವರು ಹಿಂದಣ ಬೀದಿಯಕಡೆಯಿಂದ ಸ್ವೇಚ್ಛೆಯಾಗಿ ಹೋಗುತ್ತಿದ್ದರು.” ಎಂದು ನುಡಿದಳು. ಆ ಮಾತುಗಳನ್ನು ಕೇಳಿದೊಡನೆಯೇ ಸೀತೆಯು ಕೆಲವಂದಿ ಸೇವಕರನ್ನು ಕರೆದುಕೊಂಡು ಪತಿಯನ್ನು ಹಿಂದಕ್ಕೆ ಕರೆತರಬೇಕೆಂದು ಆದಾಸಿಯು ತೋರಿಸಿದ ಮಾರ್ಗದಲ್ಲಿ ಹೊರಟಳು. ಅವಳ ತಂಗಿಯೂ ಅವಳನ್ನನುಸರಿಸಿದಳು. ಇವರೆಲ್ಲರೂ ಸಮೀಪದಲ್ಲಿದ್ದ ಒಂದು ಮಠದಬಳಿಗೆ ಹೋಗುವಷ್ಟರಲ್ಲಿ ಕಿರಿಯ ವಸಂತಕನೂ ಅವನ ಭೃತ್ಯನೂ ತಲೆಬಾಗಿಸಿಕೊಂಡು ಹೋಗುತ್ತಿದ್ದುದನ್ನು ಕಂಡರು. ಸೀತೆಯು ತನ್ನ ಪತಿಯೂ ಅವನ ಭೃತ್ಯನೂ ತಪ್ಪಿಸಿಕೊಂಡು ಹೋಗುತ್ತಿರುವರೆಂದೇ ಮತ್ತೆ ಭ್ರಮೆಗೊಂಡಳು

ಕಿರಿಯವಸಂತಕನು ಈಗಲೂ ಖಿನ್ನನಾಗಿಯೇ ಇದ್ದನು. ಅಕ್ಕಸಾಲಿಗನು ಕೊಟ್ಟುಹೋದ ಚಂದ್ರಹಾರವು ಅವನ ಕೈಯಲ್ಲಿಯೇ ಇದ್ದಿತು. ಆ ಅಕ್ಕಸಾಲಿಗನು ಹಿರಿಯವಸಂತಕನಿಂದ ಕೂಲಿಯನ್ನು ತೆಗೆದುಕೊಂಡು ಅದನ್ನು ತನ್ನ ಸಾಲಿಗರಿಗೆ ಕೊಟ್ಟು ಬಿಡುತೆಹೊಂದಿ ಆಮಾರ್ಗವಾಗಿಯೇ ಬರುತ್ತ, ಕಿರಿಯವಸಂತಕನನ್ನು ನೋಡಿ—ಕೂಲಿಯನ್ನು ಕೊಡಬೇಕಾಗುವುದೆಂದು ಚಂದ್ರಹಾರವನ್ನು ತೆಗೆದುಕೊಳ್ಳಲೇ ಇಲ್ಲವೆಂದು ಹೇಳಿದೆಯಲ್ಲ! ಇದು ನಿನಗೆ ಘನತೆಯೇ?—ಎಂದು ನಿಷ್ಠುರೋಕ್ತಿಗಳನ್ನಾಡತೊಡಗಿದನು. ಆಗ ಕಿರಿಯವಸಂತಕನು “ಇಂದು ಮಧ್ಯಾಹ್ನ ನನ್ನಷ್ಟಕ್ಕೆ ನಾನು ದಾರಿ

ಯಲ್ಲಿ ಹೋಗುತ್ತಿದ್ದಾಗ ನೀನಾಗಿ ಬಂದು ನಾನು ಬೇಡವೆನ್ನುತ್ತಿದ್ದರೂ ಕೇಳದೆ ಚಂದ್ರಹಾರವನ್ನು ನನ್ನಮೇಲೆ ಹಾಕಿಹೋದೆಯಲ್ಲ! ಆಗಳಿಂದ ನಾನು ನಿನ್ನ ಮುಖವನ್ನಾದರೂ ನೋಡಿದ್ದೆನೆ? " ಎಂದು ಕೇಳಿದನು. ಈ ಸಮಯದಲ್ಲಿ ಸೀತೆಯು ಅಲ್ಲಿಗೆ ಬಂದು, "ಕಾವಲುಗಾರರಿಂದ ತಪ್ಪಿಸಿಕೊಂಡು ಬೀದಿಗೆ ಓಡಿಹೋದ ನನ್ನ ಗಂಡನು ಇಲ್ಲಿರುವನು. ಬೇಗ ಹಿಡಿದುಕೊಳ್ಳಿರಿ" ಎಂದು ತನ್ನ ಸೇವಕರಿಗೆ ಹೇಳಿದಳು. ಆಗ ಅವರೆಲ್ಲರೂ ಅರಚುತ್ತ ಅವನನ್ನು ಹಗ್ಗದಿಂದ ಕಟ್ಟಿ ಎಳೆದುಕೊಂಡು ಹೋಗಬೇಕೆಂದು ಬಲಾತ್ಕರಿಸತೊಡಗಿದರು. ಅದನ್ನು ಕಂಡು ಕಿರಿಯ ವಸಂತಕನೂ ಕಿರಿಯ ಲಕ್ಷ್ಮಣನೂ ಭಯಾಕ್ರಾಂತರಾಗಿ ಬಂದೇ ದಾರಿಗೆಹಾಯಿ ಸಮೀಪದಲ್ಲಿದ್ದ ಮಠವನ್ನು ಹೊಕ್ಕು ಪ್ರಾಣಗಳನ್ನು ದಕ್ಕಿಸಿಕೊಳ್ಳಲು ಅಲ್ಲಿದ್ದ ಯೋಗಿನಿಯನ್ನು ಮರೆಹೊಕ್ಕರು.

ಆಯೋಗಿನಿಯು ಅವರಿಗಭಯವನ್ನಿತ್ತು ಅಂಜಬೇಡವೆಂದು ತಿಳಿಸಿ ತಾನು ಹೊರಕ್ಕೆ ಬಂದು ಈ ಸಂಕ್ಷೋಭೆಗೆ ಕಾರಣವೇನೆಂದು ವಿಚಾರಿಸಿದಳು. ಅವಳು ಗಾಂಭೀರ್ಯವತಿಯೂ ಪೂಜನೀಯೆಯೂ ಆಗಿದ್ದುದಲ್ಲದೆ ತಾನು ಕಂಡ ವಿಷಯದ ತತ್ವವನ್ನು ಸೂಕ್ಷ್ಮದೃಷ್ಟಿಯಿಂದ ಕಂಡುಹಿಡಿದು ನ್ಯಾಯವನ್ನು ತೀರಿಸುವ ವಿಷಯದಲ್ಲಿಯೂ ಕೂಡ ಸಮರ್ಥೆಯಾಗಿದ್ದುದರಿಂದ ಅದರ ಕಾರಣವೇನೆಂಬುದನ್ನರಿತುಕೊಳ್ಳದೆ ತನ್ನನ್ನು ಮರೆಹೊಕ್ಕವರನ್ನು ಸುಲಭವಾಗಿ ಇತರರ ಪಾಲುಮಾಡಲೊಪ್ಪಲಿಲ್ಲ. ಅದುಕಾರಣ ಸೀತೆಯು ತನ್ನ ಪತಿಗೆ ಉನ್ಮಾದವುಂಟಾಗಿ ಅವನು ಹೀಗೆ ಓಡಿಬಂದಿರುವನೆಂದು ಹೇಳಲು ಆ ಮಾತಿಗೆ ಒಪ್ಪದೆ "ನಿನ್ನ ಪತಿಗೆ ಇಷ್ಟು ಆಕಸ್ಮಿಕವಾಗಿ ಹುಚ್ಚು ಹಿಡಿಯಲು ಕಾರಣವೇನು? ಇತರರು ಕೊಡಬೇಕಾಗಿದ್ದ ಸಾಲವಾಗಲಿ, ಇತರರ ಬಳಿಯಲ್ಲಿಟ್ಟಿದ್ದ ಹಣ ಕಾಸುಗಳಾಗಲಿ ಕೈತಪ್ಪಿಹೋಯಿತೇ? ಅವನಿಗೆ ಪ್ರಾಣಸಮಾನನಾದ ಮಿತ್ರನಾವನಾದರೂ ಲೋಕಾಂತರಕ್ಕೆ ಹೋದನೆ? " ಎಂದು ಕ್ರಮವಾಗಿ ವಿಚಾರಿಸತೊಡಗಿದಳು. ಸೀತೆಯು ಅಂತಹುದಾವುದೂ ಸಂಭವಿಸಲಿಲ್ಲವೆಂದುತ್ತರವಿತ್ತಳು. ಆಗಳಾಯೋಗಿನಿಯು ಸ್ವಲ್ಪಹೊತ್ತು ಆಲೋಚಿಸಿ "ನಿನ್ನ ಪತಿಯು ನಿನ್ನನ್ನುಳಿದು ಮತ್ತಾವಳಾದರೊಬ್ಬಳಲ್ಲಿ ಅನುರಕ್ತನಾಗಿರುವನೇನೊ? ಅದುಕಾರಣವಾಗಿದ್ದರೂ ಇರಬ

ಹುದು." ಎಂದಳು. ಆಗ ಸೀತೆಯು "ಈತನು ಮೊದಮೊದಲು ಮನೆಗೆ ಬಾರದೆ ನಿಲ್ಲುತ್ತಿದ್ದಾಗ ಮತ್ತೊಬ್ಬ ಮಾನಿನಿಯ ಮೇಲಣ ಮೋಹದಿಂದ ಹೀಗೆ ಬಾರದೆ ನಿಲ್ಲುವನೇನೋ ಎಂದು ನಾನು ಸಂದೇಹಪಡುತ್ತಿದ್ದೆನು. ಈಗ ನನಗೆ ಯಥಾರ್ಥವಾದಂಶವು ತಿಳಿದುದರಿಂದ ನಾನೇನಾದರೂ ಆಕ್ಷೇಪಿಸುವೆನೇನೊ ಎಂಬ ಭೀತಿಯಿಂದಲೇ ಬಾರದಿರುವನು—ಎಂದು ವ್ಯಕ್ತವಾಯಿತು." ಎಂದು ನುಡಿದಳು. ಆಗ ಯೋಗಿನಿಯು ಆ ಮಾತುಗಳನ್ನು ಕೇಳಿ ಪ್ರತಿದಿನವೂ ಇವಳು ಮನೆಯಲ್ಲಿ ಕೊಡುವ ಹಿಂಸೆಯಿಂದಲೇ ಈತನಿಗೆ ಮನೋವೈಕಲ್ಯವುಂಟಾಗಿರಬಹುದೆಂದು ಸಂದೇಹಪಟ್ಟು ನಿಶ್ಚಯವನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ "ಆತನು ಅಂತಹ ಕೆಲಸಗಳನ್ನು ಮಾಡಿದಾಗ ನೀನು ನಾಲ್ಕು ಬಿರುಮಾತುಗಳನ್ನಾಡಿ ತಿರಸ್ಕರಿಸಬೇಕಾಗಿದ್ದಿತು." ಎಂದು ನುಡಿದಳು. ಆಗ ಸೀತೆಯು "ನಾನೇನು ಸುಮ್ಮನಿರುವೆನೇ? ಶಕ್ಯವಾದಷ್ಟು ನಿಂದಿಸಿಯೇ ಇರುವೆನು." ಎಂದಳು ಯೋಗಿನಿಯು "ಆದರೇನು? ನೀನು ಸರಿಯಾಗಿ ಬುದ್ಧಿ ಹೇಳಿರಲಾರೆ." ಎಂದಳು. ಆಗ ಸೀತೆಯು ತಾನಾವಿಷಯದಲ್ಲಿ ಪಟ್ಟ ಶ್ರಮೆಯನ್ನು ಕುರಿತು ಯೋಗಿನಿಗೆ ಸಂಪೂರ್ಣ ವಿಶ್ವಾಸವನ್ನುಂಟುಮಾಡಿಕೊಡಬೇಕೆಂಬ ಉದ್ದೇಶ್ಯದಿಂದ ಅವಳಕಡೆಗೆ ತಿರುಗಿ "ನಾನು ಮಾಡಿದುದನ್ನೆಲ್ಲ ಯಥಾಸ್ಥಿತವಾಗಿ ತಿಳಿಸುವೆನು ಕೇಳು ; ಹಗಲಿರುಳೂ ನನಗೂ ನನ್ನ ಪತಿಗೂ ಬೇರೆಮಾತುಗಳೇ ಇಲ್ಲ. ರಾತ್ರಿ ಹಾಸಿಗೆ ಸೇರಿದ ಮೊದಲು ನಿದ್ರೆ ಹಿಡಿಯುವವರೆಗೂ ಕಿವಿಯಲ್ಲಿ ಈ ಮಾತುಗಳನ್ನೇ ಗೊಣಗುಟ್ಟುತ್ತಿದ್ದೆನು. ಊಟಮಾಡುವಾಗಲೂ ಈ ಮಾತುಗಳನ್ನು ಕಿವಿಗೆ ಸೋಕಿಸದೆ ತುತ್ತನ್ನು ನುಂಗಲೀಯೆನು. ನಾವಿಬ್ಬರೂ ಸೇರಿದಾಗ ಯಾವಾಗಲೂ ಬೇರೆಮಾತನ್ನೇ ಎತ್ತುತ್ತಿರಲಿಲ್ಲ. ಆತನು ನಾಲ್ವರ ನಡುವೆ ಕುಳಿತಿದ್ದಾಗಲೂ ಕೂಡ ಮಾತಿನ ನಡುವೆ ಸಮಯಮಾಡಿಕೊಂಡು ಈ ವಿಷಯವನ್ನು ಪ್ರಸ್ತಾಪಿಸಿ ಅದನ್ನು ಈ ವಿಷಯಕ್ಕೆ ತಿರುಗಿಸಿ ಮನಸ್ಸಿಗೆ ನಾಟುವಂತೆ ಹಂಗಿಸುತ್ತಿದ್ದೆನು. ಹೀಗೆ ಪ್ರತಿನಿಮಿಷದಲ್ಲಿಯೂ ತಲೆಬಾಗಿಸುವಂತೆ ಬಿರುನುಡಿಗಳನ್ನಾಡುತ್ತಿದ್ದರೂ ಈತನು ತನ್ನ ಬುದ್ಧಿಯನ್ನು ಬಿಡದಿರುವನು." ಎಂದು ಇದ್ದ ರಹಸ್ಯವನ್ನೆಲ್ಲ ಹೊರಗೆಡಹಿದಳು.

ಹೀಗೆ ಆ ಯೋಗಿನಿಯು ಉಪಾಯಮಾಡಿ ಇದ್ದ ಸಂಗತಿಯನ್ನೆಲ್ಲ ಅವಳ ಬಾಯಿಂದಲೇ ಹೊರಡಿಸಿ " ನೀನು ಆಡುತ್ತಿದ್ದ ಮಾತುಗಳಿಂದಲೇ ನಿನ್ನ ಪತಿಗೆ ಹುಚ್ಚು ಹಿಡಿದಿರುವುದು. ಇದರಲ್ಲಿ ಸಂದೇಹವಿಲ್ಲ. ಹಗಲಿರುಳೂ ಕಿವಿಯಬಳಿ ಸೇರಿ ಆಡುತ್ತಿರುವ ಮಡದಿಯ ಮಾತುಗಳು ಹುಚ್ಚು ನಾಯಿ ಕಡಿದ ವಿಷಕ್ಕಿಂತ ಹೆಚ್ಚಾಗಿ ಎಂತಹ ಪರಮಶಾಂತ ಸ್ವಭಾವವುಳ್ಳವನಿಗೂ ಹುಚ್ಚು ಹಿಡಿಸುವುದು. ನಿನ್ನ ಜಗಳಗಂಟಿತನದಿಂದ ಆತನು ರಾತ್ರಿ ಕಾಲಗಳಲ್ಲಿ ನಿದ್ದೆಯಿಲ್ಲದೆ ಕಂಗೆಟ್ಟಿರುವಂತೆ ತೋರುವುದು. ಸ್ವಲ್ಪ ನಿದ್ರೆಗೆಟ್ಟರೂ ಬುದ್ಧಿಗೆಟ್ಟುಹೋಗುವುದೇನೂ ಆಶ್ಚರ್ಯವಲ್ಲ. ನೀನಾಡುತ್ತಿದ್ದ ಮಾತುಗಳಿಂದ ತಿಂದ ಅನ್ನವು ಒಡಲಿಗೆ ಹಿಡಿಯದೆ ಹೋಗಿರುವುದು. ಹೀಗೆ ನಿದ್ರಾಹಾರಗಳಿಲ್ಲದೆ ದೇಹಸೌಖ್ಯವನ್ನು ಕಳೆದುಕೊಂಡು ಮನೆಯೇ ಮಹಾರಣ್ಯವಾಗಿದ್ದವನಿಗೆ ಆವರೋಗ ತಾನೆ ಬಾರದಿದ್ದೀತು? ಇದೆಲ್ಲ ನೀನು ಮಾಡಿಕೊಂಡ ದೋಷದ ಫಲವೇ ಸರಿಯೆಂಬುದಕ್ಕೆ ಸಂದೇಹವಿಲ್ಲ. ಸ್ವಯಂಕೃತಾಪರಾಧಫಲವನ್ನು ನೀನೇ ಅನುಭವಿಸಬೇಕು " ಎಂದು ಹಂಗಿಸತೊಡಗಿದಳು.

ಆಗ ಸುಭದ್ರೆಯು ಅಕ್ಕನಮೇಲಣ ಅಭಿಮಾನದಿಂದ ಮುಂದೆ ಬಂದು " ನಮ್ಮ ಅಕ್ಕನು ಸಲ್ಲುನುಡಿಗಳಿಂದಲೇ ಗಂಡನಿಗೆ ಬುದ್ಧಿವಾದ ಹೇಳುತ್ತಿದ್ದಳು." ಎಂದು ನುಡಿದು ಸೀತೆಯಕಡೆಗೆ ತಿರುಗಿ " ಅಕ್ಕಾ, ಈ ಯೋಗಿನಿಯು ತಪ್ಪಿತವನ್ನೆಲ್ಲ ನಿನ್ನಮೇಲೆ ಹೊರಿಸಿ ಆಕ್ಷೇಪಿಸುತ್ತಿದ್ದರೂ ಮರುಮಾತಾಡದೆ ಸುಮ್ಮನೇಕಿರುವೆ?" ಎಂದು ಮೆಲ್ಲನೆ ಕೇಳಿದನು. ಆಗ ಸೀತೆಯು " ತಂಗೀ? ಈಕೆಯು ಅತಿ ಚಮತ್ಕಾರದಿಂದ ನನ್ನ ಗುಟ್ಟನ್ನೆಲ್ಲ ಬಯಲುಪಡಿಸಿ ನಾನು ಉಸಿರೆತ್ತದಿರುವಂತೆ ಮಾಡಿಟ್ಟಳು. ಇನ್ನೇನು ತಾನೆ ಮಾಡಲಾದೀತು ? " ಎಂದು ಖಿನ್ನಳಾಗಿ ಉತ್ತರವಿತ್ತಳು.

ಹೀಗೆ ಸೀತೆಯು ತನ್ನ ನಡತೆಗೋಸುಗ ನಾಚಿದಳಾದರೂ ಮೂರ್ಖತೆಯಿಂದ ತನ್ನ ಪತಿಯನ್ನು ತನಗೊಪ್ಪಿಸಬೇಕೆಂದು ಆ ಯೋಗಿನಿಯನ್ನು ಬಲಾತ್ಕರಿಸದೆ ಬಿಡಲಿಲ್ಲ. ಯೋಗಿನಿಯಾದರೋ ಅವನನ್ನು ಅಂತಹ ಮಡದಿಯ ವಶಕ್ಕೆ ಕೊಡಲಿಷ್ಟವಿಲ್ಲದವಳಾಗಿ ಒಳ್ಳೆಯ ಮಾತುಗಳಿಂದ ಅವನನ್ನು ಸ್ವಸ್ಥಚಿತ್ತನನ್ನಾಗಿ ಮಾಡಲು ನಿಶ್ಚಯಿಸಿ, ಯಾರನ್ನೂ ಒಳಕ್ಕೆ ಸೇರಗೊಡದೆ ತಾನುಮಾತ್ರ ಮಠದೊಳಕ್ಕೆ ಹೋಗಿ ಕದವನ್ನು ಮುಚ್ಚಿಕೊಂಡಳು.

ಮೂರನೆಯ ಪ್ರಕರಣ.

ಎಲಾ, ಭಾರತೀಯ ಭಾಗ್ಯದೇವತೆಯರಿರಾ ! ನೀವು ದೇಶಭಾಷೆ
ಯಲ್ಲಿ ಆಸಕ್ತಿಯರಾದರೆ ಆವಾವ ಗ್ರಂಥಗಳನ್ನು ವ್ಯಾಸಂಗಮಾಡಬೇಕೆಂ
ಬುದನ್ನು ಕುರಿತು ಒಂದೆರಡು ಮಾತನ್ನು ಇಲ್ಲಿ ತಿಳಿಸುವೆವು. ಧರ್ಮಪ್ರಭು
ಗಳಾದ ಆಂಗ್ಲೇಯರು ನಮ್ಮನ್ನು ಶಾಸನಮಾಡಲಾರಂಭಿಸಿ ಐಹಿಕ ಸೌಖ್ಯಕ್ಕೆ
ಬೇಕಾಗುವ ಎಷ್ಟೋ ಸಾಮಗ್ರಿಗಳನ್ನು ಒದಗಿಸಿಕೊಟ್ಟಿರುವರು. ಅವುಗ
ಳಲ್ಲಿ ಐಹಿಕಾಮುಷ್ಮಿಕ ಸೌಖ್ಯಗಳಿಗೆರಡಕ್ಕೂ ಮುಖ್ಯಾಧಾರವಾದ ಜ್ಞಾನ
ವನ್ನು ಸಂಪಾದಿಸುವುದಕ್ಕೆ ಸಾಧಕವಾದ ಗ್ರಂಥಪ್ರಚಾರಣ ಸೌಕರ್ಯ
ವೊಂದು ಬಹು ಪ್ರಯೋಜನಕಾರಿಯಾದುದು. ಈ ಸೌಕರ್ಯವನ್ನು
ನಮ್ಮ ದೇಶೀಯರು ಪಡೆಯುವುದಕ್ಕೆ ಮೊದಲು ಹಲವುಮಂದಿ ವಿದ್ಯಾವಿ
ವೇಕ ಸಂಪನ್ನರಾದ ದೇಶಬಂಧುಗಳು ತಂತಮ್ಮ ಅನುಭವಗಳನ್ನು ತಾಳಪತ್ರ
ಗಳಲ್ಲಿಯೋ ಶಿಲಾಶಾಸನಗಳಲ್ಲಿಯೋ ತಾಮ್ರದ ತಗಡುಗಳಲ್ಲಿಯೋ
ಬರೆದಿಟ್ಟು ತಮ್ಮ ಮರಣಕಾಲದಲ್ಲಿ ಪುತ್ರಾದಿಗಳಿಗೆ ಅದನ್ನೇ ಅನರ್ಘ
ವಾದ ಆಪದ್ಧನವನ್ನಾಗಿ ಕೊಡುತ್ತಿದ್ದರು. ಅವರ ಉತ್ತರಾಧಿಕಾರಿಗಳು
ದೈವೇಚ್ಛೆಯಿಂದಲೋ ವಿದ್ಯಾವಂತರ ಸಾಹಾಯ್ಯದಿಂದಲೋ ಆ ಲೇಖನಗ
ಳನ್ನು ಮನನಮಾಡಿ ತಮ್ಮ ಅನುಭವವನ್ನು ತಮ್ಮನ್ನಾಶ್ರಯಿಸುವ ಒಬ್ಬಿ
ಬ್ಬರು ಶಿಷ್ಯರಿಗೆ ಮಾತ್ರ ಉಪದೇಶಿಸಿ ಕೃತಾರ್ಥರಾಗಿ ಬಿಡುತ್ತಿದ್ದರು. ಇನ್ನು
ಕೆಲವು ಸಂದರ್ಭಗಳಲ್ಲಿ ಆ ಲೇಖನಗಳೆಲ್ಲ ಬರೆದಿಟ್ಟಲ್ಲಿಯೇ ನಾಶವಾಗಿ
ಮಣ್ಣುಪಾಲಾಗಿಯೂ ಇರುವುದುಂಟು. ಹೇಗೂ ಹಿರಿಯರ ಅನುಭವಪೂ
ರ್ವಕವಾದ ಲೇಖನಗಳು ಲೋಕಕ್ಕೆಲ್ಲ ಪ್ರಯೋಜನಕಾರಿಯಾಗುವುದು
ಅಂದಿನಕಾಲದಲ್ಲಿ ಅಶಕ್ಯವಾದ ಮಾತಾಗಿದ್ದಿತು. ಒಂದುವೇಳೆ ಒಬ್ಬೊಬ್ಬ
ರಿಗೆ ದೊರೆತರೂ ನೀತಿವಾಕ್ಯರೂಪವಾದ ಆ ರತ್ನಗಳ ಬೆಲೆಯನ್ನು ಕಂಡು
ಕೊಳ್ಳುವವರೂ ವಿರಳವಾಗಿದ್ದರು. ದೋಷಜ್ಞರಾದ ಕೆಲಮಂದಿ ಪಂಡಿತರು
ಬರಿಯ ನೀತಿವಾಕ್ಯಗಳು ಶಿಷ್ಯರ ಮನಸ್ಸಿಗೆ ರುಚಿಸಲಾರವೆಂದು ಚಿಂತಿಸಿ
ಕಥಾರೂಪಗಳಿಂದ ನೀತಿಯನ್ನು ಕಲಿಸಲಾರಂಭಿಸಿ ತಂತಮ್ಮ ಬುದ್ಧಿಶಕ್ತಿ
ಯನ್ನುಪಯೋಗಿಸಿ ಕಥೆಗಳನ್ನು ಬರೆದಿಟ್ಟರು. ಕಾಲಕ್ರಮದಲ್ಲಿ ಜನ್ಮಿಸಿದ

ಯರಿರಾ. ನೀವು ಗ್ರಂಥವ್ಯಾಸಂಗಮಾಡುವುದಕ್ಕೆ ತೊಡಗಿದರೆ ಕೈಗೆ ಸಿಕ್ಕಿದ ಪುಸ್ತಕಗಳನ್ನೆಲ್ಲ ಓದಬೇಕೆಂದು ನಾವು ಹೇಳುವುದಿಲ್ಲ. ಮೊಟ್ಟಮೊದಲು ವರ್ಣಪರಿಚಯ ಮಾಡಿಕೊಂಡಕೂಡಲೇ "ಕೃಷ್ಣರಾಜ ವಾಣೀವಿಲಾಸ" ಎಂಬ ಅಭಿಧಾನವುಳ್ಳ ಕನ್ನಡದ "ಮಹಾಭಾರತ" "ರಾಮಾಯಣ" ಇವುಗಳನ್ನೋದಿ ಅದರಲ್ಲಿರುವ ಪಾತ್ರಗಳ ಲಕ್ಷಣವನ್ನು ಪರಿಶೀಲಿಸಿರಿ. "ದಮಯಂತೀ-ನಳ, ಸೀತೆ-ರಾಮ, ಸಾವಿತ್ರಿ-ಸತ್ಯವಂತ, ಚಂದ್ರಮತಿ-ಹರಿಶ್ಚಂದ್ರ" ಮುಂತಾದ ಪುರಾಣೋಕ್ತರಾದ ದಂಪತಿಗಳ ನಡೆವಳಿಯನ್ನು ತಿಳಿದು ಅವರಲ್ಲಿದ್ದ ಸದ್ಗುಣಗಳನ್ನು ನೀವೂ ಅವಲಂಬಿಸಿರಿ. ಅದು ದೃಢಪಟ್ಟಬಳಿಕ ಚರಿತ್ರೆಗಳಲ್ಲಿ ಉಕ್ತರಾದ ಮಹನೀಯರ ಕಥೆಗಳನ್ನೋದಿರಿ. ಅದಾದಮೇಲೆ ಕಲ್ಪಿತಗ್ರಂಥಗಳ ಕಡೆಗೆ ತಿರುಗಿರಿ ಅಷ್ಟರೊಳಗಾಗಿ ಭಾಷಾಶೈಲಿಯನ್ನೂ ವಿಷಯ ವಿಶೇಷಗಳನ್ನೂ ಯೋಗ್ಯತಾಯೋಗ್ಯತೆಗಳನ್ನೂ ಕಂಡುಕೊಳ್ಳುವ ಸಾಮರ್ಥ್ಯವು ನಿಮಗೆ ತಾನಾಗಿಯೇ ಲಭಿಸುವುದು. ಗಂಭೀರವಾದ ಸರಣಿಯೂ ಶುದ್ಧವಾದ ಭಾಷೆಯೂ ಸುಲಭವಾದ ಪದಬಂಧವೂ ಯಾವ ಪುಸ್ತಕದಲ್ಲಿರುವುದೋ ಅದನ್ನೇ ಉತ್ತಮಗ್ರಂಥವೆಂದು ಭಾವಿಸಿರಿ. ಯಾವನೋ ಒಬ್ಬ ದುರ್ವೃತ್ತನು ಒಬ್ಬಾನೊಬ್ಬ ಮಾನವತಿಯನ್ನು ದುರ್ಮಾರ್ಗಕ್ಕೆಳೆದ ವಿಧಾನವನ್ನೂ ಒಬ್ಬ ಸ್ವೈರಿಣಿಯು ಧರ್ಮನಿರತನಾದೊಬ್ಬ ತರುಣನನ್ನು ತನ್ನ ಬಲೆಗೆ ಕೆಡಹಿಕೊಳ್ಳಲೋಸುಗ ಮಾಡಿದ ವಿಲಾಸವೈಖರಿಗಳನ್ನೂ, ಮಿಥ್ಯಾವಾದಿಗಳು ತಾವು ಆಡಿದ ಅಸತ್ಯವನ್ನು ಊರ್ಜಿತಮಾಡಿಕೊಳ್ಳಲೋಸುಗ ಕಲ್ಪಿಸುವ ನವೀನಯುಕ್ತಿಗಳನ್ನೂ, ಒಬ್ಬ ಚೋರಾಗ್ರೇಸರನು ನಡೆಯಿಸಿದ ಚೌರ್ಯಕ್ರಮವನ್ನೂ, ವಂಚಕರ ಸಂಚುಗಳನ್ನೂ, ಮುಖ್ಯವಾಗಿ ವರ್ಣಿಸಿ ರಚಿಸಿದ ಪುಸ್ತಕಗಳು ಸರ್ವಾತ್ಮನಾ ಓದಲರ್ಹವಾದುವಲ್ಲವೆಂಬುದನ್ನು ನೆನಪಿನಲ್ಲಿಡಿರಿ. ಎಲೌ ವರವರ್ಣಿನಿಯರಿರಾ, "ತಾರಾಶಶಾಂಕವಿಜಯ—ರಾಧಾಕೃಷ್ಣಸಾಂಗತ್ಯ—ಕೃಷ್ಣಮೋಹಿನೀವಿಲಾಸ—ಅಮರುಕ—ಕೃಷ್ಣಕರ್ಣಾಮೃತ" ಎಂಬ ಹೆಸರಿನ ಕೆಲವು ಗ್ರಂಥಗಳು ದೇವತಾಸ್ತೋತ್ರಗಳೆಂಬ ಹೆಸರನ್ನು ಹೊಂದಿ ಶೃಂಗಾರರಸವನ್ನೇ ಪ್ರಾಧಾನ್ಯಮಾಡಿಕೊಂಡು ಜೇನುತೊಡೆದ ಕತ್ತಿಯಂತೆ ಸವಿದೋರಿ ಸಾಯಿಸುವುವು. ಇವುಗಳ ವಿಷಯದಲ್ಲಿ ಬಹು ಜಾಗರೂಕತೆಯಿಂದಿದ್ದು ತಳತಳಿಸುವ ಎಳೆ ನಾಗರವನ್ನು

ಕಂಡಂತೆ ದೂರಮಾಡಿರಿ. ಹಾಗೆ ಮಾಡದೆ ನೀವು ಎಡೆಗೊಡುವಿರಾದರೆ ಅವು ಗಳ ವಿಷದಸೋಂಕು ಮಕ್ಕಳು ಮರಿಗಳಿಗೆಲ್ಲ ತಗುಲಿ ಸಂಸಾರವು ಕಟ್ಟಿ ಹುಳುವಿಗೀಡಾದ ಬಿದಿರಂತಾಗುವುದರಲ್ಲಿ ಸಂಶಯವಿಲ್ಲ. ಸದ್ಗ್ರಂಥ ವ್ಯಾಸಂಗದಿಂದ ಸದ್ಗುಣಗಳು ತಾವಾಗಿಯೇ ತಲೆದೋರಿ ನಿಮ್ಮ ಸತೀತ್ವವನ್ನು ಸಂರಕ್ಷಿಸುವುವು. ನಿಮ್ಮ ಕರ್ತವ್ಯವನ್ನು ನೀವೇ ಅರಿಯುವಿರಿ. ಆಗಾಗ ವೃತ್ತಪತ್ರಗಳನ್ನೋದಿಕೊಳ್ಳುವುದರಿಂದ ಲೋಕವ್ಯವಹಾರಜ್ಞಾನವು ಅನಂತವಾಗಿ ಲಭಿಸುವುದು. ಇವುಗಳೊಂದಿಗೆ ಹೊಲಿಗೆಯ ಕೆಲಸ, ಕಾಗದವನ್ನು ಮಡಿಸಿ ಮಾಡುವ ಹೂ ಮೊದಲಾದ ಸಣ್ಣ ಕೆಲಸಗಳು, ಹುಲ್ಲಿನಿಂದಲೂ ಬೆತ್ತದಿಂದಲೂ, ದಾರದಿಂದಲೂ ನಾರಿನಿಂದಲೂ ಮಾಡುವ ನೆಯ್ಗೆಯ ಕೆಲಸಗಳು ಇವುಗಳನ್ನು ಬಾಲ್ಯದಲ್ಲಿಯೇ ಚೆನ್ನಾಗಿ ಕಲಿಯಿರಿ. ಇವುಗಳಿಂದ ಕಾಲವು ವಿನೋದವಾಗಿ ಕಳೆಯುವುದು ಮಾತ್ರವಲ್ಲದೆ ಕಣ್ಣಿಗೂ ಕೈಗೂ ಸಾಕಾಗುವಷ್ಟು ಕೆಲಸ ದೊರೆತು ಅವುಗಳು ಪಟುವಾಗುವುವು. ಇತರರಿಗೆ ಹಣ ತೆತ್ತು ನಮ್ಮ ಉಪಭೋಗಕ್ಕೆ ಒದಗಿಸಿಕೊಳ್ಳಬೇಕಾದ ಹಲವು ಸಾಮಗ್ರಿಗಳನ್ನು ನಮ್ಮ ಮನವೊಪ್ಪುವಂತೆ ನಾವೇ ನಿರ್ಮಿಸಿಕೊಳ್ಳುವುದಕ್ಕೆ ಅನುಕೂಲವಾಗುವುದು. ಮನೆಯನ್ನು ಅಲಂಕರಿಸಿ ಒಪ್ಪವಾಗಿಟ್ಟುಕೊಳ್ಳುವ ಬಗೆಯನ್ನೂ ಬಾಲ್ಯದಿಂದ ಅಭ್ಯಾಸಮಾಡಿಕೊಳ್ಳಿರಿ. ನಾಲ್ಕುಮೊರದ ಸೆಗಣಿಯನ್ನು ತಂದು ನೀರಿನಲ್ಲಿ ಕದಡಿ ಮನೆಗೆಲ್ಲ ಸುರಿದು, ಅದರಮೇಲೆ ಭೂತವೈದ್ಯರು ಪಿಶಾಚೋಚ್ಚಾಟನೆಗೆ ರಂಗವಲ್ಲಿಯನ್ನು ಚಿತ್ರಿಸುವಂತೆ ಮನಸ್ವಿಯಾಗಿ ಬಿಳಿಯಮಣ್ಣನ್ನು ಚೆಲ್ಲುತ್ತಿರುವ ಚೆಲ್ಲೆಗಾರ್ತಿಯರ ಅಣಿಯನ್ನು ಕಂಡು ನೀವು ಯಾವಾಗಲೂ ಅಡಿಕೊಂಡಿಲ್ಲವೆ? ಅಂತಹ ಮನೆಗಳೊಳಗೆ ಪ್ರವೇಶಮಾಡುವುದಕ್ಕೇ ಅಸಹ್ಯವಾಗಿರುವಾಗ ಅಲ್ಲಿ ವಾಸಮಾಡುವುದು ಹೇಗೆ? "ಗೃಹಿಣೀ ಗೃಹಮುಚ್ಯತೇ" ಎಂಬ ವಚನವು ಮಡದಿಯೇ ಮನೆಯೆನಿಸಿಕೊಳ್ಳುವಳೆಂಬ ಅರ್ಥವನ್ನು ಕೊಡುವುದು. ಹಾಗೆಂದರೆ ಮನೆಯನ್ನು ನೋಡಿ ಮಡದಿಯ ಲಕ್ಷಣವನ್ನರಿತುಕೊಳ್ಳಬಹುದೆಂದಲ್ಲವೆ? ಅದುಕಾರಣ ನಿಮ್ಮ ನಿಮ್ಮ ಕೌಶಲವೂ ಸಾಮರ್ಥ್ಯವೂ ಗೃಹಪ್ರಸಾಧನಾದಿ ಕಾರ್ಯಗಳಿಂದ ತಿಳಿಯಬೇಕಾಗಿರುವುದು. ಎಲೌ ಸುಂದರಿಯರಿರಾ, ಚಿತ್ರರಚನಾದಿ ಕಾರ್ಯಗಳನ್ನು ತಿಳಿಸುವ ಗ್ರಂಥಗಳನ್ನು ನೀವು ಅತ್ಯವಶ್ಯಕವಾಗಿ ಓದಬೇಕು.

ಇಷ್ಟಾಗುವುದರಲ್ಲಿ ಮತ್ತೊಂದು ವಿಷಯವನ್ನು ಮರೆಯಲಾಗದು. ಜಗದೀಶ್ವರನು ಪುರುಷರ ಸ್ವರವನ್ನು ಪರುಷವನ್ನಾಗಿಯೂ ರಮಣಿಯರ ಸ್ವರವನ್ನು ಕಮನೀಯವನ್ನಾಗಿಯೂ ನಿರ್ಮಿಸಿರುವನು. ಇಂಪಾದ ನಿಮ್ಮ ಕಂಠದಿಂದ ಹೊರಡುವ ಸುಸ್ವರವು ದೇವತಾಸ್ತೋತ್ರಗಳನ್ನು ನುಡಿದರೆ ಅದನ್ನು ಕೇಳುವ ಮನೆ ಮಂದಿಯ ಮನವೆಲ್ಲ ಜಗದೀಶ್ವರನಲ್ಲಿಯೇ ಲೀನವಾಗುವುದು. ಎಲ್ಲರೂ ನಿಮ್ಮಂತೆಯೇ ಸ್ತೋತ್ರಗಳನ್ನು ಹೇಳತೊಡಗುವರು ನೀವು ರಾಗ ರಚನೆಗಳೊಂದಿಗೆ ಸ್ತೋತ್ರಗಳನ್ನು ಹೇಳಲಭ್ಯಾಸಮಾಡಿದರೆ ಅದು ಮತ್ತಷ್ಟು ಮೋಹಕವಾಗಿರುವುದರಲ್ಲಿ ಅಡ್ಡಿಯಿಲ್ಲ. ಚಲಹಿಡಿದು ಅಳುವ ಮಕ್ಕಳು ಕೂಡ ನಿಮ್ಮ ಮನೋಜ್ಞವಾದ ಹಾಡುಗಳನ್ನೂ ದೇವತಾಸ್ತೋತ್ರಗಳನ್ನೂ ಕೇಳಿ ಅಳುವನ್ನು ನಿಲ್ಲಿಸಿ ನಗಲಾರಂಭಿಸುವುವು. ಎಲೌ ಮಂಜುವಾಣಿಯರಿರಾ, ಈ ಕಾರಣದಿಂದಲೇ ನೀವು ತಕ್ಕಮಟ್ಟಿಗೆ ಸಂಗೀತವನ್ನು ಅಭ್ಯಾಸಮಾಡಿಕೊಳ್ಳುವುದಾವಶ್ಯಕವು. ಎಲೌ ನಾರೀಮಣಿಯರಿರಾ, ಮತ್ತೊಂದು ವಿಷಯವನ್ನು ಮುಖ್ಯವಾಗಿ ಗಮನಿಸಬೇಕಾಗಿರುವುದು. ರುಚಿರುಚಿಯಾದ ಭಕ್ಷ್ಯಭೋಜ್ಯಗಳನ್ನು ಮಾಡುವ ವಿಧಾನವನ್ನು ದಿನಕ್ರಮದಲ್ಲಿ ಒಂದೊಂದನ್ನಾಗಿ ನೀವು ಕಲಿಯಬೇಕು. ಈ ವಿದ್ಯೆಯು ಪಾಕಶಾಸ್ತ್ರವೆಂಬ ಪುಸ್ತಕವನ್ನೋದಿ ಬಿಟ್ಟ ಮಾತ್ರದಿಂದಲೇ ಕರಗತವಾಗುವುದಿಲ್ಲ. ಒಬ್ಬೊಬ್ಬರ ಅಪೇಕ್ಷೆಯು ಒಂದೊಂದು ಬಗೆಯಲ್ಲಿರುವುದು. ಕೆಲವರು ಕಾರವನ್ನಪೇಕ್ಷಿಸುವರು. ಕೆಲವರು ಸಿಹಿಯನ್ನಪೇಕ್ಷಿಸುವರು. ಒಬ್ಬರು ಸಪ್ಪೆಯನ್ನೊಪ್ಪುವರು. ಇಚ್ಛಾನುಸಾರವಾದ ರೀತಿಯಲ್ಲಿ ಅಡುಗೆಮಾಡಬೇಕಾಗುವುದು. ಅದುಕಾರಣ ಮನೆಯಲ್ಲಿ ಪ್ರತಿದಿನವೂ ಅಡಿಗೆ ಮಾಡುವ ಕಾಲಗಳಲ್ಲಿ ಇದಿರಾಗಿದ್ದು ಆಯಾ ಕ್ರಮಗಳನ್ನೆಲ್ಲ ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳುವುದುತ್ತಮವು. ಹಾಗೆ ಮಾಡದೆ ಬರಿಯ ಪಾಕಶಾಸ್ತ್ರದಲ್ಲಿ ಉಕ್ತವಾದ ಕ್ರಮವನ್ನನುಸರಿಸಿ ಅಡುಗೆಮಾಡುವಿರಾದರೆ ಆ ಪಾಕವನ್ನು ಹಸಿಗೊಂಡವರಿಗೆ ಹಂಚದೆ ಶಾಸ್ತ್ರಜ್ಞರಿಗೇ ನಿವೇದನಮಾಡಬೇಕಾಗುವುದು. ಮೊದಲಿಂದಲೂ ಗಣಿತಶಾಸ್ತ್ರವನ್ನು ಸ್ವಲ್ಪಸ್ವಲ್ಪವಾಗಿ ಅಭ್ಯಾಸಮಾಡುತ್ತ ಲೆಕ್ಕಪತ್ರಗಳ ಸ್ವಭಾವವನ್ನೂ ತಕ್ಕಮಟ್ಟಿಗೆ ತಿಳಿದುಕೊಳ್ಳಿರಿ. ನಿಮ್ಮ ಬಾಲ್ಯದಲ್ಲಿ ಮೇಲೆ ತಿಳಿಸಿದ ವಿಷಯಗಳಿಗೆಲ್ಲ ಗಮನಕೊಟ್ಟು ಆಯಾ

ವಿಷಯಗಳನ್ನು ಕುರಿತು ವಿವರಿಸುವ ಗ್ರಂಥಗಳನ್ನಾಯ್ದು ಚೆನ್ನಾಗಿ ವ್ಯಾಸಂಗಮಾಡಿಕೊಂಡರೆ ನಿಮ್ಮ ಬಾಲ್ಯವಿದ್ಯಾಭ್ಯಾಸವು ಸಾಂಗವಾಗಿ ನೆರವೇರುವುದು. ನೀವು ವಯೋವತಿಯರಾದ ಬಳಿಕ ಈ ಗ್ರಂಥಗಳನ್ನು ವ್ಯಾಸಂಗಮಾಡುವುದು ಬೇಸರವನ್ನುಂಟುಮಾಡೀತು. ವಿದ್ಯಾರ್ಜನೆಗೆ ಅನುಕೂಲವಾದ ಬಾಲ್ಯದಲ್ಲಿ, ಅನುಪಯುಕ್ತಗಳಾದ ಕಾಡುಕಗ್ಗಗಳಿಗೆ ಕೈಯಿಡಬೇಡಿರಿ. ನಿಮ್ಮ ನಿಮ್ಮ ಪತಿಗೃಹಗಳಲ್ಲಿ ನೀವು ನಡೆದುಕೊಳ್ಳಬೇಕಾಗಿರುವ ನಡತೆಯ ವಿಷಯವನ್ನು ಕುರಿತು ಮುಂದಿನ ಪ್ರಕರಣದಲ್ಲಿ ಸ್ವಲ್ಪ ತಿಳಿಸುವೆವು.

ನಾಲ್ಕನೆಯ ಪ್ರಕರಣ.

ಎಲೌ, ಅಬಲಾ ಶಿರೋಮಣಿಯರಿರಾ, ನೀವು ಬಾಲ್ಯದಶೆಯನ್ನು ಕಳೆದು ಯವ್ವನದಶೆಯಲ್ಲಿ ಪದಾರ್ಪಣ ಮಾಡಿದೊಡನೆಯೇ ಉತ್ತರವಾದಿತ್ವವು ನಿಮ್ಮನ್ನು ಹಿಂಬಟ್ಟಿಬರುವುದು. ನಿಮ್ಮಂತೆಯೇ ಪುರುಷರಿಗೂ ಈ ಉತ್ತರವಾದಿತ್ವವು ತಪ್ಪಿದುದಲ್ಲ. ಪ್ರಾಯಶಃ ನಮ್ಮ ದೇಶದಲ್ಲಿ ನಿಮಗೆ ಯವ್ವನೋದಯವಾಗುವ ವೇಳೆಗೆ ಮದುವೆಮಾಡಿ ಬಿಡುವುದು ವಾಡಿಕೆಯಾಗಿದೆ. ಹೀಗೆ ಮದುವೆಯಾಗಿ ಬಿಟ್ಟಬಳಿಕ ಕೆಲಮಂದಿ ಧೂರ್ತಪುರುಷರು ಉತ್ತರವಾದಿತ್ವವು ನಿಮಗೆ ಸೇರಿದುದಲ್ಲವೆಂದು ಎಲ್ಲ ವಿಷಯಗಳಿಗೂ ತಾವೇ ಉತ್ತರವಾದಿಗಳೆಂದೂ ಭ್ರಮಿಸಿ ದುಡುಕಿ, ನಿಮ್ಮನ್ನು ಅನಿರ್ವಚನೀಯಗಳಾದ ಸಂಕಟಗಳಿಗೆ ಗುರಿಪಡಿಸಿ ತಾವೂ ಕೈಲಾಗದವರೆಂಬ ತಿರಸ್ಕಾರಕ್ಕೆ ಗುರಿಯಾಗುವುದುಂಟು. ನಮ್ಮ ಭಾರತೀಯರಲ್ಲಿ ಮುಕ್ಕಾಲು ಪಾಲು ಜನರೆಲ್ಲ ಕನ್ಯೆಯ ಇಷ್ಟವನ್ನು ವಿಚಾರಿಸದೆಯೇ ತಾವೇ ಸ್ವತಂತ್ರಿಸಿ ವರಾನ್ವೇಷಣ ಮಾಡಿ ಮದುವೆಮಾಡಿಬಿಡುವರು. ಇಂತಹ ಮದುವೆಗಳಲ್ಲಿ ಕನ್ಯಾಪಿತೃವು ಕುಲಶೀಲಗಳನ್ನು ಮಾತ್ರ ಲಕ್ಷಿಸುವನು. ಕನ್ಯೆಯ ತಾಯಿಯು ವರನ ಐಶ್ವರ್ಯವನ್ನು ಗಮನಿಸುವಳು. ಕನ್ಯೆಯು ವರನ ರೂಪವನ್ನು ಕುರಿತು ಆಲೋಚಿಸುವಳು. ಅನೇಕ ಸಂದರ್ಭಗಳಲ್ಲಿ ಕನ್ಯೆಯ ತಾಯ ಅಭಿಪ್ರಾಯವೇ ಕೈಗೂಡುವುದು. ತರುವಾಯ ದಾಂಪತ್ಯವು ಅನು

ಕೂಲಿಸುವುದೂ ಅನುಕೂಲಿಸದಿರುವುದೂ ದೇವೇಚ್ಛೆಯಾಗಿರುತ್ತದೆ. ಕನ್ಯಾವರರ ಜನ್ಮಪತ್ರಿಕೆಗಳನ್ನು ಪರಿಶೀಲಿಸಿ ಆಯುರ್ದಾಯಮುಂತಾದುವನ್ನು ತಿಳಿಸುವ ಕಾಲಜ್ಞರಿಗೆ ಅದಾವ ಕಾರಣದಿಂದಲೋ ಅಲ್ಲಲ್ಲಿ ಬಹು ಪ್ರಾಶಸ್ತ್ಯವೊದಗಿರುವುದು. ನಾವು ಕಂಡಂತೆ ಈ ನಕ್ಷತ್ರ ರಾಶಿಗಳ ವಿಮರ್ಶೆಯಲ್ಲಿ ಅನುಕೂಲದಾಂಪತ್ಯವು ಸಂಘಟಿಸುವುದೇ ದುರ್ಲಭವಾಗಿದೆ. ಶಾಸ್ತ್ರದ್ವೇಷದಿಂದಾಗಲಿ ಹಿರಿಯರನ್ನು ಹಳಿಯಬೇಕೆಂಬ ಹೀನಬುದ್ಧಿಯಿಂದಾಗಲಿ ನಾವು ಈ ಮಾತನ್ನಾಡುವವರಲ್ಲ. ಈ ನಿರ್ಬಂಧಕ್ಕೊಳಗಾದ ಎಷ್ಟೋ ಸಂಸಾರಗಳಲ್ಲಿ ಸುಂದರಿಯರಾದ ಕನ್ನೆಯರು ಕುರೂಪಿಗಳಾದವರಿಗೂ, ಸುಂದರರಾದ ವರರು ವಿರೂಪಿಣಿಯರಾದ ಕನ್ನೆಯರಿಗೂ ಗಂಟುಬಿದ್ದು ಅನುರೂಪ್ಯವೆಂಬ ಮಾತೇ ತಪ್ಪಿಹೋಗಿದೆ. ಇದರಿಂದ ದಂಪತಿಗಳಲ್ಲಿ ಅನುರಾಗವು ಲೇಶಮಾತ್ರವಾದರೂ ತಲೆದೋರದೆ ಅನೇಕಾನೇಕ ವಿಪತ್ತುಗಳು ಸಂಘಟಿಸಿವೆ. ಅದು ಕಾರಣ ಎಲೌ, ಸತೀಶಿರೋರತ್ನಗಳಿರಾ, ವಿವಾಹ ಪ್ರಯತ್ನಗಳನ್ನು ಮಾಡುವಾಗ ಮೊಟ್ಟಮೊದಲು ಕನ್ಯಾವರರ ವಯಸ್ಸು ಸಮಾನವಾಗಿರಬೇಕೆಂಬುದನ್ನು ಗಮನಿಸಿರಿ. ಎರಡನೆಯದಾಗಿ ವಿದ್ಯಾಬುದ್ಧಿಗಳನ್ನು ಪರಿಶೀಲಿಸಿರಿ. ಮೂರನೆಯದಾಗಿ ರೂಪವನ್ನು ನೋಡಿರಿ. ಐಶ್ವರ್ಯದ ವಿಷಯವು ನಾಲ್ಕನೆಯದಾಗಿರಲಿ, ಇಷ್ಟು ವಿಷಯದಲ್ಲಿಯೂ ಅನುಗುಣವಾಗಿದ್ದಲ್ಲದೆ ಮದುವೆ ಮಾಡುವುದಕ್ಕೆ ಅವಕಾಶಕೊಡಬೇಡಿರಿ. ಈ ನಾಲ್ಕು ವಿಷಯಗಳಲ್ಲಿ ಮೊದಲೆರಡೂ ಅನುಗುಣವಾಗಿರದಿದ್ದರೆ ಮದುವೆಗಿಂತ ಮರಣವೇ ಮೇಲೆಂದು ದೃಢವಾಗಿ ನಂಬಿರಿ. ಸಮೀಪಬಂಧುವೆಂದೂ, ಐಶ್ವರ್ಯವಂತನೆಂದೂ ಅಧಿಕಾರಿಯೆಂದೂ, ದೊಡ್ಡವರ ನಂಟುತನವೆಂದೂ ಬೆಳ್ಮಾತುಗಳಿಗೆ ಬೆರಗಾಗಿ ಬೇಗೆಗೊಳಗಾಗಬೇಡಿರಿ. ಕನ್ಯೆಯು ಪ್ರೌಢಳಾದ ಬಳಿಕ ಮದುವೆ ಮಾಡುವುದೇ ಶ್ರೇಯಸ್ಕರವೆಂದೂ ಅದಕ್ಕಿಂತ ಮೊದಲು ಮದುವೆಮಾಡುವುದು—ವಿತಂತುಸಂಖ್ಯಾಭಿವೃದ್ಧಿಗೂ, ಭ್ರೂಣಹತ್ಯಾದಿ ಮಹಾಪಾತಕಗಳಿಗೂ ಎಡೆಗೊಡುವುದೆಂದೂ ಸಮಾಜಸುಧಾರಕ ಸಮಿತಿಯವರನೇಕರು ವಾದಿಸುತ್ತಿರುವರು. ಇದನ್ನು ನಾವು ಅನುಮೋದಿಸಲಾರೆವು. ಆಂಗ್ಲೇಯರಲ್ಲಿ ಇಪ್ಪತ್ತೈದು ಮೂವತ್ತು ವರ್ಷದ ಕನ್ನೆಯರು ಲೋಕವ್ಯವಹಾರ ಜ್ಞಾನವುಳ್ಳವರಾಗಿ ಪುರುಷರೊಡನೆ ನಿರ್ಭಯವಾಗಿ ಓಡಾಡಿ ಅವರ ನಡೆವಳಿಯನ್ನು ಪರೀಕ್ಷಿಸಿ

ತಮ್ಮ ಮನಸ್ಸಿಗೆ ಅದು ಹಿತವೆಂದು ತೋರಿದರೆ ತರುವಾಯ ವಿವಾಹಮಾಡಿ ಕೊಳ್ಳುವರು. ಮನುಷ್ಯನ ಬುದ್ಧಿಯು ಒಂದೇ ಸಮವಾಗಿರಲಾರದು. ಆವುದಾದರೊಂದು ಅಲ್ಪಕಾರಣದಿಂದ ಕ್ಷಣಿಕವಾದ ವೈಮನಸ್ಯವುಂಟಾ ದರೂ ಆ ದಂಪತಿಗಳು ತಮ್ಮ ದಾಂಪತ್ಯಬಂಧನದಿಂ ವಿಮೋಚನವನ್ನು ಹೊಂದಿ ಪುನರ್ವಿವಾಹಯತ್ನ ಮಾಡುವರು. ಇಂತಹ ಹಲವು ಸಂಗತಿಗ ಳನ್ನು ವೃತ್ತಪತ್ರಿಕೆಗಳಲ್ಲಿ ಅನುದಿನವೂ ಓದುತ್ತಲೇ ಇರುವೆವು. ಮದು ವೆಯು ಈ ಬಗೆಯ ಮಕ್ಕಳಾಟಿಕೆಯಾಗುವುದು ನಮ್ಮ ಭಾರತಮಾತೆಯ ಸಂತಾನರಿಗೆ ಶ್ರೇಯಸ್ಕರವಲ್ಲವೆಂದು ಭಾವಿಸುವೆವು ಬಾಲ್ಯವಿವಾಹವೆಂ ದರೆ ಏಳೆಂಟು ವರ್ಷದ ಕನ್ನೆಯರಿಗೆ ಮದುವೆಮಾಡುವ ದುಷ್ಪದ್ಧತಿಯೂ ಸಾಧುಸಮ್ಮತವಲ್ಲ. ಕನ್ನೆಯು ಹತ್ತು ಹನ್ನೆರಡು ವರ್ಷದವಳಾದರೆ ನಮ್ಮ ದೇಶದಲ್ಲಿ ಅದೇ ವಿವಾಹಯೋಗ್ಯವಾದ ವಯಸ್ಸೆನಿಸಿಕೊಳ್ಳುವುದು ಕನ್ನೆ ಯು ಋತುಮತಿಯಾದಮೇಲೆಯೇ ವಿವಾಹಮಾಡಬೇಕೆಂದರೆ ಮಾತಾ ಪಿತೃಗಳ ಉತ್ತರವಾದಿತ್ವವು ಸೀಮಾತೀತವಾಗುವುದು. ಐರೋಪ್ಯರಲ್ಲಿ ಕನ್ನೆಯರು ದೇಶಾಚಾರಗಳನ್ನನುಸರಿಸಿ ಇಪ್ಪತ್ತು ವರ್ಷವಾಗುವವರೆಗೂ ಋತುಮತಿಯರಾಗುವುದು ಸಂಭವವಾಗದೆ. ಅದುಕಾರಣವೇ ಆವಯಸ್ಸು ಮೀರಿದಲ್ಲದೆ ಮದುವೆಮಾಡುವುದೂ ಇಲ್ಲ. ಏಳೆಂಟುವರ್ಷದ ಮಗುವಾ ಗಿರುವಾಗಲೇ ಸ್ತ್ರೀಧರ್ಮವನ್ನವಲಂಬಿಸುತ್ತಲಿರುವ ನಮ್ಮ ಭಾರತೀಯ ಕನ್ನೆಯರು ಐರೋಪ್ಯಾಂಗನೆಯರಂತೆ ಇಪ್ಪತ್ತು ಇಪ್ಪತ್ತೈದು ವರ್ಷಗಳ ವರೆಗೂ ಅವಿವಾಹಿತರಾಗಿರಲಾದೀತೇ ? ಅದಂತಿರಲಿ, ಸಮೀಪಬಂಧುವಾದ ಬಬ್ಬ ಯುವಕನೊಡನೆ ನಂಟರ ಕುಶಲವಾರ್ತೆಯನ್ನೋ ಬಡನಾಡಿಯರ ಯೋಗಕ್ಷೇಮವನ್ನೋ ಕುರಿತು ಕಾಲಾನುಗುಣ್ಯವಾಗಿ ಒಂದೆರಡು ಮಾತ ನ್ನಾಡಿದ ಮಾತ್ರದಿಂದಲೇ ಅದನ್ನು ಕಂಡ ಜನರು ಆಕೆಯ ನಡೆವಳಿಕೆಯ ವಿಷಯದಲ್ಲಿ ಮನಸ್ವಿಯಾಗಿ ಸಂಶಯಪಟ್ಟು ಅಪವಾದಹೊರಿಸುವುದನ್ನು ಎಲ್ಲರೂ ಬಲ್ಲರಲ್ಲವೆ? ಇಂತಹ ಆಚಾರವುಳ್ಳ ನಮ್ಮ ದೇಶೀಯರಲ್ಲಿ ಋತುಮತಿಯರಾದ ಕನ್ನೆಯರು ಅವಿವಾಹಿತರಾಗಿದ್ದು ಇತರರೊಡನೆ ಅದ ರಲ್ಲಿಯೂ ಪುರುಷರೊಡನೆ ನಿರ್ಭಯವಾಗಿ ಮಾತನಾಡಿ ಬದುಕಲಾದೀತೇ? ಅಂತಹ ಕನ್ನೆಯರನ್ನು ನಮ್ಮ ಆಧುನಿಕವಿದ್ಯಾರ್ಥಿಗಳು ಸಚ್ಚರಿತ್ರೆಯರೆಂ

ದೊಪ್ಪಿಕೊಳ್ಳುವರೆ ? ಎಲೌ, ತರುಣಿಯರಿರಾ, ಮೊಟ್ಟಮೊದಲು ನೀವೇ ಆ ಕನ್ನೆಯರನ್ನು ಶೀಲವತಿಯರೆಂದು ಗೌರವಿಸುವಿರಾ ? ಸ್ತ್ರೀಪುರುಷರಿಗಿಬ್ಬರಿಗೂ ಈ ಬಗೆಯ ವರ್ತನವು ಇಷ್ಟವಲ್ಲದ ಬಳಿಕ ಅದನ್ನು ರೂಢಿಗೆ ತರುವುದೇಕೆ? ಒಳ್ಳಿಯದು, ಪ್ರೌಢಾವಿವಾಹ ಪದ್ಧತಿಯಿಂದ ಸಮಾಜವೇನಾದರೂ ಉನ್ನತಸ್ಥಿತಿಗೆ ಬಂದೀತೇ ? ಎಂದಿಗೂ ಬರಲಾರದು. ಕನ್ಯೆಯು ಕನ್ಯಾತ್ವವನ್ನು ಕಳೆದು ವಯೋವತಿಯಾಗಿ ತಾನು ಸಂಸಾರಚಕ್ರವನ್ನು ನಡೆಯಿಸುವುದಕ್ಕೆ ತನಗನುಕೂಲನಾಗಿರುವ ವರನಾವನೋ? ಎಂದು ಕಂಡ ಕಂಡ ಪುರುಷರಲ್ಲೆಲ್ಲ ಬೆರೆದು ಅವರ ಗುಣದೋಷಗಳನ್ನು ಕಂಡುಹಿಡಿದು, ಅನುಕೂಲನಾದವನನ್ನು ಮತ್ತೆ ಹುಡುಕಿಕೊಂಡು ಹೋಗಿ ಕಟ್ಟಕಡೆಯಲ್ಲಿ ಯಾರೂ ದೊರೆಯದಿದ್ದರೆ ಆಮರಣಾವಧಿ ಮದುವೆಯನ್ನೇ ಮಾಡಿಕೊಳ್ಳದೆ ಸುಮ್ಮನಿದ್ದು ಬಿಡುವುದು ತಾನೆ ನವೀನನಾಗರಿಕರ ಮತತತ್ವ! ಇದರಿಂದ ಕನ್ಯಾವರರಿಗೆ ಶಾಸ್ತ್ರ ಸಿದ್ಧವಾದ ವಿವಾಹವು ನಡೆದಂತಾಗದಿದ್ದರೂ ಕಾರ್ಯಸಿದ್ಧವಾದ ಅನೇಕ ವಿವಾಹಗಳು ನಡೆದು ಹೋಗುತ್ತವೆ. ಪರ್ಯವಸಾನದಲ್ಲಿ ವಿವಾಹವು ವಿಷಯಾಸಕ್ತಿಯನ್ನು ಹೆಚ್ಚಿಸುವುದಕೋಸುಗ ಏರ್ಪಟ್ಟಂತಾಗುವುದಲ್ಲದೆ ಸಮಾಜೋದ್ಧಾರಕ್ಕೂ ದೇಶಾಭಿವೃದ್ಧಿಗೂ ಸಾಹಾಯ್ಯಕಾರಿಯಾಗುವುದಿಲ್ಲ. ಎಲೌ, ಶೀಲವತಿಯರಿರಾ, ಇಂತಹ ಕನ್ಯೆಯರು ಕಾಲಕ್ರಮದಲ್ಲಿ ಹೆಚ್ಚುತ್ತ ಬಂದಾರು! ವರರೂ ಮದುವೆಯಾಗುವುದಕ್ಕಿಂತ ಇಂತಹವರ ಸಹವಾಸವೇ ಸುಖಕರವೆಂದೂಹಿಸಿಯಾರು! ಸಮಾಜದ ಕಟ್ಟು ಸಡಿಲವಾದೀತು! ಅದುಕಾರಣ ಪ್ರೌಢಾ ವಿವಾಹವನ್ನು ಸಮಾಜಸುಧಾರಣೋಪಾಯವೆಂದು ಭಾವಿಸಲಾಗದೆಂದು ಸಾರಿ ಸಾರಿ ಹೇಳುವೆವು ಮಾತಾಪಿತೃಗಳು ಯಾವ ವರನನ್ನು ವಯಸ್ಕನೆಂದೂ ಯೋಗ್ಯನೆಂದೂ ಅನುರೂಪನೆಂದೂ ಆಯ್ದು ಮದುವೆಮಾಡಬೆಳಸುವರೋ ಅವರನನ್ನು ಕನ್ನೆಯು ಕಣ್ಣಿಂದ ಕಂಡಲ್ಲದೆ ಮನಸ್ಸಿಗೆ ತೃಪ್ತಿಯಿರದು. ನಾವು ಹಿಂದೆ ತಿಳಿಸಿದಂತೆ ಕನ್ನೆಯು ತನ್ನ ಬಾಲ್ಯವಿದ್ಯಾಭ್ಯಾಸವನ್ನು ಪೂರ್ತಿಮಾಡಿಕೊಂಡಿದ್ದರೆ ಮಾತಾಪಿತೃಗಳು ಒಪ್ಪಿ ಕರೆತಂದ ವರನಯೋಗ್ಯತಾಯೋಗ್ಯತೆಗಳು ಸುಲಭವಾಗಿ ತಿಳಿದು ಬರುವುದು. ನಮ್ಮ ಸಮಾಜಸುಧಾರಕ ಸಮಿತಿಯವರು ಪ್ರೌಢಾ ವಿವಾಹದಿಂದ ಯಾವ ಅನುಕೂಲ್ಯವುಂಟಾದೀತೆಂದು ನಿರೀಕ್ಷಿಸುವರೋ

ಆ ಅನುಕೂಲ್ಯವು ನಿರಪಾಯವಾಗಿ ನಮ್ಮ ಸಮಾಜಕ್ಕೆ ಈ ಬಗೆಯ ಕನ್ಯಾವಿವಾಹದಿಂದಲೇ ಉಂಟಾಗುವುದು. ಎಲೌ, ಅಬಲಾಶಿರೋಮಣಿಯರಿರಾ, ಕನ್ಯಾತ್ವದಲ್ಲಿಯೇ ವಿವಾಹಿತರಾದ ಬಳಿಕ ನೀವು ಪತಿಯೊಡನೆ ಅಂದಿನಿಂದಲೇ ಸಂಸಾರಭಾರವನ್ನು ನಿರ್ವಹಿಸಬೇಕಾದ ಆವಶ್ಯಕತೆಯಿಲ್ಲವಷ್ಟೆ? ಈಗ ನಮ್ಮಲ್ಲಿ ಆಚರಣೆಯಲ್ಲಿರುವಂತೆ ನೀವು ಋತುಮತಿಯರಾಗಿ ದೇಹದಾರ್ಢ್ಯವನ್ನು ಪಡೆದಲ್ಲದೆ ಸಂಸಾರಭಾರವು ನಿಮಗೆ ಗಂಟುಬೀಳದು ಅದಾದ ಮೇಲೆಯೇ ಪತಿಗೃಹವೆಂಬ ಅಪರನಾಮವುಳ್ಳ ಸ್ವಗೃಹವು ನಿಮ್ಮ ಪರಿಪಾಲನೆಗೂ ಅನುಭವಕ್ಕೂ ಶಾಸನಕ್ಕೂ ಒಳಗಾಗುವುದು. ಕೆಲಮಂದಿ ಚಂಡಿಯರಾದ ಕನ್ನೆಯರು ಪತಿಗೃಹವೆಂದರೆ ಯಮಪುರಕ್ಕಿಂತ ನಿಷ್ಕರುಣವಾದ ಪ್ರದೇಶವೆಂದೂ, ಪತಿಯೆಂಬವನು ಪ್ರತ್ಯಕ್ಷಯಮನೆಂದೂ ಅತ್ತೆಯು ಮೃತ್ಯುದೇವತೆಯೆಂದೂ, ಅತ್ತಿಗೆ ನಾದಿನಿಯರೇ ಮುಂತಾದವರು ಚಿತ್ರಗುಪ್ತರೆಂದೂ ಭಾವಿಸಿ ಪತಿಗೃಹಕ್ಕೆ ಹೋಗುವುದಕ್ಕಿಂತ ಪರಲೋಕಕ್ಕೆ ಹೋಗುವುದೇ ಕ್ಷೇಮಕರನೆಂದು ತಿಳಿದುಕೊಳ್ಳುವರು. ಈ ವಿಧವಾದ ಭಾವನೆಯುಂಟಾಗುವುದಕ್ಕೆ ಹಲವು ಕಾರಣಗಳಿರುವುವು. ಕೆಲಮಂದಿ ತಾಯಿಯರು ಮಕ್ಕಳನ್ನು ತಿದ್ದಿ ಬುದ್ಧಿಗಲಿಸುವಾಗಲೆಲ್ಲ—ಒಳ್ಳೆಯ ನಡೆವಳಿಯನ್ನು ಕಲಿಯದಿದ್ದರೆ ಗಂಡನು ಕಡಿದು ತುಂಡು ತುಂಡುಮಾಡುವನೆಂದೂ ಅತ್ತೆಯು ಕತ್ತರಿಸಿ ಹಾಕುವಳೆಂದೂ ಆವುದೋ ಒಂದು ಬಗೆಯ ಭೀತಿಯನ್ನು ಅವರ ಮನಸ್ಸಿನಲ್ಲೂರಿಸಿ ದಿನಕ್ರಮದಲ್ಲಿ ಆ ಭೀತಿಯನ್ನು ಅಭಿವೃದ್ಧಿಪಡಿಸುತ್ತ ಆಕಸ್ಮಿಕವಾಗಿ ಕಂಡು ಬರಬಹುದಾದ ಯಾರಾದರೊಬ್ಬ ಮೂರ್ಖದಂಪತಿಗಳ ಕಲಹವನ್ನೋ ಪತಿಯ ನಿಷ್ಠುರವನ್ನೋ ದೃಷ್ಟಾಂತವಾಗಿ ಹೇಳುತ್ತಿರುವರು. ಇದರಿಂದ ಕನ್ನೆಯರ ಮನಸ್ಸಿಗೆ ಪತಿಯ ವಿಷಯದಲ್ಲಿ ಮಾತ್ರವೇ ಅಲ್ಲದೆ ಸ್ವಪ್ರಾಣದಲ್ಲಿಯೂ ಜಿಹಾಸೆಯುಂಟಾದೀತು. ಸಾಲದುದಕ್ಕೆ ಕೆಲಕುಟುಂಬಗಳಲ್ಲಿ ಗೃಹಿಣಿಯ ಒಡೆತನವು ಮೇರೆಮೀರಿದುದಾಗಿ ಅವಳು ತಿಳಿವಿಲ್ಲದೆ ಗೃಹಸ್ವಾಮಿಯನ್ನೂ ಅವನ ಪುತ್ರನನ್ನು ಮನೆಗೆ ಬಂದ ಸೊಸೆಯನ್ನೂ ಕಸಕ್ಕಿಂತ ಕಡೆಯಾಗಿ ಕಾಣುವುದೂ ಉಂಟು. ಇದರಿಂದಲೂ ಕನ್ನೆಯರಿಗೆ ಅತ್ತೆಯ ಮನೆಯು ಭೀತಿಸಮುದ್ರವೆಂಬ ಶಂಕೆಯುಂಟಾಗುವುದು. ಇವುಗಳಿಗೆಲ್ಲಾ ಅರಿವಿಲ್ಲದ ಅತ್ತೆಯರೂ ತಿಳಿವಿಲ್ಲದ ತಾಯಿಯರೂ ಕಾರಣರಲ್ಲದೆ ಪತಿ

ಯಾಗಲೀ, ಮಾವನಾಗಲೀ ಮತ್ತಾರೇ ಆಗಲಿ ಕಾರಣರಲ್ಲ. ಎಲೌ, ಉತ್ತಮೆಯರಿರಾ, ಅತ್ತೆಯ ಮನೆಯಲ್ಲಿ ಕೆಲವರಿಗೆ ಉಂಟಾಗಬಹುದಾದ ಕಷ್ಟಗಳು ಪ್ರೌಢವಿದ್ಯಾಭ್ಯಾಸದಿಂದಾಗಲೀ ಪ್ರೌಢಾವಿವಾಹದಿಂದಾಗಲೀ ನಿವಾರಣೆಯಾಗಲಾರವು ನೀವು ಕನ್ಯಾತ್ವದಿಂದಲೂ ಕರ್ತವ್ಯಜ್ಞಾನವನ್ನು ಪಡೆದರೆಯೇ ಪರಿಹಾರವಾಗುವುದು. ಪತಿಯು ಹೊಸದಾಗಿ ಮನೆಗೆ ಬಂದ ಮಡದಿಯನ್ನು ಹೊಂದಿ ಅವಳ ನಡೆವಳಿಯೆಂತಹುದಾಗಿರುವುದೋ ಎಂದು ಪರೀಕ್ಷಿಸಲಾಸೆಪಡುವನು ಅತ್ತೆಮಾವಂದಿರೂ ಅತ್ತಿಗೆ ನಾದಿನಿಯರೂ ಅಂತೆಯೇ ಅಪೇಕ್ಷಿಸುವರು ಅಂತಹಕಾಲದಲ್ಲಿ ಅವರು ಅಶಕ್ಯಗಳಾದ ನಿಷ್ಠುರೋಕ್ತಿಗಳನ್ನು ಒಂದೊಂದುವೇಳೆ ಆಡಿ ಕೋಪಬರುವಂತೆ ಮಾಡುವುದೂ ಉಂಟು. ಸ್ವಸೌಖ್ಯದಲ್ಲಿ ಲೋಲುಪರಾಗಿದ್ದು ಬಿಟ್ಟು ಸೊಸೆಯ ಕಡೆಗೆ ತಿರುಗಿ ನೋಡದೆಯೂ ಇರುವುದುಂಟು ಮನೆಗೆಲಸಗಳನ್ನೊಂದನ್ನೂ ತಾವು ಮಾಡದೆ ಎಲ್ಲವನ್ನೂ ಹೊಸ ಸೊಸೆಯ ತಲೆಯಮೇಲೆಯೇ ಹೊರಿಸುವುದೂ ಉಂಟು. ಎಷ್ಟು ಅಣಿಯಾಗಿ ಕೆಲಸಮಾಡಿದರೂ ಅಣಿಯಿಲ್ಲದ ಅಂವಗೇಡಿಯೆಂದು ತಿರಸ್ಕರಿಸುವುದೂ ಉಂಟು ನಿಮ್ಮ ತಾಳ್ಮೆಯನ್ನು ಪರೀಕ್ಷಿಸುವ ಉದ್ದೇಶ್ಯದಿಂದಲೇ ಅತ್ತೆಯ ಮನೆಯವರು ಅಡಿಗಡಿಗೂ ಇಂತಹ ನಡೆವಳಿಯನ್ನವಲಂಬಿಸುವರು. ಅಷ್ಟುಮಾತ್ರದಿಂದಲೇ ಅವರಿಗೆ ನಿಮ್ಮಲ್ಲಿ ಅಕಾರಣವಾದ ವೈರವಿರುವುದೆಂದೂ, ಅರೆನಿಮಿಷವಾದರೂ ಅಲ್ಲಿ ಬಾಳುವುದು ಅಶಕ್ಯವೆಂದೂ ಅರಿತು, ತಾಯ್ತಂದೆಗಳ ಬಳಿಗೋಡಿಬಂದು ಆದುದನ್ನೂ ಆಗದುದನ್ನೂ ಒಂದಕ್ಕೆ ನೂರರಷ್ಟು ಸೇರಿಸಿ ಹೇಳಿ ಅವರ ಮನಸ್ಸಿಗೆ ವ್ಯಾಕುಲವನ್ನುಂಟುಮಾಡಬೇಡಿರಿ. ಹೀಗೆ ಬಂದ ಮಗಳು ಗಂಡನ ಮನೆಯವರನ್ನು ಆಕ್ಷೇಪಿಸಿದರೆ ನಿಜಧರ್ಮವನ್ನರಿತ ತಾಯ್ತಂದೆಗಳು ನೀತಿಬಾಹಿರವಾದ ರೀತಿಯಲ್ಲಿ ಗಂಡನ ಮನೆಯೇ ಬೇಡವೆಂದು ತಪ್ಪಿಸಿ ಮಗಳನ್ನು ಮನೆಯಲ್ಲಿಟ್ಟುಕೊಳ್ಳಲಾರರು. ಹೆತ್ತ ಹೊಟ್ಟೆಯ ಆತಂಕಕ್ಕೋಸುಗ ಮಗಳನ್ನು ಬಯ್ದು ಕಳುಹಲಾರರು. ಅವರು ತ್ರಿಶಂಕುವಿನಂತೆ ಅಂತರಾಳದಲ್ಲಿ ಸಿಕ್ಕಿ ತ್ರಿಕಾಲವೂ ಕೊರಗುವರು. ಇದರಿಂದ ಮತ್ತಾವ ಮಹತ್ಫಲವೂ ಆಗುವುದಿಲ್ಲ. ಅದುಕಾರಣ ಎಲೌ, ಮಹಿಳಾಮಣಿಯರಿರಾ, ನಿಮ್ಮ ಸೌಜನ್ಯ, ನಿಮ್ಮ ಸ್ವೈರಣೆ, ನಿಮ್ಮ ನಗೆಮೊಗ, ಇವು

ಗಳಿಂದಲೇ ಅತ್ತೆಯು ಮನೆಯವರನ್ನು ವಿಕ್ರೀತದಾಸರನ್ನಾಗಿ ಮಾಡಿಕೊಳ್ಳ ಬೇಕು. ಪತಿಯಾಗಲಿ ಅತ್ತೆಮಾವಂದಿರಾಗಲಿ ನಿಮ್ಮ ವಿಷಯದಲ್ಲಿ ತಿಳಿದೋ ತಿಳಿಯದೆಯೋ ಒಂದಾನೊಂದುವೇಳೆ ಅಪಚಾರವಮಾಡಿದರೂ ಅದನ್ನು ಮನಸ್ಸಿಗೆ ತಂದುಕೊಳ್ಳದೆ ಸಂತೋಷವಾಗಿರಬೇಕು. ಪತಿಯೊಡನೆ ಇಲ್ಲದ ಸಲ್ಲದ ಕಾಡುಹರಟೆಗಳನ್ನೂ ನೆರೆಹೊರೆಯುವರ ದೋಷಾರೋಪಣೆಗಳನ್ನು ನಂಟರಿಷ್ಟರ ವೈಮನಸ್ಯವನ್ನೂ ಕುರಿತು ಚರ್ಚಿಸಬಾರದು. ಪತಿಯಾಡಿದ ರಹಸ್ಯವಚನಗಳನ್ನೂ ಪತಿಗೃಹದ ಛಿದ್ರಗಳನ್ನೂ ಪತಿಯ ಆದಾಯವ್ಯಯಗಳನ್ನೂ ಮಾತಾಪಿತೃಗಳೊಡನೆಯಾಗಲಿ, ಮತ್ತಾರೊಡನೆಯೇ ಆಗಲೀ ಪ್ರಸ್ತಾಪಿಸಲಾಗದು. ವೇಷದಿಂದಲೂ ಭೂಷಣದಿಂದಲೂ ಸೌಂದರ್ಯವು ಹೆಚ್ಚುವುದೆಂಬ ಭ್ರಮೆಯನ್ನುಳಿಯಬೇಕು. ವರ್ತನದಿಂದಲೂ ಭಾಷಣದಿಂದಲೂ ನಿಮ್ಮ ಸೌಂದರ್ಯವು ಅದ್ವಿತೀಯವೆನಿಸಿಕೊಳ್ಳುವುದೆಂಬುದನ್ನು ದೃಢವಾಗಿ ನಂಬಿರಬೇಕು. ಮೊದಲು ಕೆಲದಿನಗಳು ಇದರಂತೆ ನಡೆಯುವುದು ಕಷ್ಟಕರವಾಗಿ ತೋರಿದರೂ ಕಾಲಕ್ರಮದಲ್ಲಿ ಇದು ನಿಮಗೆ ಸ್ವಭಾವ ಸಹಜವಾಗಿ ಬಂದ ಗುಣದಂತಾಗುವುದು. ಇದರಿಂದ ಪ್ರತಿಯೊಬ್ಬರೂ ನಿಮ್ಮಲ್ಲಿ ಪ್ರೀತಿ ಗೌರವವನ್ನಿಡುವರು. ಕುಟುಂಬದಲ್ಲಿರುವವರೆಲ್ಲರೂ ನಿಮ್ಮನ್ನು ಆದರಿಸುವಾಗ ನಿಮ್ಮ ಇಷ್ಟಾನುಸಾರವಾಗಿ ಸಂಸಾರಚಕ್ರವು ತಿರುಗುವುದೆಂದರೆ ಆಶ್ಚರ್ಯವೇನು? ಸಂಸಾರಭಾರವನ್ನು ನಿರ್ವಹಿಸಲು ಸಮರ್ಥೆಯರಾಗಿ ಕುಟುಂಬಕ್ಕೆ ಸೇರಿದವರನ್ನೆಲ್ಲ ಯೋಗ್ಯತಾನುಗುಣ್ಯವಾಗಿ ಕಂಡು ಆದರಿಸುವ ನಿಮ್ಮಂತಹ ಮಹಾಲಕ್ಷ್ಮಿಯರು ಮನೆಗೆ ಬಂದೊಡನೆಯೇ ಅತ್ತೆಮಾವಂದಿರು ನಿರಾಂತಕರಾಗಿ ತಮ್ಮ ಜೀವಿತಶೇಷವನ್ನು ನಿಮ್ಮಶ್ರೇಯಃಪ್ರಾರ್ಥನೆಯಲ್ಲಿ ವಿನಿಯೋಗಿಸತೊಡಗುವರು. ನಿಮ್ಮ ನಿಮ್ಮ ಪತಿಗಳ ಉತ್ಸಾಹವೂ ಬುದ್ಧಿಶಕ್ತಿಯೂ ಇಮ್ಮಡಿಯಾಗಿ ಗೃಹವೇ ಭೂತಲಸ್ವರ್ಗವಾಗುವುದು ಮರ್ಯಾದೆಯನ್ನು ಮೀರದ ನಿಮ್ಮ ಸ್ವಾತಂತ್ರ್ಯವು ಸ್ಥಿರವಾಗಿ ನೀವೇ ಮುಂದಾಳುಗಳಾಗುವಿರಿ. ನೀವು ಗೃಹಾಧಿಕಾರಿಣಿಯರಾದ ಬಳಿಕ ಗಮನಿಸಬೇಕಾಗುವ ಕೆಲಸಂಗತಿಗಳನ್ನು ಕುರಿತು ಮುಂದಣ ಪ್ರಕರಣದಲ್ಲಿ ತಿಳಿಸುವೆವು.

ಯಾಗಲೀ, ಮಾವನಾಗಲೀ ಮತ್ತಾರೇ ಆಗಲಿ ಕಾರಣರಲ್ಲ. ಎಲೌ, ಉತ್ತಮೆಯರಿರಾ, ಅತ್ತೆಯ ಮನೆಯಲ್ಲಿ ಕೆಲವರಿಗೆ ಉಂಟಾಗಬಹುದಾದ ಕಷ್ಟಗಳು ಪ್ರೌಢವಿದ್ಯಾಭ್ಯಾಸದಿಂದಾಗಲೀ ಪ್ರೌಢಾವಿವಾಹದಿಂದಾಗಲೀ ನಿವಾರಣೆಯಾಗಲಾರವು ನೀವು ಕನ್ಯಾತ್ವದಿಂದಲೂ ಕರ್ತವ್ಯಜ್ಞಾನವನ್ನು ಪಡೆದರೆಯೇ ಪರಿಹಾರವಾಗುವುದು. ಪತಿಯು ಹೊಸದಾಗಿ ಮನೆಗೆ ಬಂದ ಮಡದಿಯನ್ನು ಹೊಂದಿ ಅವಳ ನಡೆವಳಿಯೆಂತಹುದಾಗಿರುವುದೋ ಎಂದು ಪರೀಕ್ಷಿಸಲಾಸೆಪಡುವನು ಅತ್ತೆಮಾವಂದಿರೂ ಅತ್ತಿಗೆ ನಾದಿನಿಯರೂ ಅಂತೆಯೇ ಅಪೇಕ್ಷಿಸುವರು. ಅಂತಹಕಾಲದಲ್ಲಿ ಅವರು ಅಶಕ್ಯಗಳಾದ ನಿಷ್ಠುರೋಕ್ತಿಗಳನ್ನು ಒಂದೊಂದುವೇಳೆ ಆಡಿ ಕೋಪಬರುವಂತೆ ಮಾಡುವುದೂ ಉಂಟು. ಸ್ವಸೌಖ್ಯದಲ್ಲಿ ಲೋಲುಪರಾಗಿದ್ದು ಬಿಟ್ಟು ಸೊಸೆಯ ಕಡೆಗೆ ತಿರುಗಿ ನೋಡದೆಯೂ ಇರುವುದುಂಟು. ಮನೆಗೆಲಸಗಳನ್ನೊಂದನ್ನೂ ತಾವು ಮಾಡದೆ ಎಲ್ಲವನ್ನೂ ಹೊಸ ಸೊಸೆಯ ತಲೆಯಮೇಲೆಯೇ ಹೊರಿಸುವುದೂ ಉಂಟು. ಎಷ್ಟು ಅಣಿಯಾಗಿ ಕೆಲಸಮಾಡಿದರೂ ಅಣಿಯಿಲ್ಲದ ಅಂವಗೇಡಿಯೆಂದು ತಿರಸ್ಕರಿಸುವುದೂ ಉಂಟು ನಿಮ್ಮ ತಾಳ್ಮೆಯನ್ನು ಪರೀಕ್ಷಿಸುವ ಉದ್ದೇಶ್ಯದಿಂದಲೇ ಅತ್ತೆಯ ಮನೆಯವರು ಅಡಿಗಡಿಗೂ ಇಂತಹ ನಡೆವಳಿಯನ್ನವಲಂಬಿಸುವರು. ಅಷ್ಟುಮಾತ್ರದಿಂದಲೇ ಅವರಿಗೆ ನಿಮ್ಮಲ್ಲಿ ಅಕಾರಣವಾದ ವೈರವಿರುವುದೆಂದೂ, ಅರೆನಿಮಿಷವಾದರೂ ಅಲ್ಲಿ ಬಾಳುವುದು ಅಶಕ್ಯವೆಂದೂ ಅರಿತು, ತಾಯ್ತಂದೆಗಳ ಬಳಿಗೋಡಿಬಂದು ಆದುದನ್ನೂ ಆಗದುದನ್ನೂ ಒಂದಕ್ಕೆ ನೂರರಷ್ಟು ಸೇರಿಸಿ ಹೇಳಿ ಅವರ ಮನಸ್ಸಿಗೆ ವ್ಯಾಕುಲವನ್ನುಂಟುಮಾಡಬೇಡಿರಿ. ಹೀಗೆ ಬಂದ ಮಗಳು ಗಂಡನ ಮನೆಯವರನ್ನು ಆಕ್ಷೇಪಿಸಿದರೆ ನಿಜಧರ್ಮವನ್ನರಿತ ತಾಯ್ತಂದೆಗಳು ನೀತಿಬಾಹಿರವಾದ ರೀತಿಯಲ್ಲಿ ಗಂಡನ ಮನೆಯೇ ಬೇಡವೆಂದು ತಪ್ಪಿಸಿ ಮಗಳನ್ನು ಮನೆಯಲ್ಲಿಟ್ಟುಕೊಳ್ಳಲಾರರು. ಹೆತ್ತ ಹೊಟ್ಟೆಯ ಆತಂಕ ಕ್ಕೋಸುಗ ಮಗಳನ್ನು ಬಯ್ದು ಕಳುಹಲಾರರು. ಅವರು ತ್ರಿಶಂಕುವಿನಂತೆ ಅಂತರಾಳದಲ್ಲಿ ಸಿಕ್ಕಿ ತ್ರಿಕಾಲವೂ ಕೊರಗುವರು. ಇದರಿಂದ ಮತ್ತಾವ ಮಹತ್ಫಲವೂ ಆಗುವುದಿಲ್ಲ. ಅದುಕಾರಣ ಎಲೌ, ಮಹಿಳಾಮಣಿಯರಿರಾ, ನಿಮ್ಮ ಸೌಜನ್ಯ, ನಿಮ್ಮ ಸೈರಣೆ, ನಿಮ್ಮ ನಗೆಮೊಗ, ಇವು

ಗಳಿಂದಲೇ ಅತ್ತೆಯು ಮನೆಯವರನ್ನು ವಿಕ್ರೀತದಾಸರನ್ನಾಗಿ ಮಾಡಿಕೊಳ್ಳಬೇಕು. ಪತಿಯಾಗಲಿ ಅತ್ತೆಮಾವಂದಿರಾಗಲಿ ನಿಮ್ಮ ವಿಷಯದಲ್ಲಿ ತಿಳಿದೋ ತಿಳಿಯದೆಯೋ ಒಂದಾನೊಂದುವೇಳೆ ಅಪಚಾರಮಾಡಿದರೂ ಅದನ್ನು ಮನಸ್ಸಿಗೆ ತಂದುಕೊಳ್ಳದೆ ಸಂತೋಷವಾಗಿರಬೇಕು. ಪತಿಯೊಡನೆ ಇಲ್ಲದ ಸಲ್ಲದ ಕಾಡುಹರಟೆಗಳನ್ನೂ ನೆರೆಹೊರೆಯವರ ದೋಷಾರೋಪಣೆಗಳನ್ನು ನಂಟರಿಷ್ಟರ ವೈಮನಸ್ಯವನ್ನೂ ಕುರಿತು ಚರ್ಚಿಸಬಾರದು. ಪತಿಮಾಡಿದ ರಹಸ್ಯವಚನಗಳನ್ನೂ ಪತಿಗೃಹದ ಛಿದ್ರಗಳನ್ನೂ ಪತಿಯ ಆದಾಯವ್ಯಯಗಳನ್ನೂ ಮಾತಾಪಿತೃಗಳೊಡನೆಯಾಗಲಿ, ಮಿತ್ರರೊಡನೆಯೇ ಆಗಲೀ ಪ್ರಸ್ತಾಪಿಸಲಾಗದು. ವೇಷದಿಂದಲೂ ಭೂಷಣದಿಂದಲೂ ಸೌಂದರ್ಯವು ಹೆಚ್ಚುವುದೆಂಬ ಭ್ರಮೆಯನ್ನುಳಿಯಬೇಕು. ವರ್ತನದಿಂದಲೂ ಭಾಷಣದಿಂದಲೂ ನಿಮ್ಮ ಸೌಂದರ್ಯವು ಅದ್ವಿತೀಯವೆನಿಸಿಕೊಳ್ಳುವುದೆಂಬುದನ್ನು ದೃಢವಾಗಿ ನಂಬಿರಬೇಕು. ಮೊದಲು ಕೆಲದಿನಗಳು ಇದರಂತೆ ನಡೆಯುವುದು ಕಷ್ಟಕರವಾಗಿ ತೋರಿದರೂ ಕಾಲಕ್ರಮದಲ್ಲಿ ಇದು ನಿಮಗೆ ಸ್ವಭಾವ ಸಹಜವಾಗಿ ಬಂದ ಗುಣದಂತಾಗುವುದು ಇದರಿಂದ ಪ್ರತಿಯೊಬ್ಬರೂ ನಿಮ್ಮಲ್ಲಿ ಪ್ರೀತಿ ಗೌರವವನ್ನಿಡುವರು. ಕುಟುಂಬದಲ್ಲಿರುವವರೆಲ್ಲರೂ ನಿಮ್ಮನ್ನು ಆದರಿಸುವಾಗ ನಿಮ್ಮ ಇಷ್ಟಾನುಸಾರವಾಗಿ ಸಂಸಾರಚಕ್ರವು ತಿರುಗುವುದೆಂದರೆ ಆಶ್ಚರ್ಯವೇನು? ಸಂಸಾರಭಾರವನ್ನು ನಿರ್ವಹಿಸಲು ಸಮರ್ಥೆಯರಾಗಿ ಕುಟುಂಬಕ್ಕೆ ಸೇರಿದವರನ್ನೆಲ್ಲ ಯೋಗ್ಯತಾನುಗುಣ್ಯವಾಗಿ ಕಂಡು ಆದರಿಸುವ ನಿಮ್ಮಂತಹ ಮಹಾಲಕ್ಷ್ಮಿಯರು ಮನೆಗೆ ಬಂದೊಡನೆಯೇ ಅತ್ತೆಮಾವಂದಿರು ನಿರಾಂತಕರಾಗಿ ತಮ್ಮ ಜೀವಿತಶೇಷವನ್ನು ನಿಮ್ಮಶ್ರೇಯಃಪ್ರಾರ್ಥನೆಯಲ್ಲಿ ವಿನಿಯೋಗಿಸತೊಡಗುವರು ನಿಮ್ಮ ನಿಮ್ಮ ಪತಿಗಳ ಉತ್ಸಾಹವೂ ಬುದ್ಧಿಶಕ್ತಿಯೂ ಇಮ್ಮಡಿಯಾಗಿ ಗೃಹವೇ ಭೂತಲಸ್ವರ್ಗವಾಗುವುದು. ಮರ್ಯಾದೆಯನ್ನು ಮೀರದ ನಿಮ್ಮ ಸ್ವಾತಂತ್ರ್ಯವು ಸ್ಥಿರವಾಗಿ ನೀವೇ ಮುಂದಾಳುಗಳಾಗುವಿರಿ. ನೀವು ಗೃಹಾಧಿಕಾರಿಣಿಯರಾದ ಬಳಿಕ ಗಮನಿಸಬೇಕಾಗುವ ಕೆಲಸಂಗತಿಗಳನ್ನು ಕುರಿತು ಮುಂದಣ ಪ್ರಕರಣದಲ್ಲಿ ತಿಳಿಸುವೆವು.

ಐದನೆಯ ಪ್ರಕರಣ

ಎಲೌ, ರಮಣೀಮಣಿಯರಿರಾ, ಗೃಹಸ್ವಾಮಿಯು ಆರ್ಜಿಸಿತಂದ ವಸ್ತುನಿಚಯವೆಲ್ಲ ನಿಮ್ಮ ಸ್ವಾಧೀನದಲ್ಲಿಯೇ ಇರುವುದು. ಅವನ ಪಿತ್ರಾರ್ಜಿತವಾದ ಭೂಸ್ವಾಸ್ಥ್ಯಾದಿಗಳಿಂದ ವರ್ಷವರ್ಷವೂ ಧಾನ್ಯಾದಿರೂಪದಲ್ಲಿ ಬರಬಹುದಾದ ದ್ರವ್ಯವೂ ನಿಮ್ಮ ಕೈಗೆ ದೊರೆಯುವುದು. ಅದನ್ನೆಲ್ಲ ವ್ಯರ್ಥವ್ಯಯವಾಗದಂತೆ ನೋಡಿಕೊಂಡು ಸಮಯೋಚಿತವಾಗಿ ಬಳಸಬೇಕಾದ ವಿಧಾನವನ್ನು ನೀವು ತಿಳಿದುಕೊಳ್ಳದಿದ್ದರೆ ಬಡತನಕ್ಕೆಡೆಗೆಟ್ಟು ಸಂಕಟಪಡಬೇಕಾಗುವುದು ಆದುದರಿಂದ ಸಂಚಿತವಸ್ತುಗಳ ವಿನಿಯೋಗದ ವಿಷಯದಲ್ಲಿ ಬಹು ಜಾಗರೂಕತೆಯನ್ನು ಹೊಂದಿರಬೇಕು. ಮನೆಗೆಬಂದ ಪದಾರ್ಥಗಳನ್ನೆಲ್ಲ ಉಂಡುಟ್ಟು ಆಗಾಗಲೇ ಮುಗಿಸಿಬಿಡುವುದು ಗೃಹಕಾರ್ಯನಿರ್ವಾಹಕಿಯರ ಲಕ್ಷಣವಲ್ಲ. ಆರ್ಜಿಸಿತಂದ ವಸ್ತುವನ್ನು ಕಾಲಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಮಿಗಿಸಿಡುತ್ತಾ ಬರುವುದು ಬಹು ಪ್ರಯೋಜನಕರವು. ಹೀಗೆ ಕೂಡಿಡಲಾರದವರು ಹಲವುಬಗೆಯ ಸಂಕಟಗಳಿಗೊಳಗಾಗಿರುವರು. ಆರ್ಜಿಸಿ ತರತಕ್ಕವರು ಇಂದಿನಂತೆಯೇ ಜೀವಾವಧಿ ದೇಹದಾರ್ಢ್ಯವುಳ್ಳವರಾಗಿರುವುದು ಅಸಂಭವ. ಗೃಹಕೃತ್ಯಕ್ಕೆ ಬೇಕಾಗುವ ಸಾಮಗ್ರಿಯು ಇಂದಿನಷ್ಟೇ ಪರಿಮಿತಿಯಲ್ಲಿರುವುದೂ ಅಸಂಭವ. ಮಕ್ಕಳು ಮರಿಗಳಾಗಿ ಸಂಸಾರವು ಅಭಿವೃದ್ಧಿಗೊಂಡರೆ ಕುಟುಂಬದ ಪಾಲಕನ ಆರ್ಜನೆಯೂ ಅದರೊಂದಿಗೆ ಅಭಿವೃದ್ಧಿಗೊಳ್ಳಲಾರದಲ್ಲವೇ? ಕುಟುಂಬದಲ್ಲಿ ಶುಭಾಶುಭಗಳೂ ರೋಗಭೋಗಗಳೂ ಅನುದಿನವೂ ಉಂಟಾಗುತ್ತಲೇ ಇರುವುವು. ಅಂತಹ ಸಂದರ್ಭಗಳಲ್ಲಿ ವ್ಯಯವು ಇಮ್ಮಡಿಯಾಗುವುದೂ ನೂರ್ಮಡಿಯಾಗುವುದೂ ಉಂಟು. ಸಂಚಿತ ದ್ರವ್ಯದಲ್ಲಿ ಸ್ವಲ್ಪಭಾಗವನ್ನು ಮಿಗಿಸಿಟ್ಟುಕೊಂಡಿದ್ದರೆ ಆ ಕಾಲಕ್ಕೆ ಬಹು ಸಾಹಾಯ್ಯಕಾರಿಯಾಗುವುದು. ಹಾಗಲ್ಲದಿದ್ದರೆ ಸಾಲಮಾಡಬೇಕಾಗುವುದು. ಮಾಡಿದ ಸಾಲಕ್ಕೆ ಬಡ್ಡಿಸೇರಿ ಮತ್ತಷ್ಟು ಹೊರೆಯಾಗುವುದು. ಒಂದಾವೃತ್ತಿ ಸಾಲಮಾಡುವ ದುಷ್ಟಪದ್ಧತಿಯನ್ನು ಮಾಡಿಬಿಟ್ಟರೆ ಅದು ಎಂದೆಂದಿಗೂ ತಪ್ಪುವು

ದೇ ಇಲ್ಲ. ಸಾಲಮಾಡುವ ಸ್ವಭಾವವುಳ್ಳವರು ಮಿತವ್ಯಯವೆಂದರೇನೆಂಬುದನ್ನೇ ತಿಳಿಯದವರಾಗುವರು. ಸಾಲಮಾಡುವವರನ್ನು ಕಂಡರೆ ಮಿತ್ರರೆಲ್ಲ ತಮ್ಮನ್ನೆಲ್ಲಿ ಸಾಲಕೇಳುವರೋ ಎಂದು ದೂರವಾಗುವರು. ನೆರೆಹೊರೆಯವರು ಮುಖವಿತ್ತು ಮಾತನಾಡಿಸರು. ಮಾಡಿದ ಸಾಲವನ್ನು ನಿಯಮಿತಕಾಲದಲ್ಲಿ ಹಿಂದಕ್ಕೆ ಕೊಡದಿದ್ದರೆ ಸಾಲಿಗರು ಬಿರುನುಡಿಯಾಡಿ ನೋಯಿಸುವರು. ಇದರಿಂದ ಸರಿಗರಿದಿಗಾಗಿ ತಲೆಬಾಗಿಸಬೇಕಾಗುವುದು. ಮೈತುಂಬ ಬಟ್ಟೆಯನ್ನುಟ್ಟು ಹೊಟ್ಟೆಯತುಂಬ ಅನ್ನತಿಂದರೂ ಮನಸ್ಸಿಗೆ ಹರ್ಷವಿಲ್ಲವಾಗುವದು. ಸಂತೋಷವಿಲ್ಲದೆ ಸಾವಿರ ವರ್ಷಬಾಳುವುದಕ್ಕಿಂತ ಸಾಯುವುದೇ ಅತ್ಯುತ್ತಮವೆನಿಸುವುದು. ಇವಿಷ್ಟು ಮಿತವ್ಯಯಮಾಡಿ ಮಿಗಿಸಿಟ್ಟುಕೊಳ್ಳದೆ ಅತಿವ್ಯಯಕ್ಕೆ ಆಸರೆ ಕೊಡುವುದರ ಫಲವಲ್ಲವೇ ? ಎಲಾ, ಸೀಮಂತಿನಿಯರಿರಾ, ಅದುಕಾರಣ ನೀವು ದುಂದುವೆಚ್ಚಕ್ಕೆ ಸಂದುಗೊಡದೆ ಜಾಗರೂಕತೆಯಿಂದಿರಿ. ಅಡಿಗೆ ಪದಾರ್ಥಗಳನ್ನೂ ದವಸಧಾನ್ಯಗಳನ್ನೂ ಮಿತವರಿತು ಬಳಸಿಕೊಂಡಮೇಲೆ ಅವುಗಳಲ್ಲಿ ಮಿಕ್ಕುದನ್ನು ಭದ್ರವಾಗಿ ಮುಚ್ಚಿಡುವುದನ್ನು ಮರೆಯಬಾರದು. ದವಸಧಾನ್ಯಗಳನ್ನು ಮುಚ್ಚಿಡದಪಕ್ಷದಲ್ಲಿ ಇಲಿ ಹೆಗ್ಗಣಗಳು ತಿಂದು ಧೂಳೀಳಸುವುವು. ಅಡಿಗೆ ಪದಾರ್ಥಗಳನ್ನು ಬೆಕ್ಕು ಮೊದಲಾದುವು ತಿಂದು ಹಾಳುಮಾಡುವುವು. ಇದರಿಂದಲೂ ವ್ಯರ್ಥವ್ಯಯಕ್ಕೆ ಅವಕಾಶವಾಗುವುದು. ಎರಡನೆಯದಾಗಿ ಇಲಿ ಬೆಕ್ಕುಗಳು ತಿಂದು ಮಿಕ್ಕ ಪದಾರ್ಥಗಳಲ್ಲಿ ವಿಷಕ್ರಿಮಿಗಳು ತಗುಲಿಕೊಂಡಿದ್ದು ಸಾಂಕ್ರಾಮಿಕ ರೋಗಗಳನ್ನು ಬೇರೂರಿಸುವುವು ಇದರಿಂದ ಉಂಟಾಗಬಹುದಾದ ಅನರ್ಥಗಳನ್ನು ಪ್ಲೇಗ್ ಮೊದಲಾದ ರೋಗಗಳಿಗೆ ಎರೆಯಾದ ಎಷ್ಟೋ ಸಂಸಾರಗಳಲ್ಲಿ ನೀವೇ ನೋಡಿ ತಿಳಿದಿರಬಹುದಾದುದರಿಂದ ನಾವು ವಿವರಿಸಬೇಕಾದವಶ್ಯಕತೆಯಿಲ್ಲ. ಬಟ್ಟೆ ಬರೆಗಳನ್ನುಪಯೋಗಿಸಿಕೊಳ್ಳುವುದರಲ್ಲಿಯೂ ಜಾಗರೂಕತೆಯಿರಬೇಕು. ಬೆಲೆ ಬಾಳುವ ಬಂದೆರಡು ವಸ್ತ್ರಗಳನ್ನಿಟ್ಟುಕೊಂಡಿದ್ದು ಪ್ರತಿದಿನವೂ ಸಾಮಾನ್ಯವಾದುವುಗಳನ್ನು ಉಪಯೋಗಿಸಿಕೊಳ್ಳಬೇಕು. ಧರಿಸುವ ವಸ್ತ್ರವು ಹರಕಲಾಗಿಯೂ ಮಲಿನವಾಗಿಯೂ ಇರಬಾರದು. ಮನೆಗೆಲಸಗಳನ್ನು ಮಾಡುವಾಗಲೂ ಸ್ನಾನಾದಿಗಳನ್ನು ಮಾಡುವಾಗಲೂ ಉಟ್ಟ ಬಟ್ಟೆಯಿಂದ ಮೈಕೈಗಳನ್ನೊರಸಿಕೊಳ್ಳ

ಟಕ ವಿದ್ಯಾವರ್ಧ

ವುದು ಬಹಳ ಕೆಟ್ಟುದು. ಇದರಿಂದ ಮೊದಲೇ ಮಾಸಿಹೋಗಿದ್ದ ಉಟ್ಟಬಟ್ಟೆಗೆ ಮತ್ತಷ್ಟು ಕೊಳೆಯು ಸೇರುವುದೂ ಉಂಟು. ಬಟ್ಟೆಯಲ್ಲಿದ್ದ ಕೊಳೆಯು ಸ್ನಾನಮಾಡಿದ್ದ ಮೈಗೆ ಹೇರಿಕೊಳ್ಳುವುದೂ ಉಂಟು. ನೆಗಡಿ ಮುಂತಾದುವುಗಳಿಂದ ಬಾಧೆಪಡುವಾಗ ಉಟ್ಟ ಬಟ್ಟೆಯಿಂದ ಮೂಗೊರಸಿಕೊಳ್ಳುವುದೊಂದು ದುಷ್ಪದ್ಧತಿಯು ಸಿಂಗಳವೂ ಒಂದು ಬಗೆಯ ಮಲವೇ ಅಲ್ಲವೆ ? ಉಟ್ಟಬಟ್ಟೆಯಲ್ಲಿ ಅದನ್ನು ಹುದುಗಿಸಿಟ್ಟುಕೊಂಡು ಊಟಉಪಚಾರಗಳನ್ನು ಮಾಡುವುದು ವಿಹಿತವೆನಿಸುವುದೇ ? ಸಾಧ್ಯವಾದಷ್ಟು ಮಟ್ಟಿಗೆ ವಸ್ತ್ರಗಳನ್ನು ಮಾಸದಿರುವಂತೆ ನೋಡಿಕೊಳ್ಳಬೇಕು. ಮಾಸಿದ ಬಟ್ಟೆಗಳನ್ನು ಪ್ರತಿದಿನವೂ ತಗೆದು ಅನುಕೂಲ್ಯವಿರುವವರು ಅಗಸರಿಂದೊಗೆಯಿಸಬೇಕು. ಇಲ್ಲದವರು ತಾವೇ ಒಗೆದು ಮಡಿಮಾಡಿಕೊಳ್ಳಬೇಕು. ಕೆಲವರು ಸ್ನಾನಮಾಡುವಾಗ ಉಟ್ಟ ಬಟ್ಟೆಯನ್ನು ತೆಗೆಯದೆ ನಾಲ್ಕು ಬಿಂದಿಗೆಯ ನೀರನ್ನು ಮೈಮೇಲೆ ಸುರಿದುಕೊಂಡು ಮೈಕೈಗಳನ್ನುಜ್ಜಿಕೊಳ್ಳದೆಯೇ ಬಂದು, ನನೆದ ವಸ್ತ್ರವನ್ನು ಕೊಳೆನೆಲದ ಮೇಲೆ ಹಾಕಿ, ಬೇರೆ ಒಣಗಿದ ವಸ್ತ್ರವನ್ನುಟ್ಟುಕೊಳ್ಳುವರು ತರುವಾಯ ಭೋಜನಾದಿಕಾರ್ಯಗಳನ್ನು ಮುಗಿಸಿಕೊಂಡು ಇತರ ಗೃಹಕೃತ್ಯಗಳಲ್ಲಿ ಆಸಕ್ತೆಯರಾಗಿ ಸಂಧ್ಯಾಕಾಲದಲ್ಲಿಯೋ ರಾತ್ರಿಯೋ ತಮಗೆ ತೋರಿದಾಗ ಆ ಮಾಸಿ ಕಳೆದು ಬಿಸುಟ ವಸ್ತ್ರವನ್ನು ಒಂದು ಬಾರಿಯಾದರೂ ಕಸಗದೆ ಹಿಂಡಿ ಹರವುವರು. ಒಂದೊಂದು ವೇಳೆ ಆ ವಸ್ತ್ರಗಳು ಎರಡು ಮೂರು ದಿನಗಳವರೆಗೂ ಹಾಗೆಯೇ ಕೊಳೆಯುತ್ತ ಬಿದ್ದಿದ್ದು ಅದರಲ್ಲಿ ಜಿರ್ಲೆಯೇ ಮೊದಲಾದ ಕ್ರಿಮಿಗಳು ಸೇರಿರುವುದೂ ಉಂಟು. ಇದರಿಂದ ಬಟ್ಟೆಯು ಕೊಳೆತು ಜೀರ್ಣವಾಗಿ ವಾಸನೆ ಹುಟ್ಟಿ ಹರಿದುಹೋಗುವುದೂ ಅಲ್ಲದೆ ಬಣ್ಣವೂ ಕೆಟ್ಟುಹೋಗುವುದು. ಆರು ತಿಂಗಳು ಬಾಳಿಕೆ ಬರಬಹುದಾದ ಬಟ್ಟೆಯು ಒಂದು ತಿಂಗಳೂ ಬಾರದೆ ಅವೊಂದು ತಿಂಗಳೂ ಮಲಿನವಾಗಿಯೇ ಇದ್ದು ಹರಿದುಹೋಗುವುದರಿಂದ ಅದಕ್ಕೆ ಕೊಟ್ಟ ಹಣವು ಅನ್ಯಾಯ್ಯವೇ ಆಗುವುದಲ್ಲವೆ ? ಅದುಕಾರಣ ವಸ್ತ್ರಗಳನ್ನು ಶುಚಿಯಾಗಿಟ್ಟುಕೊಂಡಿರಬೇಕಾದುದಾವಶ್ಯಕವು. ವಿಶೇಷ ಸಮಯಗಳಿಗೆಂದು ತೆಗೆದಿಟ್ಟುಕೊಂಡಿರುವ ಅಮೂಲ್ಯವಸ್ತ್ರಗಳನ್ನು ಆಗಿಂದಾಗ ಬಿಸಿಲುಗಾಳಿಗಳಲ್ಲಿ ಹರಡಿ, ಹುಳುಗಳು ಹೊಡೆಯದಂತೆ ನೋಡಿ

ಕರ್ನಾಟಕ ಬಂಧು.

ಕಂ॥ ವರಕರ್ನಾಟಕ ಬಂಧು ರು ।
ಚಿರ ವಿಷಯವಿಚಾರಸಿಂಧು ವಿದು ವಾಚಕರ ॥
ಕರದೊಳ್ ಒಂದು ಮಾಸಕೆ ವಿ ।
ಭರದಮುದಮಂ ತಂದುಕೊಡದೆ ಬಿಡದೋದಲೊಡಂ ॥

ಸಂಪುಟ ೧ | ಕ್ರೋಧನ ಸಂ॥ರ ಮಾರ್ಗಶೀರ್ಷಶು॥ ೧೫ | ಸಂಚಿಕೆ ೨.

ಅಮೂಲ್ಯವಾದ ರಥವು.

(ಲೇಖಕರು:- ವೈ ನಾಗೇಶಶಾಸ್ತ್ರಿ, ಸರ್ವದರ್ಶನತೀರ್ಥ.)

ಯೂರೋಪುಖಂಡದ ಜನರ ಬುದ್ಧಿಕುಶಲತೆಯನ್ನು ಸೂಚಿಸುವ ಸೈಕಲ್, ಮೋಟರ್‌ಸೈಕಲ್, ಮೋಟರ್‌ಕಾರ್, ಆಕಾಶವಿಮಾನಾದಿ ಗಮನಸಾಧನಯಂತ್ರಗಳು ದೇಶಗಳಲ್ಲಿ ಹಬ್ಬಿ ಜನರ ಕಣ್ಮನಗಳನ್ನು ಸೆಳೆಯುತ್ತಿರುವವು. ಪ್ರತಿಯೊಂದು ದೇಶದವರೂ ತಮ್ಮ ವಿದ್ಯಾಭ್ಯಾಸಕಾಲದಲ್ಲಿಯೇ ಸೈಕಲ್ಲಿನಲ್ಲಿ ಸವಾರಿಮಾಡುವ ಜಾಣ್ಮೆಯನ್ನು ಕಲಿಯಲೆತ್ನಿಸುತ್ತಿರುವರು. ಅವರು ವಿದ್ಯಾಭ್ಯಾಸವನ್ನು ಮುಗಿಸಿ, ಮುಂದೆ ಯಾವುದಾದರೊಂದು ಉದ್ಯೋಗದಲ್ಲಿ ತೊಡಗಿದಕೂಡಲೇ ತಮ್ಮ ಗೃಹಕೃತ್ಯದ ತೊಂದರೆಗಳೆಷ್ಟಿದ್ದರೂ ಅವನ್ನು ಮೂಲೆಗೊತ್ತಿ, ಮೊದಲು ಕುದುರೆಯಗಾಡಿಯನ್ನಾಗಲಿ, ಮೋಟರ್‌ಸೈಕಲ್ಲನ್ನಾಗಲಿ, ಮೋಟರ್‌ಕಾರನ್ನಾಗಲಿ, ಕಡೆಗೊಂದು ಉತ್ತಮವಾದ ಸೈಕಲ್ಲನ್ನಾದರೂ ತೆಗೆದುಕೊಳ್ಳದಿದ್ದರೆ, ತಮಗೆ ಅಗೌರವವೆಂದು ತಿಳಿಯುವದಲ್ಲದೆ, ತಮ್ಮ ಜನ್ಮವನ್ನೇ ವ್ಯರ್ಥವೆಂದು ತಿಳಿಯುವರು. ಅವರಿಗೆ ತಮ್ಮ ಉದ್ಯೋಗವನ್ನು ಸರಿಯಾಗಿ ಮಾಡಲಿಕ್ಕೆ ಮನಸ್ಸೇ ಇರುವುದಿಲ್ಲ. ಆಕಾರಣದಿಂದ ಪಟ್ಟಣಗಳ ಪ್ರತಿಯೊಂದು ಪ್ರಾಂತದಲ್ಲಿಯೂ ಸೈಕಲ್ಲುಗಳು ಮತ್ತು ಕಾರುಗಳೇ, ತುಂಬಿ, ಸರ್ವದಾ ಅವುಗಳ ಕೂಗುಗಳೇ ಕಿವಿಗೆ ಬೀಳುತ್ತಿರುವವು. ಆಧುನಿಕಶಿಕ್ಷಣವನ್ನು ಹೊಂದಿದ ಯುವಕರಾದರೋ ಊರಿಗೆ ದೂರದಲ್ಲಿರುವ ಉತ್ತಮವಾದೊಂದು ಬಂಗಲೆಯನ್ನು ಬಾಡಿಗೆಗೆ ತೆಗೆದುಕೊಂಡು, ಅದರಲ್ಲಿ ವಾಸಮಾಡುತ್ತಾ, ಸಾಮಾನ್ಯಜನರೊಡನೆ ಹೆಚ್ಚಿಗೆ ಮಾತನಾಡದೆ, ಕುದುರೆಯಗಾಡಿ, ಮೋಟರ್‌ಸೈಕಲ್, ಅಥವಾ ಮೋಟರ್‌ಕಾರ್, ಇವುಗಳಲ್ಲಿ

ತಾವು ತಮ್ಮ ಹೆಂಡಂದಿರೊಡನೆ ಕೂತುಕೊಂಡು, ಒಂದುಗಲ ಪಟ್ಟಣದಬೀದಿಗಳಲ್ಲಿ ಅಲೆದು, ತಮ್ಮ ವಾಸಸ್ಥಾನವನ್ನು ಸೇರಿಬಿಟ್ಟರೆ, ತಾವು ಖುಷಿಪಡುವುದು ಸಫಲವಾಯಿತೆಂದು ಭಾವಿಸುವುದಿಲ್ಲವೆ, ತಮ್ಮ ಜಾಣ್ಮೆಯೇ ಜಾಣ್ಮೆಯೆಂದು ಹಿರ್ರನೆ ಹಿಗ್ಗಿ ಕಣ್ಣು ಮುಚ್ಚಿ ಬಿಡುವರು. ಇವರನ್ನು ನೋಡಿದ ಹಳ್ಳಿಯ ಒಕ್ಕಲಿಗರ ಮಕ್ಕಳೂ ಸಹಿತ, ತಮ್ಮ ಮನೆಯಲ್ಲಿ ಕಡೆಗೊಂದು ಸೈಕಲ್ಲನ್ನಾದರೂ ಇಡಬೇಕೆಂದು, ತಂದೆಗಳೊಡನೆ, ಜಗಳವಾಡಿಯಾದರೂ ಅದನ್ನು ತಂದು ಬಿಡುವರಲ್ಲವೆ?

ಸೋದರರೆ! ಇವುಗಳ ಮೋಹಕ್ಕೊಳಗಾಗಿ, ಇವುಗಳಿಂದಲೇ ನಮ್ಮ ಅಮೂಲ್ಯವಾದ ಮನುಷ್ಯಜನ್ಮದ ಕಾಲವನ್ನು ಕಳೆದುಕೊಳ್ಳಬಾರದು. ಇವುಗಳಲ್ಲಿ ಸವಾರಿ ಮಾಡುತ್ತಿದ್ದರೆ, ನಾವು ನಮ್ಮ ನಿಜವಾದ ವಾಸಸ್ಥಾನವನ್ನು ಎಂದಿಗೂ ಸೇರಲಾರೆವು. ದುರ್ಗಮವಾದ ದುಃಖಮಯವಾದ ದುರ್ಭರವಾದ ಮಹಾರಣ್ಯವನ್ನು ಸೇರುವೆವು. ಈ ಭೂಲೋಕವು ನಮ್ಮ ಜನ್ಮಸ್ಥಾನವಲ್ಲವು. ಈ ಭೂಲೋಕದಲ್ಲಿ ನಾವು ಕಟ್ಟಿಕೊಂಡಿರುವ ಮನೆಯು ನಮ್ಮ ವಾಸಸ್ಥಾನವಲ್ಲವು. ನಮ್ಮ ನಿಜವಾದ ಜನ್ಮಸ್ಥಾನವೂ ಸರ್ವದಾ ಸೌಖ್ಯದಿಂದ ವಾಸಮಾಡುವ ಮನೆಯೂ ಬೇರಿರುವವು. ಈ ಲೋಕವು ಅಲ್ಲಿಗೆ ಕೂತುಕೊಂಡು ಹೋಗಲಿಕ್ಕೆ ಅನುಕೂಲವಾದ ರಥಗಳನ್ನು ಕಾಪಾಡುವ ಗಾಡಿಯ ಖಾನೆಯು.

ಪ್ರಿಯಸಹೋದರರೆ! ನಾವು ಭಗವಂತನ ಅಂಶಭೂತರಲ್ಲವೆ? ತೇಜೋಮಯವಾದ ಭಗವಂತನೆಂಬ ಮಹಾಗ್ನಿಯಿಂದಹೊರಟ ಕಿಡಿಗಳಲ್ಲವೆ? ಭಗವಂತನೆಂಬ ಮೇಘದಿಂದ ಭೂಮಿಗೆ ಉದುರಿದ ಮಳೆಯ ಹನಿಗಳಲ್ಲವೆ? ಹೌದು. ಆ ಭಗವಂತನೇ ನಮ್ಮ ನಿಜವಾದ ಜನ್ಮಸ್ಥಾನವು. ಆತನಸನ್ನಿಧಿಯೇ ನಾವು ಸರ್ವದಾ ಸೌಖ್ಯದಿಂದ ವಾಸಮಾಡತಕ್ಕ ಮನೋಹರವಾದ ಮಹಾಮಂದಿರವು. ಆದ್ದರಿಂದ ಈ ಕೃತ್ರಿಮವಾದ ಯಂತ್ರಗಳಲ್ಲಿ ಸವಾರಿಮಾಡುವ ವಿಲಾಸದಲ್ಲಿ ಮಗ್ನರಾಗಿ, ಜನ್ಮವನ್ನು ನೀಗುವುದು ವ್ಯರ್ಥವಲ್ಲವೆ? ಇವುಗಳನ್ನು ಎಷ್ಟು ವೇಗವಾಗಿ ನಡೆಸಿದರೂ, ಎಷ್ಟು ಜನ್ಮಗಳನ್ನು ಕಳೆದರೂ, ನಮ್ಮ ನಿಜವಾದ ಸುಖಸ್ಥಾನವನ್ನು ಸೇರಲಾರೆವು. ಅಲ್ಲಿಗೆ ನಮ್ಮನ್ನು ಕರೆದೊಯ್ಯುವ ರಥವೇಬೇರಿರುವದು. ಅದನ್ನು ಸರಿಯಾಗಿ ನಡೆಸುವ ಜಾಣ್ಮೆಯನ್ನು ಕಲಿಯುವುದಕ್ಕಾಗಿಯೇ ನಾವು ಈ ಲೋಕಕ್ಕೆ ಬಂದಿರುವೆವು. ಆರಥವಾವುದು? ಅದನ್ನು ನಡೆಸುವ ಜಾಣ್ಮೆಯಾವುದು?

ಸೋದರರೆ! ನಮ್ಮ ಶರೀರವೆ ಆರಥವು. ಇದನ್ನು ಕೃಪಾಮಯನಾದ ಭಗವಂತನೆಂಬ ನಮ್ಮ ತಂದೆಯು ದರಿದ್ರರೂ ಧನಿಕರೂ ಎಂಬ ಭೇದವನ್ನಿಡದೆ, ನಮ್ಮೆಲ್ಲರಿಗೂ ಒಂದೇ ವಿಧವಾದುದನ್ನೇ ದಯಪಾಲಿಸಿರುವನು; ಇದಕ್ಕೆ ಒಂದು ಕಾಸನ್ನಾದರೂ ನಮ್ಮಕಡೆಯಿಂದ ಆತನು ತೆಗೆದುಕೊಂಡಿಲ್ಲವು. ಕೋಟಿಗಟ್ಟಲೆ ರೂಪಾಯಿ

ಗಳನ್ನು ಕೊಟ್ಟರು. ಈ ಲೋಕದಲ್ಲಿ ಕಲಾಕುಶಲನೆಂದು ಪ್ರಸಿದ್ಧಿಯನ್ನು ಪಡೆದ ಯಾವ ಮನುಷ್ಯನೂ ಈ ರಥವನ್ನು ನಿರ್ಮಿಸಲಾರನು. ಅಂದಮೇಲೆ ಇದು ಅಮೂಲ್ಯವಾದರಥವಲ್ಲವೆ?

ಈ ಶರೀರರೂಪವಾದ ರಥಕ್ಕೆ ಇಂದ್ರಿಯಗಳೆಂಬ ಕುದುರೆಗಳನ್ನು ಜೋಡಿಸಿ, ಅವುಗಳಿಗೆ ಮನಸ್ಸೆಂಬ ಲಗಾಮನ್ನು ಹಾಕಿ, ಅದನ್ನು ಬುದ್ಧಿಯೆಂಬ ಸಾರಥಿಯ ಕೈಗೆ ಕೊಟ್ಟು, ಶಬ್ದಸ್ಪರ್ಶಾದಿ ವಿಷಯಗಳೆಂಬ ಮಾರ್ಗದಲ್ಲಿ, ನಾವು ಜಾಗ್ರತೆಯಿಂದ ರಥಾರೂಢರಾಗಿ ಪ್ರಯಾಣಮಾಡಿದರೆ, ನಮ್ಮ ನಿಜವಾದ ಸುಖಸ್ಥಾನಕ್ಕೆ ಸೇರುವೆವು. ಆಗ ನಮ್ಮ ಜನ್ಮವು ಸಾರ್ಥಕವಾಗುವುದಲ್ಲವೆ?

ಈ ಅಮೂಲ್ಯರಥದ ವಿಷಯವು ಕರ್ನಾಟಕಬಂಧುಪತ್ರಿಕಾಸಂಪಾದಕರ ಸ್ವಕಪೋಲಕಲ್ಪಿತವಲ್ಲವು; ಲೋಕಪಿತನಾದ ಭಗವಂತನು ತನ್ನ ಪ್ರಸಿದ್ಧ ಪತ್ರಿಕೆಯಾದ ಕಠೋಪನಿಷತ್ತಿನಲ್ಲಿ ಪ್ರಕಟಿಸಿರುವ ಸೂಕ್ತಿಗಳ ಸಾರಾಂಶವು.

ಶ್ಲೋ॥ ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವತು।
ಬುದ್ಧಿಂತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವಚ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷುಗೋಚರಾನ್ ।
(ಸಶೇಷ)

ಈ ರಥವನ್ನು ನಡೆಸಬೇಕಾದ ಜಾಣ್ಮೆಯು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವುದು.

ಲೀಲಾ ಪದ್ಮರಾಜರ ಉಪಾಖ್ಯಾನ ಮತ್ತು ಲೀಲಾ ಸರಸ್ವತಿಯರ ಸಂವಾದ.

(ಲೇಖಕರು:— ಬಿ. ಚನ್ನಬಸಯ್ಯನವರು)

ಮನುಷ್ಯನ ಜೀವಮಾನದಲ್ಲಿ ಅವನಿಗೆ ಸಂಬಂಧವಾಗುವ ವಿದ್ಯಾ[illegible] ಭೋಗಕುಟುಂಬ ಮೊದಲಾದವು ಒಬ್ಬೊಬ್ಬನಿಗೆ ಒಂದೊಂದುವಿಧವಾಗಿ ಸಂಪ್ರಾಪ್ತವಾಗುವುದಕ್ಕೆ ಕಾರಣವೇನು? ಅವನು ಜೀವಿಸಿರುವಾಗ ಮಾಡಿದ ಕರ್ಮಗಳಿಂದ ಮರಣಾನಂತರ ಸ್ವರ್ಗ ನರಕಾನುಭವಗಳನ್ನು ಹೇಗೆ ಅನುಭವಿಸುವನು? ಮತ್ತು ಮಾರನೇ ಜನ್ಮದಲ್ಲಿ ಆಯಾ ಕರ್ಮಕ್ಕೆ ತಕ್ಕಫಲಗಳನ್ನು ಹೇಗೆ ಪಡೆಯುವನು ಎಂಬ ಈ

ವಿಷಯವನ್ನು ಮನುಷ್ಯರೆಲ್ಲರೂ ಪರಿಭಾವಿಸತಕ್ಕದ್ದು. ಈ ವಿಷಯವನ್ನು ಕುರಿತು ಆಲೋಚಿಸಬೇಕಾದರೆ ವಾಸಿಷ್ಠ ರಾಮಾಯಣಾಂತರ್ಗತವಾದ ಲೀಲಾ ಸರಸ್ವತ್ಯುಪಾಖ್ಯಾನವನ್ನು ಪಾಠಮಾಡುವದು ಉಪಯುಕ್ತವು. ಈ ಉಪಾಖ್ಯಾನವನ್ನು ಸೂರ್ಯವಂಶದ ಗುರುವಾದ ವಸಿಷ್ಠ ಮಹಾಋಷಿಯು ದಶರಥನ ಮಗನಾದ ಶ್ರೀರಾಮಚಂದ್ರನಿಗೆ ಬೋಧಿಸಿರುವನು. ಈ ಉಪಾಖ್ಯಾನದಲ್ಲಿ ಸರಸ್ವತೀದೇವಿಯು ಲೀಲೆಯನ್ನು ಕುರಿತು ಆಕೆಯ (ಲೀಲೆಯ) ಪೂರ್ವಜನ್ಮದಸ್ಥಿತಿಯನ್ನೂ, ಆ ಜನ್ಮದಲ್ಲಿ ಸಂಪ್ರಾಪ್ತವಾದ ವಿದ್ಯಾಭೋಗಗಳಿಗೆ ಕಾರಣವನ್ನೂ ಮತ್ತು ಆ ಶರೀರಪಾತಾನಂತರ ಸ್ವರ್ಗದಲ್ಲಿ ಜೀವಾತ್ಮನಿಂದ ಅನುಭವಿಸಲ್ಪಡುವ ಭೋಗಗಳನ್ನೂ ಯುಕ್ತಿಯುಕ್ತವಾಗಿ ನಿರೂಪಿಸಿರುತ್ತಾಳೆ.

— ಲೀಲೆಯ ಪೂರ್ವಜನ್ಮ. —

ನಮ್ಮ ಕಥಾನಾಯಕಿಯಾದ ಲೀಲೆಯು ಪೂರ್ವಜನ್ಮದಲ್ಲಿ ಅರುಂಧತಿಯೆಂಬ ಹೆಸರಿನಿಂದ ವಸಿಷ್ಠನೆಂಬ ಬ್ರಾಹ್ಮಣನಿಗೆ ಪತ್ನಿಯಾಗಿದ್ದಳು. ಈ ವಸಿಷ್ಠಾರುಂಧತಿಯರು ಶ್ರೀರಾಮಚಂದ್ರನಿಗೆ ತತ್ವೋಪದೇಶವನ್ನು ಮಾಡಿದ ವಸಿಷ್ಠಾರುಂಧತಿಯರೆಂದು ತಿಳಿಯಬಾರದು. ಇವರು ಬೇರೆ ಕಾಲದವರು. ಪೂರ್ವದಲ್ಲಿ ನದೀವನಪರ್ವತಗಳಿಂದಲಂಕೃತವಾಗಿದ್ದ ಗಿರಿಗ್ರಾಮವೆಂಬ ಹಳ್ಳಿಯಲ್ಲಿ ವಾಸಮಾಡಿದ್ದರು. ಈ ಬ್ರಾಹ್ಮಣನು ಸಾಗ್ನಿಕನಾಗಿಯೂ ಗೋಧನಸಂಪನ್ನನಾಗಿಯೂ ಆ ಅರುಂಧತಿಯೆಂಬ ಪತ್ನಿಯುಕ್ತನಾಗಿಯೂ, ಜ್ಯೇಷ್ಠಶರ್ಮನೆಂಬ ಪುತ್ರನೊಡನೆ ತನ್ನ ವರ್ಣಾಶ್ರಮೋಚಿತ ಕರ್ಮಗಳನ್ನಾಚರಿಸುತ್ತಿದ್ದನು. ಮತ್ತು ಅವನು ಎಲ್ಲಾ ವರ್ಣದ ಅತಿಥಿಗಳನ್ನು ಆದರಿಸುತ್ತಿದ್ದನು. ಈ ಬ್ರಾಹ್ಮಣೋತ್ತಮನು ಒಂದು ದಿನ ಪರ್ವತದ ಸಾನುಪ್ರದೇಶದಲ್ಲಿ ವಿರಮಿಸಲಾಗಿ, ಆ ಪರ್ವತದ ಕೆಳಭಾಗದಲ್ಲಿ ಸಪರಿವಾರನಾಗಿ ಬೇಟೆಯಾಡಲು ಹೋಗುತ್ತಿದ್ದ ಒಬ್ಬ ದೊರೆಯನ್ನು ಕಂಡನು. ಆ ದೊರೆಯ ವೈಭವವನ್ನು ನೋಡಿ ಆಶ್ಚರ್ಯದಿಂದ ಲೋಕವೈಭವಗಳಲ್ಲೆಲ್ಲಾ ದೊರೆತನವೇ ಶ್ರೇಷ್ಠವಲ್ಲವೆ! ಇಂಥಾ ವೈಭವವುಳ್ಳ ದೊರೆತನವು ತನಗೆ ಯಾವಾಗ ಲಭಿಸೀತೆಂದು ಅತ್ಯಾತುರದಿಂದ ರಾಜ್ಯಕಾಮಿಯಾದನು. ಅಂದಿನಿಂದ ಅವನು ರಾಜ್ಯಭೋಗಾರ್ಥಿಯಾಗಿಯೇ ತನ್ನ ನಿತ್ಯನೈಮಿತ್ತಿಕಕರ್ಮಗಳನ್ನು ಸಕ್ರಮವಾಗಿ ಆಚರಿಸುತ್ತಿದ್ದನು. ಅವನ ಹೆಂಡತಿಯಾದ ಅರುಂಧತಿಯು ತನ್ನ ಗಂಡನ ನೆರಳೋ ಎಂಬಂತೆ ತಾನು ಆತನ ಎಲ್ಲಾ ವ್ರತಗಳಲ್ಲಿಯೂ ಅರ್ಧಾಂಗಿಯಾಗಿ ವರ್ತಿಸುತ್ತಿದ್ದಳಾದ್ದರಿಂದ ಆಕೆಯನ್ನೊಬ್ಬ ಪತಿವ್ರತೆಯೆಂದು ಆ ಹಳ್ಳಿಯ ಸುತ್ತಲೂ ಇರುವ ಜನರು ಸ್ತುತಿಸುತ್ತಿದ್ದರು. ಆ ಅಪೇಕ್ಷೆಯೊಂದರಿಂದಲೇ ಧರ್ಮಪರಾಯಣನಾಗಿದ್ದ ವಸಿಷ್ಠನಿಗೆ ಕಾಲಕ್ರಮಾನುಗತಿಯಿಂದ

ಕರ್ನಾಟಕ ವಿದ್ಯಾವರ್ಧಕ ಸಂಘ

ಲೀಲಾಪದ್ಮರಾಜರ ಉಪಾಖ್ಯಾನ.

ದೇಹದಲ್ಲಿ ಜರೆಯು ಪ್ರವೇಶಿಸಿತು. ಗಂಡನದೇಹವು ದಿನೇದಿನಕ್ಕೂ ಸೊರಗುವುದನ್ನು ನೋಡಿ ಅರುಂಧತಿಯು ವ್ಯಾಕುಲಪಟ್ಟು, ತಾನುಕಡೆಯವರೆಗೆ ಮುಪ್ಪಿಗೆ ಮೈಗೊಟ್ಟಳು. ತನ್ನಪತಿಯು ಇನ್ನುಮೇಲೆ ಮೃತ್ಯುವಿಗೆ ತುತ್ತಾಗುವನೆಂದೆಣಿಸಿ ಆಗಲೇ ಶ್ರೀದೇವಿಯನ್ನು ಆರಾಧಿಸಿ, ಧ್ಯಾನಿಸಲು ಪ್ರಾರಂಭಿಸಿದಳು. ಪತಿಯನ್ನು ಮೃತ್ಯುಬಾಧೆಯಿಂದ ಕಾಪಾಡೆಂದು ಪ್ರಾರ್ಥಿಸಿದ ಅರುಂಧತಿಯ ಸದುದ್ದೇಶಕ್ಕೂ ಅವಳ ತನ್ನಂಕುರತೂ ವಿನಿಯೋಗಿಸಿದ ಪೂಜೋಪಚಾರಗಳಿಗೂ ವಾಗೀಶ್ವರಿಯು ಸಂತುಷ್ಟಚಿತ್ತಳಾಗಿ ಅವಳಿಗೆ ಪ್ರಸನ್ನಳಾದಳು. ಅವಳಂಕುರಿತು ಮಗಳೇ ನರರಿಗೆ ಮರಣವು ತಪ್ಪದು ಮತ್ತೇನಾದರು ಬೇಡೆನಲು ಅರುಂಧತಿಯು "ಗಂಡನು ಮರಣಹೊಂದಿ ದೇಹವಂಬಿಟ್ಟರೂ ಅವನಜೀವನು ತನ್ನ ಈ ಮಂಟಪದಮಧ್ಯಭಾಗದಲ್ಲೀ ಇರುವಂತೆ ವರವನ್ನು ಪಾಲಿಸೆಂದು ವಾಣಿಯನ್ನು ಬೇಡಿದಳು." ಅದಕ್ಕೆ ಸಮ್ಮತಿಪಟ್ಟು, ದೇವಿಯು ಹಾಗೆಆಗಲೆಂದು ಅಭಯವಾಕ್ಯವನ್ನುನುಡಿದು ಅಂತರ್ಧಾನವಾದಳು. ಆಬಳಿಕ ಒಂದೆರಡುದಿನಗಳಲ್ಲಿಯೇ ಆ ಬ್ರಾಹ್ಮಣನು ದೊರೆತನದಪೇಕ್ಷೆಯಿಂದಲೆ ಮರಣವಂಹೊಂದಿದನು. ಪರೆಯಂಬಿಟ್ಟ ಹಾವಿನಂತೆ ತನುವಂತ್ಯಜಿಸಿದ ಆ ವಸಿಷ್ಠನ ಜೀವಾತ್ಮನು ಆ ಮಂಟಪದ ಮಧ್ಯಾಕಾಶದಲ್ಲಿದ್ದನು. ಗಂಡನಜೀವವು ತಾನಿರುವ ಮಂಟಪದ ಗುಹೆಯಲ್ಲೇ ಇದ್ದಾಗ್ಯೂ ಅತೀಂದ್ರಿಯ ವಸ್ತುಗಳನ್ನು ನೋಡುವಶಕ್ತಿಯಿಲ್ಲದವಳಾದಕಾರಣ ಅರುಂಧತಿಯ ದೃಷ್ಟಿಗೆ ಆ ಜೀವಾತ್ಮನು ಕಾಣಲಿಲ್ಲ. ಅದಕ್ಕವಳು ಅತಿವ್ಯಾಕುಲಚಿತ್ತಳಾಗಿ ತಾನುಕೂಡಾ ಮೃತಳಾದಳು. ಪತಿಯಸ್ಮರಣೆಯಿಂದಲೇ ದೇಹವಂಬಿಟ್ಟಕಾರಣ ಅವಳಜೀವವು ಗುಹೆಯಲ್ಲಿರುವ ಗಂಡನಜೀವವನ್ನು ಹೊಂದಿತು. ಪತಿಭಕ್ತಿಯಿಂದ ಪತಿಲೋಕ (ದೇಶ) ವನ್ನೂ ಪತಿಯನ್ನೂ ಹೊಂದಿದ ಅರುಂಧತಿಯು ದುಃಖರಹಿತಳಾದಳು.

ಈ ಉಭಯಜೀವರೂ ಕಾಲಕರ್ಮ ಪರಿಪಾಕಾನುಗುಣ್ಯವಾಗಿ ಪೂರ್ವಜನ್ಮದಲ್ಲಿ ತೀರದೆ ಉಳಿದ ಅಪೇಕ್ಷೆಗಳನ್ನು ತೀರಿಸಿಕೊಳ್ಳಲು ಮತ್ತೊಮ್ಮೆ ಭೂಲೋಕಯಾತ್ರೆ ಮಾಡಬೇಕಾಯಿತು. ರಾಜ್ಯಭೋಗವನ್ನನುಸರಿಸಲು ಯೋಗ್ಯವಾದ ಒಂದು ದೊರೆಮನೆತನದಲ್ಲಿ ಗಂಡನು ಜನಿಸಿ, ಪದ್ಮರಾಜನೆಂಬ ಹೆಸರನ್ನು ಪಡೆದು, ರಾಜ್ಯಭಾರವಂಹೊತ್ತನು. ಪತಿಸೇವಾನಿರತಳಾದ ಅರುಂಧತಿಯು ಪದ್ಮರಾಜನನ್ನು ಮದುವೆಯಾಗಲು ಯೋಗ್ಯವಾದ ಮತ್ತೊಂದು ರಾಜಕುಟುಂಬದಲ್ಲಿ ಜನಿಸಿ, ಲೀಲೆ ಎಂಬ ಹೆಸರಿನಿಂದ ವಿರಾಜಿಸಿದಳು. ಈ ಯಿರ್ವರಿಗೂ ಕರ್ಮಾನುಗತಿಯಿಂದ ಪರಸ್ಪರ ಪಾಣಿಗ್ರಹಣವಾಯಿತು. ಪದ್ಮರಾಜನು ತನ್ನ ಪೂರ್ವೇಚ್ಛೆಯಂತೆ ರಾಜಭೋಗವನ್ನನುಭವಿಸುತ್ತಿದ್ದರೂ ರಾಜಮದದಲ್ಲಿ ಮದಿಸಲಿಲ್ಲ. ತನ್ನ ವರ್ಣಾಶ್ರಮೋಚಿತಕರ್ಮಗಳನ್ನು ಸಾಂಗವಾಗಿ ಮಾಡುತ್ತಾ, ಅತಿಥಿಜನರುಗಳನ್ನು ಆದರದಿಂದ ಸತ್ಕರಿಸುತ್ತಿದ್ದನು. ಲೀಲೆಯಾದರೂ ಭೋಗಗಳೆಲ್ಲಾ ಪತಿಸೇವೆಯೇ ಪರಾಕಾಷ್ಠವೆಂದೆಣಿಸಿ ಸದಾಪತಿಸೇವೆಯಲ್ಲೇ ಮಗ್ನಳಾದಳು.

ಈ ಚರಿತ್ರೆಯಿಂದ ಆತ್ಮನ ಇಚ್ಛೆಯು ಯಾವಾಗಲೂ ಫಲಿಸುತ್ತಿರುವುದೆಂಬುದು ಸ್ಪಷ್ಟವಾಗುತ್ತದೆ. ಪರಮಾತ್ಮನ ಇಚ್ಛೆಗೆ ವಿರುದ್ಧವಾಗಿದ್ದರೆ ಅದು ಆತ್ಮನ ಇಚ್ಛೆಯೆಂದು ಹೇಳಲಾಗದು. ಅದನ್ನು ಅಹಂಕಾರಿಯಾದ ಜೀವಾತ್ಮನ ಅಪೇಕ್ಷೆಯೆಂದು ತಿಳಿಯಬೇಕು. ಈ ಜೀವಾತ್ಮನ ಅಪೇಕ್ಷೆಗಳಾದರೂ ಆತ್ಮಹಿತವಾಗಿಯೂ ಇತರರಿಗೂ ಮೇಲನ್ನೇ ಮಾಡುವದಾಗಿಯೂ, ಧರ್ಮಕ್ಕೆ ಅನುರೂಪವಾಗಿಯೂ ಇದ್ದರೆ ಅದು ಪರಮಾತ್ಮನ ಸಂಕಲ್ಪದಲ್ಲಿ ಸೇರಿದ್ದೇಯೆಂದು ಭಾವಿಸಬೇಕು. ಈ ಅಪೇಕ್ಷೆಗಳು ಆತ್ಮನಿಗೆ ಅಹಿತವಾಗಿ ಇತರರಿಗೆ ಕೇಡಾಗಿ ಕೇವಲ ಶರೀರೇಂದ್ರಿಯಗಳಿಗೆ ಮಾತ್ರ ತೃಪ್ತಿಯನ್ನುಂಟುಮಾಡುವವು ಮತ್ತು ತಾನು ಮಾತ್ರ ಮೇಲಾಗಬೇಕು ಇತರರು ಕೀಳತನದಲ್ಲಿಯೇ ಇರಬೇಕು ತನಗೊಂದೇ ಸುಖವಾಗಲಿ, ಇತರರಿಗೇನು ಬೇಡ ವೆಂಬ ಭಾವಪ್ರಯುಕ್ತವಾದರೆ ಅಹಂಕಾರಕ್ಕೆ ಸೇರಿದವೆಂತಲೂ, ಅಧರ್ಮಗಳೆಂತಲೂ ತಿಳಿಯಬೇಕು. ಮತ್ತು ಇವು ಮಾರನೇ ಜನ್ಮದಲ್ಲಿ ಅಹಂಕಾರಿಯಾದ ಆ ಜೀವಾತ್ಮನಿಗೆ ಸುಖಕ್ಕೆ ಬದಲಾಗಿ ದುಃಖವನ್ನೇ ಕೊಡುವವೆಂದು ಅರಿಯಬೇಕು. ಆತ್ಮನಿಗೆ ಹಿತವಾದ ಜೀವಾತ್ಮನ ಅಪೇಕ್ಷೆಗಳಾದರೂ ಏಕರೂಪದಿಂದಿರಬೇಕು. ಜನ್ಮಾಂತರದವರೆಗಾಗಲಿ ಬಹುಕಾಲದವರೆಗಾಗಲಿ ಒಂದೇವಿಧವಾದ ಅಪೇಕ್ಷೆಯಾಗಿರಬೇಕು. ಇಂದೊಂದು ಬಯಕೆ ನಾಳೆಗೊಂದು ನಾಡದ ಮತ್ತೆ ಬೇರೆಯಾದರೆ ಅಂಥಾ ಅಪೇಕ್ಷೆಗಳಲ್ಲಾವದೊಂದೂ ಫಲಿಸಲಾರದು. ಒಳ್ಳೇಜೀವಾತ್ಮನ ಒಳ್ಳೇ ಅಪೇಕ್ಷೆಗಳಾದರೂ ತಮಗೆ ತಾವೆ ಅಷ್ಟು ತೀವ್ರವಾಗಿ ಫಲಿಸಲಾರವು. ಹಾಗೆ ಫಲಿಸಬೇಕಾದರೆ ಬಹುಕಾಲ ಬಹುಜನ್ಮಗಳು ಬೇಕಾಗುವವು. ಮಾರನೇ ಜನ್ಮಕ್ಕಾಗಲಿ ಸ್ವಲ್ಪಕಾಲಕ್ಕಾಗಲಿ ಫಲಿಸಬೇಕಾದರೆ ಅಪೇಕ್ಷೆಗಳೆಂಬ ಬೀಜಗಳನ್ನೇ ಸದ್ಧರ್ಮವೆಂಬ ಕ್ಷೇತ್ರದಲ್ಲಿಬಿತ್ತಿ ಸದಾಚಾರವೆಂಬ ವೃಷ್ಟಿಯನ್ನೆರದು, ಸಕಲಭೂತ ಹಿತವೆಂಬ ರಕ್ಷಣೆ ಮಾಡಿದರೆ ಆ ಅಪೇಕ್ಷೆಗಳು ಸಾಧ್ಯವಾದಷ್ಟು ತೀವ್ರದಲ್ಲೇ ಫಲಿಸುವವು.

ವಸಿಷ್ಠನ ಅಪೇಕ್ಷೆ ರಾಜ್ಯಪದವಿಯು; ಅದು ಆತ್ಮನಿಗೆ ಹಿತವಾದುದೇ; ಮತ್ತು ಯಾರಿಗೂ ಕೇಡಾಗಬೇಕೆಂದು ಅವನು ಅಪೇಕ್ಷಿಸಲಿಲ್ಲ ಮತ್ತು ಆ ಪದವಿಯಿಂದ ಅವನು ಲೋಕಕ್ಕೆಲ್ಲಾ ಹಿತವನ್ನೇ ಮಾಡಬೇಕೆಂದು ಭಾವಿಸಿದ್ದನು, ಮತ್ತು ಅವನು ಆವೊಂದಪೇಕ್ಷೆಯಿಂದಲೇ ಸದ್ಧರ್ಮಸದಾಚಾರದಲ್ಲಿರುತ್ತಾ ಸಕಲವರ್ಣದವರನ್ನು ಅತಿಥಿಗಳೆಂದು ಆದರಿಸಿದನು. ಆದ್ದರಿಂದ ಅವನ ಅಪೇಕ್ಷೆ ಮಾರನೇ ಜನ್ಮದಲ್ಲಿಯೇ ಫಲಿಸಿತು. ಅರುಂಧತಿಯ ಅಪೇಕ್ಷೆಯು ಪತಿಹಿತಕ್ಕೋ ಪತಿಸೇವೆಗೋ ಗುರಿಯಾಗಿತ್ತಾದ್ದರಿಂದ ಪರಮಾತ್ಮನ ಸಂಕಲ್ಪದಲ್ಲದೊಂದು ಭಾಗವೇ ಎಂದು ಹೇಳಬೇಕು, ಮತ್ತು ಅವಳು ಆವೊಂದುದ್ದೇಶದಿಂದಲೇ ವಾಗೀಶ್ವರಿಯ ಪ್ರಸಾದವನ್ನು ಕೂಡಾ ಪಡೆದಳಾದ್ದರಿಂದ ಅವಳ ಅಪೇಕ್ಷೆಯು ಅತಿತೀವ್ರಫಲಕಾರಿಯಾಯಿತು.

ಇದರಿಂದ ನಮಗೆ ಬೇಕಾದ ವಿದ್ಯಾಗುಣಸಂಪತ್ತುಗಳು ಫಲಿಸಬೇಕಾದರೆ ನಮ್ಮ ಉದ್ದೇಶವು ಒಳ್ಳೆಯದಾಗಿರುತ್ತಾ ಎಷ್ಟೆಷ್ಟು ದೃಢವಾಗಿರುವದೋ ನಾವು ಅಷ್ಟಷ್ಟು ಭೂತಹಿತವನ್ನುಂಟು ಮಾಡುತ್ತಿರುವೆವು ನಮ್ಮ ಅಪೇಕ್ಷೆಯು ಅಷ್ಟು ತೀವ್ರವಾಗಿ ಫಲಿಸುವದೆಂದು ತಿಳಿಯಬರುತ್ತದೆ. ಮತ್ತು ಈಗ ನಮಗೆ ಸಂಪ್ರಾಪ್ತವಾಗಿರುವ ವಿದ್ಯಾಗುಣಗಳು ಪೂರ್ವದಲ್ಲಿ ನಮ್ಮಿಂದ ಅಪೇಕ್ಷಿಸಲ್ಪಟ್ಟವೆಯೆಂತಲೂ ನಮಗೆ ಒದಗುವ ಬಾಧೆಗಳೆಲ್ಲಾ ನಾವು ಅಹಂಕಾರದಿಂದ ವರ್ತಿಸಿದ ದುರ್ನಡತೆಯ ಫಲಗಳೇಯೆಂತಲೂ ವೇದ್ಯವಾಗುತ್ತದೆ. ಇದಲ್ಲದೆ ಅಹಂಕಾರದ ದುರ್ನಡತೆಗಳೆಂಬಿವು ಆತ್ಮತೃಪ್ತಿಯನ್ನೇ ಬಯಸಿ ಪರಮಾತ್ಮನ ಸಂಕಲ್ಪದಲ್ಲಿ ನಾವು ಪ್ರತಿಯೊಬ್ಬರೂ ಭಾಗಿಗಳಾಗುವದೇ ಮಾನವಜಾತಿಯ ಮುಖ್ಯಕರ್ತವ್ಯವೆಂತಲೂ ವಿದಿತವಾಗುತ್ತದೆ.

— ವಕೀಲರ ಸ್ವಂತಸ್ಕೂಲುಗಳು. —

ಪ್ರಪಂಚದಲ್ಲೆಲ್ಲಾ ಸಮಾಜೋನ್ನತಿಯ ಮತ್ತು ದೇಶೋನ್ನತಿಯ ಕೆಲಸಗಳಲ್ಲಿ ಹಗಲಿರುಳು ದುಡಿಯುತ್ತಿರುವ ಈ 20-ನೆಯ ಶತಮಾನವನ್ನು ಸುಧಾರಣೆಯ ಸುಗ್ಗಿಯೆಂದೂ ನವಯುಗವೆಂದೂ ಕರೆಯುತ್ತಿರುವರು. ಪ್ರತಿಯೊಂದು ಪ್ರಾಂತದಲ್ಲಿಯೂ ಸಮಾಜಸಂಸ್ಕರಣಸಂಘ, ದೇಶೋದ್ಧಾರಕಸಂಘ, ಪರಸ್ಪರಸಹಾಯಕ ಸಂಘ, ಆತ್ಮವಿದ್ಯಾಪ್ರಚಾರಕಸಂಘ, ಅರ್ಥಸಾಧಕಸಂಘ, ಮೊದಲಾದ ಆತ್ಮೋನ್ನತಿಯನ್ನು ಸಾಧಿಸುವ ಸಂಘಗಳೇ ಕಣ್ಣಿಗೆ ಬೀಳುತ್ತಿರುವವು, ಪ್ರತಿದಿನವಲ್ಲಿಯೂ ಪ್ರಸಿದ್ಧಪಟ್ಟಣಗಳ ಮಹಾನಿಲಯಗಳಲ್ಲಿ ದೇಶೋದ್ಧಾರಕವಿಷಯಗಳನ್ನು ಕುರಿತು ಭಾಷಣಗಳನ್ನು ಜರುಗಿಸುವ ಸಭೆಗಳಂತೂ ಬಿಡುವೇ ಇಲ್ಲವು. ಯಾವಸಮಾಚಾರ ಪತ್ರಿಕೆಯನ್ನು ನೋಡಿದರೂ ಆ ನಗರಗಳಲ್ಲಿ ದೇಶೋದ್ಧಾರದ ಕಾರ್ಯಗಳನ್ನು ಈರೀತಿಯಾಗಿ ಮಾಡುತ್ತಿರುವರು, ಈ ನಗರದಲ್ಲಿ ಸಮಾಜೋನ್ನತಿಗಾಗಿ ಇಷ್ಟು ಫಂಡನ್ನು ಕೂಡಿಸಿರುವರು, ಇವೇ ಮೊದಲಾದ ವರ್ತಮಾನಗಳನ್ನೇ ಹೆಚ್ಚಾಗಿ ಓದುತ್ತಿರುವೆವು. ಇಂಥಾ ಸುಸಮಯದಲ್ಲಿ ಜನ್ಮವೆತ್ತಿದನಾವೆಲ್ಲರೂ ಧನ್ಯರೇ ಸರಿ. ಆದರೆ ಯಾವದೇಶದಲ್ಲಿ ಜೈಲುಗಳು ಕಮ್ಮಿಯಾಗಿ ಸ್ಕೂಲುಗಳು ಹೆಚ್ಚಾಗುತ್ತಿರುವವೋ ಆದೇಶವೇ ಅತಿತ್ವರೆಯಾಗಿ ಉನ್ನತಿಯ ಶಿಖರವನ್ನು ಮುಟ್ಟುವದೆಂಬ ಮಾತನ್ನು ಪ್ರತಿಯೊಬ್ಬ ದೇಶಹಿತೈಷಿಯೂ ಮೆಚ್ಚುವದಲ್ಲವೆ? ವಿಚಾರವಾಗಿ ನೋಡಿದರೆ ಸದ್ಯದಲ್ಲಿ ಎರಡುವಿಧವಾದ ಸ್ಕೂಲುಗಳು ನಮ್ಮ ಕಣ್ಣಿಗೆ ಕಾಣುತ್ತಿರುವವು. ಭಾವಿಪ್ರಜೆಗಳಾದ ದೇಶದಬಾಲಕರ ವಿದ್ಯಾಭ್ಯಾಸಕ್ಕಾಗಿ, ಏರ್ಪಟ್ಟ ಸ್ಕೂಲುಗಳು ಒಂದು ವಿಧವಾಗಿರುವವು. ಸದ್ಯದಲ್ಲಿ ಪ್ರಜೆಗಳಾಗಿ, ಗೃಹಕೃತ್ಯಗಳನ್ನು ಮೂಲೆಗೊತ್ತಿ ವ್ಯಾಜ್ಯಗಳೇ ತಮ್ಮ ಸ್ವಂತಕೆಲಸಗಳೆಂದು ತಿಳಿದಿರುವ ದೊಡ್ಡವರುಗಳಿಗಾಗಿ ಏರ್ಪಡಿಸುತ್ತಿರುವ ಕೆಲವು ವಕೀಲರ ಸ್ವಂತ ಸ್ಕೂಲುಗಳು ಮತ್ತೊಂದು ವಿಧವಾಗಿರುವವು.

ವಕೀಲಮಹಾಶಯರು ಹೆಚ್ಚು ಸಂಖ್ಯೆಯಿಂದ ಬೋರ್ಡು, ಮುನಿಸಿಪಾಲಿಟಿ, ಮೊದಲಾದ ಸಂಸ್ಥೆಗಳಲ್ಲಿ ಸಭಾಸದರಾಗಿಯೂ, ಅಧ್ಯಕ್ಷರಾಗಿಯೂ, ಸೇರಿ, ವಿದ್ಯಾಭಿವೃದ್ಧಿಗಾಗಿ ಆಯಾ ಪ್ರಾಂತಗಳಲ್ಲಿ ಎಲಿಮೆಂಟ್ರಿ ಸ್ಕೂಲು, ಮಿಡಲ್‌ಸ್ಕೂಲ್, ಹೈಸ್ಕೂಲು, ಮೊದಲಾದ ವಿದ್ಯಾಶಾಲೆಗಳನ್ನು ಅಭಿವೃದ್ಧಿಪಡಿಸುತ್ತಿರುವರು. ವಕೀಲರ ಈ ವಿಧವಾದ ದೇಶೋಪಕಾರಕಾರ್ಯಗಳನ್ನು ಯಾರು ತಾನೆ ಹೊಗಳದಿರುವರು? ಅವಶ್ಯವಾಗಿ ಹೊಗಳುವರು, ಅವರಿಗೆ ಕೃತಜ್ಞರಾಗಿಯೂ ಇರುವರು. ಆದರೆ ಕೆಲವು ವಕೀಲರ ಸ್ವಂತ ಸ್ಕೂಲುಗಳು ಮಾತ್ರ ದೇಶದ ಉನ್ನತಿಗೆ ಹೇತುವಾಗದೆ ಅವನತಿಗೆ ಹೇತುವಾಗಿರುವವೆಂದು ಹೇಳಲಿಕ್ಕೆ ನಿರ್ವಾಹವಾಗುತ್ತದೆ. ಈ ಸ್ಕೂಲುಗಳಲ್ಲಿ ವಕೀಲರು ತಮ್ಮ ದುಷ್ಟರಾದ ಕಕ್ಷಿದಾರರಿಗೂ ಅವರಪರವಾದ ಸಾಕ್ಷಿಯವರಿಗೂ ಕೋರ್ಟಿನಲ್ಲಿ ಹೇಳುವುದಕ್ಕೆ ಕೆಲವು ಬೋಧನೆಗಳನ್ನು ಕಲಿಸಿಕೊಡುವರು. ಆ ಬೋಧನೆಗಳಿಂದ ಉಂಟಾಗುವ ಅಧಿಕಫಲವೆಂದರೆ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಪಾರ್ಟಿಗಳಾಗುವುದೇ.

ವಕೀಲರೆಂಬರೆ ನ್ಯಾಯವಾದಿಗಳಲ್ಲವೆ? ದೇಶದಲ್ಲಿ ಸಜ್ಜನರಿಗೆ ನಿಷ್ಕಾರಣವಾಗಿ, ಅನ್ಯಾಯ, ಅಪಮಾನ, ಮೋಸ, ಕೊಲೆ, ಮೊದಲಾದ ದುಷ್ಟಕಾರ್ಯಗಳನ್ನು ಮಾಡುವ ದುಷ್ಟರಿಗೆ ಬುದ್ಧಿಬಂದು, ಅವರು ಮತ್ತೊಂದುಸಲ ಅಂತಹ ದುಷ್ಟಕಾರ್ಯಗಳನ್ನು ಮಾಡದಂತೆ, ಅವರಿಗೆ ಧರ್ಮಶಾಸ್ತ್ರೋಕ್ತಶಿಕ್ಷೆಯನ್ನು ಮಾಡಿಸುವುದಕ್ಕಾಗಿ, ಸಜ್ಜನರ ಪಕ್ಷವನ್ನುವಹಿಸಿ, ಕೆಲಸಮಾಡುವುದೇ ನ್ಯಾಯವಾದಿಗಳ ಮುಖ್ಯಕರ್ತವ್ಯವು. ಮತ್ತು ಅವರು ಧರ್ಮಶಾಸ್ತ್ರಪಾರಂಗತರಾದುದಕ್ಕೆ ಸಾರ್ಥಕವು. ಇದನ್ನು ಬಿಟ್ಟು, ದ್ರವ್ಯಪಿಶಾಚಗ್ರಸ್ತರಾಗಿ, ಧರ್ಮಶಾಸ್ತ್ರಗಳನ್ನು ಮೂಲೆಗಿಟ್ಟು, ದ್ರೋಹಿಗಳ ಪಕ್ಷವನ್ನು ಹಿಡಿದು, ಅವರಿಂದ ಬೇಕಾದಷ್ಟು ಹಣವನ್ನು ಕಿತ್ತಿಕೊಂಡು, ಅವರು ಅನ್ಯಾಯವಾದ ಕಾರ್ಯಗಳನ್ನು ಮಾಡಿಲ್ಲವೆಂದು ಸ್ಥಿರಪಡಿಸಲಿಕ್ಕೆ ತಕ್ಕ ಕುಕಲ್ಪನೆಗಳನ್ನು ಜೋಡಿಸಿ, ಆ ದ್ರೋಹಿಗಳಿಗೂ ಅವರ ಪರವಾಗಿ ಹಣದಾಶೆಯಿಂದ ಸಾಕ್ಷಿಯನ್ನು ಹೇಳಲಿಕ್ಕೆ ಬಂದ ಪಾಮರರಿಗೂ, ಇಲ್ಲದ ಸಲ್ಲದ ಸುಳ್ಳುಬೋಧನೆಗಳನ್ನು ಮಾಡಿ, ಅವರ ಪಕ್ಷವನ್ನು ಗೆಲಿಸುವರು. ಆಗ ಕಕ್ಷಿದಾರರಾದ ಆ ದುರಾತ್ಮರು ಮತ್ತಿಷ್ಟು ಅನ್ಯಾಯಕಾರ್ಯಗಳಲ್ಲಿ ಮಗ್ನರಾಗಿ ಅಧೋಗತಿಗೆ ಹೋಗುವರು. ಆ ದ್ರೋಹಿಗಳಿರುವ ಪ್ರತಿಯೊಂದು ಊರುಗಳಲ್ಲಿಯೂ ಪಾರ್ಟಿಗಳಾಗುವವು. ದುಷ್ಕಾರ್ಯಗಳು ಅಧಿಕವಾಗುವವು. ಕಲಹಗಳಿಗೆ ಮೊದಲಾಗುವುದು. ಸಜ್ಜನರಿಗೆ ಸೌಖ್ಯವು ದೂರವಾಗುವುದು. ಪ್ರಜಾಸಂಪದಿಯಿಲ್ಲದಂತಾಗಿ ದೇಶವು ಅವನತಿಯನ್ನು ಹೊಂದುವುದು.

ವಕೀಲರಾಗುವುದು ಇದಕ್ಕಲ್ಲವು. ಲೋಕದಲ್ಲಿ ಅನ್ಯಾಯಗಳು ನಡೆಯದಂತೆ ಪ್ರಜೆಗಳು ನ್ಯಾಯದಿಂದ ವರ್ತಿಸುವಂತೆ ಮಾಡುವುದಕ್ಕಾಗಿ, ಏರ್ಪಟ್ಟ ಕೋರ್ಟುಗಳ ಧ್ಯೇಯಕ್ಕೆ ಸಹಾಯಕರಾಗಿರಬೇಕೆಂಬ ಸತ್ಸಂಕಲ್ಪದಿಂದ ವಕೀಲರಾಗಬೇಕು. ಅನ್ಯಾ

ಯುಕಾರ್ಯಗಳು ನಡೆದಿದ್ದರೂ ನಡೆದಿಲ್ಲವೆಂದು ಖಾತ್ರಿಸ ಜಾಣ್ಮೆಯಿಂದ ಸಾಧಿಸಿ, ಹೆಚ್ಚು ಹಣವನ್ನು ಕೂಡಿಹಾಕಬೇಕೆಂಬ ಸ್ವಾರ್ಥತೆಯಿಂದ ಧರ್ಮಶಾಸ್ತ್ರವನ್ನು (ಲಾ) ಓದಬಾರದು. ಜಗಳವಾಡಿ, ಸಜ್ಜನರಿಗೆ ದ್ರೋಹಮಾಡಿರುವ ತಪ್ಪಿತಸ್ಥನು ತಪ್ಪನ್ನು ಮನೆಗೆ ಬಂದು, " ಸ್ವಾಮಿ! ಕೇಳಿದಷ್ಟು ಹಣವನ್ನು ಕೊಡುವೆನು. ನನ್ನ ತಪ್ಪನ್ನು ಮುಚ್ಚಿ, ನನ್ನ ವ್ಯಾಜ್ಯವನ್ನು ಗೆಲಿಸಿರಿ " ಎಂದು ಹೇಳಿದೊಡನೆಯೇ " ಓಹೋ, ನಿನಗೇನುಬಂದಿದೆ? ನಾನಿರುವೆನು " ಎಂದು ಅವನ ಬೆನ್ನು ಚಪ್ಪರಿಸಿದರೆ, ಯಾವ ದ್ರೋಹಿಯುತಾನೆ ಮತ್ತಿಷ್ಟು ಅನ್ಯಾಯಗಳನ್ನು ಮಾಡಲಿಕ್ಕೆ ಹುರಿದುಂಬುವುದಿಲ್ಲ?

ವಕೀಲ ಮಹಾಶಯರೆ! ನೀವು ಮನೆಗೆಬಂದ ತಪ್ಪಿತಸ್ಥನನ್ನು ಛೀಮಾಡಿ, " ನೀನು ಸಹಸ್ರ ರೂಪಾಯಿಗಳನ್ನು ಕೊಟ್ಟರೂ ನಿನ್ನ ಪರವಾಗಿ ವಾದಿಸಲಾರೆನು. ನಾನು ಧರ್ಮಶಾಸ್ತ್ರವನ್ನು ಓದಿರುವುದು, ತಪ್ಪನ್ನು ಮುಚ್ಚುವುದಕ್ಕಲ್ಲವು; ತಪ್ಪಿಗೆ ತಕ್ಕ ಶಿಕ್ಷೆಯನ್ನು ಮಾಡಿಸುವುದಕ್ಕಾಗಿಯೇ. ಇನ್ನು ಮುಂದೆ ಇಂಥಾ ತಪ್ಪನ್ನು ಮಾಡದೆ, ನ್ಯಾಯಪರನಾಗಿ ಜೀವಿಸು, ಎಂದೊರೆದರೆ, ಆಗ, ಅವರು ಸಹಾಯಶೂನ್ಯರಾಗಿ, ಅನ್ಯಾಯಕಾರ್ಯಕ್ಕೆ ಭೀತರಾಗಿ, ಮೆಲ್ಲಮೆಲ್ಲಗೆ ಸನ್ಮಾರ್ಗದಲ್ಲಿ ಹೆಜ್ಜೆಯಿಡುವರು. ಊರುಗಳಲ್ಲಿನ ಪಾರ್ಟಿಗಳು ಮುರಿದು ಹೋಗುವವು. ಜನರಲ್ಲಿ ಐಕ್ಯಮತ್ಯವು ನೆಲೆಗೊಂಡು,ದೇಶವು ಮೆಲ್ಲಮೆಲ್ಲಗೆ ಉನ್ನತಿಯ ಸೋಪಾನವನ್ನು ಏರಲಿಕ್ಕೆ ಹವಣಿಸುವುದು.ಹೀಗೆ ಮಾಡುವುದೇ ವಕೀಲರ ಮುಖ್ಯಕರ್ತವ್ಯವು. ಹುಟ್ಟು ದರಿದ್ರನಾಗಿ, ತನ್ನ ಸುಗುಣಸಂಪತ್ತಿಯಿಂದ ಅಮೇರಿಕದ ಸಂಯುಕ್ತಸಂಸ್ಥಾನಗಳ ಅಧಿಪತಿಯಾದ ಏಬ್ರಾಹಿಂ ಲಿಂಕನ್ನನು ತಾನು ವಕೀಲನಾಗಿ ಜೀವಿಸುವಕಾಲದಲ್ಲಿ ಒಬ್ಬ ಅಪರಾಧಿಯುಬಂದು, ತನ್ನ ಅಪರಾಧವನ್ನು ಮುಚ್ಚಿ, ವ್ಯಾಜ್ಯವನ್ನು ಗೆಲಿಸಿಕೊಟ್ಟರೆ, ಕೇಳಿದಷ್ಟು ಹಣವನ್ನು ಕೊಡುವೆನೆಂದು ಹೇಳಿದಾಗ ಮೇಲೆಹೇಳಿದ ಸದುಪದೇಶವನ್ನು ಮಾಡಿ, ಅವನನ್ನು ಕಳುಹಿಸಿಬಿಟ್ಟನೆಂಬ ವಿಷಯವನ್ನು ಸರ್ವಭಾಷೆಗಳಲ್ಲಿಯೂ ಪ್ರಕಟವಾಗಿರುವ ಆ ಮಹಾಪುರುಷನ ಚರಿತ್ರೆಯಿಂದ ಎಲ್ಲಾ ವಕೀಲರೂ ತಿಳಿದಿರುವರಲ್ಲವೆ?

ವಕೀಲಮಹಾಶಯರೆ! ಲಿಂಕನ್ನನಂತೆ ನ್ಯಾಯವಾದಿಗಳಾಗಿ ದ್ರವ್ಯಪಿಶಾಚಿಯನ್ನು ಸತ್ಯವಾದನ್ಯಾಯರೂಪಮಂತ್ರದಿಂದ ದೂರಮಾಡಿ ಮೋಟರ್ ಮೊದಲಾದ ಯಂತ್ರಗಳ ಮೋಹಕ್ಕೊಳಗಾಗದೆ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಅಮೂಲ್ಯರಥದಲ್ಲಿ ಸವಾರಿ ಮಾಡುವುದನ್ನು ಕಲಿತರೆ, ದೇಶೋದ್ಧಾರವನ್ನು ಮಾಡುವುದು ನಿಮ್ಮಗೆ ಅಸಾಧ್ಯವಲ್ಲವು. ದೇಶೋನ್ನತಿಯ ಕಾರ್ಯದಲ್ಲಿ ಆಸಕ್ತರಾದ ಜನರಲ್ಲಿ ಸ್ವತಂತ್ರೋದ್ಯೋಗಿಗಳಾದ ನೀವೇ ಅಗ್ರಗಣ್ಯರೆಂದೂ ನಿಮ್ಮಿಂದಲೇ ದೇಶೋನ್ನತಿಯ ಕಾರ್ಯವು ಹೆಚ್ಚಾಗಿ ನಡೆಯುವದೆಂದೂ, ನಾವು ಮುಕ್ತಕಂಠದಿಂದ ಹೇಳಬಲ್ಲೆವು.

ಪಿ. ಎಂ. ಸೋಮಶೇಖರಶಾಸ್ತ್ರಿ.

— ಕರ್ನಾಟಕ ಸಾಹಿತ್ಯ ಪರಿಷತ್. —

ಈ ಪರಿಷತ್ತು ಬೆಂಗಳೂರಿನಲ್ಲಿ ಏರ್ಪಟ್ಟು, ಕೆಲವು ವರ್ಷಗಳಿಂದ ಕರ್ನಾಟಕ ವಾಙ್ಮಯದ ಅಭಿವೃದ್ಧಿಗಾಗಿ ಕೆಲಸಮಾಡುತ್ತ, ಕರ್ನಾಟಕದೇಶ ಹಿತೈಷಿಯಾಗಿರುವುದು ಸರ್ವರಿಗೂ ವಿದಿತವಾಗಿರುವದು. ಈ ಪರಿಷತ್ತಿನವರು ಕನ್ನಡನಾಡಿನಲ್ಲಿ ಮುಖ್ಯವಾದ ಬಳ್ಳಾರಿ ಪ್ರಾಂತವು ಆಂಧ್ರರ ಸ್ವಾರ್ಥತೆಯಿಂದಲೂ ಬಳ್ಳಾರಿ ಪುರ ಪ್ರಮುಖರ ಅನೈಕ್ಯಮತ್ಯದಿಂದಲೂ, ಆಂಧ್ರಯೂನಿವರ್ಸಿಟಿಯಲ್ಲಿ ಸೇರಿಹೋಗುವದೆಂಬು ತಿಳಿದಕೂಡಲೇ ತಮ್ಮ ಪರಿಷತ್ತಿನ ಅಸಾಧಾರಣಾಧಿವೇಶನವನ್ನು ಬಳ್ಳಾರಿಯಲ್ಲಿ ನಡಸಲಿಕ್ಕೆ ನಿರ್ಧರಿಸಿದರು. ನಿರ್ಧರಿಸಿದಂತೆ ನವಂಬರ್ 22-ನೇ ತೇದಿಯಲ್ಲಿ ರಾ॥ ಶ್ರೀ॥ ಕೋಲಾಚಲಂ ವೆಂಕಟರಾಯರ ಟೌನ್‌ಹಾಲಿನಲ್ಲಿ ಶ್ರೀಯುತ ಕರ್ಪೂರ ಶ್ರೀನಿವಾಸರಾವ್ (ರಿಟಾಯರ್ ಚೀಫ್ ಇಂಜನೀಯರ್) ಇವರ ಅಧ್ಯಕ್ಷತೆಯಿಂದ ಅಧಿವೇಶನವು ಜರುಗಿತು. ಸುಮಾರು 30-35 ಸಾಹಿತ್ಯ ಪರಿಷತ್ತಿನ ಮೆಂಬರರು ಕೂಡಿದ್ದರು. ಅಧಿವೇಶನದಲ್ಲಿ ಬಳ್ಳಾರಿ ಜಿಲ್ಲೆಯನ್ನು ಆಂಧ್ರಯೂನಿವರ್ಸಿಟಿಯಿಂದ ದೂರಮಾಡಲಿಕ್ಕೆ ತಕ್ಕ ಪ್ರಯತ್ನಗಳನ್ನು ಮಾಡುವಿಕೆ, ಮೈಸೂರು ಯೂನಿವರ್ಸಿಟಿಯ ಪಟ್ಟಪರೀಕ್ಷೆಗಳಲ್ಲಿ ಕನ್ನಡಕ್ಕೆ ತಕ್ಕ ಸ್ಥಾನವನ್ನು ಕೊಡಬೇಕೆಂದು ಮೈಸೂರು ಗವರ್ನಮೆಂಟಿನವರಿಗೆ ಅರಿಕೆಮಾಡಿಕೊಳ್ಳುವಿಕೆ, ಬಳ್ಳಾರಿಯಲ್ಲಿಯೂ ಬಳ್ಳಾರಿಜಿಲ್ಲೆಗೆ ಸೇರಿದ ಗ್ರಾಮಗಳಲ್ಲಿಯೂ ಕನ್ನಡಶಾಲೆಗಳನ್ನು ಅಭಿವೃದ್ಧಿಮಾಡುವುದಕ್ಕಾಗಿ ಮುನಿಸಿಪಾಲಿಟಿ, ಬೋರ್ಡುಗಳಲ್ಲಿ ತಕ್ಕ ಪ್ರಯತ್ನಗಳನ್ನು ನಡಸುವಿಕೆ, ಕೋರ್ಟುಗಳಲ್ಲಿ ಕನ್ನಡಭಾಷೆಗೆ ಬೇಕಾದ ಸ್ಥಾನಗಳನ್ನೆಲ್ಲಾ ಸರಿಪಡಿಸುವಂತೆ ಸರ್ಕಾರದವರೆಗೆ ಬಿನ್ನೈಸುವಿಕೆ. ಇವೇ ಮೊದಲಾದ ಠರಾವುಗಳು ಪಾಸಾದವು. ಇದಲ್ಲದೆ ಕರ್ನಾಟಕ ವಿಶ್ವವಿದ್ಯಾಲಯವು ಸ್ಥಾಪಿತವಾಗಲಿಕ್ಕೆ ತಕ್ಕ ಅನುಕೂಲಗಳನ್ನು ಸಿದ್ಧಪಡಿಸಲಿಕ್ಕೆ ಅರ್ಹವಾದೊಂದು ಉಪಸಂಘವು ಪರಿಷತ್ತಿನವರಿಂದ ನಿರ್ಮಾಡಿಸಲ್ಪಟ್ಟಿತು.

22-ನೆಯ ತೇದಿಯ ಪ್ರಾತಃಕಾಲದಲ್ಲಿ ಅಧಿವೇಶನದ ಕಾರ್ಯವನ್ನೆಲ್ಲಾ ಮುಗಿಸಿ, ಸಾಯಂಕಾಲದಲ್ಲಿ ಸದ್ರಿ ಶ್ರೀನಿವಾಸರಾವ್ ಇವರ ಅಧ್ಯಕ್ಷತೆಯಿಂದಲೇ ಪಬ್ಲಿಕ್ ಮೀಟಿಂಗನ್ನು ನಡಸಿದರು. ಆ ಮೀಟಿಂಗಿನಲ್ಲಿ ಮೊದಲು ಶ್ರೀಯುತ ನಿಂಬೂರಾಯರು ಕುಮಾರವ್ಯಾಸನ ಕನ್ನಡಭಾರತದಲ್ಲಿ ಕೆಲವು ಪದ್ಯಗಳನ್ನು ರಾಗಯುಕ್ತವಾಗಿಯೂ ಹೃದಯಂಗಮವಾಗಿಯೂ ಓದಿ, ಸಭಿಕರಿಗೆ ಕರ್ನಾಟಕ ವಾಙ್ಮಯದ ಮಾಧುರ್ಯವನ್ನು ತೋರಿಸಿದ್ದಲ್ಲದೆ ಅಧಿಕಾನಂದವನ್ನುಂಟುಮಾಡಿದರು. ಆನಂತರದಲ್ಲಿ ಶ್ರೀಯುತ ಮುದವೀಡಕರ್ ಧಾರವಾಡ, ಶ್ರೀ॥ ತಾತಾಚಾರ್ಯಶರ್ಮ ಬೆಂಗಳೂರು (ವಿಶ್ವಕರ್ನಾಟಕ ಸಂಪಾದಕರು) ಇವರೇ ಮೊದಲಾದ ಭಾಷಣಧುರೀಣರು ಕರ್ನಾಟಕದ ರಾಜ್ಯಗಳು, ಪೂರ್ವದಲ್ಲಿದ್ದ ಕರ್ನಾಟಕದ ವೈಭವ, ಕಲಾಕುಶಲತೆ, ಸಾಹಿತ್ಯಾಭಿವೃದ್ಧಿ, ಕರ್ನಾಟಕಕ್ಕೆ ಸದ್ಯದಲ್ಲಿ ಉಂಟಾಗಿರುವಸ್ಥಿತಿ, ಮುಂತಾದ

ವಿಷಯಗಳಲ್ಲಿ ಭಾಷಣಗಳನ್ನು ಮಾಡಿ, ಬಳ್ಳಾರಿಯ ಕನ್ನಡಿಗರು ಶ್ರದ್ಧೆಯಿಂದ ಕೆಲಸಮಾಡುವಂತೆ ಅವರಲ್ಲಿ ನವಚೇತನವನ್ನುಂಟುಮಾಡಿದರು. ದೇಶಾಭಿಮಾನಿಗಳಾದ ಈ ಮಹಾಜನರ ಆತಿಥ್ಯವನ್ನು ಬಳ್ಳಾರಿ ಪುರನಿವಾಸಿಗಳಾದ ಬೆಳಗೋಣಿ ಭೀಮರಾವ್, ಕೆ. ಗುರುರಾಜರಾವ್, ಕೆ. ಟಿ. ಶ್ರೀನಿವಾಸಚಾರ್ಯ, ಟಿ. ಹೆಚ್. ಎಂ. ಚಂದ್ರಶೇಖರಶಾಸ್ತ್ರಿ, ಮೊದಲಾದ ಕರ್ನಾಟಕಭಾಷಾಭಕ್ತರು ಮನಮುಟ್ಟಿ ಮಾಡಿದರು. ಈ ವಿಧವಾದ ಕನ್ನಡ ಸಭೆಗಳು ಆಗಾಗ್ಗೆ ಬಳ್ಳಾರಿ ಪುರದಲ್ಲಿ ನಡೆದು, ಕನ್ನಡನಾಡಿನಲ್ಲಿ ಮುಖ್ಯವಾದ ಬಳ್ಳಾರಿ ಪ್ರಾಂತವನ್ನು ಉದ್ಧರಿಸುವಂತೆ ಅನುಗ್ರಹಿಸಲೆಂದು ಭಗವಂತನಿಗೆ ಪ್ರಾರ್ಥನ ಕುಸುಮಗಳನ್ನು ಸಮರ್ಪಿಸುವೆನು.

ಎಸ್. ಸಿದ್ಧಪ್ಪ, ಬಳ್ಳಾರಿ.

ಹಲ್ಲುಗಳ ರಕ್ಷಣೆ

ಹಲ್ಲುಗಳನ್ನು ಆರೋಗ್ಯಸ್ಥಿತಿಯಲ್ಲಿರಿಸಬೇಕಾದರೆ ಅವುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದೇ ನಮ್ಮ ಮುಖ್ಯಕರ್ತವ್ಯವು. ಜನರು ತಮ್ಮ ತಮ್ಮ ಹಲ್ಲುಗಳನ್ನು ಪ್ರತಿಸಾರೆ ಭೋಜನಾನಂತರ ಶುಭ್ರಪಡಿಸಿದ್ದಾದರೆ ದಂತವೈದ್ಯರಿಗೆ ಕೆಲಸವಿಲ್ಲದಂತಾದೀತು. ಈರೀತಿವರ್ತಿಸುವುದು ಸಾಧಾರಣವಾಗಿ ಹಿಂದೂಗಳಾದ ನಮ್ಮಗೆ ಕಷ್ಟವೆನಿಸಿದರೂ, ಪ್ರತಿಪ್ರಾತಃಸಂಧ್ಯಾಕಾಲಗಳಲ್ಲಿ ಮಾತ್ರ ಆರೀತಿಮಾಡುವುದುತ್ತಮಕರವು. ಆದರೆ ಈ ಮಾತು ಆಚಾರವಿರುದ್ಧವೆಂದು ಅನೇಕ ಹಿಂದೂ ಜನರಕಲ್ಪನೆಯಾಗಿದೆ. ವೈದ್ಯಶಾಸ್ತ್ರದಲ್ಲಿಪ್ರವೀಣರಾದ ಚರಕಾಚಾರ್ಯ ಸುಶ್ರುತಾದಿಗಳು ಹಲ್ಲುಗಳನ್ನು ಪ್ರತಿಪ್ರಾತಃಸಂಧ್ಯಾಕಾಲಗಳಲ್ಲಿ ತೊಳೆಯುವುದು ಅತ್ಯಾವಶ್ಯಕವೆಂದು ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ. ಮತ್ತು ರಾತ್ರಿಯಲ್ಲಿ ನಿದ್ರಿಸುವುದಕ್ಕೆ ಮುಂಚೆಯೇ ಹಲ್ಲುಗಳ ಸಂದುಗಳಲ್ಲಿ ಆದುವರೆಗೂ ಸೇರಿಕೊಂಡಿದ್ದ ಪದಾರ್ಥಗಳು ಹೋಗುವಂತೆ ಸ್ವಚ್ಛವಾದ ನೀರಿನಿಂದ ತೊಳೆದುಕೊಳ್ಳುತ್ತಿರಬೇಕು. ಈರೀತಿವರ್ತಿಸದಿದ್ದರೆ ಸಂದುಗಳಲ್ಲಿ ಕೂಡಿದ್ದ ಪದಾರ್ಥವು ಕೊಳೆತು ಕೆಡಿಗೆಡೆಯಾದ ಒಂದುಬಗೆಯ ಹುಳುವನ್ನು ಹುಟ್ಟಿಸಿ ಆನೆಯದಂತದಂತೆ ಶುಭ್ರವಾಗಿಯೂ ಗಟ್ಟಿಯಾಗಿಯೂ ಇರುವ ಹಲ್ಲುಗಳ ಮೇಲ್ಪದರನ್ನು ನಾಶಪಡಿಸುವುದು. ಆದಕಾರಣವಿಂದಲೇ ನಮಗೋಸ್ಕರವಾಗಿ ದಿನೇದಿನೇ ವಿಧವಿಧವಾದ ದಂತಚೂರ್ಣಗಳು ತಯಾರಾಗುತ್ತವೆ. ಅವುಗಳಿಗೆ ಗಿರಾಕಿ ಕೊಡುವವರು ನಾವಲ್ಲವೆ?

ಶುದ್ಧವಾದಬೂದಿಯಿಂದ ಹಲ್ಲುಗಳನ್ನು ಉಜ್ಜುವುದರಿಂದ ಹಲ್ಲುಗಳು ಶುದ್ಧವಾಗುವವು. ಆದರಿಂದ ದ್ರವ್ಯನಷ್ಟವಾಗಲೀ ಯಾವವಿಧವಾದ ಹಾನಿಯಾಗಲಿ ಸಂಭವಿಸುವದಿಲ್ಲ. ಅದರಂತೆಯೇ ನಾವುಸಾಮಾನ್ಯವಾಗಿ ಉಪಯೋಗಿಸುತ್ತಿರುವ ಸಾಬೂನಿನಿಂದ

ಸಹ ಹಲ್ಲುಗಳನ್ನು ಸ್ವಚ್ಛಮಾಡಬಹುದು. ಈ ವಿಷಯವು ಆಶ್ಚರ್ಯಕರವೆಂದೆಣಿಸಿದರೂ ಇದರಿಂದ ಹೆಚ್ಚು ಲಾಭಉಂಟು. ಈ ಸುಧಾರಿಸಿದಕಾಲದಲ್ಲಿ ಅನೇಕರು ಬೆರಳುಗಳಿಂದ ಹಲ್ಲುಗಳನ್ನುಜ್ಜುವುದು ಅನಾಗರಿಕತೆಯೆಂದು ಭಾವಿಸಿ, ಪಾಶ್ಚಾತ್ಯರಪದ್ಧತಿಯನ್ನನುಸರಿಸಿ ಬ್ರಷ್ಷುಗಳನ್ನುಪಯೋಗಿಸುತ್ತಾರೆ. ಬ್ರಷ್ಷುಗಳು ಸಾಮಾನ್ಯವಾಗಿ ಹಾನಿಯನ್ನುಂಟುಮಾಡುತ್ತಿದ್ದರೂ ಬಿರುಸಾದಬ್ರಷ್ಷುಗಳು ಹೆಚ್ಚು ಹಾನಿಯನ್ನುಂಟುಮಾಡುವವು. ಇವುಗಳನ್ನುಪಯೋಗಿಸುವುದರಿಂದ ಇವು ಹಲ್ಲುಗಳಕೆಳಭಾಗವನ್ನು ಕಾಪಾಡುವಂಥವನಡೆಗಳನ್ನು ಭೇದಿಸಿ ಹಲ್ಲುಗಳಿಗೆ ಅಬಲವನ್ನುಂಟುಮಾಡುವವು.

ಹಲ್ಲುಗಳನ್ನು ಕಾಪಾಡಿಕೊಳ್ಳಬೇಕಾದರೆ ಅತಿಶೀತಲವಾದ ಮತ್ತು ಅತ್ಯುಷ್ಣವಾದ ಪದಾರ್ಥಗಳನ್ನು ತೆಗೆದುಕೊಳ್ಳಬಾರದು. ಇದರಿಂದ ದಂತಸ್ನಾಯುಗಳ ಬಲವು ಕಡಿಮೆಯಾಗುವುದು. ಇದಲ್ಲದೆ ಹುಳಿಯಾದ ಪದಾರ್ಥಗಳನ್ನು ಮಾಗದ ಹಣ್ಣುಗಳನ್ನು ವರ್ಜಿಸುವುದು ಯುಕ್ತವು. ಅನೇಕಮೂರ್ಖಯುವಕರು ಯವ್ವನಮದದಿಂದ ಸಾಧಾರಣವಾಗಿ ತಮ್ಮಹಲ್ಲುಗಳನ್ನು ಗಟ್ಟಿಯಾದ ಪದಾರ್ಥಗಳನ್ನು ಭೇದಿಸುವಯಂತ್ರದಂತೆ ಉಪಯೋಗಿಸುತ್ತಾರೆ. ಇಂಥ ಅಭ್ಯಾಸದಿಂದ ತಮ್ಮ ಹಲ್ಲುಗಳ ಅವಯುವಗಳಿಗೆ ತಾವೇ ಹಾನಿಯನ್ನು ತಂದುಕೊಳ್ಳುವರಲ್ಲದೇ ತಮ್ಮ ಜೀವಮಾನವನ್ನೆಲ್ಲಾ ಬೊಚ್ಚುಬಾಯಿಯುಳ್ಳವನಾದೆನೆಂಬ ದುಃಖದಲ್ಲಿ ಕಳೆಯಬೇಕಾಗುವುದು.

(ಟಿ. ವೀರಪಲ್ಲಪ್ಪ.)

ಹಿಂದಿನಸಂಚಿಕೆಯಲ್ಲಿ ಪ್ರಕಟವಾದ ವಿನೋದಗಣಿತಕ್ಕೆ ಸರಿಯಾದ ಉತ್ತರವನ್ನು ಕೊಟ್ಟವರು.

1. ಕೋರಿಗನೂರು ರಾಘವೇಂದ್ರರಾವು 5-ನೇ ಫಾರಂ ಪಾಸ್ ಹೈ. ಬಳ್ಳಾರಿ, ಇವರು ಬಹುಮಾನವನ್ನು ಹೊಂದಿರುತ್ತಾರೆ. 2. ಶಿಂದಿಗೇರಿ ಮರಿಸ್ವಾಮಯ್ಯನವರು, ಬಳ್ಳಾರಿ. 3. ಹನುಮಂತರಾವು ವಿದ್ಯಾರ್ಥಿ, ಬಳ್ಳಾರಿ. 4. ಶಂಕರಪ್ಪ ವೀರಪ್ಪ ಹೆಬ್ಬಾರ, ವಿದ್ಯಾರ್ಥಿ, ವಿಜಾಪುರ. 5 ಮುರುಗೆಪ್ಪ ಕಲ್ಯಾಣ ಗುಳ್ಳೇದಗುಡ್ಡ. 6. ಎಂ. ಎಸ್. ರಾಘವಾಚಾರಿ ಬೆಂಗಳೂರು ಸಿಟೀ. 7. ಮದ್ದೀನ್, ಕುಮಾರಪ್ಪ ವಿದ್ಯಾರ್ಥಿ, ಬಳ್ಳಾರಿ. 8. ಬಿ. ದುರ್ಗ್ಗಾದಯ್ಯ ಬಳ್ಳಾರಿ. 9. ಶಿದ್ರಾಮಯ್ಯ, ಬಸಯ್ಯ ಎಳಸಂಗಿ ವಿದ್ಯಾರ್ಥಿ, ವಿಜಾಪುರ. 10. ವಡ್ಡಿಗಿರಿ ಶಿದ್ಧಪ್ಪನವರು, ಆದವಾನಿ. 11 ಜೆ. ಬಿ. ಸಿದ್ದಪ್ಪ, ಗದಗಿ. 12. ಅಲಬಾಳ, ಬಿ. ಎ. ವಿಜಾಪುರ. 13 ಗೋವಿಲಪ್ಪ. ಕಲಕೇರಿ, ವಿಜಾಪುರ.

ಹಾರನ್ ಬಿರಸ್ತೆಯು ರೂಢಿಯಂತೆ ಗದ್ದಲದಿಂದ ತುಂಬಿದ್ದಿತು. ವ್ಯಾಪಾರದ ಬಸ್ಸುಗಳು (Commercial vans), ಕುದುರೆಗಾಡಿಗಳು, ಟ್ರಾಂಬಂಡಿಗಳ ಪ್ರವಾಹವು ಮತ್ತು ಸರ್ಕಾರಿ ಉದ್ಯೋಗಸ್ಥರ ಮೋಟಾರು ಕಾರುಗಳು ರಸ್ತೆಯ ಎರಡೂಕಡೆ ಸಾಗಿದ್ದವು. ಅಲ್ಲಿ ಸ್ವಲ್ಪಹೊತ್ತಿನಲ್ಲಿಯೇ ಒಂದು ಅತ್ಯದ್ಭುತ ಚೋರಿಯು ಜರುಗುವುದೆಂಬುದಕ್ಕೆ ಯಾವಸೂಚನೆಯೂ ಕಾಣಿಸುತ್ತಿದ್ದಿಲ್ಲ. ಜಸ್ವಂತನು ಆರಸ್ತೆಯನ್ನು ಹಿಡಿದು, ಸ್ವಲ್ಪದೂರ ಹೋದನಂತರ ಅವನಿಗೆ ಮೆಹತಾ ಬ್ಯಾಂಕಿನ (Mehta Bank Ltd.) ಸುಂದರವಾದ ಕಟ್ಟಡವು ಗೋಚರವಾಯಿತು. ಧೂರ್ತನು ಕ್ಷಣವಾದರೂ ಹಿಂದೆ ಮುಂದೆನೋಡದೆ ಬ್ಯಾಂಕಿನಒಳಕ್ಕೆ ಪ್ರವೇಶಿಸಿ, ನೀರಾಗಿ ಮುಖ್ಯಕೌಂಟರ (ಹಣವನ್ನು ತೆಗೆದುಕೊಳ್ಳುವ ಕಿಟಿಕಿ) ಹತ್ತಿರಹೋದನು. ಆ ಹೊತ್ತಿನಲ್ಲಿ ಒಳಗೆ ಇಬ್ಬರು ಮೂರು ಗಿರಾಕಿದಾರರು ಇದ್ದರು. ಜಸ್ವಂತನು ಒಳಕ್ಕೆ ಬರುತ್ತಲೇ ತಮ್ಮ ಕೆಲಸಗಳನ್ನು ಪೂರೈಸಿಕೊಂಡು ಆಗಿರಾಕಿದಾರರುಸಹ ಹೊರಟು ಹೋದರು.

ಒಬ್ಬ ಚುರುಕಾದ ಗುಮಾಸ್ತನು ಕೌಂಟರುಕಿಟಿದ್ವಾರಾ ಜಸ್ವಂತನನ್ನು ಕೆಲಸದಬಗ್ಗೆ ವಿಚಾರಿಸಲಾಗಿ, ಜಸ್ವಂತನು ಯಥಾಕ್ರಮವಾಗಿ ತನ್ನ ಕೆಲಸವನ್ನು ತಿಳುಹಿಸದೇ, ಬ್ಯಾಂಕಿನ ಯಾವತ್ತು ಉದ್ಯೋಗಸ್ಥರನ್ನು ಬೆರಗಾಗುವಹಾಗೆ ಮಾಡ ತೊಡಗಿದನು. ಅವನು, ಕೌಂಟರಿನ ಮುಂದುಗಡೆ ಇರುವಹಲಗಿಯಮೇಲೆ ಹಾರಿ ಒಬ್ಬ ಜಟ್ಟಿಯಂತೆ (athlete) ಸುಲಭವಾಗಿ ಕೌಂಟರನ್ನುದಾಟಿ, ಗುಮಾಸ್ತನ ಮಗ್ಗಲಲ್ಲಿ ಧುಮುಕಿದನು.

“ ಈಗೀಗಲೇ ನನಗೆ ಇಪ್ಪತ್ತುಸಾವಿರ ರೂಪಾಯಿಗಳು ಬೇಕಾಗಿವೆ. ನಿಮ್ಮನ್ನು ವೃಥಾ ಸಂಕಟಕ್ಕೆ ಗುರಿಮಾಡುವದು ನನಗೆವ್ಯಸನವೇಸರಿ. ಆದರೆ ಹಣವನ್ನು ಸಂಪಾದಿಸುವದಕ್ಕೆ ಇದೇ ಸುಲಭೋಪಾಯವೆಂದು ಕಂಡುಬರುವದರಿಂದ ನನಗೆ ಬೇರೆಯಾವಮಾರ್ಗವೂ ತೋಚುವದಿಲ್ಲ. ಆದಕಾರಣ, ದಯಮಾಡಿ ತಕ್ಷಣ ನನ್ನ ವಶಕ್ಕೆ ಇಪ್ಪತ್ತುಸಾವಿರ ರೂಪಾಯಿಗಳನ್ನು ಕೊಟ್ಟುಬಿಡು,” ಎಂದು ಧಿಟ್ಟತನದಿಂದ ಜಸ್ವಂತನು ನುಡಿದನು.

ಗುಮಾಸ್ತನು ಗಾಬರಿಯಿಂದ, “ ನಾ — ನಾ ಏನು, ನಿಜವಾಗಿ — ” ಎಂದು ತೊದಲು ಮಾತನಾಡಿದನು.

ಜಸ್ವಂತನು ತೀಕ್ಷ್ಣವಾದ ದೃಷ್ಟಿಯಿಂದ ಸುತ್ತಲೂ ನೋಡಿದನು. ಇಬ್ಬರು ಬೇರೆ ಗುಮಾಸ್ತರು ಮುಷ್ಟಿಗಳನ್ನು ಬಿಗಿಯಾಗಿ ಹಿಡಿದುಕೊಂಡು ತನ್ನಹತ್ತಿರಕ್ಕೆ ಸಾಗಿಬರುತ್ತಿದ್ದರು. ಮತ್ತು, ಬ್ಯಾಂಕಿನ ಒಳಭಾಗದಲ್ಲಿರುವ ಅನೇಕ ಕೌಂಟರು ಕಿಟಿಕಿಗಳದ್ವಾರಾ ಇತರ ಉದ್ಯೋಗಸ್ಥರು ಸ್ತಂಭೀಭೂತರಾಗಿ ನೋಡುತ್ತಾನಿಂತಿ

ದ್ದರು. ಇದನ್ನೆಲ್ಲಾ ತಿಳಿದು, ಜಸ್ವಂತನು ತನ್ನ ಹತ್ತಿರಿರುವ ಗುಮಾಸ್ತನಮೇಲೆ ಮುಷ್ಟಿಪ್ರಹಾರವನ್ನು ಪ್ರಾರಂಭಮಾಡಿದನು. ಅನೇಕ ವರ್ಷಗಳಿಂದ ಕಸರತ್ತನ್ನು ಎಡಬಿಡದೇ ಮಾಡಿ ಸಂಪಾದಿಸಿದ ಬಲವು ಕೆಲಸಮಾಡಿದೆ! ಜಸ್ವಂತನ ಒಂದೇ ಮುಷ್ಟಿಪ್ರಹಾರಕ್ಕೆ ಆ ಗುಮಾಸ್ತನು ನೆಲಕ್ಕುರುಳಿ ಎಚ್ಚರತಪ್ಪಿದನು. ಬೇರೆ ಇಬ್ಬರು ಗುಮಾಸ್ತರು ಕೂಡಾ ಇವನ ಹೊಡತಕ್ಕೆ ತಾಳಲಾರದೆ ನೆಲಕ್ಕೆ ಬಿದ್ದರು. ಶಾಂತತೆಯಿಂದ ಜಸ್ವಂತನು, ಬಾಗಿಲು ತೆರದಿರುವ ಒಂದು ದೊಡ್ಡ ಕಬ್ಬಿಣಪೆಟ್ಟಿಗೆಯನ್ನು ನೋಡಿದನು. ಕೂಡಲೆ ಅವನಿಗೆ ಮಹಾನಂದವಾಯಿತು. ಪೆಟ್ಟಿಗೆಯಲ್ಲಿ ಅನೇಕ ಕರೆನ್ಸಿ ನೋಟುಗಳ ಕಟ್ಟುಗಳಿದ್ದವು. ನೋಟುಗಳು ಉಪಯೋಗಿಸಲ್ಪಟ್ಟು ಹಳೆಯವಾಗಿದ್ದವು ಇದರಿಂದ ಜಸ್ವಂತನಿಗೆ ಯಾವ ಅಪಾಯವೂ ಕಂಡುಬರಲಿಲ್ಲ. ಏತಕ್ಕೆಂದರೆ, ನೋಟುಗಳು ಹೊಸದಾಗಿದ್ದ ಪಕ್ಷದಲ್ಲಿ ಅವುಗಳ ನಂಬರುಗಳನ್ನು ಓದಿ ಸುಲಭರೀತಿಯಿಂದ ಅವುಗಳನ್ನು ಪತ್ತೆಮಾಡಬಹುದು. ಕಾರಣ ಜಸ್ವಂತನು ನಿರ್ಭೀತಿಯಿಂದ ಎಲ್ಲಾ ನೋಟುಗಳ ಕಟ್ಟುಗಳನ್ನೂ ಒಂದು ಸಾವಿರ ಸವರನ್ನುಗಳನ್ನೂ (Sovereigns) ತನ್ನ ತೊಗಲಿನ ಕೈಚೀಲದಲ್ಲಿ ತುಂಬಿ ಅದರ ಬಾಯಿಯನ್ನು ಭದ್ರಪಡಿಸಿದನು.

ಈ ಕೆಲಸವನ್ನು ಪೂರೈಸುವದಕ್ಕೆ ಜಸ್ವಂತನಿಗೆ ಒಂದೆರಡು ಕ್ಷಣಗಳು ಹಿಡಿದವು. ಅನಂತರ ಈ ಮಹಾಚೋರನು ಕೈಯಲ್ಲಿ ಹಣದಚೀಲವನ್ನು ಹಿಡಿದುಕೊಂಡು ಹಿಂತಿರುಗಿ ನೋಡಿದನು. ಆಗ್ಗೆ ಬ್ಯಾಂಕಿನ ಉದ್ಯೋಗಸ್ಥರೆಲ್ಲಾ, ಜರುಗುವ ಅನಾಹುತವನ್ನು ನೋಡಿ ಪಟ್ಟುಗೂಡಿ ಕಳ್ಳನನ್ನು ಹಿಡಿಯುವದಕ್ಕೆ ಸಾಗಿ ಬರುತ್ತಿದ್ದರು. ಈಗ ಜಸ್ವಂತನಿಗೆ ತನ್ನ ಅಸಾಧಾರಣಚಾತುರ್ಯಬಲಗಳನ್ನು ತೋರಿಸುವ ಸಂಭವವೊದಗಿತು.

ಬ್ಯಾಂಕಿನಲ್ಲಿ ದೊಡ್ಡ ಗಲಭೆನಡದಿದ್ದಿತು. ಸ್ಮೃತಿ ತಪ್ಪಿದ ಮೂರು ಗುಮಾಸ್ತರು ಆಗತಾನೇ ಎಚ್ಚರವಾಗುತ್ತಿದ್ದರು. ಮುಖ್ಯಸರಾಫನು (Chief cashier) ಪೋಲೀಸು ಸೀಟಿಯನ್ನು ಉದ್ವೇಗದಿಂದ ಊದಿ ಊದಿ ಅವನಮುಖವು ಕೆಂಪೇರಿದ್ದಿತು. ಅಕಸ್ಮಾತ್ತಾಗಿ ಸಂಭವಿಸಿರುವ ಗಲಭೆಯ ಕಾರಣವನ್ನು ವಿಚಾರಿಸಲೋಸುಗ ಖುದ್ದು ಮ್ಯಾನೇಜರನೇ ತನ್ನ ಕೋಣೆಯಿಂದ ಹೊರಗೆ ಓಡಿಬಂದನು. ಬ್ಯಾಂಕು ಗುಮಾಸ್ತರಾದ ಸ್ತ್ರೀಯರು ಅರಚಾಟವನ್ನು ಹೊರಗಿನಜನರು ಕೇಳಿ, ಒಳಗೆ ಏನೋ ಒಂದು ಗಲಭೆಯು ಜರುಗುತ್ತಿರಬಹುದೆಂದು ಗುರ್ತಿಸಿದರು.

“ ಈ ರೀತಿ ನಿಮಗೆ ವ್ಯಥಾ ತೊಂದರೆ ಕೊಡುವದಕ್ಕೆ ನನ್ನ ಮನಸ್ಸು ಹಿಂಜರಿಯುತ್ತದೆ. ಆದರೆ ಮನುಷ್ಯನು ನಾನಾವಿಧದಿಂದಲಾದರೂ ತನ್ನ ಉಪಜೀವನವನ್ನು ಸಂಪಾದಿಸಬೇಕಾಗುವದು.

ಸಶೇಷ.

....॥ ಆರೋಗ್ಯವರ್ಣನಂ ॥....

—*—

ಕಂ॥ ಯಾರ ಶರೀರ ಮಹಾವಗ ।

(1) ಮಾರೋಗ್ಯ ಶ್ರೀನಿವಾಸ ಮೆನಿಸುವುದೆವರಂ ॥
ಧೀರರ್ ಸಂಬೋಧಿಸರೆ ವಿ ।
ಚಾರಿಸೆ ಪುರುಷೋತ್ತಮಾಭಿಧಾನದೆ ಧರೆಯೊಳ್ ॥

(2) ಮನುಜರ ಶರೀರನಂದನ ।
ವನದೊಳ್ ಶೋಭಿಸುವರೋಗತಾಸುರಲತೆತಾಂ ॥
ಮನುಜರ್ಗಿಂ ಕೂಡದಿರ್ಪುದೆ ।
ಮನದೊಳ್ ಕಲ್ಪಿಸುವಫಲಕದಂಬವನನಿಶಂ ॥

(3) ನರನ ತನುಕ್ಷೇತ್ರಂ ನಾಂ ।
ದಿರೆ ತಾನಾರೋಗ್ಯಜಲಧರಂ ಮಿಗೆ ಸುರಿದಾ ॥
ವರಶಕ್ತಿ ವೃಷ್ಟಿಯಿಂದಂ ।
ದೊರಕಿಸುವುದ ದಿಷ್ಟಸಿದ್ಧಿಸಸ್ಯಾವಳಿಯಂ ॥

(4) ಆಲಸ್ಯಾದಿ ರಿಪುಗಳಿಂ ।
ಕಾಲಿಡುವರೆ ನರನ ದೇಹಭೂಮಿಯೊಳದಂ ತಾಂ ॥
ಪಾಲಿಸುವಿನಮಾರೋಗ್ಯ ನೃ ।
ಪಾಲಕ ನುತ್ಸಾಹಮುಖ್ಯ ಭಟಗಣದಿಂದಂ ॥

(5) ಪರಿಶುದ್ಧಾನ್ನ ಜಲಾನಿಲ ।
ಮಿರೆ ಬೆಲೆಯುಳ್ಳುಡಿಗೆ ತೊಡಿಗೆಗಳ ಬೇಡದೆ ತಾಂ ॥
ವರಿಸಿಪ ಪುರುಷಂಗೆ ಸುಖಾ ।
ಕರೆಯೆನಿಸುವಳಾ ಅರೋಗತಾಸತಿ ಸತತಂ ॥

(6) ಆರೋಗ್ಯ ಲೋಹಪಥದೊಳ್ ।
ರಾರಾಜಿಪ ದೇಹಧೂಮಶಕಟಸ್ಥಾತ್ಮಂ ॥
ಸೇರುವ ನತಿಜವದಿಂದೆ ವಿ ।
ಚಾರಿಸೆ ತನ್ನಿಷ್ಟಕಾರ್ಯಸಿದ್ಧಿಯ ನೆಲೆಗೆ ॥

(7) ನರನ ತನುಗಗನದೊಳ್ ವಿ ।
ಸ್ಫುರಿಸು ವರೋಗತ್ವಶೀತಕಿರಣಪ್ರಭೆಯಿಂ ॥
ಅರಲ್ವುದು ಹೃತ್ಕುಮುದಂ ಮೇ ।
ಲ್ವರಿವುದು ಮಿಗೆಪೆರ್ಚಿ ಸೌಖ್ಯಶರಧಿಯುಮವನಾ ॥

(8) ಆಲಸ್ಯವ ತೊಲಗಿಸುವನ ।
ಕಾಲದ ಮರಣವನು ದೂರಮಾಡುವನೊಲವಿಂ ।
ಕಾಲೋಚಿತಕೃತಿಕರಣ ಸು ।
ಶೀಲವ ಕಲಿಸುವನು ನರರಿಗಾರೋಗ್ಯಸಖಂ ॥

(9) ಆರೋಗ್ಯಕಮಲಬಾಂಧವ ।
ನಾರೋಹಿಸೆ ನರನದೇಹಪೂರ್ವಾಚಲಮಂ ।
ಜಾರುತೆ ಜಾಡ್ಯತಮಂ ಮೇಣ್
ತೋರುವುದು ಮುಖಾಬ್ಜದಲ್ಲಿ ವಿಕಸನಮವನಾ ॥

(10) ಅವನಿರದಳ್ತಿಯಿಂ ಮಾ ।
ದೇವನ ಕೃಪೆವಡೆಯಲುಜ್ಜುಗಿಪ ನಾಮನುಜಂ ॥
ಭಾವಿಸೆ ಮೊದಲೊಳನಾಮಯ ।
ದೇವನ ಕರುಣಕ್ಕೆ ಪಾತ್ರನಾಗಲ್ವೇಳ್ಕುಂ ॥

ಂದಾದಾರರಾಗಿರಿ! ಪಡಿಸಂಚಿಕೆಯನ್ನು ತರಿಸಿಕೊಳ್ಳಿರಿ! ಬಹುಮಾನವನ್ನು ಪಡೆಯಿರಿ!

(ಕ್ರಯ ೦-೨-೦ ಮಾತ್ರ).

ಶಬ್ದಬಂಧವು.

ಕೆಳಗೊಂದು ಶಬ್ದಬಂಧದ ಚಿತ್ರವು ಮುದ್ರಿಸಲ್ಪಟ್ಟಿದೆ. ಇದನ್ನು ನಮ್ಮ ಸೂ
ಚನೆಗನುಸರಿಸಿ ಪೂರ್ಣಮಾಡಿದವರಿಗೆ ಅಂದವಾದೊಂದು ಚಾಕು ಪ್ರಥಮಬಹುಮಾನ
ವಾಗಿಯೂ, ಒಂದು "ಸ್ವೈಲೋ" ಫೌಂಟೆನ್‌ಪೆನ್ ದ್ವಿತೀಯಬಹುಮಾನವಾಗಿಯೂ
ಕೊಡಲ್ಪಡುವುದು. ನಿಯಮಿತದಿನದಲ್ಲಿ ಪೂರ್ಣಮಾಡಿ ಕಳುಹಿಸಲ್ಪಟ್ಟ ಶಬ್ದಬಂಧಗಳ
ಸ್ಟ್ಯಾಟ್ಟು ಗೂಡಿಸಿ, ಒಂದೊಂದನ್ನಾಗಿ ಪರೀಕ್ಷಿಸುವಲ್ಲಿ ಮೊದಲಿಗೆ ಕೈಗೆಸಿಕ್ಕ ಸರಿಯಾ
ದೆರಡುತ್ತರಗಳಿಗೆ ಬಹುಮಾನಗಳು ಕೊಡಲ್ಪಡುವವು. ಆದರೆ ಸರಿಯಾದುತ್ತರಗಳು
ದೊರೆಯದಪಕ್ಷದಲ್ಲಿ ಈ ಬಹುಮಾನಗಳು ಮುಂದಿನಸಂಚಿಕೆಯಲ್ಲಿ ಪ್ರಕಟವಾಗುವ
ಶಬ್ದಬಂಧದ ಬಹುಮಾನಗಳೊಡನೆ ಸೇರಿಸಿ ಕೊಡಲ್ಪಡುವವು.

	1	2	3	4
1				
2				
3			*	
4	*			

ಈ ಅರ್ಧ
ಬೇರೆಕಾಗದದಲ್ಲಿ ಕಳುಹಿಸದೆ, ಇದೇ ಚಿತ್ರದಲ್ಲಿಯೇ ಪೂರ್ಣಮಾಡಿ, ಈ ಅರ್ಧ
ಪುಟವನ್ನು ಕತ್ತರಿಸಿ, ಡಿಸಂಬರು 20 ನೇ ತೇದಿಯೊಳಗಾಗಿ ಕಳುಹಿಸತಕ್ಕದು. ಅದ
ನಮೀರಿಬಂದ ಶಬ್ದಬಂಧಗಳನ್ನು ಸ್ವೀಕರಿಸುವುದಿಲ್ಲ. ಬಹುಮಾನವನ್ನು ಪಡೆದವರ
ಹೆಸರು ಮತ್ತು ಶಬ್ದಬಂಧದ ಉತ್ತರವು ಮುಂದಿನಸಂಚಿಕೆಯಲ್ಲಿ ಪ್ರಕಟಿಸಲ್ಪಡುವವು.

ನಾನು ಸಂಪಾದಕರ ತೀರ್ಪನ್ನು ನ್ಯಾಯಕ್ಕನುಸರಿಸಿರುವುದೆಂದು ಒಪ್ಪಿಕೊ
ಳ್ಳುತ್ತೇನೆ.

ಹೆಸರು...

ವಿಳಾಸ...

೧೨-೧೧-೫೧
ಪ್ರತಿ ಸೋಮವಾರ
ಪ್ರಕಟವಾಗುವುದು

ಚಾಹೀರಾತಿನ ದರ: ಪ್ರತಿ ಕಾಲಂ
ಇಂಚಿಗೆ ಒಂದು ಸಂಚಿಕೆ
ಒಂದು ರೂಪಾಯಿ.

ಸಂಪುಟ ೧ ಸಂಚಿಕೆ ೧



ಬಿಡಿ ಪ್ರತಿ ಆಣೆ ೦-೧

ಬಿಟ್ಟು ಕೈ ಸಹಾಯಕ್ಕೆ
ಪತ್ರವ್ಯವಹಾರ
ಮಾಡಿರಿ.

ಸಂಪಾದಕ: ಸೆಗಳೂರ ರಂಗನಾಥ

ಸಂಪಾದಕೀಯ

ವಂದನೆ

ಬಹುಕಾಲದ ಇಚ್ಛೆ ಕೈಗೂಡುತ್ತಲಿದೆಯೆಂಬುವಕ್ಕೆ ನಮಗೆ ಸಂತೋಷವಾದಂತೆ ನಮ್ಮ ವಾಚಕ ಮಹನೀಯರಿಗೂ ಆಗುವುದೆಂದು ತಿಳಿಯಲು ಆಸ್ಪದವಿದೆ. ಈ ಲಿಪ್ಪದದ ಅವಾರದ ವ್ಯಾಪ್ತಿಯು ವಿಶಾಲವಾಗದೆಯೆಂಬುದಕ್ಕೆ ಈ ಪತ್ರಿಕೆಯು ಪ್ರಾರಂಭವಾದುದೆ ಸಾಕ್ಷಿ. ಪ್ರಾರಂಭ ಮಾಡಲು ಹುರುಪು-ಹುಮ್ಮಸ್ಸು-ಸಹಾಯ-ಸಹಕಾರ ಕೊಟ್ಟ ಮಹನೀಯರಿಗೆಲ್ಲ ವಂದನೆಗಳನ್ನರ್ಪಿಸಿ, ಪತ್ರಿಕೆಯ ಮುನ್ನಡೆ ಮತ್ತು ವಿಕಾಸಗಳು ಆ ಮಹನೀಯರ ಮತ್ತು ಪೋಷಕ ವಾಚಕರ ನೆರವನ್ನು ಅವಲಂಬಿಸಿದೆಯೆಂದು ಹೇಳಬಯಸುತ್ತೇವೆ.

ಗೊತ್ತು-ಗುರಿ

ಪತ್ರಿಕೆಯ ಹೆಸರು ಅದರ ಗೊತ್ತುಗುರಿಗಳನ್ನು ವಿಶದ ಮಾಡುತ್ತದೆ. 'ಬುದ್ಧಿ . . ನ್ನಳ ವಿದು ಜೀಕಗಳ ತೂಕ ಹಿಡಿಯುವುದು ವಿವೇಕವು' ಭಾವನಾತ್ಮಕವಾಗಿ ಯಾವ ಪಕ್ಷ ಪಂಗಡ, ಮತ ಪಂಥಗಳಿಗೂ ಅಂಟಿಕೊಳ್ಳದ ಕೇವಲ ಬುದ್ಧಿಯನ್ನು ನಂಬಿ ಕಠೋರ ತರ್ಕಕ್ಕೆ ಇಳಿದು ನೀರಸವಾಗಿಕೊಳ್ಳದೆ, ಬುದ್ಧಿ ಭಾವಗಳ ಸಮಜಸ ಹಿಡಿದು ಮಾನವನಿಗೆ ಹಿತಕಾದುದನ್ನು ಹೇಳಬಯಸುವುದೇ 'ವಿವೇಕ'ದ . . ತ್ತು: ಸಮಾಜದ ಹಿತವನ್ನು ಸಾಧಿಸುವಂತೆ, ವ್ಯಕ್ತಿಯ ಪೂರ್ಣ ವಿಕಾಸಕ್ಕೆ ಅನುವು ಉಂಟಾಗುವಂತೆ ದಾರಿ ನಡೆಯುವುದು 'ವಿವೇಕ'ದ ಗುರಿ.

ಆಕಾರ

ಪತ್ರಿಕೆಯ ಆಕಾರವು ವಾರಪತ್ರಿಕೆಯ ದೃಷ್ಟಿಯಿಂದ ಕಿರಿದು. ಇದು ಪ್ರಾರಂಭ ಕಾಲದ ಮಟ್ಟಿಗೆ. ದಿನಕಳೆದಂತೆ, ಮುನ್ನಡೆದಂತೆ, ಪತ್ರಿಕೆಯ ಆಕಾರವೂ ಬೆಳೆಯುತ್ತ ಹೋಗುವುದು ಎಂಬ ಭರವಸೆ ಇಂದೇ ಕೊಡುತ್ತೇವೆ. ಹತ್ತು ಮಾತುಗಳನ್ನು ಒಮ್ಮೆಲೆ ಹೇಳಿ ಎಲ್ಲವನ್ನು ಮರೆತುಬಿಡುವುದಕ್ಕಿಂತ ಒಂದೊಂದೆ ಹೇಳಿ ಆಚರಣೆಯಲ್ಲಿ ತರುವುದು 'ವಿವೇಕ'ವು ಕಾರ್ಯಕ್ಷೇತ್ರ ವಿಸ್ತಾರವಾದರೆ ಪತ್ರಿಕೆಯೂ ದೊಡ್ಡದಾಗುವುದು. ಅಲ್ಲಿಯವರೆಗೆ ಓದುಗರು ದೊಡ್ಡ ಮನಸ್ಸುಮಾಡಿ ಇದನ್ನು ಒಪ್ಪಿಸ್ವೀಕರಿಸಬೇಕು ಎಂದು ಬೇಡುತ್ತೇವೆ.

+ + +

ನೆನಪಿಗಾಗಿ

ಅಣು ಮಾತ್ರಂ ಕೊಸರಿಲ್ಲದಾಳ್ದನೆಡೆಯೊಳ್ ಲಂಚಕ್ಕೆ ಕೈವೊಡ್ಡಿ ಮಾ-
ರ್ಗಣಮಂ ಕೊಂಡತಿವಿತ್ತಮಂ ಕೆಡಿಸಿ ಸ್ವೈರಾನ್ಯೋಕ್ತಿಯಿಂ ದ್ರೋಹಮಂ
ಎಣಿಸುತ್ತಿಲ್ಲಿರ ಬಾಳ್ಗೆ ನೀರನೆರೆದಾರುಂ ಕಾಣದೇ ಭಕ್ಷಿಪಾ
ಗಣಕಂ ಹೆಗ್ಗಣಕಂ ಸಮಂ ಹರಹರಾ ಶ್ರೀಚೆನ್ನಸೋಮೇಶ್ವರಾ.

ಅರ್ಥ: ಒಡೆಯನ ಬಳಿಯಲ್ಲಿ ಸ್ವಲ್ಪವೂ ಆಸೆಯನ್ನು ತೋರಿಸದೆ ದೊರೆಗಡೆ
ಲಂಚಕ್ಕೊಪ್ಪಿಕೊಂಡು ತಾನು ಮಾಡುವ ಸರಕಾರದ ಕೆಲಸಕ್ಕೆ ದಿನದ
ಪ್ರತಿಫಲವನ್ನು ತೆಗೆದುಕೊಂಡು ದೊರೆಗೆ ಬರುವ ಹೆಚ್ಚು ಲಾಭವನ್ನು
ಕೆಡಿಸಿ ಇತರರ ಮೇಲೆ ಚಾಡಿಹೇಳಿ ಅವರಿಗೆ ದ್ರೋಹಮಾಡಿ
ಅವರ ಜೀವನವನ್ನು ತಪ್ಪಿಸಿ ಯಾರೂ ಕಾಣದಂತೆ ರಾಜಾದಾಯವನ್ನು
ತಾನೆ ತಿಂದು ಹಾಕುವ ಗುಮಾಸ್ತೆಯು ಹೆಗ್ಗಣಕ್ಕೆ ಸಮಾನನು.

ಜೆರಳೀಯರ ಹಾಸಳ

ಬಾನುಲಿ ಕೇಂದ್ರ

ಧಾರವಾಡ ಬಾನುಲಿ ಕೇಂದ್ರದಲ್ಲಿ ಈ ತಿಂಗಳಿಂದ ಬೆಳ ಸ್ಥಿತ್ಯಂತರಗಳಾಗಿ ಯೆಂದು ಕೇಳಿದ್ದೇವೆ . . .

ಬೇಗನೇ . . .
ವಿವೇಕ ಓದ್ಸಿರಿ . . .
. . .

ಸಂಪಾದಕೀಯ

ನವರೂ ಕನ್ನಡದಲ್ಲಿ ಆಸ್ಥೆಯಿದ್ದವರೂ ಕರ್ನಾಟಕದ ಏಳಿಗೆಗಾಗಿ ಹಂಬಲಿಸುವವರೂ ಆದ ಕಾರ್ಯಕ್ರಮ ನಿರ್ವಾಹಕರಾದ ಶ್ರೀ ಗಂಗೊಳಿಯವರಿಗೆ ಮುಂಬಯಿಗೆ ವರ್ಗವಾಗಿ ಅವರ ಸ್ಥಳಕ್ಕೆ ಕನ್ನಡದ ಗಂಧವಿಲ್ಲದ ಭಟ್ಟನಾಗರ ಭೋಸಲೆ ಎಂಬ ಗೃಹಸ್ಥರು ಬಂದಿದ್ದಾರೆ. ಕೇಂದ್ರದ ಮುಖ್ಯಾಧಿಕಾರಿಗೂ ಕನ್ನಡ ಬರದು. ಅವರ ನಂತರದ ಉಚ್ಚ ಅಧಿಕಾರಿಗಳಿಗೂ ಕನ್ನಡ ಬರದು. ಎಲ್ಲಿಯವರೋ ಬಂದು ಬಂದು ಇಲ್ಲಿ ನಿಂತರೆ, ಇಲ್ಲಿಯವರಿಗೆ ಉಳಿಗಾಲವಿಲ್ಲ. ಬಾನುಲಿಕೇಂದ್ರವು ಧಾರವಾಡದಲ್ಲಿರುವುದೆಂಬ ಮಾತ್ರಕ್ಕೆ ಅದು ಕನ್ನಡದ್ದು ಎಂದು ಅಂದುಕೊಳ್ಳಬೇಕಾಗಿದೆ. ಇದು ಕನ್ನಡಕ್ಕೆ ಅನ್ಯಾಯವೆಂದು ಹೇಳಲೇಬೇಕು. ಸ್ಥಳೀಯ ಜೀವನದಲ್ಲಿ ಆಸೆ ಆಕಾಂಕ್ಷೆಗಳಿಲ್ಲದವರಿಂದ ಪ್ರಗತಿ ಸಾಧಿಸೀತೆಂದು ಹೇಳಲು ಬರದು. ಕನ್ನಡಿಗರಾದ ಮಾನ್ಯ ಮಂತ್ರಿಗಳು ಕನ್ನಡಕ್ಕಾಗುತ್ತಿರುವ ಈ ಅನ್ಯಾಯವನ್ನು ನಿಲ್ಲಿಸುವರೆಂದು ಆಶಿಸುವೆ

ಕರ್ನಾಟಕ ವಿಶ್ವವಿದ್ಯಾಲಯ

ಬಾನುಲಿ ಕೇಂದ್ರದಲ್ಲಿ ಒಂದು ಬಗೆಯಾದರೆ ಇಲ್ಲಿ ಇನ್ನೊಂದು ಬಗೆ ಇಲ್ಲಿಯ ರಜಿಸ್ಟ್ರಾರರ ಸ್ಥಳಕ್ಕೆ ಕನ್ನಡ ಪ್ರಾಧ್ಯಾಪಕರ ಸ್ಥಳಕ್ಕೆ ಮೈಸೂರಿಗರನ್ನು ತರಬೇಕೆಂದು ನಿರ್ಣಯಿಸಲಾಗಿದೆಯೆಂದು ಕೇಳಿದ್ದೇವೆ. ವೈಯಕ್ತಿಕವಾಗಿ ಯಾವ ಮೈಸೂರಿನ ಜನದ ಬಗ್ಗೆ ನಮಗೆ ದ್ವೇಷವಿಲ್ಲ. ಆದರೆ ಉತ್ತರ ಕರ್ನಾಟಕದಲ್ಲಿ ಆ ಸ್ಥಳಗಳಿಗೆ ಸಮರ್ಥರಾದವರು ಇಲ್ಲವೊ? ಎಂಬ ಪ್ರಶ್ನೆ ಬರುವುದು. ಇದಕ್ಕೆ ವಿಶ್ವವಿದ್ಯಾಲಯದವರು ಏನು ಉತ್ತರ ಹೇಳುವರು?

ಅಲ್ಲದೆ ರಜಿಸ್ಟ್ರಾರರ ನೇಮಕವು ಕೂಡ ಪದ್ಧತಿಯಂತೆ ನಿಯಮಗಳಿಗನುಸಾರವಾಗಿ ಆಗಿರದೆ, ತನ್ನದೇ ಆದ ರೀತಿಯಲ್ಲಿ ಆಗಿದೆಯೆಂದು ಕೇಳಿದ್ದೇವೆ, ಇದು ನಿಜವೆ? ನಿಯಮಗಳನ್ನು ಗಾಳಿಗೆ ತೂರುವುದಿದ್ದರೆ ನಿಯಮಗಳು ಬೇಕಾದರೂ ಏತಕ್ಕೆ? ಪ್ರಾರಂಭ ದಸೆಯಲ್ಲಿ ಸಂಸ್ಥೆಯು ತಾನು ಹಾಕಿದ ನಿಯಮ ನಿಬಂಧನೆಗಳಿಗೆ ಎಷ್ಟು ಅಂಟಿಕೊಳ್ಳುವುದೊ ಅಷ್ಟು ಹಿತ. ಮುಂಬರುವ ಕಾರ್ಯಕರ್ತರಿಗಾಗಿ ಸಂಪ್ರದಾಯ ಪದ್ಧತಿಗಳನ್ನು ಹಾಕಬೇಡವೆ? ಅದಿರಲಿ. ಹೀಗೆ ಇಲ್ಲಿಯ ಅಧಿಕಾರ ಸ್ಥಳಗಳಿಗೆ ಇಲ್ಲಿಯವರಲ್ಲದೆ ಬೇರೆಯವರನ್ನು ತರುವುದು ಏತಕ್ಕೆ? ಇದೇನು ಸ್ಥಳೀಯ ಪಕ್ಷಗಳ ಜಗಳದ ದುಷ್ಪರಿಣಾಮವೊ? ಮೈಸೂರವರು ಕನ್ನಡಿಗರು ನಮ್ಮವರು ಎಂದು ತಿಳಿಯಲಾಗಿದೆಯೆಂದು ಉತ್ತರ ಹೇಳಿದರೂ ಈ ಭಾವನೆ ಮೈಸೂರವರಲ್ಲಿ ಇದೆಯೆ? ಪ್ರೇಮವು ಪರಸ್ಪರವಾಗಿರಬೇಕಲ್ಲವೆ? ಪರಿಸ್ಥಿತಿಯ ಬಗ್ಗೆ ವಿಚಾರವಂತರು ವಿಚಾರ ಮಾಡಬೇಕು. ಇಷ್ಟೆ ಅಲ್ಲದೆ, ಯೋಗ್ಯ ಪ್ರತಿಕ್ರಿಯೆಗಳನ್ನು ವ್ಯಕ್ತಮಾಡಬೇಕು. ಇಲ್ಲವಾದರೆ ಸುಮ್ಮನಿದ್ದ ಜನತೆಯು ತನ್ನ ಸಮ್ಮತಿ ವ್ಯಕ್ತಮಾಡಿದೆಯೆಂದು ನಂಬಿ ಅಧಿಕಾರಿಗಳು ಸರ್ವಾಧಿಕಾರಿತ್ವದ ಪ್ರದರ್ಶನ ಮಾಡಬಹುದೆಂಬ ಭೀತಿಯಿದೆ.

\+ + +

ಶಿಕ್ಷಕ: (ಸಿಟ್ಟಿನಿಂದ) ನೀನು ವರ್ಗಕ್ಕೆ ಬರಲು ಇಷ್ಟು ತಡವೇಕಾಯಿತು?

ವಿದ್ಯಾರ್ಥಿ: (ಶಾಂತರೀತಿಯಿಂದ) ನನ್ನದೇನು ತಪ್ಪು. ನಾನು ಬರುವ ಮೊದಲೆ ವರ್ಗದ ಪ್ರಾರಂಭವಾಗಿತ್ತು.

\+ + +

ದೊಡ್ಡ ಕಿವಿ

ಅಪ್ಪಾ!

ಏನು ಮಗು?

ಹಾಡಿ ಹೇಳುವವರಕಿಂತ ಕೇಳುವವರ ಕಿವಿ ದೊಡ್ಡಬೇಕಂತೆ ಅದೇಕಪ್ಪ?

ಮಗು, ಹಾಡಿಕೇಳುವವರ ಕಿವಿ ದೊಡ್ಡದಾಗಿರುವುವು. ಅದಕ್ಕೆ.

ಲಹರಿ

ಮೂರ್ಖರು ಯಾರು?

ದಾರಿತಪ್ಪಿದ ಒಬ್ಬ ದಾರಿಕಾರ ಅಡವಿಯಲ್ಲಿ ಒಂದು ಗುಡಿಸಲು ನೋಡುತ್ತಾನೆ. ಬಾಗಿಲದಲ್ಲಿ ಹಿರಿಯನೊಬ್ಬನು ಕುಳಿತುದನ್ನು ಕಂಡು ಸಂತೋಷಬಟ್ಟು ಅಲ್ಲಿ ಅಂದು ಉಳಿದುಕೊಂಡು ಮರುದಿನ ಮುಂದೆ ದಾರಿಯನ್ನು ಕಂಡುಕೊಳ್ಳಬೇಕೆಂದು ಅವನನ್ನು ಮಾತನಾಡಿಸುವನು.

ದಾ: ಶರಣು, ಹಿರಿಯ.

ಹಿ: ಶರಣಪಾ.

ದಾ: ರಾತ್ರಿ ಇಲ್ಲಿ ನಾನು ಉಳಿದುಕೊಳ್ಳಬಹುದೇನು?

ಹಿ: ಸಾಧ್ಯವಿಲ್ಲ—ಮನೆ ಸೋರುತ್ತದೆ.

ದಾ: ಸೋರುವುದನ್ನು ಬಂದುಮಾಡಬಹುದಿತ್ತಲ್ಲ.

ಹಿ: ಧೋ ಧೋ ಅಂತ ಮಳೆ ಹೊಡೆವಾಗ ಹೇಗೆ ಬಂದು ಮಾಡುವುದು?

ದಾ: ಹೊರಪಾದಾಗ ಮಾಡಬೇಕು.

ಹಿ: ಆಗ ಸೋರುವುದಿಲ್ಲ.

ದಾ: ನನಗೆ ಹಸಿವಾಗಿದೆ. ಏನಾದರೂ ತಿನ್ನಲಿಕ್ಕೆ ಕೊಡುವಿಯಾ?

ಹಿ: ಇದೇ ಈಗ ಉಂಡು ಮುಗಿಸಿದೆವಲ್ಲ.

ದಾ: ತುಸು ನೀರು ಕೊಡಲಾರೆಯಾ?

ಹಿ: ನೀರು ಕುಡಿದು ಮುಗಿಸಿಯೆ ಇಲ್ಲಿ ಕೂತಿದ್ದೇನೆ.

ದಾ: ಇಲ್ಲಿಂದ ಮುಂದಿನ ಮನೆ ಎಷ್ಟು ದೂರ ಅದೆ?

ಹಿ: ಹೇಗೆ ಹೇಳಲಿ? ನಾನು ಎಂದೂ ಅಲ್ಲಿಗೆ ಹೋಗಿಲ್ಲ.

ದಾ: ಅದು ಹೋಗಲಿ. ಈ ದಾರಿ ಎಲ್ಲಿಗೆ ಹೋಗಿದೆ?

ಮನರಂಜನೆಗೂ ಮನೋವಿಕಾಸಕ್ಕೂ

ಮಹಾವೀರ

ಮನೋಹರ ಮಾಸಪತ್ರಿಕೆ

ಓದಿರಿ

ಇಂದೇ ಚಂದಾದಾರರಾಗಿರಿ!

· ಚಂದಾ. ಐದು ರುಪಾಯಿ

ವಿದ್ಯಾರ್ಥಿಯ ಜೀವನ ಕಥೆ

ಯಮುಪತಿ

ಲೇ। ಸಾಲಿ ರಾಮಚಂದ್ರರಾಯರು

ಬೆಲೆ: ೨—೦—೦

ಪ್ರತಿಗಳು

ಅಳಗವಾಡಿ ಬುಕ್ ಡಿಪೋ, ಧಾರವಾಡ.

No ....

ಎಂತಹ ಮಾತಿದು! ಈ ದಾರಿ ಇಷ್ಟೆ ಲ್ಲಿಯೆ ಇದೆ. ನಿನ್ನೆ ಇತ್ತು. ಇಂದೂ ಇದೆ. ನಾಳೆ ಎಲ್ಲಿಯಾದರೂ ಹೋದೀತೆಂದು ಹೇಳಲಾರೆ.

ಹಾಗಾದರೆ ನನಗೇನು ಗತಿ?

ನಿನ್ನ ಗತಿಗಾಣಿಸುವ ನಾನು ಇರುವೆನು?

ನೀನು ಮೂರ್ಖ. ನಿನಗೆ ಏನೂ ತಿಳಿಯದು.

ಇರಬಹುದು. ಆದರೆ ನಾನು ನಿನ್ನಂತೆ ದಾರಿತಪ್ಪಿಲ್ಲ

\+ \+ \+

ಬಡವ ಕನಸು

ಬಡವ: ಧಣಿಗಳೇ, ನಿನ್ನೆ ರಾತ್ರಿ ನನ ಗೊಂದು ಕನಸು ಬಿದ್ದಿತ್ತು. ನಿಮ್ಮ ಕಡೆಗೆ ಹೋಗಿ ಕಾಲು ಹಿಡಿ ಇಸಿದು ಕೋ, ಎಂದು ದೇವರು ಹೇಳಿದರು.

ಧನಿಕ: ನನಗೂ ನಿನ್ನೆ ಒಂದು ಕನಸು ಬಿದ್ದಿತ್ತು. ಆಗ ಆ ದೇವರು ಮನಸ್ಸು ಬದಲಿಸಿರಬೇಕು. ಏಕೆಂದರೆ ದೇವರು ಹೇಳಿದ. ಬಡವನೆಂದು ಸೋಗು ಹಾಕಿ ಕೊಂಡು ಕಾಲು ಬೇಡಲು ಬರುವವನು ಕಳ್ಳನಿದ್ದಾನೆ ಅವನನ್ನು ಒದ್ದು ಹೊರಗೆ ಹಾಕು, ಎಂದು

\+ \+ \+

ಉತ್ತರ ಹೇಳಿರಿ!

ಒಬ್ಬ ಮುವ್ವತ್ತು ವರುಷದ ತಂದೆಗೆ ಒಂದು ವರುಷದ ಮಗನು ಇದ್ದಾನೆ. ಆಗ ತಂದೆಯು ಮಗನ ಮುವ್ವತ್ತು ಪಟ್ಟು ದೊಡ್ಡವನಾಗಿರುವನು. ಮಗನಿಗೆ ಎರಡು ವರುಷಗಳಾದಾಗ ತಂದೆಯು ಎರಡು ಪಟ್ಟು ದೊಡ್ಡವನಾಗಿರುವನು. ಮಗನಿಗೆ ೬೦ ವರುಷವಾದಾಗ ತಂದೆಯು ಒಂದು ಮೂ ರಾಂಶ ದೊಡ್ಡವನಾಗಿರುವನು. ಮಗನಿಗೆ ೯ ವರುಷವಾದಾಗ ತಂದೆಯು ಒಂದು ಹಿಲ್ಲಾಂಶ ದೊಡ್ಡವನಾಗಿರುವನು. ಇದ ನ್ನು ನೋಡಿದರೆ ಮಗನು ವರುಷ ವರು ಷಕ್ಕೆ ತಂದೆಯ ವಯಸ್ಸಿನ ಸಮೀಪ ಬರು ತ್ತಿದ್ದಾನೆಂಬುದು ಸ್ಪಷ್ಟವಾಗುವುದು. ಹೀಗೆ ಗತಿಸಿದಂತೆ ಮಗನು ತಂದೆಯನ್ನು ಮೀರಿಸುವನು. ಮಗನ ವಯಸ್ಸು ತಂದೆ ಯನ್ನು ಮೀರಿದಾಗ ತಂದೆಗೆ ಎಷ್ಟು ವರುಷ ಗಳಾಗಿರುವುವು?

ಅಕಳವಾಡಿ ಬುಕ್ ಡಿಪೋ, ಧಾರವಾಡ

ಎಲ್ಲ ಶಾಲೆ-ಕಾಲೇಜುಗಳ ಪುಸ್ತಕಗಳು, ಸ್ಟೇಶನರಿ, ಬಿಸ್ಕಿಟು, ಆಟಿಗೆ ಸಾಮಾನು, ಕಾಜಿನ ಸಾಮಾನು; ಯಾವುದಕ್ಕೂ ನಮ್ಮಲ್ಲಿಗೆ ಬನ್ನಿ.

ಅಕಳವಾಡಿ ಬುಕ್ ಡಿಪೋ, ಧಾರವಾಡ.

ಸುದ್ದಿ-ಸಂಗತಿ

ಮಾನ್ಯ ಶ್ರೀ. ಕರಮರಕರ

ಕೇಂದ್ರದ ವಾಣಿಜ್ಯ ಶಾಖೆಯ ಉಪ ಮಂತ್ರಿಗಳಾದ ಮಾನ್ಯಶ್ರೀ. ದ. ಪ. ಕರಮರ ಕರ ಅವರು ಧಾರವಾಡಕ್ಕೆ ೯ನೆಯ ದಿನಾಂ ಕ ಬಂದಿದ್ದಾರೆ. ತಮ್ಮ ಚುನಾವಣೆಯ ಕಾರ್ಯಕ್ಕಾಗಿ ೧೫ ದಿನಗಳ ವರೆಗೆ ತಮ್ಮ ಮತದಾರ ಸಂಘದಲ್ಲಿ ಪ್ರಚಾರ ಸಂಚಾರ ಕೈಕೊಳ್ಳುವವರಿದ್ದಾರೆಂದು ತಿಳಿಯುತ್ತದೆ.

ಸಂಘ-ಗ್ರಂಥಾಲಯ

ಕರ್ನಾಟಕ-ವಿದ್ಯಾವರ್ಧಕ-- ಸಂಘಕ್ಕೆ ಮತ್ತು ಕರ್ನಾಟಕ ಗ್ರಂಥಾಲಯಕ್ಕೆ, ದಕ್ಷಿಣ ಭಾಗದ ವಿದ್ಯಾಧಿಕಾರಿಗಳಾದ ಶ್ರೀ. ಚಿಕ್ಕರಮನೆಯವರು ದಿನಾಂಕ ೮ ಕ್ಕೆ ಸಂದರ್ಶನವಿತ್ತರು. ಅಲ್ಲಿಯ ಕಾರ್ಯ ಕಲಾಪಗಳನ್ನು ಪರಿಶೀಲಿಸಿ ಸಂತಸಬಟ್ಟರು. ಗ್ರಂಥಾಲಯದಲ್ಲಿನ ಪುಸ್ತಕ ಸಂಗ್ರಹ ವನ್ನು ನೋಡಿ ಸಾರ್ವಜನಿಕರು ಇದರ ಉಪಯೋಗ ಇನ್ನೂ ಹೆಚ್ಚು ಹೆಚ್ಚು ಮಾಡಿಕೊಳ್ಳಬೇಕೆಂದು ಹಾರೈಸಿದರು.

ಕಲೋಪಾಸಕ ಮಂಡಲ

ಉತ್ಥಾನ ದ್ವಾದಶಿಯ ಶುಭಮುಹೂರ್ತ ದಲ್ಲಿ ಹೊಸ ನಾಟಕ- ಪತಿತೋದ್ಧಾರ- ಪ್ರಾರಂಭೋತ್ಸವವನ್ನು ಗದುಗಿನಲ್ಲಿ ನೆರ ವೇರಿಸಿದರು. ಈ ನಾಟಕ ಬರೆದವರು ಶ್ರೀ. ಹುಯಿಲಗೋಳ ನಾರಾಯಣರಾಯರು. ಇವರು ಉತ್ತರ ಕರ್ನಾಟಕದಲ್ಲಿ ಸಾಮಾ ಜಿಕ ನಾಟಕದ ಪಿತಾಮಹರು. ಪತಿತೋ ದ್ಧಾರ ನಾಟಕದ ಪ್ರಥಮ ಪ್ರಯೋಗವು ಗದುಗಿನಲ್ಲಿ ಡಿಸೆಂಬರ ಮೊದಲ ವಾರದಲ್ಲಿ ಆಗುವುದು. ಮುಂದೆ ಕಲಬುರ್ಗಿಯಲ್ಲಿ ... ವಾರದಲ್ಲಿ ಅದರ ಪ್ರಯೋಗವಾಗುವ ... [illegible] ಮತ್ತು ಗ್ರಂಥಾಲಯ ... [illegible] ಕೊಡುವ ... [illegible]

ಥೂ! ನಾ ಹೋಗೆ

ವಾರಕೊಮ್ಮೆ ನೆರೆವ ಸಂತೆ ।
ದಿನವು ದಿನವು ನೆರೆವುದು ।
ಊರಿನಲ್ಲಿ ನಡೆವ ಸಂತೆ ।
ಹಳ್ಳಿಗಳಿಗೂ ಬರುವದು. ||೧||

ಮೂರು ದಿನದ ಮಾತು ಎಂದು ।
ಮೂಗು ಮುರಿಯಲಾಗದು ।
ಮೂರು ಮಾಸ ನಡೆವ ಹುಯಿಲು;
ದಣಿವು ಬೇಸರಾಗದು. ||೨||

ನಾನು ನಿಂತೆ, ನಾನು ನಿಂತೆ ।
ಎಂಬ ಮಂತ್ರ ಕೇಳ್ವುದು ।
ನಿಂತು ನಿಲ್ಲಲಾರದವಗೆ ।
ಹೊಸತು ತಂತ್ರ ಕಾಂಬುದು ||೩||

ಇಂಥ ದೊಡ್ಡ ಸಂತೆ ಹಿಂದೆ ।
ನಡೆದ ವಾರ್ತೆ ಕೇಳದು ।
ಜಾತ್ರೆಗಾಗಿ ಜೂಜು ಆಡಿ ।
ಕಳೆದ ಹಣವು ಬಾರದು. ||೪||

ನಿಂತು ನಿಂತು ಸೋತು ಬಿದ್ದು ।
ಗೆದ್ದೆನೆಂಬ ಭ್ರಾಂತಿಗೆ ।
ಬಲಿಯ ಬಿದ್ದು ಹೊರಗೆ ಬರದೆ ।
ಸಾಗುತಿಹರು ಕಾಡಿಗೆ ||೫||

ನಿಂತು ಕಾಡು ಸೇರುವವರು ।
ಹೆಮ್ಮೆ ಹುರಿದ ಆಳ್ಗಳು ।
ನಿಂತ ಆಳ ಮುಂದೆ ನೂಕಿ ।
ಗಂಟು ಹೊಡೆವ ಛಲಿಗಳು ||೬||

ಇದ್ದ ಹಣವ ಕಳೆದುಕೊಂಡು ।
ಮುಂದೆ ಆಳು ಆಗುವ ।
ಕದ್ದು ಹಣವ ನುಂಗಿಕೊಂಡು ।
ಮುಂದೆ ಆಳು ಆಗುವ ||೭||

ಯಾರು ಜಾಣರೆಂದು ಹೇಳು ।
ಚುನಾವಣೆಯ ವೀರನೋ
ಥೂ! ನಾ ಹೋಗೆ ... ನೂಕಿ
ಗಂಟು ನುಂಗಿ ... ನೋ ||೮||

ಪಡುಬಿದ್ರಿ

ಸಂದರ್ಶನ

ಶ್ರೀ ಮುಮ್ಮಿಗಟ್ಟಿ ನಾರಾಯಣರಾಯರು

"ನೀವು ನಾಟಕ ಬರೆಯತೊಡಗಲು ಕಾರಣವಾದ ಸಂಗತಿಗಳು ಯಾವವು ಹೇಳುವಿರಾ?"

"ಹೇಳುವೆ ನನ್ನ ಹರೆಯದ ಕಾಲಕ್ಕೆ ರಾಣೇಬೆನ್ನೂರು,ಹಾವೇರಿ, ಹಿರೇಕೆರೂರ ಕಡೆಯ ಹಳ್ಳಿಗರು ಇಲ್ಲಿಗೆ ಬಂದು ನಾಟಕ ಮಾಡುತ್ತಿದ್ದರು. ಅವರಲ್ಲಿ ಯಾವ ಬಗೆಯ ಶಿಸ್ತು ಇರುತ್ತಿದ್ದಿಲ್ಲ. ಆದರೆ ಅವರಲ್ಲಿ ಒಂದು ಗುಣ ಇತ್ತು. ಅವರು ಕೇವಲ ಕರ್ನಾಟಕೀ ರಾಗಗಳನ್ನು ಹಾಡುತ್ತಿದ್ದರು ಅದು ನನ್ನ ಮೇಲೆ ಒಳ್ಳೆಪರಿಣಾಮ ಮಾಡಿತು. ಅವರ ನಾಟಕದ ವಿಷಯ ವಸ್ತು ಪೌರಾಣಿಕವಾದರೂ ಆಧುನಿಕವಾದ ಅನೇಕ ಮಾತು ಜೋಡಿಸಿರುತ್ತಿದ್ದರು. ಅವರಲ್ಲಿ ಯಾವ ಬಗೆಯ ವ್ಯವಸ್ಥೆ ಇರುತ್ತಿದ್ದಿಲ್ಲ. ಅವರಲ್ಲಿಯ ಗುಣಗಳನ್ನು ತೆಗೆದುಕೊಂಡು ಅವರಲ್ಲಿ ಕಂಡುಬಂದ ದೋಷಗಳನ್ನು ನಿವಾರಿಸಿ ನಾಟಕ ಬರೆಯಬೇಕೆಂದು ಅನ್ನಿಸಿತು. 'ವಜ್ರ ಮುಕುಟ'ವೆಂಬ ನಾಟಕ ಬರೆದೆ.

G.E.C. RADIO
and Electric Goods
Please Visit:—
Modern Emporium Dharwar

ಶ್ರೀನಿವಾಸ ಮತ್ತು ಕಂಪನಿ
ಉತ್ತಮ ಪಡಿಯಚ್ಚು ಕಾರರು
ಧಾರವಾಡ
ಲಾಯಿನ್, ಹಾಫ್‌ಟೋನ ಮತ್ತು ಬಣ್ಣದ ಪಡಿಯಚ್ಚುಗಳು
ಯೋಗ್ಯ ದರದಿಂದ ಮಾಡುವೆವು.

ಎಸ್. ವ್ಹಿ. ಬೆಂಕೀಪುರ
ಟೇಲರ, ಗಾಂಧಿಚೌಕ
ಧಾರವಾಡ

ವಾರದ ಮಹಿಮೆ

೧೨-೧೧-೫೦ ರಿಂದ ೧೮-೧೧ ರ ವರೆಗೆ

ಮೇಷ— ಆರೋಗ್ಯ ಸಾಧಾರಣ. ಕೌಟುಂಬಿಕ ಅಡಚಣಿ ಹೆಚ್ಚು. ಉದ್ಯೋಗದಲ್ಲಿ ಲಾಭ; ಆಪ್ತ ಮಿತ್ರರಿಂದ ಹಾನಿ. ಪ್ರವಾಸದಿಂದ ಫಲವಿಲ್ಲ. ತಾ ೧೪-೧೫ ಉತ್ತಮ. ೧೨-೧೬ ಕಠಿಣ.

ವೃಷಭ— ಮಕ್ಕಳ ಬಗ್ಗೆ ಜಾಗರೂಕತೆ ವಹಿಸಬೇಕು. ಆಪಾದನೆಗೆ ಗುರಿಯಾಗುವ ಸಂಭವ. ವ್ಯವಹಾರದಲ್ಲಿ ಲಾಭ. ಸನ್ಮಿತ್ರ ಸಮಾಗಮ. ಪ್ರವಾಸಾದಿಕಾರ್ಯದಲ್ಲಿ ಅನುಕೂಲ. ತಾ ೧೪-೧೫ ಉತ್ತಮ. ೧೨-೧೬ ಪ್ರತಿಕೂಲ.

ಮಿಥುನ— ಪತ್ನಿಯ ಆರೋಗ್ಯಕ್ಕೆ ಲಕ್ಷ್ಯಹಾಕಬೇಕು ಆದರೂ ಕೌಟುಂಬಿಕ ಸುಖದ ಅನುಕೂಲತೆ ವ್ಯವಹಾರದಲ್ಲಿ ಲಾಭಾಂಶ ತುಸು ಕಡಿಮೆ. ಆಗಲಾರದವರಿಂದ ಆಪತ್ತು ಕಡಿಮೆ. ಪ್ರವಾಸ ಬೇಸರದ್ದು. ತಾ. ೧೪-೧೫ ಅನುಕೂಲ.

ಕರ್ಕ— ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ಮಾಡಬೇಕು. ವ್ಯವಹಾರದಲ್ಲಿ ಹೆಚ್ಚಿನ ಲಾಭದ ಸಂಭವ. ಪ್ರವಾಸದಿಂದ ಪ್ರತಿಫಲ ಹೆಚ್ಚು. ಗುರುತಿಲ್ಲದವರೊಡನೆ ವಿಶ್ವಾಸದಿಂದ ಮಾತನಾಡಬೇಡಿರಿ. ತಾ. ೧೨-೧೬ ಪ್ರತಿಕೂಲ.

ಸಿಂಹ— ಕೌಟುಂಬಿಕ ಕಲಹದಿಂದ ಮಾನಸಿಕ ದೈಹಿಕ ತೊಂದರೆ. ವ್ಯವಹಾರದಲ್ಲಿಯೂ ಹಾನಿಯ ಸಂಭವ. ಪ್ರವಾಸ ಮಾಡುವುದು ಬಿಟ್ಟರೆ ಒಳ್ಳೆಯದು. ೧೪-೧೫ ಅನುಕೂಲ ಇದು ದರಲ್ಲಿಯೆ.

ಕನ್ಯಾ— ಮಕ್ಕಳಿಗೆ ಕ್ಲೇಶ; ಕೌಟುಂಬಿಕ ಸುಖವೂ ಸ್ವಲ್ಪಸ್ವಲ್ಪ; ವ್ಯವಹಾರದಲ್ಲಿ ಲಾಭದ ಹೆಚ್ಚಳ. ಪ್ರವಾಸಾದಿ ಕಾರ್ಯಗಳಲ್ಲಿ ಪ್ರತಿಫಲ ದೊರೆವುದು. ಆದರೂ ಜಾಗರೂಕತೆ ಅವಶ್ಯ. ೧೨-೧೬ ಪ್ರತಿಕೂಲ

ತುಲಾ—ದೈಹಿಕ ಆರೋಗ್ಯವು ಮಾನಸಿಕ ಕ್ಲೇಶದಿಂದ ಕೆಡಬಹುದು. ವ್ಯವಹಾರದಲ್ಲಿ ಲಾಭ ಹೆಚ್ಚಾಗಿ ಉತ್ತೇಜನ ದೊರೆವುದು. ಸನ್ಮಿತ್ರಸಮಾಗಮ, ಪ್ರವಾಸವು ಬೇಸರವಾದರೂ ಲಾಭರಹಿತವಲ್ಲ. ೧೪-೧೫ ತುಂಬಾ ಅನುಕೂಲ.

ವೃಶ್ಚಿಕ— ಆರೋಗ್ಯಕ್ಕೆ ವ್ಯತ್ಯಯ ಬಾರದು. ವ್ಯವಹಾರದಲ್ಲಿ ಮಾನಮನ್ನಣೆ ಲಾಭ ಹೆಚ್ಚು. ಸಾಮಾಜಿಕದಲ್ಲಿ ಮನ್ನಣೆ. ಅವಶ್ಯಕವೆನಿಸಿದರೆ ಮಾತ್ರ ಪ್ರವಾಸ ಮಾಡಬೇಕು. ೧೨-೧೬ ಅನುಕೂಲವಿದೆ.

ಧನು—ಆರೋಗ್ಯ ಚೆನ್ನಾಗಿರುವುದು ಕೌಟುಂಬಿಕದಲ್ಲಿ ಕಿರುಕುಳದ ಮೂಲಕ ಮಾನಸಿಕ ತ್ರಾಸು. ವ್ಯವಹಾರದಲ್ಲಿ ಲಾಭಾಂಶವು ಹೆಚ್ಚು. ಪ್ರವಾಸಾದಿ ಕಾರ್ಯದಲ್ಲಿ ಪ್ರತಿಫಲ ಹೆಚ್ಚು. ೧೪-೧೫ ಹೆಚ್ಚು ಅನುಕೂಲ,

ಮಕರ— ಆರೋಗ್ಯದ ಬಗ್ಗೆ ತುಸ ಕಾಳಜಿ ಮಾಡಬೇಕು ಹೆಚ್ಚು ದುಡಿವುದು ಎಲ್ಲಿಯೂ ಲಾಭವಿಲ್ಲ ಎಚ್ಚರ ವಹಿಸಿದ ಪ್ರವಾಸದಿಂದ ಲಾಭ ತುಂಬ ದೊರೆವುದು ೧೨-೧೬ ತುಸು ಪ್ರತಿಕೂಲ.

ಕುಂಭ— ಆರೋಗ್ಯ ಚೆನ್ನಾಗಿರುವುದು ಕೌಟುಂಬಿಕ ಸುಖ ಸಮಾಧಾನ; ವ್ಯವಹಾರದಲ್ಲಿ ತೇಜಿ. ಸನ್ಮಿತ್ರ ಸಮಾಗಮ ಪ್ರವಾಸದಲ್ಲಿ ತೊಂದರೆ ಕಡಿಮೆ. ಅವರ ಜೊತೆ ಎಚ್ಚರ. ೧೪-೧೫ ಅನುಕೂಲ

ಮೀನ— ಹೆಂಡತಿಯ ಆರೋಗ್ಯದ ಬಗ್ಗೆ ಕಾಳಜಿ ಮಾಡಬೇಕು. ಕೌಟುಂಬಿಕದಲ್ಲಿ ಕಿರುಕುಳ ವ್ಯವಹಾರದಲ್ಲಿ ಲಾಭಾಂಶ ಹೆಚ್ಚು ಬೇಸರದ ಪ್ರವಾಸವಾದರೂ ಪ್ರತಿಫಲ ಚೆನ್ನಾಗಿದೆ. ೧೨-೧೬ ಅನುಕೂಲವಿಲ್ಲ

Better and safe Insurance
Insure with
Empire of India Ins. Co. Ltd., Bombay

Printed by S. G. Kulkarni, Sadhana Press, and Published by Negluri Ranganath, Akalwadi Book Depot, Dharwar.